ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರ್‌ಸಿಬಿಗೆ ಜಿಂಬಾಬ್ವೆ ವೇಗಿ ಮುಜರಬಾನಿ

ಆರ್‌ಸಿಬಿ ತಂಡದ ವೇಗಿ ಲುಂಗಿ ಎನ್‌ಗಿಡಿ, ಐಪಿಎಲ್ ಲೀಗ್ ಪಂದ್ಯಗಳ ಬಳಿಕ ಅಲಭ್ಯರಾಗಲಿರುವ ಕಾರಣ, ಅವರ ಸ್ಥಾನಕ್ಕೆ ಬದಲಿ ಆಟಗಾರನಾಗಿ ಜಿಂಬಾಬ್ವೆ ತಂಡದ ವೇಗಿ ಬ್ಲೆಸ್ಸಿಂಗ್ ಮುಜರಬಾನಿ ಬೆಂಗಳೂರು ತಂಡವನ್ನು ಸೇರಲಿದ್ದಾರೆ. ಮೇ 25ರ ನಂತರವಷ್ಟೇ ಅವರು ಸೇರ್ಪಡೆಗೊಳ್ಳಲಿದ್ದಾರೆ ಎಂದು ಐಪಿಎಲ್ ಆಡಳಿತ ಮಂಡಳಿ ತಿಳಿಸಿದೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬೆಂಗಳೂರಿನ ಹೊರಮಾವಿನ ಸಾಯಿಲೇಔಟ್‌ನಲ್ಲಿ ರಕ್ಷಣಾ ಕಾರ್ಯನಿರತ ಪಾಲಿಕೆ ಸಿಬ್ಬಂದಿ. ▸▸ ಚಿತ್ರ: ಸುಧಾಕರ್ ದೇವರಾಜ್

ಸೊಂಪಾದ ಪುಟಗಳು

ಮೋದಿ ಸುತ್ತಲೇ ಕಾಂಗ್ರೆಸಿನ ಗಿರಕಿ!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ

ಎರಡು ವರ್ಷಗಳ ಗ್ಯಾರಂಟಿ ಸಾಕಾರ

ಗುಣಗಾನ
ಬಿ.ಎಸ್.ಶಿವಣ್ಣ

ದಾರಿದೀಪೋಕ್ತಿ

ಒಂದು ಹಣತೆ ಇನ್ನೊಂದು ಹಣತೆಯನ್ನು ಬೆಳಗುವಂತೆ, ಉರಿಯುವಂತೆ ಮಾಡುತ್ತದೆ. ಆದರೆ ಇನ್ನೊಂದನ್ನು ನೋಡಿ ಉರಿಯುವುದಿಲ್ಲ, ದ್ವೇಷಿಸುವುದಿಲ್ಲ. ನಾವೂ ಸಹ ಬೇರೆಯವರು ಬೆಳಗಲು ಸಹಾಯ ಮಾಡಬೇಕು. ಬೇರೆಯವರು ಬೆಳೆದಿದ್ದನ್ನು ನೋಡಿ ಬಿಳುಚಿಕೊಳ್ಳಬಾರದು.

ವಕ್ರತುಂಡೋಕ್ತಿ

ಜನರು ತಮ್ಮ ಬಣ್ಣವನ್ನು ಸುಮ್ಮನೆ ತೋರಿಸುವುದಿಲ್ಲ. ನಿಮ್ಮಿಂದ ಅವರಿಗೆ ಏನೂ ಪ್ರಯೋಜನ ಇಲ್ಲ ಎಂಬುದು ಗೊತ್ತಾಗಬೇಕಷ್ಟೆ.

ಹೊಸಪೇಟೆಯಲ್ಲಿ ಇಂದು ಪ್ರಗತಿಪರ ಕರ್ನಾಟಕಕ್ಕೆ ಸಮರ್ಪಣೆ ಸಂಕಲ್ಪ | 4 ಲಕ್ಷ ಮಂದಿ ಭಾಗಿ ನಿರೀಕ್ಷೆ

ದ್ವಿತೀಯ ಸಂಭ್ರಮ

ಬೆಂಗಳೂರು/ಹೊಸಪೇಟೆ: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಎರಡು ವರ್ಷ ಪೂರೈಸಿದ್ದು, 'ಪ್ರಗತಿಯತ್ತ ಕರ್ನಾಟಕ, ಸಮರ್ಪಣಾ ಸಂಕಲ್ಪದಡಿ' ಅದ್ದೂರಿ ಸಮಾವೇಶಕ್ಕೆ ಐತಿಹಾಸಿಕ ವಿಜಯನಗರ ಸಾಮ್ರಾಜ್ಯದ ಹೊಸಪೇಟೆ ಸಜ್ಜಾಗಿದೆ. ಈ ಸಂಭ್ರಮಾಚರಣೆಯಲ್ಲಿ ಲಕ್ಷಾಂತರ ಕಾರ್ಯಕರ್ತರನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸಲು ಸಕಲ ಸಿದ್ಧತೆ ನಡೆದಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಸಚಿವರು, ಶಾಸಕರು ಹೊಸಪೇಟೆಯಲ್ಲಿ ವಾಸ್ತವ್ಯ ಹೂಡಿ ಸಂಭ್ರಮಾಚರಣೆಯ ತಯಾರಿ ಅಂತಿಮಗೊಳಿಸಿದ್ದಾರೆ. ಮಂಗಳವಾರ ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ಬೃಹತ್ ಸಮಾವೇಶಕ್ಕೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಸೇರಿದಂತೆ ಹಲವು ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ.

ಈ ಕುರಿತು ಮಾತನಾಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜ್ಯ ಸರಕಾರ ಕೇವಲ ಎರಡು ವರ್ಷದ ಸಂಭ್ರಮಾಚರಣೆ ಮಾಡುತ್ತಿಲ್ಲ. ಜನರಿಗೆ ಭೂ ಗ್ಯಾರಂಟಿ ಯೋಜನೆ ಮೂಲಕ 1 ಕೋಟಿಗೂ ಹೆಚ್ಚು ಜನರಿಗೆ ಭೂ ದಾಖಲಾತಿ ಪತ್ರ ನೀಡಿ ಅವರ ಋಣ ತೀರಿಸುವ ಕೆಲಸ ಮಾಡುತ್ತಿದ್ದೇವೆ. ನೂರು ವರ್ಷಗಳಲ್ಲಿ ಮಾಡಲಾಗದ ಕೆಲಸವನ್ನು ನಮ್ಮ ಸರಕಾರ ಕಂದಾಯ ಇಲಾಖೆ ಮೂಲಕ ಮಾಡಿ, ಹೊಸ ಇತಿಹಾಸ ಬರೆಯುತ್ತಿದೆ. → 4

- ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಕಾಂಗ್ರೆಸ್ ಕಾರ್ಯಕರ್ತರನ್ನು ಕರೆತರಲು ಸಕಲ ಸಿದ್ಧತೆ
- ಭೂ ಗ್ಯಾರಂಟಿ ಯೋಜನೆ ಮೂಲಕ 1 ಕೋಟಿಗೂ ಹೆಚ್ಚು ಜನರಿಗೆ ಭೂ ದಾಖಲಾತಿ ಪತ್ರ ವಿತರಣೆ
- ವಿಜಯನಗರ ಜಿಲ್ಲೆಯನ್ನು ಪೋಡಿ ಮುಕ್ತ ಮಾಡಿ 79 ಸಾವಿರ ರೈತರಿಗೆ ಪೋಡಿ ದಾಖಲೆ ವಿತರಣೆ

ವಿಜಯನಗರ ಜಿಲ್ಲೆಯನ್ನು ಪೋಡಿ ಮುಕ್ತ ಜಿಲ್ಲೆಯನ್ನಾಗಿ ಮಾಡಿ 79 ಸಾವಿರ ರೈತರಿಗೆ ಪೋಡಿ ದಾಖಲೆ ನೀಡಲಾಗಿದೆ. ಇಡೀ ದೇಶಕ್ಕೆ ಇದು ಹೊಸ ಮಾದರಿ. ನಾವು ಕೇವಲ ಸಂಭ್ರಮಾಚರಣೆ ಮಾಡಲು ಈ ಕಾರ್ಯಕ್ರಮ ಮಾಡುತ್ತಿಲ್ಲ. ಜನರು ನಮಗೆ ಕೊಟ್ಟ ಅವಕಾಶ, ಆಶೀರ್ವಾದಕ್ಕೆ ಋಣ ತೀರಿಸಲು ಈ ಕಾರ್ಯಕ್ರಮ ಮಾಡುತ್ತಿದ್ದೇವೆ.

– ಡಿ.ಕೆ.ಶಿವಕುಮಾರ್, ಡಿಸಿಎಂ

24 ಗಂಟೆಗಳಲ್ಲಿ 103 ಮೀ.ಮೀ. ಮಳೆ

ಇಳೆ ತುಂಬಾ ಮಳೆ

ಬೆಂಗಳೂರು: ಭಾನುವಾರ ಸಂಜೆಯಿಂದ ರಾಜಧಾನಿ ಬೆಂಗಳೂರಿನಲ್ಲಿ ಶುರುವಾಗಿರುವ ಮಳೆಯ ಆರ್ಭಟ ಸೋಮವಾರವೂ ಮುಂದುವರಿದಿದೆ. ಕೇವಲ 24 ಗಂಟೆಯ ಅವಧಿಯಲ್ಲಿ 103 ಮಿ.ಮೀ. ಮಳೆಯಾಗುವ ಮೂಲಕ ದಾಖಲೆ ಸೃಷ್ಟಿಸಿದೆ. ಗುರುವಾರದವರೆಗೆ ಹೆಚ್ಚಿನ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಕೆಂಗೇರಿಯಲ್ಲಿ 132 ಮಿ.ಮೀ., ಕೋರಮಂಗಲದಲ್ಲಿ 96.5 ಮಿ.ಮೀ. ಮತ್ತು ಎಚ್‌ಎಎಲ್‌ನಲ್ಲಿ 93 ಮಿ.ಮೀ. ಮಳೆಯಾಗಿದ್ದು, ವ್ಯಾಪಕ ಪ್ರವಾಹ ಉಂಟಾಗಿದೆ. ಬೆಂಗಳೂರು ನಗರದ ಹಲವು ಭಾಗಗಳು ಜಲಾವೃತ್ತವಾಗಿದ್ದು, ರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡಿದರು. ಜನ ವಸತಿ ಪ್ರದೇಶಗಳು ಜಲಾವೃತಗೊಂಡಿದ್ದು, ಸಂಚಾರ ಅಸ್ತವ್ಯಸ್ತವಾಗಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೊಸಪೇಟೆಯಿಂದ ಬೆಂಗಳೂರಿಗೆ ದೌಡಾಯಿಸಿ ಪರಿಸ್ಥಿತಿ ಪರಿಶೀಲಿಸಿದ್ದಾರೆ. ಇನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಬಿಬಿಎಂಪಿ ಸ್ಥಾಪಿಸಿರುವ ವಾರ್‌ರೂಂಗೆ ತೆರಳಿ ಪರಿಸ್ಥಿತಿ ಅವಲೋಕಿಸಿದ್ದಾರೆ. → 4

ನಾಲ್ವರು ಬಲಿ

ರಾಜ್ಯಾದ್ಯಂತ ಸುರಿದ ಮಹಾಮಳೆಗೆ ನಾಲ್ವರು ಬಲಿಯಾಗಿದ್ದಾರೆ. ಬೆಂಗಳೂರಿನ ಮಹದೇವಪುರದ ಚನ್ನಸಂದ್ರದಲ್ಲಿ ಶಶಿಕಲಾ (35) ಎಂಬುವವರು ಮೃತಪಟ್ಟಿದ್ದಾರೆ. ಬಿಟಿಎಂ ಲೇಔಟ್‌ನ 2ನೇ ಹಂತದ ಎನ್.ಎಸ್.ಪಾಳ್ಯದಲ್ಲಿ 9 ವರ್ಷದ ಮಗು, 60 ವರ್ಷದ ವ್ಯಕ್ತಿಯೊಬ್ಬರು ಬಲಿಯಾಗಿದ್ದಾರೆ. ಅಂಕೋಲಾ ತಾಲೂಕಿನ ಉಳುವರೆ ಗ್ರಾಮದ ರೈತ ತಮ್ಮಣ್ಣ ಅನಂತ ಗೌಡ (65) ಎಂಬುವವರು ಸಿಡಿಲಿಗೆ ಬಲಿಯಾಗಿದ್ದಾರೆ.

ಸ್ಫೋಟ ಸಂಚು ಇಬ್ಬರ ಬಂಧನ

ಹೈದರಾಬಾದ್: ದೇಶದ ಹಲವೆಡೆ ಬಾಂಬ್ ದಾಳಿಗೆ ಸಂಚು ರೂಪಿಸಿದ್ದ ಶಂಕೆಯ ಮೇಲೆ ಇಬ್ಬರನ್ನು ಬಂಧಿಸಲಾಗಿದೆ. ಹೈದರಾಬಾದ್‌ನ ವಾರಸಿಗುಡದ ಸೈಯದ್ ಸಮೀರ್ ಮತ್ತು ವಿಜಯನಗರದ ಸಿರಾಜ್-ಉರ್-ರೆಹಮಾನ್ ಬಂಧಿತರು. ಈ ಇಬ್ಬರು ಸೌದಿ ಅರೇಬಿಯಾ ಮೂಲದ ಇಸ್ಲಾಮಿಕ್ ಸ್ಟೇಟ್ ಹ್ಯಾಂಡ್ಲರ್‌ಗಳಿಂದ ನಿರ್ದೇಶನಗಳನ್ನು ಪಡೆಯುತ್ತಿದ್ದರು ಎಂದು ಗುಪ್ತಚರ ಸಂಸ್ಥೆಗಳು ತಿಳಿಸಿವೆ.

ಬೇಹುಗಾರಿಕೆ ಮೂವರ ಸೆರೆ

ಚಂಡೀಗಢ: ಬೇಹುಗಾರಿಕೆ ಆರೋಪದ ಮೇಲೆ ಪಂಜಾಬ್‌ನಲ್ಲಿ ಇಬ್ಬರು ಮತ್ತು ಉತ್ತರ ಪ್ರದೇಶದಲ್ಲಿ ಒಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಸುಖ್‌ಪ್ರೀತ್ ಸಿಂಗ್ ಹಾಗೂ ಕರಣ್‌ಬೀರ್ ಎಂಬುವವರನ್ನು ಪಂಜಾಬ್ ಪೊಲೀಸರು ಬಂಧಿಸಿದ್ದರೆ, ಶಯಜಾದ್ ಎಂಬುವವರನ್ನು ಉತ್ತರ ಪ್ರದೇಶ ಪೊಲೀಸರು ಬಂಧಿಸಿದ್ದಾರೆ. ಬೇಹುಗಾರಿಕೆ ಪ್ರಕರಣದಲ್ಲಿ ಈವರೆಗೂ ಬಂಧಿತರಾದವರ ಸಂಖ್ಯೆ 12ಕ್ಕೆ ಏರಿಕೆಯಾಗಿದೆ.

ಸಿ.ಟಿ.ರವಿಗೆ ಬಿಗ್ ರಿಲೀಫ್

ದೆಹಲಿ: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಅಶ್ಲೀಲ ಪದ ಬಳಸಿದ ಆರೋಪದ ಮೇಲೆ ಸಿ.ಟಿ.ರವಿ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಗೊಳಿಸಲು ನಿರಾಕರಿಸಿದ್ದ ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದ ಸಿ.ಟಿ.ರವಿ ಅವರ ಅರ್ಜಿ ವಿಚಾರಣೆ ಸೋಮವಾರ ನಡೆದಿದ್ದು, ವಿಚಾರಣಾ ಪ್ರಕ್ರಿಯೆಗಳಿಗೆ ತಡೆ ನೀಡಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.

ಪ್ರತ್ಯೇಕ ಘಟನೆಯಲ್ಲಿ ಐವರು ನೀರುಪಾಲು

ಬೆಂಗಳೂರು: ನೀರಿನಲ್ಲಿ ಮುಳುಗಿ ಐವರು ಮೃತಪಟ್ಟಿರುವ ಎರಡು ಪ್ರತ್ಯೇಕ ಘಟನೆ ನಡೆದಿವೆ. ಮಾಗಡಿ ತಾಲೂಕಿನ ವೈ.ಜಿ.ಗುಡ್ಡ ಜಲಾಶಯದ ಹಿನ್ನೀರಿನಲ್ಲಿ ಮುಳುಗಿ ಬೆಂಗಳೂರಿನ ಎಭಾರ್ಗವಿ (22), ರಮ್ಯ (20) ಹಾಗೂ ಮಧು (25) ಮೃತಪಟ್ಟಿದ್ದಾರೆ. ಗಂಗಾವತಿ ತಾಲೂಕಿನ ಚಿಕ್ಕಜಂತಕಲ್ ಗ್ರಾಮದಲ್ಲಿ ಪವನ್ ಕಟ್ಟಿಮನಿ (14), ಗೌತಮ್ (15) ಎಂಬುವವರು ಮೃತಪಟ್ಟಿದ್ದಾರೆ.

ನೂತನ ಡಿಜಿ-ಐಜಿಪಿ ನೇಮಕ ಇಂದು?

ಬೆಂಗಳೂರು: ಡಿಜಿ-ಐಜಿಪಿ ಅಲೋಕ್ ಮೋಹನ್ ಮೇ 21ರಂದು ನಿವೃತ್ತರಾಗಲಿದ್ದು, ಮೇ 20ರಂದು ನೂತನ ಡಿಜಿ-ಐಜಿಪಿಯನ್ನು ಸರಕಾರ ನೇಮಕ ಮಾಡಲಿದೆ. ಅಗ್ನಿಶಾಮಕ ತುರ್ತು ಸೇವೆಗಳ ಇಲಾಖೆ ಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್, ಸಿಐಡಿ ಡಿಜಿಪಿ ಡಾ.ಎಂ.ಎ.ಸಲೀಂ, ವಸತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಎಂಡಿ ರಾಮಚಂದ್ರ ರಾವ್ ರೇಸ್‌ನಲ್ಲಿದ್ದಾರೆ.

ಕರ್ನಾಟಕ ಸರ್ಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಸಾರಿಗೆಯ 2 ವರ್ಷದ ಸಾರ್ಥಕ ಸಾಧನೆಯ ಮೈಲಿಗಲ್ಲು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಹೊಸ ಬಸ್ಸುಗಳ ಸೇರ್ಪಡೆ
- 5800 ಹೊಸ ಬಸ್ಸುಗಳ ಸೇರ್ಪಡೆಗೆ ಅನುಮೋದನೆ
- ಈಗಾಗಲೇ 5009 ಬಸ್ಸುಗಳ ಸೇರ್ಪಡೆ (ಕರಾರಸಾನಿ–1165, ಬಿಎಂಟಿಸಿ–1955, ವಾಕರಸಾಸಂ –856, ಕಕರಸಾನಿ –1033)

ಹೊಸ ನೇಮಕಾತಿ
- 10000 ಹುದ್ದೆಗಳ ನೇಮಕಾತಿಗೆ ಚಾಲನೆ
- ಈಗಾಗಲೇ 4700 ಹೊಸ ನೇಮಕಾತಿ ಮತ್ತು 1000 ಅನುಕಂಪದ ನೇಮಕಾತಿ ಪೂರ್ಣ
- ಉಳಿದ 4300 ನೇಮಕಾತಿಗಳು ಇನ್ನೆರಡು ತಿಂಗಳಲ್ಲಿ ಪೂರ್ಣಗೊಳ್ಳಲಿದೆ

ಕೆಎಸ್ಆರ್‌ಟಿಸಿ ಆರೋಗ್ಯ
- 350ಕ್ಕೂ ಹೆಚ್ಚು ಆಸ್ಪತ್ರೆಗಳು, 1.39 ಲಕ್ಷ ಸಿಬ್ಬಂದಿ ಹಾಗೂ ಅವಲಂಬಿತರಿಗೆ ವೆಚ್ಚದ ಮಿತಿಯಿಲ್ಲದೆ ನಗದು ರಹಿತ ವೈದ್ಯಕೀಯ ಚಿಕಿತ್ಸೆ, ಇಲ್ಲಿಯವರೆಗೆ ಒಟ್ಟು 69,185 ಕ್ಲೈಮುಗಳು
- ವಾಕರಸಾಸಂಸ್ಥೆಯ ಸಿಬ್ಬಂದಿಗಳಿಗೆ ಕಿಮ್ಸ್‌ನೊಂದಿಗೆ 'ನಗದು ರಹಿತ' ವೈದ್ಯಕೀಯ ಸೌಲಭ್ಯ

ಸಾರಿಗೆ ಸುರಕ್ಷಾ ವಿಮಾ ಯೋಜನೆ
- ಅಪಘಾತದಲ್ಲಿ (ಆನ್ ಡ್ಯೂಟಿ / ಆಫ್ ಡ್ಯೂಟಿ) ಮೃತಪಟ್ಟ ಸಿಬ್ಬಂದಿಯ ಅವಲಂಬಿತರಿಗೆ ರೂ.1 ಕೋಟಿ ಚೆಕ್ ವಿತರಣೆ
- ಇದೇ ಮೊದಲ ಬಾರಿಗೆ ಅಪಘಾತದಲ್ಲಿ ಕಾಲು ಕಳೆದುಕೊಂಡ ಸಿಬ್ಬಂದಿಗೆ ರೂ.25 ಲಕ್ಷ ಪರಿಹಾರ ಮೊತ್ತ ವಿತರಣೆ

ಡಿಜಿಟಲ್ ಉಪಕ್ರಮಗಳು
- ಬಸ್ಸುಗಳಲ್ಲಿ ಯುಪಿಐ ಡಿಜಿಟಲ್ ಪಾವತಿ
- ಸಾರಿಗೆ ಮಿತ್ರ (ಹೆಚ್‌ಆರ್‌ಎಂಎಸ್), ಇನ್ವೆಂಟರಿ ಮ್ಯಾನೇಜ್‌ಮೆಂಟ್ (ಇ–ಉಗ್ರಾಣ), 'ನಮ್ಮ ಬಿಎಂಟಿಸಿ' ಮೊಬೈಲ್ ಅಪ್ಲಿಕೇಶನ್

ಕುಟುಂಬ ಕಲ್ಯಾಣ ವಿಮಾ ಯೋಜನೆ
ಅಪಘಾತ ಹೊರತುಪಡಿಸಿ ಇತರೆ ಕಾರಣಗಳಿಂದ ಮೃತಪಟ್ಟ ಸಿಬ್ಬಂದಿಗಳ ಕುಟುಂಬಕ್ಕೆ ಪರಿಹಾರ ಮೊತ್ತ ರೂ. 3 ಲಕ್ಷದಿಂದ ರೂ. 10 ಲಕ್ಷಕ್ಕೆ ಏರಿಕೆ

ಹೊಸ ಟ್ರಕ್ ಟರ್ಮಿನಲ್‌ಗಳು
ಮೈಸೂರು, ದಾಸನಪುರ, ಹೊಸಪೇಟೆ, ರಾಯಚೂರು, ಗುಂಡ್ಲುಪೇಟೆ, ದಾಂಡೇಲಿ, ಹುಬ್ಬಳ್ಳಿಗಳಲ್ಲಿ ಟ್ರಕ್ ಟರ್ಮಿನಲ್‌ಗಳ ನಿರ್ಮಾಣ

ಸಾರಿಗೆ ವಿದ್ಯಾ ಚೇತನ
ಸಿಬ್ಬಂದಿಗಳ ಮಕ್ಕಳಿಗೆ ಅತ್ಯಧಿಕ ಮೊತ್ತದ ವಿದ್ಯಾರ್ಥಿ ವೇತನ, ಇಲ್ಲಿಯವರೆಗೆ ರೂ. 2.84 ಕೋಟಿ ಪಾವತಿ

ಹೃದ್ರೋಗ ತಪಾಸಣೆ
ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಅವರೊಂದಿಗೆ ಕರಾರಸಾ ನಿಗಮ, ಬಿಎಂಟಿಸಿ ಮತ್ತು ಕಕರಸಾ ನಿಗಮದ ಸಿಬ್ಬಂದಿಗಳಿಗಾಗಿ ಉಚಿತ ಹೃದ್ರೋಗ ತಪಾಸಣೆ

ಹೊಸ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ
- 38 ಸ್ಥಳಗಳಲ್ಲಿ ರೂ. 274 ಕೋಟಿ ವೆಚ್ಚದಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ನಿರ್ಮಾಣ
- ರೂ.71 ಕೋಟಿ ವೆಚ್ಚದಲ್ಲಿ 11 ಸ್ಥಳಗಳಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿ ನಿರ್ಮಾಣ

ನಮ್ಮ ಕಾರ್ಗೋ
20 ಸರಕು ಸಾಗಣೆ ವಾಹನಗಳ ಮೂಲಕ ಲಾಜಿಸ್ಟಿಕ್ಸ್ ಸೇವೆ ಆರಂಭ

ಬಸ್ಸುಗಳ ಪುನಶ್ಚೇತನ ಕಾರ್ಯ
1748 ಹಳೆಯ ಬಸ್ಸುಗಳ ಪುನಶ್ಚೇತನ ಕಾರ್ಯ

ಹೊಸ ಬಸ್ಸು ನಿಲ್ದಾಣ/ಘಟಕ ನಿರ್ಮಾಣ
- ಮೈಸೂರು ನಗರದಲ್ಲಿ (ಬನ್ನಿಮಂಟಪ) ರೂ.120 ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ
- ರಾಜ್ಯಾದ್ಯಂತ 24 ಬಸ್ ನಿಲ್ದಾಣಗಳು, 08 ಬಸ್ ಘಟಕಗಳ ನಿರ್ಮಾಣ/ಮೇಲ್ದರ್ಜೆಗೇರಿಸಲಾಗಿದೆ

ಮೊಬೈಲ್ ವ್ಯಾನ್/ಮೆಟ್ರೋ ಫೀಡರ್ ವ್ಯವಸ್ಥೆ
- ಬೆಂಗಳೂರು ನಗರದಲ್ಲಿ ಬಸ್ ಆಕಸ್ಮಿಕ ಅವಘಡಕ್ಕೀಡಾದಾಗ ಸಂಚಾರಿ ಕಾರ್ಯಾಗಾರ ಪ್ರಮುಖ ಬಸ್ ನಿಲ್ದಾಣಗಳಿಗೆ ನಿಯೋಜನೆ
- 70 ಮೆಟ್ರೋ ಫೀಡರ್ ಬಸ್ಸುಗಳು, 212 ಅನುಸೂಚಿಗಳ ಕಾರ್ಯಾಚರಣೆ

ಬಸ್ಸುಗಳ ಬ್ರಾಂಡಿಂಗ್/ ಬಸ್ ಟ್ರಿಪ್‌ಗಳ ಹೆಚ್ಚಳ
- ಅಶ್ವಮೇಧ, ಪಲ್ಲಕ್ಕಿ, ಅಂಬಾರಿ ಉತ್ಸವ, ಕಲ್ಯಾಣ ರಥ, ಐರಾವತ ಕ್ಲಬ್ ಕ್ಲಾಸ್ 2.0, ಅಮೋಘವರ್ಷ
- ಪ್ರತಿದಿನ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ 21,832 ಬಸ್ ಟ್ರಿಪ್‌ಗಳ ಹೆಚ್ಚಳ ಹಾಗೂ 32 ಲಕ್ಷ ಪ್ರಯಾಣಿಕರ ಏರಿಕೆ

ಅಪಘಾತ ಪರಿಹಾರ ನಿಧಿ
ಬಸ್ಸಿನಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರು ಬಸ್ ಅಪಘಾತಕ್ಕೆ ಒಳಗಾಗಿ ಮೃತಪಟ್ಟಲ್ಲಿ ನೀಡಲಾಗುತ್ತಿದ್ದ ಪರಿಹಾರ ಮೊತ್ತ ರೂ.3 ಲಕ್ಷದಿಂದ ರೂ.10 ಲಕ್ಷಕ್ಕೆ ಏರಿಕೆ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಕಳೆದ 2 ವರ್ಷದಲ್ಲಿ 181 ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿರುತ್ತವೆ.

ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರು ರೂ.1 ಕೋಟಿ ಚೆಕ್ ಅನ್ನು ಮೃತ ಸಾರಿಗೆ ಸಿಬ್ಬಂದಿಗಳ ಅವಲಂಬಿತರಿಗೆ ವಿತರಣೆ ಮಾಡಿದ ಸಂದರ್ಭ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು
ಸುರಕ್ಷತೆ, ವಿಶ್ವಾಸಾರ್ಹ ಪ್ರಯಾಣದ ಪ್ರತೀಕ

ನುಡಿದಂತೆ ನಡೆದಿದ್ದೇವೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸುಹಾಸ್ ಶೆಟ್ಟಿ ಹತ್ಯೆ ಆರೋಪಿ ನೌಷಾದ್ ಮೇಲೆ ಹಲ್ಲೆಗೆ ಯತ್ನ

ಮಂಗಳೂರು: ಜಿಲ್ಲಾ ಕಾರಾಗೃಹದಲ್ಲಿ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ಆರೋಪಿ ನೌಷಾದ್ ಯಾನೇ ಚೊಟ್ಟೆ ನೌಷಾದ್ ಮೇಲೆ ಸೋಮವಾರ ಸಂಜೆ ಹಲ್ಲೆಗೆ ಯತ್ನ ನಡೆದಿದೆ.

ಸೋಮವಾರ ನೌಷಾದ್‌ನ ಪೊಲೀಸ್ ಕಸ್ಟಡಿ ಅಂತ್ಯವಾದ ಹಿನ್ನೆಲೆಯಲ್ಲಿ ಪೊಲೀಸರು ಆತನನ್ನು ನ್ಯಾಯಾಲಯಕ್ಕೆ ಹಾಜರಪಡಿಸಿ ದ್ದರು. ನ್ಯಾಯಾಲಯ ಆತನಿಗೆ ನ್ಯಾಯಾಂಗ ಬಂಧನ ವಿಧಿಸಿದ್ದು, ಮೈಸೂರು ಜೈಲಿಗೆ ಶಿಫ್ಟ್ ಮಾಡಲು ಪೊಲೀಸರು ಉದ್ದೇಶಿಸಿದ್ದರು. ಈ ಮಧ್ಯೆ ಮಂಗ ಳೂರು ಜೈಲಿನಲ್ಲಿ ಯಾರನ್ನೋ ನೋಡಬೇಕು ಎಂದು ನೌಷಾದ್ ಹೇಳಿದ್ದ. ಜೈಲಿನಲ್ಲಿ ಮತ್ತೊರ್ವ ಕೈದಿ ಭೇಟಿಗಾಗಿ ಪೊಲೀಸರು ಕರೆದುಕೊಂಡು ಹೋಗಿದ್ದರು. ಆತನನ್ನು ನೋಡಿದ ಜೈಲಿನಲ್ಲಿದ್ದ ಇತರ ಕೈದಿಗಳು ಇದ್ದಕಿದ್ದಂತೆ ನೌಷಾದ್ ಮೇಲೆ ಕಲ್ಲು ಮತ್ತು ಸಿಕ್ಕ ಸಿಕ್ಕ ವಸ್ತು ತೂರಿ ದಾಳಿ ನಡೆಸಿದ್ದಾರೆ. ಇದೀಗ ನೌಷಾದ್ ನನ್ನು ಮೈಸೂರು ಜೈಲಿಗೆ ಸ್ಥಳಾಂತರಿಸಲಾಗಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ರೂಪರೇಖಾ ಮತ್ತು ತನಿಖಾ ವಿಭಾಗ, ಬನ್ನೂರು–571101.
ಪೊ: 08227–275653, ಫ್ಯಾಕ್ಸ್: 08227–275653
ಇ–ಮೇಲ್: eedidbannur@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2025–26: ದಿ: 15.05.2025

(Karnataka Public Procurement Portal ಮೂಲಕ ಮಾತ್ರ)
ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ಅನ್ನು ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 01/2025–26, ದಿ: 15.05.2025ರಲ್ಲಿ 3 ಸಂಖ್ಯೆ ಕಾಮಗಾರಿಗಳಿಗೆ (ಅಂದಾಜು ಮೊತ್ತ ಕನಿಷ್ಠ ರೂ.300.00 ಲಕ್ಷಗಳು ಮತ್ತು ಗರಿಷ್ಠ ರೂ.488.00 ಲಕ್ಷಗಳು) ಕೆ.ಡಬ್ಲ್ಯೂ–4 ರನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ತೆರೆಯುವ ದಿನಾಂಕ ಹಾಗೂ ಇತರೆ ವಿವರಗಳನ್ನು Karnataka Public Procurement Portalನಲ್ಲಿ ಅಥವಾ ಈ ಕೆಳಗೆ ಸಹಿ/– ಮಾಡಿರುವ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ರೂಪರೇಖಾ ಮತ್ತು ತನಿಖಾ ವಿಭಾಗ, ಬನ್ನೂರು.

DIPR/DDMYS/200/KSMCA/173/2025-26

ಪೊಲೀಸರ ಮೇಲೆ ಹಲ್ಲೆ: ಗುಂಡೇಟು

ಶಿವಮೊಗ್ಗ: ಬಂಧಿಸಲು ಬಂದ ಪೊಲೀಸರ ಮೇಲೆ ಹಲ್ಲೆ ನಡೆಸಿದ ಕೊಲೆ ಪ್ರಕರಣದ ಆರೋಪಿಯ ಕಾಲಿಗೆ ಪೊಲೀಸರು ಗುಂಡೇಟು ಹೊಡೆದಿರುವ ಘಟನೆ ನಡೆದಿದೆ. ವಾಕಿಂಗ್ ಹೋಗಿದ್ದ ಹೇಮಣ್ಣ ಎಂಬುವರನ್ನು ಕೊಲೆ ಮಾಡಿದ ಆರೋಪದ ಮೇಲೆ ಮಂಜು ಎಂಬಾ ತನ ಬಂಧನಕ್ಕೆ ಹೊಳೆಹೊನ್ನೂರು ಪೊಲೀಸರು ತೆರಳಿದ್ದರು. ಈ ವೇಳೆ, ಆತ ಪೊಲೀಸರ ಮೇಲೆಯೇ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದ. ಆಗ ಪೊಲೀಸರು ಆತನ ಕಾಲಿಗೆ ಗುಂಡೇಟು ಹೊಡೆದು ಹಿಡಿದಿದ್ದಾರೆ. ಹೊಳೆಹೊನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/09/2025-26 ಪ್ರಕಟಣೆ ದಿನಾಂಕ: 17.05.2025.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ವ್ಯವಸಾಯ" ವಲಯದಿಂದ "ವಸತಿ" ಭೂಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1	ಶ್ರೀ ಎಂ. ರಾಜೇಂದ್ರ ರೆಡ್ಡಿ ಬಿನ್ ಲೇಟ್ ಎಂ. ಮೋಹನ್ ರಾಮಿ ರೆಡ್ಡಿ	ಆನೇಕಲ್	ಅತ್ತಿಬೆಲೆ–1	ಅರೆನೂರು	81 82 83/1 83/4 83/5 83/6 83/7 85/2 85/4 88/1 88/4 88/5 88/6 89/3 92/6	0–02 0–10 0–09 0–09 0–10 0–02 0–05 0–04 0–11 0–03 0–02 0–02 0–02 0–18 0–13	ವ್ಯವಸಾಯ	ವಸತಿ
2	ಶ್ರೀ ಕೃಷ್ಣಮೂರ್ತಿ ಮತ್ತು ಇತರರ ಪರವಾಗಿ ಜಿಪಿಎ ಹೋಲ್ಡರ್ ಆದ ಶ್ರೀ ಎಂ. ರಾಜೇಂದ್ರ ರೆಡ್ಡಿ ಬಿನ್ ಲೇಟ್ ಎಂ. ಮೋಹನ್ ರಾಮಿ ರೆಡ್ಡಿ	ಆನೇಕಲ್	ಅತ್ತಿಬೆಲೆ–1	ಅರೆನೂರು	88/2	0–02	ವ್ಯವಸಾಯ	ವಸತಿ
3	ಶ್ರೀ ರಾಜೇಂದ್ರ ರೆಡ್ಡಿ ಬಿನ್ ಲೇಟ್ ಎಂ. ಮೋಹನ್ ರಾಮಿ ರೆಡ್ಡಿ ಮತ್ತು ಶ್ರೀ ಎಂ. ಸುರೇಂದ್ರ ರೆಡ್ಡಿ ಬಿನ್ ಲೇಟ್ ಎಂ. ಮೋಹನ್ ರಾಮಿ ರೆಡ್ಡಿ	ಆನೇಕಲ್	ಅತ್ತಿಬೆಲೆ–1	ಅರೆನೂರು	83/3 87 88/3 90/2	0–04 0–13 0–04 0–27	ವ್ಯವಸಾಯ	ವಸತಿ
4	ಶ್ರೀ ಮುನಿಯಪ್ಪ ಬಿನ್ ವೆಂಕಟಪ್ಪ ಮತ್ತು ಶ್ರೀ ಭಂಗಿಯಲ್ಲಪ್ಪ ಬಿನ್ ಗುಳ್ಳಪ್ಪ	ಆನೇಕಲ್	ಅತ್ತಿಬೆಲೆ–1	ಅರೆನೂರು	83/2	0–06	ವ್ಯವಸಾಯ	ವಸತಿ
5	ಶ್ರೀಮತಿ ಮಮತ ಕೋಂ. ಶ್ರೀನಿವಾಸ ರೆಡ್ಡಿ	ಆನೇಕಲ್	ಅತ್ತಿಬೆಲೆ–1	ಅರೆನೂರು	85/1	0–12	ವ್ಯವಸಾಯ	ವಸತಿ
6	ಶ್ರೀ ಕೆ. ನಾಗರಾಜು, ಶ್ರೀ ಕೆ. ಗೋಪಾಲ್, ಶ್ರೀ ಕೆ. ಪಿಲ್ಲಪ್ಪ ಬಿನ್ ಲೇಟ್ ಕೃಷ್ಣಪ್ಪ	ಆನೇಕಲ್	ಅತ್ತಿಬೆಲೆ–1	ಅರೆನೂರು	85/3	0–15	ವ್ಯವಸಾಯ	ವಸತಿ
7	ಶ್ರೀ ಆಶಿಶ್ ನಹಾರ್ ಬಿನ್ ಅಶೋಕ್ ನಹಾರ್	ಆನೇಕಲ್	ಅತ್ತಿಬೆಲೆ–1	ಅರೆನೂರು	86/1 86/2	0–09 0–09	ವ್ಯವಸಾಯ	ವಸತಿ
8	ಶ್ರೀ ಶಾಂತಕುಮಾರ್ ಬಿನ್ ಸಿದ್ದಾರೆಡ್ಡಿ	ಆನೇಕಲ್	ಅತ್ತಿಬೆಲೆ–1	ಅರೆನೂರು	89/1	0–20½	ವ್ಯವಸಾಯ	ವಸತಿ
9	ಶ್ರೀ ಆನಂದ ಬಿನ್ ಸಿದ್ದಾರೆಡ್ಡಿ	ಆನೇಕಲ್	ಅತ್ತಿಬೆಲೆ–1	ಅರೆನೂರು	89/1 91/1	0–20½ 0–15½	ವ್ಯವಸಾಯ	ವಸತಿ
10	ಶ್ರೀ ಎ.ಜಿ. ರಾಜು, ಶ್ರೀ ಎ.ಜಿ. ಕುಮಾರ್ ಬಿನ್ ಲೇಟ್ ಗೋಪಾಲ ರೆಡ್ಡಿ	ಆನೇಕಲ್	ಅತ್ತಿಬೆಲೆ–1	ಅರೆನೂರು	90/1	0–05	ವ್ಯವಸಾಯ	ವಸತಿ
11	ಶ್ರೀ ನರೇಂದ್ರ ರೆಡ್ಡಿ, ಶ್ರೀ ಸುರೇಂದ್ರ ರೆಡ್ಡಿ, ಶ್ರೀ ರಾಜೇಂದ್ರ ರೆಡ್ಡಿ ಬಿನ್ ಲೇಟ್ ಮೋಹನ್ ರಾಮಿ ರೆಡ್ಡಿ	ಆನೇಕಲ್	ಅತ್ತಿಬೆಲೆ–1	ಅರೆನೂರು	92/5	0–37	ವ್ಯವಸಾಯ	ವಸತಿ
12	ಶ್ರೀ ವೆಂಕಟರಮಣಪ್ಪ, ಶ್ರೀಮತಿ ಪದ್ಮಮ್ಮ ಕೋಂ. ಲೇಟ್ ಶ್ರೀನಿವಾಸರೆಡ್ಡಿ, ಶ್ರೀ ಸಿದ್ದಾರೆಡ್ಡಿ	ಆನೇಕಲ್	ಅತ್ತಿಬೆಲೆ–1	ಅರೆನೂರು	91/1	0–15½	ವ್ಯವಸಾಯ	ವಸತಿ
13	ಶ್ರೀ ರಾಜೇಂದ್ರ ರೆಡ್ಡಿ ಬಿನ್ ಲೇಟ್ ಎಂ. ಮೋಹನ್ ರಾಮಿ ರೆಡ್ಡಿ ಮತ್ತು ಶ್ರೀ ಎಂ. ಸುರೇಂದ್ರ ರೆಡ್ಡಿ ಬಿನ್ ಲೇಟ್ ಎಂ. ಮೋಹನ್ ರಾಮಿ ರೆಡ್ಡಿ	ಆನೇಕಲ್	ಅತ್ತಿಬೆಲೆ–1	ಬಿದರಗುಪ್ಪೆ	339	0–36	ವ್ಯವಸಾಯ	ವಸತಿ

ಷರಾ:–
- ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ' ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
- ಸ.ನಂ. 81, 83/7, 82, 83/3, 339ರ ಜಮೀನುಗಳು ಕೆರೆಯ ಪ್ರದೇಶಕ್ಕೆ ಹೊಂದಿಕೊಂಡಿದ್ದು, ಅನುಮೋದಿತ ಮಹಾಯೋಜನೆಯಂತೆ ಸದರಿ ಸರ್ವೆ ನಂಬರ್‌ಗಳಲ್ಲಿ ಸೂಚಿಸಿರುವ ಬಫರ್ ಪ್ರದೇಶವನ್ನು ಯಥಾವತ್ತಾಗಿ ಕಾಯ್ದಿರಿಸುವ ಷರತ್ತಿಗೊಳಪಟ್ಟಿರುತ್ತದೆ.

"ಸದಸ್ಯ ಕಾರ್ಯದರ್ಶಿರವರ ದಿನಾಂಕ: 17.03.2025ರ ಅಧಿಕೃತ ಜ್ಞಾಪನ ಪತ್ರದಲ್ಲಿ ಅಧಿಕಾರ ಪ್ರತ್ಯೋಜಿಸಿರುವಂತೆ ಸಹಿ ಮಾಡಿದೆ."

ಸಹಿ/–
ಸದಸ್ಯ ಕಾರ್ಯದರ್ಶಿಗಳ ಪರವಾಗಿ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/754/ಆಕಾರ್/2025–26

2 ದಿನಗಳಿಂದ ಭಾರೀ ಮಳೆ, ಹಲವು ಅವಾಂತರ | ತುಂಬಿ ಹರಿಯುತ್ತಿರುವ ಹಳ್ಳಗಳು

ರಾಜ್ಯದಲ್ಲಿ ಪೂರ್ವ ಮುಂಗಾರು ಚುರುಕು

ಕಲಬುರಗಿ– ಸೇಡಂ ರಸ್ತೆ ಸಮೀಪದ ತೋಟದಲ್ಲಿ ಹಾನಿಗೀಡಾದ ಬಾಳೆ ಬೆಳೆಯೊಂದಿಗೆ ರೈತರು.

ಕುಷ್ಟಗಿ ತಾಲೂಕಿನ ಮುದೇನೂರು ಸರಕಾರಿ ಶಾಲಾ ಮೈದಾನ ಜಲಾವೃತವಾಗಿರುವುದು.

ಬೆಂಗಳೂರು: ಈ ಬಾರಿ ರಾಜ್ಯದಲ್ಲಿ ಪೂರ್ವ ಮುಂಗಾರು ಚುರುಕಾಗಿದ್ದು, ಅವಧಿಗಿಂತ ಪೂರ್ವದಲ್ಲಿ ರಾಜ್ಯದಲ್ಲಿ ಧಾರಾಕಾರ ಮಳೆ ಆಗುತ್ತಿದೆ. ಕಳೆದ 24 ಗಂಟೆಗಳಲ್ಲಿ ಕಲಬುರಗಿ, ಬೀದರ್, ರಾಯ ಚೂರು, ಧಾರವಾಡ, ಉತ್ತರ ಕನ್ನಡ, ಬಳ್ಳಾರಿ, ವಿಜಯಪುರ, ಬೆಳಗಾವಿ, ಚಿಕ್ಕಬಳ್ಳಾಪುರ, ತುಮ ಕೂರು, ಮೈಸೂರು ಸೇರಿ ಹಲವು ಕಡೆ ಧಾರಾಕಾರ ಮಳೆ ಆಗಿದೆ.

ವಿದ್ಯುತ್ ತಂತಿ ತಗಲಿ ಎತ್ತು ಸಾವು: ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ರಾರಾವಿಯಲ್ಲಿ ಯಲ್ಲಮ್ಮನ ಹಳ್ಳ ಉಕ್ಕಿ ಹರಿಯುತ್ತಿದ್ದು, ಕುರುವಳ್ಳಿ, ರಾಂಪುರ ಗ್ರಾಮಗಳಿಗೆ ಸಂಪರ್ಕಿಸುವ ರಸ್ತೆ ಮೇಲೆ ನೀರು ಹರಿಯುತ್ತಿದೆ. ಅಲ್ಲಿ 3.87ಸೆಂ.ಮೀ ಮಳೆಯಾಗಿದೆ. ಹರಪನಹಳ್ಳಿ ತಾಲೂಕಿನ ಚೆನ್ನಹಳ್ಳಿ ತಾಂಡದಲ್ಲಿ ವಿದ್ಯುತ್ ತಂತಿ ತಗುಲಿ ಎತ್ತು ಮೃತಪಟ್ಟಿದೆ.

ಮಳೆ ಅವಾಂತರಗಳು

- ಬಳ್ಳಾರಿಯ ಗೊಲ್ಲನಾಗೇನಹಳ್ಳಿಯಲ್ಲಿ 5 ಕುರಿಗಳು ಮೃತ್ಯು
- ಉಕ್ಕಿ ಹರಿಯುತ್ತಿರುವ ಸಿರುಗುಪ್ಪದ ರಾರಾವಿಯ ಯಲ್ಲಮ್ಮನಹಳ್ಳ
- ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯಲ್ಲಿ ಮಾವು ನಷ್ಟ
- ರಾಯಚೂರಿನ ಮಸರಕಲ್ ಗ್ರಾ.ಪಂನ ಮೇಲ್ಛಾವಣಿ ಕುಸಿತ

ಉತ್ತರ ಕನ್ನಡಜಿಲ್ಲೆಯಲ್ಲಿ ಸುರಿದ ಭಾರಿಮಳೆ, ಗುಡುಗಿನಿಂದಾಗಿ ಸಿಡಿಲಿಗೆ ರೈತನೊಬ್ಬ ಬಲಿಯಾಗಿದ್ದಾನೆ. ತಮ್ಮಣ್ಣ ಅನಂತ ಗೌಡ. (65) ಅಂಕೋಲಾ ತಾಲೂಕಿನ ಉಳುವರೆ ಗ್ರಾಮದ ರೈತನಾಗಿದ್ದು, ಸೋಮವಾರ ಸಂಜೆಯ ಸಿಡಿಲಿನಬ್ಬರಕ್ಕೆ ಮನೆಯ ಹತ್ತಿರವೇ ಸಿಡಿಲಿಗೆ ಬಲಿಯಾಗಿರುವುದಾಗಿ ತಿಳಿದು ಬಂದಿದೆ.

ತುಂಬಿ ಹರಿಯುತ್ತಿರುವ ಮರಖಲ ಹಳ್ಳ: ಬೀದರ್ ಜಿಲ್ಲೆಯಲ್ಲಿ ಕಳೆದ 2 ದಿನಗಳಿಂದ ಗುಡುಗು ಸಹಿತ ಮಳೆ ಅರ್ಭಟಿಸುತ್ತಿದೆ. ಮಳೆಗೆ ಜಿಲ್ಲೆಯ ಹಳ್ಳ– ಕೊಳ್ಳಗಳಿಗೆ ಜೀವಕಳೆ ಬಂದಿದ್ದು, ಜಮೀನಿಗೆ ಮಳೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ. ಮರಖಲ ಗ್ರಾಮದ ಬಳಿಯ ಹಿಪ್ಪಳಗಾ–ಮರಖಲ ಹಳ್ಳ ಮೈದುಂಬಿ ಹರಿಯುತ್ತಿದೆ.

ಮಾವಿನ ತೋಟದಲ್ಲಿ ನಿಂತ ಮಳೆ ನೀರು: ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ವಿವಿಧೆಡೆ ಗುಡುಗು, ಮಿಂಚು ಸಹಿತ ಜೋರು ಮಳೆ ಸುರಿ ಯಿತು. ಮಾಲೂರು ತಾಲೂಕಿನ ಸಂತೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 7 ಸೆಂ.ಮೀ. ಮಳೆ ಯಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನಾದ್ಯಂತ ಹದ ಮಳೆಯಾಯಿತು. ಬಾಗೇಪಲ್ಲಿ ತಾಲೂಕಿನಲ್ಲಿ ಸುರಿದ ಭಾರಿ ಮಳೆಗೆ ಚಿತ್ರಾವತಿ ನದಿಯಲ್ಲಿ ನೀರು ಹರಿಯುತ್ತಿದೆ. ರಾಜಕಾಲುವೆ ಒತ್ತುವರಿಯಾದ ಕಾರಣ ಮಳೆ ನೀರು ಪಕ್ಕದ ಮಾವಿನ ತೋಪಿಗೆ ನುಗ್ಗಿದೆ. ಚಿಂತಾಮಣಿ ತಾಲೂಕಿನ ಮಸ್ತೇನಹಳ್ಳಿ ಗ್ರಾಮದ ಇಡೀ ಮಾವಿನ ತೋಪಿನಲ್ಲಿ ನೀರು ನಿಂತಿದೆ. ಕೊಯ್ಲಿಗೆ ಬಂದಿದ್ದ ಮಾವು ಕಟಾವು ಮಾಡದಿದ್ದರಿಂದ, ಮರದಲ್ಲಿಯೇ ಕೊಳೆಯುವ ಆತಂಕ ಎದುರಾಗಿದೆ.

ತೋಟಗಾರಿಕೆ ಬೆಳೆಗೆ ಕುತ್ತು ತಂದ ಮಳೆ: ಕಲಬುರಗಿ ಜಿಲ್ಲೆಯಲ್ಲಿ ಕಳೆದ ಕೆಲವು ವಾರಗಳಿಂದ ಸುರಿದ ಬಿರು ಗಾಳಿ ಸಹಿತ ಜೋರು ಮಳೆಯಿಂದಾಗಿ ನೂರಾರು ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ತೋಟಗಾರಿಕಾ ಬೆಳೆ ಗಳಿಗೆ ಹಾನಿಯಾಗಿದೆ. ಇದರಿಂದ ರೈತರು ಕೋಟ್ಯಂತರ ರೂಪಾಯಿ ನಷ್ಟ ಅನುಭವಿಸಿದ್ದಾರೆ. ಅಕಾಲಿಕವಾಗಿ ಸುರಿಯುತ್ತಿರುವ ಮಳೆಯಿಂದಾಗಿ ತೋಟಗಾರಿಕೆ ಪ್ರದೇಶದಲ್ಲಿ ಬೆಳೆಗಳನ್ನು ಬೆಳೆದ ರೈತರು ಕಂಗಾಲಾಗಿದ್ದಾರೆ. ಸಾಲ ಮಾಡಿ ಪಪ್ಪಾಯ, ಬಾಳೆ, ಮಾವು ಬೆಳೆಗಳ ಮೇಲೆ ಹಾಕಿದ ಬಂಡವಾಳ ಅಕಾಲಿಕ ಮಳೆಯಲ್ಲಿ ಕೊಚ್ಚಿ ಹೋಗುತ್ತಿದೆ. ವರುಣಾರ್ಭಟದಿಂದ ಗೊನೆಯೊಂದಿಗೆ ಮಲಗಿರುವ ಬಾಳೆ ಬೆಳೆಗಳನ್ನು ನೋಡಿ ಬೆಳೆಗಾರರು ಚಿಂತೆಗೀಡಾಗಿದ್ದಾರೆ.

ಮೈಸೂರು, ತುಮಕೂರಿನಲ್ಲಿ ಗೋಡೆ ಕುಸಿತ

ಮೈಸೂರಿನ ಹಲವೆಡೆ ಧಾರಾಕಾರ ಮಳೆ ಯಾಗಿದ್ದು, ರಾತ್ರಿಯಿಡೀ ಸುರಿದ ಮಳೆಗೆ ಜಿಲ್ಲೆಯ ಹುಣಸೂರು ತಾಲೂಕು ಕೊಳಘಟ್ಟ ಗ್ರಾಮದ ಕರಗಮ್ಮ ಎಂಬುವವರಿಗೆ ಸೇರಿದ ಮನೆಯ ಮೇಲ್ಛಾವಣಿ ಹಾಗೂ ಗೋಡೆ ಕುಸಿದಿದೆ. ಮಧ್ಯರಾತ್ರಿ ಮನೆಯವರು ಮಲ ಗಿದ್ದ ವೇಳೆ ಗೋಡೆ ಕುಸಿದಿದ್ದು, ಕೂಡಲೇ ಮನೆಯವರು ಹೊರಬಂದಿದ್ದಾರೆ. ಹೊರ ಬರುತ್ತಿದ್ದಂತೆ ಮನೆಯ ಮೇಲ್ಛಾವಣಿಯೂ ಕುಸಿದಿದೆ. ಸದ್ಯ ಕುಟುಂಬಸ್ಥರು ಅಪಾಯ ದಿಂದ ಪಾರಾಗಿದ್ದಾರೆ. ನಿರಂತರ ಮಳೆಗೆ ಮನೆ ಕುಸಿದು ಬಿದ್ದ ಘಟನೆ ತುಮಕೂರಿನ ಮುದ್ದ ರಾಮಯ್ಯನ ಪಾಳ್ಯದಲ್ಲಿ ನಡೆದಿದೆ. ರಂಗ ಮಣಿ ಎಂಬುವವರಿಗೆ ಸೇರಿದ ಮನೆ ಭಾನುವಾರ ರಾತ್ರಿ ಸುರಿದ ಮಳೆ ಕುಸಿದು ಬಿದ್ದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಇಲ್ಲ. ಸೂಕ್ತ ಪರಿಹಾರ ನೀಡುವಂತೆ ಮನವಿ ಮಾಡಿದ್ದಾರೆ.

ಮುದೇನೂರು ಶಾಲೆ ಆವರಣ ಜಲಾವೃತ

ಕೊಪ್ಪಳ ಜಿಲ್ಲೆಯಲ್ಲಿ ಮಳೆ ಮುಂದುವರಿ ದಿದ್ದು, ಕುಷ್ಟಗಿ ತಾಲೂಕಿನ ಮುದೇ ನೂರು ಗ್ರಾಮದ ಸರಕಾರಿ ಶಾಲಾ ಮೈದಾನ ಸಂಪೂರ್ಣ ಜಲಾವೃತ ಆಗಿದೆ. ತಗ್ಗು ಪ್ರದೇಶದಲ್ಲಿ ಶಾಲೆ ಇರುವುದರಿಂದ ಜೋರು ಮಳೆ ಬಂದರೇ ಶಾಲಾ ಮೈದಾನ ಜಲಾವೃತ ಆಗುತ್ತಿದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಶಾಲಾ ಮೈದಾನ ಅಭಿವೃದ್ಧಿ ಮಾಡಿ ದರೂ ಮಳೆ ಅವಾಂತರ ತಪ್ಪಿಲ್ಲ ಎಂದು ಸ್ಥಳೀಯರು ಗ್ರಾ.ಪ ಪಂಚಾಯಿತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮನೆ ಶೆಡ್ ಕುಸಿತ ಮೂವರಿಗೆ ಗಾಯ

ರಾಯಚೂರು ಜಿಲ್ಲೆಯ ಹಲವೆಡೆ ಬಿರುಗಾಳಿ ಸಹಿತ ಭಾರೀ ಮಳೆ ಸುರಿಯುತ್ತಿದ್ದು ನಾನಾ ಅವಾಂತರ ಸೃಷ್ಟಿಸಿದೆ. ಲಿಂಗಸುಗೂರು ತಾಲೂಕಿನ ಪರಾಂಪುರ ತಾಂಡಾದಲ್ಲಿ ಗಾಳಿಗೆ ಟಿನ್ ಶೆಡ್ ಮನೆ ಕುಸಿದು ಬಿದ್ದು ಮನೆ ಯಲ್ಲಿದ್ದ ಮೂವರಿಗೆ ಗಂಭೀರ ಗಾಯ ಗಳಾಗಿವೆ. ಗಾಯಾಳುಗಳನ್ನು ಲಿಂಗಸುಗೂರು ಆಸ್ಪತ್ರೆಗೆ ದಾಖಲಿಸಲಾಗಿದೆ.

ದೇವದುರ್ಗ ತಾಲೂಕಿನ ಮಸರಕಲ್ ಗ್ರಾಮದ ಗ್ರಾಮ ಪಂಚಾಯಿತಿ ಕಟ್ಟಡದ ಮೇಲ್ಛಾವಣಿ ಕುಸಿದಿದೆ. ಸಿಂಧನೂರು, ಸಿರವಾರ, ಮಾನ್ವಿ ತಾಲೂಕಿನಲ್ಲಿ ಕಟಾವು ಮಾಡಿರುವ ಭತ್ತ ಮಳೆಯಿಂದ ನಾಶ ಆಗಿದೆ. ಹಲವು ಕಡೆ ನೀರಿಗೆ ಭತ್ತದ ರಾಶಿ ಕೊಚ್ಚಿ ಹೋಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಬಿಬಿಎಂಪಿ ಸ್ಥಾಪಿಸಿರುವ ವಾರ್ ರೂಂಗೆ ತೆರಳಿ ಪರಿಸ್ಥಿತಿ ಅವಲೋಕಿಸಿದರು.

ರಸ್ತೆಯಲ್ಲಿ ನಿಂತಿರುವ ನೀರಿನಲ್ಲೇ ಸಾಗುತ್ತಿರುವ ಬಿಎಂಟಿಸಿ ಬಸ್‌ಗಳು.

ಇಳೆ ತುಂಬಾ ಮಳೆ

← ಮೊದಲಪುಟದಿಂದ

ಭಾರಿ ಮಳೆಯಿಂದ ಸಮಸ್ಯೆಗೆ ಸಿಲುಕಿರುವ ಪ್ರದೇಶಗಳಲ್ಲಿ ಯಾವುದೇ ಸಮಸ್ಯೆಯಾಗದ ರೀತಿಯಲ್ಲಿ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮಳೆ ಅನಾಹುತದ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ ಶಿವಕುಮಾರ್ ಅವರು ಸೋಮವಾರ ಸಂಜೆ ಸಿಟಿ ರೌಂಡ್ಸ್ ಹೋಗಲು ನಿರ್ಧರಿಸಿದ್ದರು. ಆದರೆ ತಮ್ಮಿಂದ ಟ್ರಾಫಿಕ್ ಉಂಟಾಗಿ ಜನರಿಗೆ ಮತ್ತಷ್ಟು ಸಮಸ್ಯೆಯಾಗುತ್ತದೆ ಎಂಬ ಕಾರಣಕ್ಕೆ ಸಿಟಿ ರೌಂಡ್ಸ್ ಕ್ಯಾನ್ಸಲ್ ಮಾಡಿದ್ದು, ಮೇ 21ರಂದು ಸಿಟಿ ರೌಂಡ್ಸ್ ಹೋಗುವುದಾಗಿ ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮುಂದಿನ ಮೂರು ದಿನ ಮಳೆ

ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ 3 ದಿನ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾ ಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಪೂರ್ವ ಮುಂಗಾರು ಮಳೆ ನಿರಂತರವಾಗಿರುವುದರಿಂದ ವಾತಾವರಣದಲ್ಲಿ ಸಾಕಷ್ಟು ಬದಲಾ ವಣೆಗಳಾಗಿದ್ದು, ಮುಂಗಾರು ಆರಂಭದ ಪ್ರಕ್ರಿಯೆಗಳು ಆರಂಭಗೊಂಡು ಮೋಡ ಹಾಗೂ ಮಳೆಯ ಸನ್ನಿವೇಶ ಸೃಷ್ಟಿಯಾಗಿದೆ. ಇನ್ನೊಂದು ವಾರದಲ್ಲಿ ಮುಂಗಾರು ಮಳೆ ಪ್ರಾರಂಭವಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ನೀಡಿದೆ.

ದ್ವಿತೀಯ ಸಂಭ್ರಮ

← ಮೊದಲಪುಟದಿಂದ

ಈ ಕಾರ್ಯಕ್ರಮದಲ್ಲಿ ಲೋಪದೋಷಗಳಿವೆಯೇ ಇಲ್ಲವೇ ಎಂದು ಅಧಿಕಾರಿಗಳ ಜತೆ ಭಾನುವಾರ ನಡೆಸಿದ ಸಭೆಯಲ್ಲಿ ಪರಿಶೀಲನೆ ಮಾಡಲಾಗಿದೆ. ಕಂದಾಯ ಇಲಾಖೆಯ ಮೂಲಕ ನೀಡುತ್ತಿರುವ ಈ ಭೂ ಗ್ಯಾರಂಟಿ ಇತಿಹಾಸದ ಪುಟ ಸೇರಲಿದೆ. ಪ್ರತಿಯೊಬ್ಬ ವ್ಯಕ್ತಿಗೂ ತಾನು ವಾಸವಿರುವ ಜಾಗವನ್ನು ತನ್ನದಾಗಿಸಿಕೊಳ್ಳುವ ಆಸೆ ಇರುತ್ತದೆ. ಪರಿಶಿಷ್ಟರು, ಹಿಂದುಳಿದವರು ಹಾಗೂ ಭೂರಹಿತವಾಗಿರುವವರು ಕಳೆದ ಹಲವು ವರ್ಷಗಳಿಂದ ದಾಖಲೆ ಇಲ್ಲದೆ ಮನೆ ಕಟ್ಟಿಕೊಂಡು ಪರದಾಡುತ್ತಿದ್ದರು. ಹೀಗಾಗಿ ನಮ್ಮ ಸರಕಾರ ಇದಕ್ಕೆ ಪರಿಹಾರ ನೀಡಿದೆ ಎಂದರು.

1.11 ಕೋಟಿ ಆಸ್ತಿ ದಾಖಲೆ ಸಿದ್ಧ: ಬಿಜೆಪಿ ಸರಕಾರ ಕಲಬುರ್ಗಿಯಲ್ಲಿ 20 ಕೋಟಿ ಖರ್ಚು ಮಾಡಿ ದಾಖಲೆ ನೀಡುತ್ತೇವೆ ಎಂದು ಕಾರ್ಯಕ್ರಮ ಮಾಡಿತ್ತಾದರೂ ಇದನ್ನು ಕಾರ್ಯರೂಪಕ್ಕೆ ಹೇಗೆ ತರಬೇಕು ಎಂದು ತಿಳಿಯದೇ ಯೋಜನೆ ಕೈಬಿಟ್ಟಿತ್ತು. ಸಚಿವ ಕೃಷ್ಣ ಬೈರೇಗೌಡರು ಹಾಗೂ ಅವರ ಅಧಿಕಾರಿಗಳ ತಂಡ ಅಧ್ಯಯನ ಮಾಡಿ ಇದಕ್ಕೆ ಶಾಶ್ವತ ಪರಿಹಾರ ನೀಡಿದ್ದಾರೆ. 4 ಸಾವಿರ ಅಡಿವರೆಗಿನ ಕಂದಾಯ ಅಥವಾ ಖಾಸಗಿ ಭೂಮಿಯಲ್ಲಿ ಅನೇಕ ವರ್ಷಗಳಿಂದ ವಾಸವಿರುವ ಜಾಗವನ್ನು ಸರಕಾರದ ವಶಕ್ಕೆ ಪಡೆದು, ತಹಸೀಲ್ದಾರ್ ಅದರ ಮಾಲೀಕತ್ವರಾಗಿ, ನಂತರ ಅವರ ಮೂಲಕ ಉಪನೋಂದಣಿ ಕಚೇರಿಯಲ್ಲಿ ಕ್ರಯದ ರೂಪದಲ್ಲಿ ಜನರಿಗೆ ಈ ಭೂಮಿಯನ್ನು ಉಚಿತವಾಗಿ ನೀಡುವ ವ್ಯವಸ್ಥೆ ತರಲಾಗಿದೆ. 1,11,11,111 ಆಸ್ತಿ ದಾಖಲೆ ಸಿದ್ಧವಾಗಿದ್ದು, ಆಯಾ ತಾಲೂಕುಗಳಲ್ಲಿ ತಹಸೀಲ್ದಾರ್ ಅವರು ಆಸ್ತಿಯ ದಾಖಲೆ ನೀಡಲಿದ್ದಾರೆ ಎಂದು ಡಿಕೆಶಿ ಮಾಹಿತಿ ನೀಡಿದರು.

15 ವರ್ಷ ಮಾರಾಟ ಮಾಡುವಂತಿಲ್ಲ: ಈ ರೀತಿ ದಾಖಲೆ ಪಡೆದ ಆಸ್ತಿಯನ್ನು ಯಾರೂ 15 ವರ್ಷಗಳ ಕಾಲ ಮಾರಾಟ ಮಾಡುವಂತಿಲ್ಲ. ಈ ದಾಖಲೆಗಳನ್ನು ತಹಸೀಲ್ದಾರ್ ಅವರು ನೋಂದಣಿ ಮಾಡಿ ಆಸ್ತಿ ಮಾಲೀಕರಿಗೆ ನೀಡುತ್ತಿದ್ದಾರೆ. ಪಿಡಿಒ ಇಲಾಖೆ ಜತೆಗೂಡಿ ಖಾತೆ ಮಾಡಿಸಿಕೊಡಲಾಗುವುದು. ಇದಕ್ಕೆ ನೀಡಬೇಕಾದ ಶುಲ್ಕ ಪಾವತಿಯನ್ನು ಮುಂದಕ್ಕೆ ಹಾಕಲಾಗಿದೆ ಎಂದು ತಿಳಿಸಿದರು.

ಮಕ್ಕಳಾಗಲಿಲ್ಲವೆಂದು ಸೊಸೆಯನ್ನು ಕೊಂದ ಅತ್ತೆ

ಬೆಳಗಾವಿ: ಸೊಸೆಗೆ ಮಕ್ಕಳಾಗಲಿಲ್ಲ ಎಂದು ಅತ್ತೆಯೇ ಮಹಿಳೆಯನ್ನು ಕಲ್ಲಿನಿಂದ ಜಜ್ಜಿ, ಭೀಕರವಾಗಿ ಕೊಲೆ ಮಾಡಿರುವ ಧಾರುಣ ಘಟನೆ ಜಿಲ್ಲೆಯ ಅಥಣಿ ತಾಲೂಕಿನ ಮಲಾಬಾದ್ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರೇಣುಕಾ ಸಂತೋಷ ಹೊನ ಕಾಂಡೆ (27) ಕೊಲೆಯಾದ ಮೃತ ದುರ್ದೈವಿ. ಸೊಸೆಗೆ ಮಕ್ಕಳಾಗಲಿಲ್ಲವೆಂದು ಕಳೆದ ಶನಿವಾರದಂದು ಮಹಿಳೆಯನ್ನು ಕಲ್ಲಿನಿಂದ ಜಜ್ಜಿ ಕೊಲೆ ಮಾಡಲಾಗಿದೆ ಎಂಬ ಆರೋಪದ ಹಿನ್ನೆಲೆ ಪತಿ ಸಂತೋಷ ಹೊನಕಾಂಡೆ, ಮಾವ ಕಾಮಣ್ಣ ಹೊನಕಾಂಡೆ, ಅತ್ತೆ ಜಯಶ್ರೀ ಹೊನ ಕಾಂಡೆ ಎಂಬುವರನ್ನು ಅಥಣಿ ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಸಿದ್ದರಾಮಯ್ಯ 2ನೇ ಅಂಬೇಡ್ಕರ್

ಕೊಪ್ಪಳ: ವಿಧಾನಪರಿಷತ್ ಸದಸ್ಯ, ಸಚಿವ ಸೇರಿದಂತೆ ಯಾವ ಸ್ಥಾನಮಾನವೂ ಬೇಡ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಳಮೀಸಲಾತಿ ಜಾರಿಗೆ ಮಾಡಿದರೆ ಅದೇ ನನಗೆ ದೊಡ್ಡ ಸ್ಥಾನಮಾನ ಕೊಟ್ಟಂತೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್. ಆಂಜನೇಯ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಒಳಮೀಸಲಾತಿಗಾಗಿ ಮಾದಿಗ ಸಮುದಾಯದ ಸಾಕಷ್ಟು ಜನ ಪ್ರಾಣ ತೆತ್ತಿದ್ದಾರೆ. ಇದಕ್ಕಾಗಿಯೇ ನಾನು ಸಚಿವನಾಗಬೇಕಿತ್ತು. ಈಗ ಅದೇ ಸಿಕ್ಕರೆ ಉಳಿದ ಯಾವ ಸ್ಥಾನಮಾನಗಳೂ ನಗಣ್ಯ. ನಮ್ಮ ಈಗಿನ ಸರಕಾರದ ಅವಧಿಯಲ್ಲಿಯೇ ಒಳಮೀಸಲಾತಿ ಜಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಲೆಗೆ ಗುಂಡು ಹಾರಿಸಿಕೊಂಡು ವ್ಯಕ್ತಿ ಸಾವು

ಮಡಿಕೇರಿ: ಜೀವನದಲ್ಲಿ ಜುಗುಪ್ಸೆಗೊಂಡು ಗುಂಡು ಹಾರಿಸಿಕೊಂಡು ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಯಡವಾರೆ ಗ್ರಾಮದಲ್ಲಿ ನಡೆದಿದೆ. ನಾರೂರು ಮನೆ ಮಧು (ಅಶೋಕ್) ಮೃತ ವ್ಯಕ್ತಿ. ಮನೆಯಲ್ಲಿ ಯಾರೂ ಇಲ್ಲದ ವೇಳೆ ಮದ್ಯ ಸೇವಿಸಿ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. 3 ವರ್ಷದ ಪುತ್ರಿಗೆ ಅನಾ ರೋಗ್ಯದ ಹಿನ್ನೆಲೆಯಲ್ಲಿ ಒಂದು ವಾರದ ಹಿಂದೆ ಪತ್ನಿ ಮತ್ತು ಪುತ್ರಿ ಬೆಂಗಳೂರಿಗೆ ತೆರಳಿದ್ದರು. ಭಾನುವಾರ ಬೆಳಗ್ಗೆ ಮೃತನ ತಾಯಿ ಕೂಡ ಬೆಂಗಳೂರಿಗೆ ತೆರಳಿದ್ದರು. ಈ ಸಂದರ್ಭ ತನ್ನ ಮನೆಯಲ್ಲಿ ಇದ್ದ ಡಬ್ಬಲ್ ಬ್ಯಾರೆಲ್ ಕೋವಿ ಯಿಂದ ಶೂಟ್ ಮಾಡಿಕೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದಾನೆ. ಸೋಮವಾರಪೇಟೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸಮಾಚಾರ ಸಣ್ಣದಲ್ಲ

ವೈಫಲ್ಯ ಮುಚ್ಚಲು ಸಾಧನಾ ಸಮಾವೇಶ

ಮೈಸೂರು: ಆಡಳಿತ ವೈಫಲ್ಯ ಹಾಗೂ ಭ್ರಷ್ಟಾಚಾರ ಮುಚ್ಚಿಕೊಳ್ಳಲು ಸರಕಾರ ಸಾಧನಾ ಸಮಾವೇಶ



ಮಾಡುತ್ತಿದೆ ಎಂದು ರಾಜ್ಯ ಕಾಂಗ್ರೆಸ್ ವಿರುದ್ಧ ವಿಧಾನ ಪರಿಷತ್ ಸದಸ್ಯ ವಿಶ್ವನಾಥ್ ಕಿಡಿಕಾರಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ 2 ವರ್ಷ ಪೂರೈಸಿದೆ. 2 ವರ್ಷದಲ್ಲಿ ಸರಕಾರದ ಸಾಧನೆ ಶೂನ್ಯ. ಈ ಸಮಾವೇಶದಲ್ಲಿ ನೀವು ಏನು ಹೇಳಿಕೊಳ್ಳುತ್ತೀರಿ. ನೀವು ಏನು ಸಾಧನೆ ಮಾಡಿದ್ದೀರಿ. ಏನಿಲ್ಲ, ಶೂನ್ಯ. ಶೂನ್ಯದ ಸಾಧನೆಗೆ ಒಂದು ಸಮಾವೇಶವೇ. ಅಲ್ಲಿಗೆ ನಾಲ್ಕು ಲಕ್ಷ ಜನ ಬರ್ತಾರಂತೆ, ಅವರಿಗೆಲ್ಲ ಎಷ್ಟು ದುಡ್ಡು ಖರ್ಚಾಗುತ್ತದೆ. ಸರಕಾರದ ಮಂತ್ರಿಗಳು, ಅಧಿಕಾರಿಗಳು ಹಳ್ಳಿ ಹಳ್ಳಿಗಳಿಗೆ ಹೋಗುತಿಲ್ಲ. ಪಹಣಿ ಮಾಡಿಸಿಕೊಳ್ಳೊಕೆ ಹಳ್ಳಿಯಲ್ಲಿ ಒಬ್ಬ ಗ್ರಾಮಲೆಕ್ಕಾಧಿಕಾರಿ ಸಿಗುತ್ತಿಲ್ಲ. ಸರ್ವೆ ಮಾಡಿಸಿಕೊಳ್ಳಲು ಸರ್ವೆಯರ್ ಸಿಗುತ್ತಿಲ್ಲ. ಯಾವ ಸೀಮೆ ಸಮಾವೇಶ ಮಾಡ್ತೀರಿ. ಜನಗಳ ಕೆಲಸ ಆಗುತ್ತಿಲ್ಲ. ನಿಮ್ಮ ಭ್ರಷ್ಟಾಚಾರ ಹಾಗೂ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಸಾಧನ ಸಮಾವೇಶ ಮಾಡುತ್ತಿದ್ದೀರಾ ಎಂದು ಸರಕಾರಕ್ಕೆ ಪ್ರಶ್ನೆ ಮಾಡಿದರು.

ಫನ್‌ತರಂಗ

– ರಘುಪತಿ ಶೃಂಗೇರಿ –

ಸಿಲಿಕಾನ್ ಸಿಟಿಯಲ್ಲಿ ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತ

ಸುದ್ದಿ



ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ ಕ್ಲಬ್ ಹೌಸ್
20.05.2025
ಸಂಜೆ: 06.55 ರಿಂದ 08.05 ರವರೆಗೆ
ಮಂಗಳವಾರದ ಅತಿಥಿ
ಶ್ರೀ ಶ್ರೀಧರ್ ಮೂರ್ತಿ
ವಿಷಯ
ಭಾರತೀಯ ಖಗೋಳಶಾಸ್ತ್ರಜ್ಞರು



vishwavani.news

ಟ್ವೀಟೂ-ಖಾರಾ

ಆರ್.ಅಶೋಕ, ಪ್ರತಿಪಕ್ಷದ ನಾಯಕ

ರಾಜ್ಯದ ಸರಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಪ್ರಧಾನಮಂತ್ರಿ ಜನಔಷಧಿ ಕೇಂದ್ರಗಳನ್ನ ಮುಚ್ಚುವಂತೆ ರಾಜ್ಯ ಕಾಂಗ್ರೆಸ್ ಸರಕಾರ ಹೊರಡಿಸಿರುವ ಆದೇಶ ಅತ್ಯಂತ ಜನವಿರೋಧಿ ನಡೆಯಾಗಿದ್ದು, ಇದು ರಾಜಕೀಯ ಪ್ರೇರಿತ ನಿರ್ಧಾರ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಬಡವರು, ಜನಸಾಮಾನ್ಯರಿಗೆ ಅಗ್ಗದ ಬೆಲೆಯಲ್ಲಿ ಉತ್ಕೃಷ್ಟ ಗುಣಮಟ್ಟದ ಒದಗಿಸುತ್ತಿರುವ ಜನ ಔಷಧಿ ಕೇಂದ್ರಗಳಿಗೆ ಅವಕಾಶ ನೀಡದಿರಲು ಕಾರಣವೇನು? ಸರಕಾರಿ ಆಸ್ಪತ್ರೆಗಳ ವೈದ್ಯರು ಜೆನೆರಿಕ್ ಔಷಧಿ ಚೀಟಿ ಬರೆಯುವುದಕ್ಕೂ ಜನಔಷಧಿ ಕೇಂದ್ರಗಳಿಗೆ ಅವಕಾಶ ನೀಡದಿರುವುದಕ್ಕೂ ಸಂಬಂಧವೇನು?. ಸಿಎಂ ಸಿದ್ದರಾಮಯ್ಯನವರೇ, ರಾಜ್ಯ ಸರಕಾರ ಕಾರ್ಪೊರೇಟ್ ಔಷಧ ಕಂಪನಿಗಳು, ಖಾಸಗಿ ಮೆಡಿಕಲ್ ಶಾಪ್ ಗಳು ಲಾಬಿಗೆ ಮಣಿದು ಜನ ಔಷಧಿ ಕೇಂದ್ರಗಳಿಗೆ ಅವಕಾಶ ನೀಡುತ್ತಿಲ್ಲವೋ ಅಥವಾ ಪ್ರಧಾನಮಂತ್ರಿಗಳಿಗೆ ಮತ್ತು ಕೇಂದ್ರ ಸರಕಾರಕ್ಕೆ ಒಳ್ಳೆಯ ಹೆಸರು ಬರುತ್ತಿದೆ ಎಂಬ ಅಸೂಯೆಯೋ?

ಕುಶಾಲ್ ಹರುವೇಗೌಡ

ಔಷಧ ಸ್ಟಾಕ್ ಇಲ್ಲದಿದ್ದರೂ ತೆರೆದುಕೊಂಡು ಕುಳಿತುಕೊಳ್ಳಬೇಕೆ? ಆರ್.ಅಶೋಕ ಅವರೇ, ನಿಮ್ಮ ಈ ದಿಟ್ಟತನವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಮುಂದೆ ಪ್ರದರ್ಶಿಸಿ. ಕನ್ನಡಿಗರ ಪರವಾಗಿ ನಿಲ್ಲಿ.

ಗ್ಯಾರಂಟಿಯಾಚೆಯ ಅಭಿವೃದ್ಧಿಗೆ ಸರಕಾರ ಬದ್ಧ

ಸಾಧನ ಪಥ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳ ವಿಶ್ವಾಸವೇ ಚುನಾಯಿತ ಸರಕಾರದ ಬುನಾದಿ. ರಾಜಕೀಯ ಅಧಿಕಾರ ಎನ್ನುವುದು ಸರಕಾರದ ವಿಶೇಷಾಧಿಕಾರವೇನಲ್ಲ, ಅದು ಜನತೆಯ ಸೇವೆ ಮಾಡಲು ಒದಗಿಬಂದ ಅವಕಾಶ ಅಷ್ಟೆ. ಪ್ರಜೆಗಳು ನೀಡುವ ತೆರಿಗೆ ನಮ್ಮ ಮೇಲೆ ಇಟ್ಟಿರುವ ವಿಶ್ವಾಸದ ಪ್ರತೀಕ, ಇದು ನಮ್ಮ ಜನರ ಬೆವರಿನ ಫಲ. ಸರಕಾರದ ಖಜಾನೆಯಲ್ಲಿರುವ ಹಣ ಸರಕಾರದ್ದಲ್ಲ, ಅದು ಜನರದ್ದು, ಆ ಹಣದ ವ್ಯವಹಾರ ನಡೆಸುವ ಆಡಳಿತರೂಢರಾದ ನಾವು ತೆರಿಗೆದಾರರ ಟ್ರಸ್ಟಿಗಳು. ಈ ಹಣ ಪೋಲಾಗಲು ಬಿಡಬಾರದು. ತೆರಿಗೆಯ ಪ್ರತಿಯೊಂದು ಪೈಸೆ ಕೂಡಾ ಪ್ರಜೆಗಳ ಕಲ್ಯಾಣಕ್ಕೆ ವಿನಿಯೋಗವಾಗಬೇಕು ಮತ್ತು ಜಾತಿ, ಧರ್ಮ, ಪಕ್ಷ, ಪ್ರದೇಶಗಳ ಅಂತರ ವಿಲ್ಲದ ಪ್ರತಿಯೊಂದು ಮನೆಯಲ್ಲಿಯೂ ನಮ್ಮ ಸರಕಾರದ ಫಲಾನುಭವಿಗಳಿರಬೇಕು ಎನ್ನುವುದು ನಮ್ಮ ಸರಕಾರದ ದೃಢ ನಿರ್ಧಾರ. ಈ ಮೂಲಕ ಸುಖ, ಶಾಂತಿ ಮತ್ತು ನೆಮ್ಮದಿಯ ಬಲಿಷ್ಠ ಕರ್ನಾಟ ಕವನ್ನು ನಿರ್ಮಾಣ ಮಾಡುವುದು ನಮ್ಮ ಸಂಕಲ್ಪ. ಈ ಹಾದಿಯಲ್ಲಿ ಸಾಗಿರುವ ನಮ್ಮ ಸರಕಾರದ ನಡಿಗೆಗೆ ಈಗ ಎರಡು ವರ್ಷ.

ಉದ್ದೇಶದಲ್ಲಿ ಪ್ರಾಮಾಣಿಕತೆ, ಹಣದ ವಿನಿಯೋಗದಲ್ಲಿ ಪಾರದರ್ಶಕತೆ ಮತ್ತು ಮಾಡುವ ಕೆಲಸಗಳ ಬಗ್ಗೆ ಉತ್ತರದಾಯಿತ್ವ – ಇದು ನಮ್ಮ ಸರಕಾರದ ಬದ್ಧತೆ. ಹಸಿದ ಹೊಟ್ಟೆಗೆ ಅನ್ನ, ನೆಮ್ಮದಿಯ ಜೀವ ನಕ್ಕೆ ಆರೋಗ್ಯ, ವಾಸಕ್ಕೊಂದು ಸೂರು, ಸ್ವಾವಲಂಬಿ ಬದುಕಿಗಾಗಿ ಶಿಕ್ಷಣ, ದುಡಿಯುವ ಕೈಗಳಿಗೆ ಉದ್ಯೋಗ, ಶ್ರಮಕ್ಕೆ ತಕ್ಕ ಫಲ, ಅಸಹಾಯಕರಿಗೆ ರಕ್ಷಣೆ ಶಾಂತಿ ಮತ್ತು ಸೌಹಾರ್ದತೆಯಿಂದ ಬದು ಕುವ ವಾತಾವರಣ – ಇವು ಜವಾಬ್ದಾರಿಯುತ ಸರಕಾರದ ಆದ್ಯತೆಗಳು ಮಾತ್ರವಲ್ಲ, ಸಂವಿಧಾನ ಬದ್ಧ ಕರ್ತವ್ಯ.

ಪ್ರತಿಯೊಬ್ಬ ಪ್ರಜೆಗೂ ಜೀವನನಿರ್ವಹಣೆಯ ಹಕ್ಕನ್ನು ಅಂದರೆ ಬದುಕುವ ಹಕ್ಕನ್ನು ನೀಡಬೇ ಕೆಂದು ಸಂವಿಧಾನದ ಪರಿಚ್ಛೇದ 39ರ ಪ್ರಕಾರ ಹೇಳುತ್ತದೆ. ಪರಿಚ್ಛೇದ 15 (3) ಪ್ರತಿಯೊಬ್ಬ ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಿಸಿದ ವಿಶೇಷ ಕಾನೂನು ಮಾಡಲು ಅವಕಾಶ ನೀಡಿದೆ. ಜನರ ಪೌಷ್ಟಿಕ ಮತ್ತು ಜೀವನ ಮಟ್ಟವನ್ನು ಹೆಚ್ಚಿಸಿ ಆರೋಗ್ಯವನ್ನು ಅಭಿವೃದ್ಧಿಪಡಿಸುವುದು ಒಂದು ಸರಕಾರದ ಪ್ರಾಥಮಿಕ ಕರ್ತವ್ಯ ಎಂದು ಸಂವಿಧಾನದ ಪರಿಚ್ಛೇದ 47 ರಲ್ಲಿಯ ರಾಜನೀತಿಯ ನಿರ್ದೇಶಿತ ತತ್ವ ಹೇಳಿದೆ. ಆದ್ದರಿಂದ ನಾವು ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ಒಂದು ಜವಾಬ್ದಾರಿಯುತ ಸರಕಾರದ ಮೂಲಭೂತ ಕರ್ತವ್ಯವಾಗಿದೆ.

ಜನರಿಗೆ ತಲವಾರು–ಕತ್ತಿ–ತ್ರಿಶೂಲ ಹಂಚು ವುದು, ಪ್ರಜೆಗಳ ಊಟದ ತಟ್ಟೆಯಲ್ಲಿ, ಮನೆಯ ಫ್ರಿಜ್ ಗಳಲ್ಲಿರುವ ಆಹಾರದಲ್ಲಿ ಏನಿದೆ ಎಂದು ಇಣುಕಿ ನೋಡಿ ಹಲ್ಲೆ ನಡೆಸುವುದು, ಜಾತಿ–ಧರ್ಮದ ಹೆಸರಲ್ಲಿ ದ್ವೇಷ, ಅಸೂಯೆ, ಹಿಂಸೆಯನ್ನು ಹರಡುವುದು ಸಂವಿಧಾನ ವಿರೋಧಿ, ಕಾನೂನು ವಿರೋಧಿ ಮತ್ತು ಜನವಿರೋಧಿಯಾ ದುದು. ತಮಾಷೆಯೆಂದರೆ ಈ ರೀತಿ ದ್ವೇಷ ಹಂಚುವುದರಲ್ಲಿ ನಿರತರಾಗಿರುವ ಮತ್ತು ಜಾತಿ ಧರ್ಮಗಳ ನಡುವೆ ಕಲಹ ಹುಟ್ಟಿಸುತ್ತಿರುವ ರಾಜಕೀಯ ಪಕ್ಷಗಳ ನಾಯಕರೇ ಇಂದು ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದಾರೆ.

ಕೇಂದ್ರ ಸರಕಾರದ ತಪ್ಪು ಆರ್ಥಿಕ ನೀತಿ ಮತ್ತು ದುರಾಡಳಿತದ ಫಲವಾದ ಬೆಲೆ ಏರಿಕೆ ಮತ್ತು ನಿರುದ್ಯೋಗಗಳಿಂದಾಗಿ ವಿಪರೀತ ಆರ್ಥಿಕ ಒತ್ತಡಕ್ಕೆ ಸಿಕ್ಕ ಜನರ ಜೇಬು ಖಾಲಿಯಾಗಿದೆ. ಅವರನ್ನು ಈ ಆರ್ಥಿಕ ಸಂಕಟದಿಂದ ಪಾರು ಮಾಡಲು, ಸಾಲದ ಶೂಲದಿಂದ ತಪ್ಪಿಸಲು ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸಲು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಅವಶ್ಯಕತೆ ಇತ್ತು. ಅದನ್ನು ನಮ್ಮ ಸರಕಾರ ಮಾಡಿದೆ.

ನಮ್ಮ ಐದು ಗ್ಯಾರಂಟಿ ಯೋಜನೆಗಳಿಗೆ ಖರ್ಚಾಗುತ್ತಿರುವ ಹಣ 65 ಸಾವಿರ ಕೋಟಿ ರುಪಾಯಿ. ನಮ್ಮ ಈ ಹಣ ರಾಜ್ಯದ 1.56 ಕುಟುಂಬಗಳಿಗೆ ಅಂದರೆ ಒಂದು ಕುಟುಂಬದಲ್ಲಿ ಕನಿಷ್ಠ ನಾಲ್ಕು ಮಂದಿ ಸದಸ್ಯರಿದ್ದರೆ ಐದುವರೆ ಕೋಟಿ ಜನರಿಗೆ ತಲುಪಲಿದೆ. ಪ್ರತಿಯೊಂದು ಕುಟುಂಬಕ್ಕೆ ಪ್ರತಿ ತಿಂಗಳು ತಲಾ ಎಂಟರಿಂದ ಒಂಬತ್ತು ಸಾವಿರ ರುಪಾಯಿಗಳು ವರ್ಷಕ್ಕೆ ಒಂದು ಲಕ್ಷ ರುಪಾಯಿ ನೇರವಾಗಿ ಜನರ ಖಾತೆಗೆ ತಲುಪಲಿದೆ, ಇದರಲ್ಲಿ ಶೇ.40 ಕಮಿಷನ್ ಇಲ್ಲವೇ ಇಲ್ಲವೆನ್ನುವುದು ಬಹಳ ಮುಖ್ಯ.

ಶ್ರೀಮಂತರ ತೆರಿಗೆ ಹಣದಿಂದ ಬಡವರಿಗೆ ಉಚಿತ ಯೋಜನೆಗಳನ್ನು ನೀಡಲಾಗುತ್ತಿದೆ ಎನ್ನುವ ಟೀಕೆಯನ್ನೂ ನಾನು ಗಮನಿಸಿದ್ದೇನೆ. ಸತ್ಯ ಸಂಗತಿ ಎಂದರೆ ಒಂದು ಸರಕಾರ ಸಂಗ್ರಹಿಸುವ ನೂರು ರುಪಾಯಿ ತೆರಿಗೆ ಹಣದಲ್ಲಿ ಮೂರನೇ ಎರಡರಷ್ಟು ಭಾಗ ಬಡವರಿಂದ ಬರುತ್ತದೆ. ನಮ್ಮ ದೇಶದ ಒಟ್ಟು ಜಿಎಸ್ ಟಿ ಸಂಗ್ರಹ ಸುಮಾರು 18 ಲಕ್ಷ ಕೋಟಿ, ಅದರಲ್ಲಿ ಸುಮಾರು 12 ಲಕ್ಷ ಕೋಟಿ ಜಿಎಸ್ ಟಿ ನೀಡುತ್ತಿರುವುದು ಶೇಕಡಾ 50ರಷ್ಟಿರುವ ಮಧ್ಯಮ , ಕೆಳಮಧ್ಯಮ ಮತ್ತು ಬಡವರು. ಕಾರ್ಮಿಕನೊಬ್ಬ ಸಂಪಾದನೆ ಮಾಡುವ ನೂರು ರುಪಾಯಿಯಲ್ಲಿ ಕನಿಷ್ಠ 30 ರುಪಾಯಿ ತೆರಿಗೆ ರೂಪದಲ್ಲಿ ಸರಕಾರದ ಖಜಾನೆ ಸೇರುತ್ತದೆ. ಒಂದು ಲೀಟರ್ ಪೆಟ್ರೋಲ್ ಖರೀದಿಸಿದರೆ ಕನಿಷ್ಠ 40 ರುಪಾಯಿ ತೆರಿಗೆ ನೀಡಬೇಕಾಗುತ್ತದೆ.

15,000 ರುಪಾಯಿ ಸಂಪಾದನೆ ಮಾಡುವ ಬಡವರು, ಕೂಲಿಕಾರ್ಮಿಕರು ಅಷ್ಟನ್ನು ಖರ್ಚು ಮಾಡುತ್ತಾರೆ. ಆ ಹಣ ಮತ್ತೆ ಮಾರುಕಟ್ಟೆಗೆ ಬರುತ್ತದೆ. ಆ ಹದಿನೈದು ಸಾವಿರ ರುಪಾಯಿಯ ಕನಿಷ್ಠ ಶೇ.15 ಭಾಗ ಜಿಎಸ್‌ಟಿ ಸರಕಾರದ ಖಜಾನೆಗೆ ಹೋಗುತ್ತದೆ. ಇತ್ತೀಚೆಗೆ ರಾಜ್ಯದ ಜಿಎಸ್ ಟಿ ತೆರಿಗೆ ಪ್ರಮಾಣ ಗಣನೀಯವಾಗಿ ಏರಿಕೆಯಾಗಿ ರುವುದು ಇದಕ್ಕೆ ಸಾಕ್ಷಿ. ಶ್ರೀಮಂತರ ಕೈಗೆ ಸಿಗುವ ಒಂದು ಲಕ್ಷ ರುಪಾಯಿಯನ್ನು ಪೂರ್ತಿ ಖರ್ಚು ಮಾಡುವುದಿಲ್ಲ. ಅದರಿಂದ ಜಿಎಸ್ ಟಿ ಆ ಪ್ರಮಾ ಣದಲ್ಲಿ ಪಾವತಿಯಾಗಿರುವುದಿಲ್ಲ. ಜಿಡಿಪಿಗೆ ದೊಡ್ಡ ಬಂಡವಾಳಿಗರ ಕೊಡುಗೆ ಶೇಕಡಾ 50–55 ಮಾತ್ರ. ಸರಕಾರದ ವಿಶೇಷ ಸೌಲಭ್ಯ, ಬೆಂಬಲ ಪಡೆಯದ ಸಣ್ಣ ಮತ್ತು ಅತಿ ಸಣ್ಣ ಕೃಷಿ ಕೂಲಿ ಕಾರ್ಮಿಕರ ಕೊಡುಗೆ ಅಂದಾಜು ಶೇ.40–45ರಷ್ಟಾಗಿದೆ.

2019ರಲ್ಲಿ ಉದ್ಯಮಿಗಳ ಮೇಲಿನ ಕಾರ್ಪೊರೇಟ್ ತೆರಿಗೆ ಪ್ರಮಾಣವನ್ನು ಶೇಕಡಾ 30ರಿಂದ ಶೇಕಡಾ 22ಕ್ಕೆ ಇಳಿಸಲಾಯಿತು. ಇದರಿಂದಾಗಿ ವರ್ಷಕ್ಕೆ ಒಂದು ಲಕ್ಷ ಕೋಟಿ ಆದಾಯ ಕಡಿಮೆ ಯಾಯಿತು. ನಾಲ್ಕು ವರ್ಷದಲ್ಲಿ ಸುಮಾರು ನಾಲ್ಕು ಲಕ್ಷ ಕೋಟಿ ರುಪಾಯಿ

ನಷ್ಟ. ವಂಚಕ ಉದ್ಯಮಿಗಳು 12 ಲಕ್ಷ ಕೋಟಿ ರುಪಾಯಿ ಬ್ಯಾಂಕ್ ಸಾಲವನ್ನು ಮುಳುಗಿಸಿ ದೇಶ ಬಿಟ್ಟು ಓಡಿಹೋದರು. ಆಗ ಬಾಯಿ ಮುಚ್ಚಿಕೊಂಡಿದ್ದವರು, ಬಡವರ ಪರವಾದ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾತ್ರ ಮೂರು ಹೊತ್ತು ಟೀಕಿಸುತ್ತಾ ಕೂತಿದ್ದಾರೆ. ಇವರನ್ನು ಬಡವರ ವಿರೋಧಿಗಳು ಎನ್ನುವುದಕ್ಕೆ ಬೇರೆ ಸಾಕ್ಷಿ ಬೇಕೇ?

ನಮ್ಮ ಸರಕಾರ ಕೇವಲ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಗ್ಯಾರಂಟಿಗಳಾಚೆಗೂ ನಮ್ಮ ಸರಕಾರದ ಬದ್ಧತೆ ವ್ಯಾಪಿಸಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ 2024–25ನೇ ಸಾಲಿನಲ್ಲಿ 39,121 ಕೋಟಿ ರು. ಮೀಸಲಿಟ್ಟಿದ್ದೇವೆ. 4,761.15 ಕೋಟಿ ವೆಚ್ಚದಲ್ಲಿ 3.05 ಲಕ್ಷ ಮನೆಗಳನ್ನು ನಿರ್ಮಾಣ ಮಾಡಿ ಫಲಾನುಭವಿಗಳಿಗೆ ವಿತರಿಸುವ ಕಾರ್ಯದ ಲ್ಲಿದ್ದೇವೆ. ಡಾ. ಡಿ.ಎಂ. ನಂಜುಂಡಪ್ಪನವರ ಸಮಿ ತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿ ಪ್ರಾದೇ ಶಿಕ ಅಸಮಾನತೆಯನ್ನು ಹೋಗಲಾಡಿಸಲು ಇದುವ ರೆಗೆ 37,662 ಕೋಟಿ ರು. ವೆಚ್ಚ ಮಾಡಿದ್ದೇವೆ. ಅಂಗನವಾಡಿ ಕಾರ್ಯಕರ್ತೆಯರು, ಅತಿಥಿ ಉಪ ನ್ಯಾಸಕರ ಗೌರವಧನ ಹೆಚ್ಚಳಕ್ಕೂ ಕ್ರಮ ವಹಿಸಿದ್ದೇವೆ. ಇದೀಗ ಸುಮಾರು ಒಂದು ಲಕ್ಷಕ್ಕೂ ಅಧಿಕ ಜನರಿಗೆ ಅವರು ವಾಸಿಸುತ್ತಿರುವ ಸ್ಥಳಗಳಿಗೆ ಹಕ್ಕುಪತ್ರ ನೀಡುವ ಐತಿಹಾಸಿಕ ಸಾಹಸಕ್ಕೂ ಮುಂದಾಗಿದ್ದೇವೆ.

ಇನ್ನುಳಿದ ಅಭಿವೃದ್ಧಿಯ ವಿಚಾರವನ್ನು ಗಮನಿಸುವುದಾದರೆ, ಮಾನವ ಸಂಪನ್ಮೂಲ, ನೈಸರ್ಗಿಕ ಸಂಪನ್ಮೂಲಗಳ ಸಮರ್ಥ, ದಕ್ಷ, ಪರಿಣಾ ಮಕಾರಿ ಬಳಕೆ ಹಾಗೂ ಕೃಷಿ, ಸೇವಾವಲಯ, ಕೈಗಾರಿಕಾ ವಲಯಗಳ ಸಮಗ್ರ ಬೆಳವಣಿಗೆಗೆ ಅಗತ್ಯ ವಾದ ಭೌತಿಕ, ಆರ್ಥಿಕ, ಸಾಮಾಜಿಕ ಪರಿಸರವನ್ನು ಸೃಷ್ಟಿಸುವಲ್ಲಿ ನಮ್ಮ ಸರಕಾರವು ದೇಶಕ್ಕೇ ಮಾದರಿ ಯಾಗಿದೆ. ನವೀನ ಆಲೋಚನೆಗಳು, ನವೋನ್ವೇ ಷಣೆಗಳ ಮೂಲಕ ಜಾಗತಿಕ ಪ್ರೇರಣೆಯ ರಂಗಸ್ಥ ಳವಾಗಿದೆ. ಕರ್ನಾಟಕ ಸರಕಾರವು ಮಾನವ ಸಂಪ ನ್ಮೂಲವನ್ನು, ವಿಶೇಷವಾಗಿ ದುಡಿಯುವ ವಯೋ ಮಾನದ ವರ್ಗವನ್ನು ಹಾಗೂ ಯುವಪೀಳಿಗೆಯನ್ನು ಅಭಿವೃದ್ಧಿಯ ಎಂಜಿನ್ಗಳೆಂದೇ ಪರಿಗಣಿಸುತ್ತದೆ. ಈ ವರ್ಗದಲ್ಲಿ ನಿರಂತರ ಕಲಿಕೆ, ಕೌಶಲಗಳನ್ನು ವೃದ್ಧಿಸುವುದು, ಆ ಮೂಲಕ ಜಾಗತಿಕವಾಗಿ ಸ್ಪರ್ಧಾ ತ್ಮಕವಾಗಿಸುವುದು ನಮ್ಮ ಸರಕಾರದ ಗುರಿಯಾಗಿದೆ. ಇದಕ್ಕಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು ನಾವು ಜಾರಿಗೆ ತಂದಿದ್ದೇವೆ. ಅದೇ ರೀತಿ, ರಾಜ್ಯದಲ್ಲಿ ವಿಪುಲ ಉದ್ಯೋಗಾವಕಾಶಗಳು ಸೃಷ್ಟಿಯಾಗು ವಂತಹ ಔದ್ಯಮಿಕ ವಾತಾವರಣವನ್ನು ನಿರ್ಮಿಸಿ ದ್ದೇವೆ. ಇದಕ್ಕೆ ಅಗತ್ಯವಾದ ಮೂಲಸೌಕರ್ಯ ಸೃಜನೆ, ನೀತಿನಿರೂಪಣೆಗಳು, ಹೂಡಿಕೆದಾರರ ಸಮಾವೇಶಗಳನ್ನು ಕೈಗೊಂಡಿದ್ದೇವೆ. ಮುಂದಿನ ಐದು ವರ್ಷದಲ್ಲಿ ರೂ. 7.5 ಲಕ್ಷ ಕೋಟಿ ಬಂಡವಾಳ ಹೂಡಿಕೆ ಆಕರ್ಷಣೆಯನ್ನು, 20 ಲಕ್ಷ ಉದ್ಯೋಗಗಳ ಸೃಷ್ಟಿಯ ಗುರಿಯನ್ನು ನಾವು ಹೊಂದಿದ್ದೇವೆ.

ಅಭಿವೃದ್ಧಿ ಎನ್ನುವುದು ಬೆಂಗಳೂರಿಗೆ ಮಾತ್ರವೇ ಸೀಮಿತವಾಗಬಾರದು ಎಂದು ‘ಬಿಯಾಂಡ್ ಬೆಂಗಳೂರು’ ರೀತಿಯ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ. ಸ್ಥಳೀಯವಾಗಿ ಲಭ್ಯವಿರುವ ಮಾನವಿಕ ಕೌಶಲ್ಯ, ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಕೈಗಾರಿಕೆ, ಉದ್ಯಮಗಳ ಸ್ಥಾಪನೆಗೆ ಉತ್ತೇಜನ ನೀಡುವುದು ಒಂದು ಕ್ರಮವಾದರೆ, ಪ್ರತಿಯೊಂದು ಜಿಲ್ಲೆಯನ್ನೂ ಭವಿಷ್ಯದ ಅವಕಾಶಗಳಿಗೆ, ಹೂಡಿಕೆಗಳಿಗೆ ಪ್ರಶಸ್ತ ತಾಣವಾಗುವ ರೀತಿಯಲ್ಲಿ ಅಭಿವೃದ್ಧಿಪಡಿಸುವುದು ಮತ್ತೊಂದು ಪ್ರಮುಖ ಕ್ರಮವಾಗಿದೆ, ಇವೆರಡನ್ನೂ ನಮ್ಮ ಸರಕಾರವು ಆದ್ಯತೆಯ ಮೇಲೆ ಕೈಗೊಂಡಿದೆ. ಹಿಂದುಳಿದ ಪ್ರದೇಶವೆಂದು ಹಣೆಪಟ್ಟಿ ಹೊತ್ತಿದ್ದ ಹೈದರಾಬಾದ್ ಕರ್ನಾಟಕದಂತಹ ಭಾಗಗಳನ್ನು ನಿಜ ಅರ್ಥದಲ್ಲಿ ಕಲ್ಯಾಣ ಕರ್ನಾಟಕ’ವಾಗಿಸಿರುವ ಶ್ರೇಯ ನಮ್ಮದಾಗಿದೆ. ಈ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗಾಗಿ, ನಿಖರ ಯೋಜನೆಗಳ ಮೂಲಕ ಸಾವಿರಾರು ಕೋಟಿ ಹಣವನ್ನು ಇಂದು ನಮ್ಮ ಸರಕಾರ ತೊಡಗಿಸಿದೆ. ಹೌದು, ಇದನ್ನು ನಾವು ಎಂದಿಗೂ ವ್ಯಯ ಎಂದು ಕರೆಯುವುದಿಲ್ಲ, ಬದಲಿಗೆ ಕರ್ನಾಟಕದ ಭವ್ಯ ಭವಿತವ್ಯಕ್ಕೆ, ಅಭಿವೃ ದ್ಧಿಗಾಗಿ ಮಾಡಿದ ಹೂಡಿಕೆ ಎಂದೇ ಕರೆಯುತ್ತೇವೆ. ಇಂದು ಈ ಜಿಲ್ಲೆಗಳ ಶಿಕ್ಷಣ, ಆರೋಗ್ಯ, ಸಂಪರ್ಕ ಕ್ಷೇತ್ರಗಳಲ್ಲಿ ಗುಣಾತ್ಮಕ ಬದಲಾವಣೆಗಳು ಕಂಡಿವೆ. ಹೂಡಿಕೆಯನ್ನು ಆಕರ್ಷಿಸುವ ಪ್ರಶಸ್ತ ತಾಣಗಳಾಗಿ ವಿಕಸಿತಗೊಳ್ಳುತ್ತಿವೆ.

ಕರ್ನಾಟಕವು ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ, ಐಟಿ–ಬಿಟಿ, ನವೋದ್ಯೋಮಗಳಲ್ಲಿ ಹೊಂದಿದ್ದ ಮುಂಚೂಣಿಯನ್ನು ಮತ್ತಷ್ಟು ವ್ಯಾಪಕ ವಾಗಿ ವಿಸ್ತರಿಸುವಲ್ಲಿ ನಮ್ಮ ಸರಕಾರ ಯಶಸ್ವಿ ಯಾಗಿದೆ. ದೇಶವು ಅನುಕರಿಸುವಂತಹ ಹತ್ತು ಹಲವು ಉದ್ಯಮಸ್ನೇಹಿ ನೀತಿ, ಕಾರ್ಯಕ್ರಮ, ಯೋಜನೆಗಳನ್ನು ನಾವು ಜಾರಿಗೊಳಿಸಿದ್ದೇವೆ. ಜ್ಞಾನ, ವಿಜ್ಞಾನ, ಸಂಶೋಧನೆ, ಆರೋಗ್ಯ, ಆವಿಷ್ಕಾರಗಳು ಮುಪ್ಪುರಿಗೊಂಡ ಭವಿಷ್ಯವರ್ತಿ ಯಾದ ಕ್ವಿನ್ ಸಿಟಿ’ಯಂತಹ ಜಾಗತಿಕ ನಾವೀನ್ಯ ನಗರಗಳ ನಿರ್ಮಾಣಕ್ಕೆ ಚಾಲನೆ ನೀಡಿದ್ದೇವೆ. ಮೆಟ್ರೋ ಜಾಲದ ವ್ಯಾಪಕ ವಿಸ್ತರಣೆ, ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಇರಿಸಿರುವ ಹೆಜ್ಜೆ, ಪ್ರತಿಯೊಂದು ಜಿಲ್ಲೆ, ತಾಲ್ಲೂಕು, ಗ್ರಾಮ ಪಂಚಾಯಿತಿಗಳನ್ನು ಸುಗಮವಾಗಿ ಬೆಸೆ ಯುವ ಶ್ರೇಷ್ಠ ದರ್ಜೆಯ ರಸ್ತೆ ಸಂಪರ್ಕ, ವಿದ್ಯು ನ್ಮಾನ ಸಂವಹನ ಮೂಲಸೌಕರ್ಯಗಳ ನಿರ್ಮಾಣ ವನ್ನು ಸಾಧ್ಯವಾಗಿಸಿದ್ದೇವೆ. ಭವಿಷ್ಯವರ್ತಿ ನ್ಯಾನೋ ತಂತ್ರಜ್ಞಾನ, ಸೆಮಿ ಕಂಡಕ್ಟರ್ ತಂತ್ರಜ್ಞಾನಗಳು ರಾಜ್ಯದಲ್ಲಿ ಆಳವಾಗಿ ನೆಲೆಯೂರಲು ಅಗತ್ಯ ಕ್ರಮ, ಪ್ರೋತ್ಸಾಹಗಳನ್ನು ನೀಡಿದ್ದೇವೆ.

ಇಂತಹ ಪಟ್ಟಿಗಳನ್ನು ನೀಡುತ್ತಾ ಸಾಗಿದರೆ, ಒಂದು ಕಿರುಹೊತ್ತಿಗೆಯಾದರೂ ಅಚ್ಚರಿಯಿಲ್ಲ. ಆದರೆ ಇವುಗಳನ್ನೆಲ್ಲ ನಮ್ಮ ಸಾಧನೆ ಎಂದು ಹೇಳಿಕೊಳ್ಳುವುದಕ್ಕಿಂತ ಚುನಾಯಿತ ಸರಕಾರವಾಗಿ ನಾವು ಮಾಡಲೇಬೇಕಿದ್ದ ಕರ್ತವ್ಯಗಳೆಂದು ಭಾವಿಸಿ ದ್ದೇವೆ ಮತ್ತು ಈ ಯಶೋಗಾಥೆ ಮುಂದುವ ರಿಯಲಿದೆ. ಅಭಿವೃದ್ಧಿಯ ಆಯಾಮದಲ್ಲಿ ಸರಕಾರ ಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸುವ ವ್ಯವಸ್ಥೆ ನಮ್ಮ ಸಾರ್ವಜನಿಕ ವಲಯದಲ್ಲಿ ರೂಪುಗೊಳ್ಳಬೇಕು ಎಂಬುದು ನನ್ನ ಆಶಯ. ಆಗ ಮಾತ್ರ, ನಮ್ಮ ರಾಜ್ಯ ಮತ್ತು ದೇಶ ಪ್ರಗತಿಯ ಹಾದಿಯಲ್ಲಿ ದಾಪುಗಾ ಲಿಡಲಿದೆ.

ಸಮಾಜಕ್ಕೆ ಋಣ ತೀರಿಸಿದ ಖುಷಿಯಲ್ಲಿದ್ದೇವೆ: ಡಿ.ಕೆ.ಶಿವಕುಮಾರ್

ಸಂಭ್ರಮವಲ್ಲ, ಬಡವರಿಗೆ ನೆರವಾದ ಸಮಾಧಾನ

ಹೊಸಪೇಟೆ: ಬಡವರಿಗೆ ನೆರವಾದ ಸಂತೃಪ್ತ ಭಾವದೊಂದಿಗೆ, ನುಡಿದಂತೆ ನಡೆದಿದ್ದೇವೆ ಎಂಬ ತೃಪ್ತಿಯೊಂದಿಗೆ ನಾವು ಇಲ್ಲಿ ಸೇರುತ್ತಿದ್ದೇವೆ, ನಾವಿಲ್ಲಿ ಸಂಭ್ರಮ ಆಚರಿಸುತ್ತಿಲ್ಲ, ಬದಲಿಗೆ ಸಮಾಜಕ್ಕೆ ಋಣ ತೀರಿಸಿದ ಖುಷಿಯಲ್ಲಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರಕಾರ ಎರಡು ವರ್ಷವನ್ನು ಯಶಸ್ವಿಯಾಗಿ ಪೂರೈಸಿರುವ ಹಿನ್ನೆಲೆಯಲ್ಲಿ ಪಂಚಗ್ಯಾರಂಟಿ ಜಾರಿಗೆ ತಂದ ಖುಷಿ ಹಂಚಿಕೊಳ್ಳುವುದರ ಜತೆಗೆ ಬಡಜನರಿಗೆ 1.11 ಲಕ್ಷ ಹಕ್ಕುಪತ್ರ ಸಮರ್ಪಿಸುವ ಸಮರ್ಪಣಾ ಸಂಕಲ್ಪ ಸಮಾವೇಶ ಇಂದು ಇಲ್ಲಿನ ಪುನೀತ್ ರಾಜ್ ಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಹೇಳಿದರು.

ದೇಶದ ಬೇರೆ ಯಾವ ರಾಜ್ಯದಲ್ಲೂ ಗ್ಯಾರಂಟಿಗಳ ಜಾರಿ ಆಗಲಿಲ್ಲ, ರಾಜ್ಯದಲ್ಲಿ ಅದು ಆಗಿದೆ, ಇದರ ಜತೆಗೆ ಹಾಡಿ, ಹಟ್ಟಿ, ತಾಂಡಾ, ಕೇರಿಗಳಲ್ಲಿ ವಾಸವಿದ್ದ ಲಕ್ಷಾಂತರ ಕುಟುಂಬಗಳಿಗೆ ಭೂ ದಾಖಲೆಯೇ ಇರಲಿಲ್ಲ. ಅಂತಹ ಕುಟುಂಬಗಳನ್ನು ಹುಡುಕಿ, ತಹಸೀಲ್ದಾರ್ ಅವರಿಂದಲೇ ಉಪನೋಂದಣಿ ಕಚೇರಿಗಳಲ್ಲಿ ನೋಂದಣಿ ಮಾಡಿಸಿ ಹಕ್ಕುಪತ್ರ ನೀಡುವ ಮಹತ್ವದ ಕೆಲಸವನ್ನು ಸರಕಾರ ಮಾಡಿದೆ. ಇದು ಬಡವರ, ಪ.ಜಾ, ಪಂ.ದವರ, ಹಿಂದು ಳಿದವರ ನೂರಾರು ವರ್ಷಗಳ ಕನಸನ್ನು ನನಸು ಮಾಡಿದ ಕ್ಷಣ. ಅದಕ್ಕಾಗಿಯೇ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದರು.

ಸಮರ್ಪಣಾ ಸಂಕಲ್ಪ ಸಮಾವೇಶದ ಕುರಿತು ನಗರದ ಜನತೆಗೆ ತಿಳಿಯಪಡಿಸುವ ನಿಟ್ಟಿನಲ್ಲಿ ಬೃಹತ್ ಬೈಕ್ ರ‍್ಯಾಲಿ ನಡೆಯಿತು. ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತು ವಾರಿ ಸಚಿವ ಜಮೀರ್ ಅಹಮದ್ ಖಾನ್ ಚಾಲನೆ ನೀಡಿ ದ್ವಿ ಚಕ್ರ ವಾಹನ ಚಲಾಯಿಸಿದರು.

ಬೈಕ್ ರ‍್ಯಾಲಿ

ಸಮರ್ಪಣಾ ಸಂಕಲ್ಪ ಸಮಾ ವೇಶದ ಕುರಿತು ನಗರದ ಜನತೆಗೆ ತಿಳಿಯಪಡಿಸುವ ನಿಟ್ಟಿನಲ್ಲಿ ಬೃಹತ್ ಬೈಕ್ ರ‍್ಯಾಲಿ ನಡೆಯಿತು. ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಇದಕ್ಕೆ ಚಾಲನೆ ನೀಡಿ ಸ್ವತಃ ದ್ವಿಚಕ್ರ ವಾಹನ ಚಲಾಯಿಸಿದರು. ಶಾಸಕ ಎಚ್.ಆರ್. ಗವಿಯಪ್ಪ ಸಹಿತ ಹಲವರು ಪಾಲ್ಗೊಂಡಿದ್ದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಮಾತ್ರ ರಾಜ್ಯ ದೇಶಕ್ಕೆ ಮಾದರಿಯಾದುದಲ್ಲ, ಹಕ್ಕುಪತ್ರ ನೀಡಿಕೆ ವಿಚಾರದಲ್ಲೂ ಮಾದರಿಯಾಗಿದೆ. ನಮ್ಮನ್ನು ಅನುಕರಿಸಿ ಇತರ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿಗೆ ಗ್ಯಾರಂಟಿ ಯೋಜನೆ ಜಾರಿಗೆ ತರುವುದು ಸಾಧ್ಯವಾ ಗುತ್ತಿಲ್ಲ ಎಂಬುದನ್ನು ಜನತೆ ಅರ್ಥ ಮಾಡಿಕೊಳ್ಳಬೇಕು. ನಮ್ಮದು ಬದುಕಿನೊಂದಿಗೆ ಶ್ರಮಿಸುವ ಸರಕಾರವೇ ಹೊರತು ಭಾವನೆಗಳೊಂದಿಗೆ ಆಟವಾಡುವ ಸರಕಾರವಲ್ಲ.

–ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಪಂಜಾಬ್‌ನಲ್ಲಿ ಯುವತಿ ಸಾವು ಕೇಸ್‌ಗೆ ಟ್ವಿಸ್ಟ್

ಕಟ್ಟಡದಿಂದ ಜಿಗಿದು ಆಕಾಂಕ್ಷಾ ಆತ್ಮಹತ್ಯೆ

ಮಂಗಳೂರು: ಪಂಜಾಬ್‌ನ ಕಾಲೇಜಿನಲ್ಲಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ ಧರ್ಮಸ್ಥಳ ಮೂಲದ ಏರೋಸ್ಪೇಸ್ ಎಂಜಿನಿಯರ್ ಪ್ರಕರಣಕ್ಕೆ ತಿರುವು ಸಿಕ್ಕಿದೆ. ಪ್ರೇಮ ವೈಫಲ್ಯದಿಂದ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ಬೆಳಕಿಗೆ ಬಂದಿದೆ.

ಮೃತ ಆಕಾಂಕ್ಷಾಎಸ್ ನಾಯರ್ ಧರ್ಮಸ್ಥಳದ ಬೋಳಿಯೂರು ನಿವಾಸಿ. ಆಕಾಂಕ್ಷಾಗೆ ತಾನು ಓದುತ್ತಿದ್ದ ಯೂನಿವರ್ಸಿಟಿಯ ಪ್ರೊಫೆಸರ್ ಕೇರಳದ ಕೊಟ್ಟಾಯಂ ನಿವಾಸಿ 2 ಮಕ್ಕಳ ತಂದೆ ಬಿಜಿಲ್ ಮ್ಯಾಥ್ಯೂ ಜತೆ ಆಕಾಂಕ್ಷಗೆ ಪ್ರೇಮಾಂಕುರವಾಗಿತ್ತು. ಅಲ್ಲದೇ ಮ್ಯಾಥ್ಯೂ ಜತೆ ಆತನ ಮನೆಗೆ ಹೋಗಿ ಮದುವೆಯಾಗುವಂತೆ ಒತ್ತಾಯಿಸಿ ಆಕಾಂಕ್ಷ ಜಗಳ ಮಾಡಿದ್ದಳು. ಬಳಿಕ ಕಾಲೇಜಿನಲ್ಲೂ ಜಗಳ ಮಾಡಿ ಕಟ್ಟಡದ ನಾಲ್ಕನೇ ಮಹಡಿಗೆ ಹೋಗಿ ಕೆಳಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಅಂಶ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

6 ತಿಂಗಳ ಹಿಂದೆ ದೆಹಲಿಯ ಸ್ಟೇಸ್ ಜೆಟ್ ಏರೋಸ್ಪೇಸ್‌ನಲ್ಲಿ ಆಕಾಂಕ್ಷ ಕೆಲಸ ನಿರ್ವಹಿಸುತ್ತಿದ್ದರು. ಹೆಚ್ಚಿನ ತರಬೇತಿಗೆ ಜರ್ಮನಿಗೆ ತೆರಳಲು ತಯಾರಿ ನಡೆಸಿದ್ದರು. ಕೆಲವು ಶೈಕ್ಷಣಿಕ ದಾಖಲೆಗಳನ್ನು ತರಲು ಶುಕ್ರವಾರ ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿಗೆ ಆಕಾಂಕ್ಷ ತೆರಳಿದ್ದಳು. ಇದೇ ವೇಳೆ ಕಾಲೇಜಿನ ನಾಲ್ಕನೇ ಮಹಡಿಯಿಂದ ಬಿದ್ದು ಸಾವನ್ನಪ್ಪಿದ್ದರು.

ಮ್ಯಾಥ್ಯೂ ವಿರುದ್ಧ ಕೇಸ್

ಆಕಾಂಕ್ಷಾ ಸಾವಿನ ಬಗ್ಗೆ ಪೋಷಕರು ಅನುಮಾನ ವ್ಯಕ್ತಪಡಿಸಿದ್ದ ಪೋಷಕರು, ಈ ಸಂಬಂಧ ಪಂಜಾಬ್‌ನ ಜಲಂಧರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಪ್ರೀತಿ ವಿಚಾರಕ್ಕೆ ಆಕಾಂಕ್ಷಾ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ಪೊಲೀಸ್ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಆತ್ಮಹತ್ಯೆಗೆ ಪ್ರೇರಣೆ ಹಿನ್ನೆಲೆ 2 ಮಕ್ಕಳ ತಂದೆ ಬಿಜಿಲ್ ಮ್ಯಾಥ್ಯೂ ವಿರುದ್ಧ ಪ್ರಕರಣ ದಾಖಲಾಗಿದೆ.

ಧರ್ಮಸ್ಥಳ ಮೂಲದ ವಿದ್ಯಾರ್ಥಿ ಆಕಾಂಕ್ಷಾಸಾವಿನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸೂಕ್ತ ತನಿಖೆ ನಡೆಸುವಂತೆ ಪಂಜಾಬ್ ಸರಕಾರವನ್ನು ಒತ್ತಾಯಿಸಿದ್ದೇನೆ. ವಿದ್ಯಾರ್ಥಿನಿ ಆಕಾಂಕ್ಷಾ ಪಂಜಾಬ್‌ನಲ್ಲಿ ಮೃತಪಟ್ಟಿರುವುದು ಅತ್ಯಂತ ನೋವಿನ ಸಂಗತಿ. ಇದೊಂದು ಅಸಹಜ ಸಾವು ಎಂಬುದು ಮೇಲ್ನೋಟಕ್ಕೆ ಎದ್ದು ಕಾಣುತ್ತದೆ. ಕಿರುಕುಳದಿಂದ ಮೃತಪಟ್ಟಿರುವುದಾಗಿ ಅವರು ಕುಟುಂಬದವರು ಆರೋಪಿಸಿದ್ದಾರೆ. ಆಕಾಂಕ್ಷಾಸಾವಿಗೆ ನ್ಯಾಯ ಒದಗಿಸುವಂತೆ ಪಂಜಾಬ್ ಸರಕಾರಕ್ಕೆ ಒತ್ತಾಯಿಸಲಾಗಿದೆ’

–ದಿನೇಶ್ ಗುಂಡೂರಾವ್, ಸಚಿವ

ಪ್ರತ್ಯೇಕ ಅಪಘಾತ: ಐವರು ಸ್ಥಳದಲ್ಲೇ ಸಾವು

ತುಮಕೂರು/ರಾಮನಗರ: ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ ಹೊಡೆದು ತುಮಕೂರಿನ ಮೂವರು ಸ್ಥಳದಲ್ಲಿ ಮೃತಪಟ್ಟ ಘಟನೆ ಆಂಧ್ರದ ಕರ್ನೂಲ್ ಬಳಿ ನಡೆದಿದೆ.

ಆಂಧ್ರಪ್ರದೇಶದ ಕಡೆಗೆ ಪ್ರವಾಸಕ್ಕೆ ತೆರಳಿದ್ದ ಚಿಕ್ಕನಾಯಕನಹಳ್ಳಿ ತಾಲೂಕಿನ ಕೆಂಕೆರೆ ನಿವಾಸಿಗಳಾದ ನವೀನ್ (48), ಸಂತೋಷ್ (35), ಲೋಕೇಶ್ (38) ಮೃತ ದುರ್ದೈವಿಗಳು. ನವೀನ್, ಸಂತೋಷ್, ಲೋಕೇಶ್ ಸೇರಿ ಒಟ್ಟು 6 ಮಂದಿ ಆಂಧ್ರಪ್ರದೇಶದ ಕಡೆಗೆ ಪ್ರವಾಸಕ್ಕೆ ತೆರಳಿದ್ದರು. ಈ ವೇಳೆ ಕರ್ನೂಲ್ ಬಳಿ ಕಾರು ರಸ್ತೆ ವಿಭಜಕ್ಕೆ ಡಿಕ್ಕಿಯಾಗಿದೆ. ಅಪಘಾತದ ತೀವ್ರತೆಗೆ ಕಾರಿನಲ್ಲಿದ್ದ ನವೀನ್, ಸಂತೋಷ್ ಹಾಗೂ ಲೋಕೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅದೇ ರೀತಿ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಪಿಎಸ್‌ಐ ಸೇರಿದಂತೆ ಇಬ್ಬರು ಸ್ಥಳದಲ್ಲೇ ಮೃತಪಟ್ಟು, ಇತರ ನಾಲ್ವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಜಿಲ್ಲೆಯ ಕನಕಪುರದ ಕಗ್ಗಲೀಪುರ ರಸ್ತೆಯಲ್ಲಿ ಸೋಮವಾರ ಬೆಳಗ್ಗೆ ಸಂಭವಿಸಿದೆ.

ಕಮಲಾಪುರದಲ್ಲಿ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿದ ಸಚಿವ ಬೋಸರಾಜು

ಹಂಪಿಯಲ್ಲಿ ವಿಜ್ಞಾನ ಕೇಂದ್ರ ನಿರ್ಮಾಣಕ್ಕೆ ಚಿಂತನೆ

ಬಳ್ಳಾರಿ: ವಿಶ್ವಪಾರಂಪರಿಕ ತಾಣಗಳಲ್ಲಿ ಒಂದಾಗಿರುವ ಹಂಪಿಯಲ್ಲಿ ರಾಜ್ಯದ ಎರಡನೇ ಅತಿದೊಡ್ಡ ಹಾಗೂ ಕಲ್ಯಾಣ ಕರ್ನಾಟಕದ ಅತಿದೊಡ್ಡ ತಾರಾಲಯ ಹಾಗೂ ವಿಜ್ಞಾನ ಕೇಂದ್ರವನ್ನು ನಿರ್ಮಿಸಲಾಗುವುದು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್ ಬೋಸರಾಜುತಿಳಿಸಿದರು.

ಸೋಮವಾರ ಕಲ್ಯಾಣ ಕರ್ನಾಟಕದ ಜನಪ್ರಿಯ ಪ್ರವಾಸಿ ತಾಣವಾಗಿರುವ ವಿಜಯನಗರ ಜಿಲ್ಲೆಯ ಕಮಲಾಪುರದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ನೂತನ ವಿಜ್ಞಾನ ಕೇಂದ್ರ ಹಾಗೂ ತಾರಾಲಯ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕಲ್ಯಾಣ ಕರ್ನಾಟಕ ಭಾಗದ ಯುವ ಜನರಲ್ಲಿ ವೈಜ್ಞಾನಿಕ ಮನೋಭಾವ, ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಆಸಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸಿಎಂ ಸಿದ್ದರಾಮಯ್ಯನವರ ಆಶಯದಂತೆ ಪ್ರತಿ ಜಿಲ್ಲೆಗಳಲ್ಲೂ ವಿಜ್ಞಾನ ಕೇಂದ್ರ ಹಾಗೂ ತಾರಾಲಯ ನಿರ್ಮಿಸಲಾಗುತ್ತಿದೆ. ಯುನೆಸ್ಕೋ ಪಾರಂಪರಿಕ ತಾಣವಾಗಿರುವ ಹಂಪಿಯಲ್ಲಿ ಉತ್ತಮ ದರ್ಜೆಯ ಸೌಲಭ್ಯಗಳನ್ನು ಕಲ್ಪಿಸುವುದು ನಮ್ಮ ಉದ್ದೇಶವಾಗಿದೆ.

- ಎನ್.ಎಸ್ ಬೋಸರಾಜು, ಸಚಿವ

ಸೋಮವಾರ ಕಲ್ಯಾಣ ಕರ್ನಾಟಕದ ಜನಪ್ರಿಯ ಪ್ರವಾಸಿ ತಾಣವಾಗಿರುವ ವಿಜಯನಗರ ಜಿಲ್ಲೆಯ ಕಮಲಾಪುರದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ನೂತನ ವಿಜ್ಞಾನ ಕೇಂದ್ರ ಹಾಗೂ ತಾರಾಲಯ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕಮಲಾಪುರದ ಪ್ರಮುಖ ಜಾಗವನ್ನು ವಿಜ್ಞಾನ ಕೇಂದ್ರ ಹಾಗೂ ತಾರಾಲಯ ನಿರ್ಮಾಣಕ್ಕೆ ಮಂಜೂರು ಮಾಡಲಾಗಿದೆ. ಪ್ರಮುಖ ರಸ್ತೆಯಲ್ಲಿ 10 ಎಕ್ರೆ ಜಾಗ ಮಂಜೂರಾಗಿದ್ದು, ಉತ್ತಮ ವಿನ್ಯಾಸದ ಮೂಲಕ ಜಾಗದ ಸದುಪಯೋಗ ಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು.

ಕಲ್ಯಾಣ ಕರ್ನಾಟಕದ ಅತಿದೊಡ್ಡ ಹಾಗೂ ರಾಜ್ಯದ 2ನೇ ಅತಿದೊಡ್ಡ ತಾರಾಲಯವನ್ನು ಇಲ್ಲಿ ನಿರ್ಮಿಸಲು ಯೋಜಿಸಲಾಗಿದೆ. 12 ಮೀ. ನಾನೋಸೀಮ್ ಡೋಮ್ ತಾರಾಲಯ ಹಾಗೆಯೇ ಅತ್ಯಾಧುನಿಕ ಸೌಲಭ್ಯಗಳನು ಹೊಂದಿರುವ ವಿಜ್ಞಾನ ಕೇಂದ್ರ ನಿರ್ಮಿಸಲಾಗುವುದು. ಪ್ರವಾಸೋದ್ಯಮ ಇಲಾಖೆ ಈ ಜಾಗವನ್ನು ನೀಡಿದೆ. ಇಲ್ಲಿ ಕಾಮಗಾರಿಗಳ ಪ್ರಾರಂಭಕ್ಕೆ ಅಗತ್ಯ ತಯಾರಿ ನಡೆಸುವಂತೆ ಸೂಚಿಸಿದರು.

ವಿಧಾನಪರಿಷತ್ತಿನ ಪ್ರತಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಆರೋಪ

ಸಿದ್ದು, ಡಿಕೆಶಿ ಜೋಡಿ ಕಳ್ಳೆತ್ತು

ದಾವಣಗೆರೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ರಾಜ್ಯ ಸರಕಾರದ ಜೋಡೆತ್ತುಗಳಲ್ಲ. ರಾಜ್ಯವನ್ನು ಕೊಳ್ಳೆ ಹೊಡೆಯು ತ್ತಿರುವ ಕಳ್ಳೆತ್ತುಗಳ ಜೋಡಿ’ ಎಂದು ವಿಧಾನಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಆರೋಪಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರ 5 ಲಕ್ಷ ಕೋಟಿ ಸಾಲದಲ್ಲಿದೆ. ಸಿದ್ದರಾಮಯ್ಯ ಅವರ ಅಧಿಕಾರವಧಿಯಲ್ಲಿ 2 ಲಕ್ಷ ಕೋಟಿ ಸಾಲ ಮಾಡಲಾಗಿದೆ. ಇನ್ನೂ 1 ಲಕ್ಷ ಕೋಟಿ ಸಾಲಕ್ಕೆ ಕಳ್ಳೆತ್ತು ಜೋಡಿ ಮುಂದಾಗಿದೆ. ಈ ಇಬ್ಬರು ಕರ್ನಾಟಕವನ್ನು ನರಕಸದೃಶ್ಯ ಮಾಡುತ್ತಿದ್ದಾರೆ’ ಎಂದು ದೂರಿದರು.

ಕಾಂಗ್ರೆಸ್ ಪಾಲಿಗೆ ಕರ್ನಾಟಕ ಎಟಿಎಂ ಆಗಿದೆ. ರಾಹುಲ್ ಗಾಂಧಿ, ಸುರ್ಜೇವಾಲ ಸೇರಿ ಅನೇಕರು ತಮ್ಮ ಖಜಾನೆ ತುಂಬಿಸಿಕೊಳ್ಳಲು ಆಗಾಗ ರಾಜ್ಯಕ್ಕೆ ಬರುತ್ತಾರೆ. ವಾಲ್ಮೀಕಿ ಹಗರಣದ ಹಣದಲ್ಲಿ ತೆಲಂಗಾಣದ ಚುನಾವಣೆ ಮಾಡಲಾಗಿದೆ. ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್ ಸೇರಿದಂತೆ ಅನೇಕ ಸಚಿವರು ವಸೂಲಿಯಲ್ಲಿ ತೊಡಗಿದ್ದಾರೆ’ ಎಂದು ಕಿಡಿಕಾರಿದರು.

2ವರ್ಷಗಳಲ್ಲಿ ಸರಕಾರ ಏನು ಸಾಧನೆ ಮಾಡಿದೆ?

ರಾಜ್ಯ ಸರಕಾರ ಎರಡು ವರ್ಷಗಳಲ್ಲಿ ಏನು ಸಾಧನೆ ಮಾಡಿದೆ ಎಂಬುದು ಅರ್ಥವಾಗಿಲ್ಲ. ಸಾವಿರಾರು ಸಮಸ್ಯೆಗಳಿಂದ ಕರ್ನಾಟಕ ತೊಳಲಾಡುತ್ತಿದೆ. ಸರಕಾರದ ದುಡ್ಡಿನಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಜಾತ್ರೆ ಮಾಡುತ್ತಿದ್ದಾರೆ. ಸಮಾವೇಶಕ್ಕೆ 3,700 ಸರಕಾರಿ ಬಸ್ ಬಳಸಿಕೊಳ್ಳಲಾಗುತ್ತಿದೆ. ಸರಕಾರಿ ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎಂದು ವಿಧಾನಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ಆಕ್ರೋಶ ವ್ಯಕ್ತಪಡಿಸಿದರು.

ವಿಶ್ವವಾಣಿ

ಸಂಪಾದಕೀಯ

ಸಂಭ್ರಮದ ಹೆಜ್ಜೆ ಸದೃಢವಾಗಲಿ

ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರಕಾರವು ಇಂದು (ಮೇ 20) ತನ್ನ ಎರಡು ವರ್ಷಗಳನ್ನು ಪೂರ್ಣಗೊಳಿಸುತ್ತಿದೆ. ಸಹಜವಾಗಿಯೇ, ಇದು ಕಾಂಗ್ರೆಸ್ ಪಕ್ಷದ ಹಾಗೂ ಸಿದ್ದರಾಮಯ್ಯನವರ ಅಭಿಮಾನಿಗಳಿಗೆ ಅತೀವ ಸಂತಸ ತಂದಿದೆ. ಸಮಾಜದ ತಳ ಸಮುದಾಯಗಳ ನೋವು, ನಿರಾಶೆ, ಹತಾಶೆ, ಅಸಹಾಯಕತೆಗಳನ್ನು ತೀರಾ ಹತ್ತಿರದಿಂದ ಕಂಡಿರುವ ಹಾಗೂ ಅವರ ಅಭ್ಯುದಯಕ್ಕೆ ಟೊಂಕ ಕಟ್ಟಿರುವ ಸಿದ್ದರಾಮಯ್ಯನವರು ಈ ಸಂದರ್ಭವನ್ನು ಸಹಜವಾಗಿಯೇ ಸಂಭ್ರಮಿಸುತ್ತಿರಲಿಕ್ಕೂ ಸಾಕು. ಇದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೂ ಅನ್ವಯವಾಗುವ ಮಾತು. ಸರಕಾರ ಅಸ್ತಿತ್ವಕ್ಕೆ ಬಂದ ಶುರುವಿನಿಂದಲೂ ಈ 'ಸಿಎಂ-ಡಿಸಿಎಂ' ಜೋಡಿಯು, ಚುನಾವಣಾ ಸಂದರ್ಭದಲ್ಲಿ ಪಕ್ಷವು ಜನತೆಗೆ ಇತ್ತ ಭರವಸೆಯನ್ನು ಹತ್ತು ಹಲವು ಸವಾಲುಗಳ ಹಾಗೂ ಕೊಂಕುಮಾತುಗಳ ನಡುವೆಯೂ ಈಡೇರಿಸಲು ಶ್ರಮಿಸಿರುವುದನ್ನು ತಳ್ಳಿಹಾಕಲಾಗದು. ಪಯಣ ಇಷ್ಟಕ್ಕೇ ನಿಲ್ಲುವುದಿಲ್ಲ, ದಿನಗಳೆದಂತೆ ಅದು ಹೊಸ ಹೊಸ ಸವಾಲುಗಳನ್ನು ಎದುರಿಸುತ್ತಲೇ ಹೋಗಬೇಕಾಗುತ್ತದೆ ಎಂಬುದನ್ನು ಇಲ್ಲಿ ಮರೆಯಲಾಗದು. ಸರಕಾರದ ಸಹಭಾಗಿಗಳಾದ ಸಚಿವರು ಮಾತ್ರವಲ್ಲದೆ, ಶಾಸಕರು, ಅಧಿಕಾರಿಗಳು ಪರಸ್ಪರ ಕೈಜೋಡಿಸಿದಾಗ ಮಾತ್ರವೇ ಈ ಸವಾಲನ್ನು ಎದುರಿಸುವ ಶಕ್ತಿ ದೊರಕುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಅಂಥದೊಂದು ಶಕ್ತಿಯ ಮರುಪೂರಣಕ್ಕೆ ಕಾಂಗ್ರೆಸ್ ಸರಕಾರ ಅನುಗಾಲ ಯತ್ನಿಸಲಿ ಹಾಗೂ ಅದರಿಂದಾಗಿ ಜನಕಲ್ಯಾಣದ ಆಶಯಗಳು, ಅಭಿವೃದ್ಧಿ ಚಟುವಟಿಕೆಗಳು ಅಬಾಧಿತವಾಗಿ ನೆರವೇರುವಂತಾಗಲಿ ಎಂದಷ್ಟೇ ಈ ಸಂದರ್ಭದಲ್ಲಿ ಆಶಿಸಬಹುದು, ಹಾರೈಸಬಹುದು. ವಿವಿಧ ಕಾರಣಗಳಿಗಾಗಿ ಒದಗಿರುವ ಬೆಲೆಯೇರಿಕೆಯ ಸ್ಥಿತಿಯಿಂದ ಶ್ರೀಸಾಮಾನ್ಯರು ಸೇರಿದಂತೆ ಸಮಾಜದ ವಿವಿಧ ವರ್ಗಗಳು ತತ್ತರಿಸಿವೆ. ಆಳುಗ ವ್ಯವಸ್ಥೆಯ ಸುಸೂತ್ರ ಕಾರ್ಯನಿರ್ವಹಣೆಯ ಜತೆಜತೆಗೆ ಈ ಸಮಸ್ಯೆಗಳ ನಿವಾರಣೆಯ ಕಡೆಗೂ ಸರಕಾರದ ಸಹಭಾಗಿಗಳು ಗಮನಹರಿಸಬೇಕಿದೆ. ಹಾಗಾದಲ್ಲಿ, 'ಇದು ಜನಪ್ರಿಯ ಸರಕಾರ, ಜನಾನುರಾಗಿ ಸರಕಾರ' ಎಂಬ ಮಾತಿಗೂ ಪುಷ್ಟಿ ಸಿಕ್ಕಿದಂತಾಗುತ್ತದೆ. ಸರಕಾರದ ಸಹಭಾಗಿಗಳು ಈ ನಿತ್ಯಸತ್ಯವನ್ನು ಅರಿತು ನಡೆದರೆ ಒಳಿತು.

ಸೊಂಪಾದಕೀಯ

ಮಳೆ ಬಂದು 'ಊರು ಬಾಗಿಲು'

ಬೆಂಗಳೂರು ಮಳೆಯ ಆರ್ಭಟಕ್ಕೆ ಅದುರಿ ಕಂಗಾಲಾಗಿದೆ. ಇಲ್ಲಿನ ವಾತಾವರಣ ನೋಡಿದ್ರೆ 'ವೆದರ್ ಇಟ್ಸ್ ಎ ಗುಡ್ ವೆದರ್ ಟುಡೇ?' ಅಂತ ಯಾರಾದ್ರೂ ಕೇಳಿದ್ರೆ ಉತ್ತರ ಕೊಡೋದು ಕಷ್ಟ ಆಗುತ್ತೆ. ಯಾಕಂದ್ರೆ ಬಿಸಿಲಿಗೆ ಕೈ ಅಡ್ಡ ಇಟ್ಟುಕೊಂಡು ಓಡಾಡುತ್ತಿದ್ದ ಜನ ಇದ್ದಕ್ಕಿದ್ದಂತೆ ಮಳೆಗೆ ಅಡ್ಡವಾಗಿ ಕೈಯನ್ನು ತಲೆ ಮೇಲೆ ಇಟ್ಟುಕೊಂಡು ಹೋಗಬೇಕಾದ ಪರಿಸ್ಥಿತಿ. ಹಾಗಾಗಿ ಇಲ್ಲಿ ಮಳೆರಾಯನದ್ದು ಕ್ಷಣಚಿತ್ತ, ಕ್ಷಣಪಿತ್ತ ಡಿಪಾರ್ಟ್‌ಮೆಂಟು. ವಾಹನಗಳ ಮೇಲೆ ಮರ ಬಿದ್ದು ಎಷ್ಟೋ ಪ್ರಾಣಹಾನಿ ಆಗುತ್ತಿದೆ. ಮಳೆ ಬಂದ್ರೆ ಖುಷಿನೇ ಅಂತ ನೀವು ಅನ್ನಬಹುದು. ಆದರೆ ಖಂಡಿತಾ ಬೆಂಗಳೂರಿಗರಿಗೆ ಮಾತ್ರ ಅಲ್ಲ. ಯಾಕಂದ್ರೆ ಫ್ಲೈ ಓವರ್ ಇರಲಿ, ಅಂಡರ್‌ಪಾಸ್ ಇರಲಿ, ಸುರಂಗಮಾರ್ಗ ಇರಲಿ ಮಳೆಗೆ ಸಿಕ್ಕರೆ ಜನರದ್ದು ಅಧೋಗತಿ. 'ಲೈಟ್ ಅಟ್ ದಿ ಎಂಡ್ ಆಫ್ ದ ಟನಲ್' ಅನ್ನೋದು ಸುಳ್ಳಾಗುತ್ತೆ. ಇಲ್ಲಿ ಕೊನೆಗೂ 'ಎಂಡ್ ಆಫ್ ದಿ ಟನಲ್'ನಲ್ಲೂ ಮಳೆ ನೀರೇ ತುಂಬಿಕೊಂಡಿರುತ್ತದೆ. ಅನೇಕ ಕಡೆ ಬರಗಾಲ ಇದ್ದಾಗ ಅಲ್ಲಿನವರು ಮಳೆ ಯಾವಾಗ ಬರುತ್ತೋ ಅಂತ ಕಾದು ಕೂತಿರುತ್ತಾರೆ. ಬೆಂಗಳೂರಿಗರು, 'ಬರಗಾಲ, ಹಂಗಂದ್ರೆ ಏನು?' ಅಂತ ಕೇಳ್ತಾರೆ. ಮಳೆರಾಯನಿಗೆ, 'ನೋಡಪ್ಪಾ, ಟಾರ್ ರೋಡ್, ಸಿಮೆಂಟ್ ರೋಡ್ ಮೇಲೆ ಬೆಳೆ ಬೆಳೆಯಲ್ಲ' ಅಂತ ತಿಳಿಸಿ ಹೇಳೋರು ಯಾರು? ಹೀಗೆ ಮಳೆ ಮತ್ತು ಬರದ ವಿಷಯಕ್ಕೆ ಹಳೆಯ ಜನಪದ ಹಾಡೊಂದು ನೆನಪಾಗುತ್ತದೆ. 'ಬರ ಬಂದು ತಿನ್ನೋಕೆ ಅನ್ನ ಇಲ್ಲದೆ, ಪಟ್ಟದಾನೆಯಂಥ ಸ್ತ್ರೀಯರು ಸೊರಗಿ ಸೀರೆ ನಿಲ್ಲೋದಿಲ್ಲ ಸೊಂಟದಲಿ' ಅನ್ನುವ ಅವರು ಹೆಣ್ಣುಮಕ್ಕಳ ಕೈಗಳು ಒಣಗಿ ಬಳೆಗಳು ಮೊಳಕೈ ಮೇಲಕ್ಕೆ ಏರುತ್ತವೆ ಅಂತ ತಮ್ಮ ದುಃಖವನ್ನೂ ಆಸಕ್ತಿಕರವಾಗಿ ವರ್ಣಿಸುತ್ತಾರೆ. ಬೇಕಿಲ್ಲದಿದ್ದಾಗ ಬೆಂಕಿಯ ಮಳೆ ಬರುತ್ತೆ, ಆದ್ರೆ ಬೇಕು ಅಂದ್ರೆ ಪತ್ತೆನೇ ಇರಲ್ಲ ಅನ್ನುವ ಅಳಲು ಅವರದ್ದು. ಆದರೆ, ಯಾತಕ್ಕೆ ಮಳೆ ಹೋದವೋ ಅನ್ನೋದರ ಬದಲು ಬೆಂಗಳೂರಿನ ಜನ ಯಾತಕ್ಕೆ ಮಳೆ ಹೊಯ್ದವೋ ಅಂತ ಹಾಡಬೇಕಾಗಿದೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಅಮೆರಿಕ ಅಧ್ಯಕ್ಷರ ಪೆನ್

ಒಂದು ಕಾಲಕ್ಕೆ ಪಾರ್ಕರ್ ಪೆನ್ನು ಜಗತ್ತಿನ ಗಣ್ಯವ್ಯಕ್ತಿಗಳ ಅಂಗಿಯ ಜೇಬನ್ನು ಅಲಂಕರಿಸಿ, ಅವರ ಹೃದಯಕ್ಕೆ ಹತ್ತಿರವಾಗಿತ್ತು. ಆ ಪೆನ್ನಿನ ಮೋಹಕ್ಕೆ ಒಳಗಾದವರಲ್ಲಿ ಅಮೆರಿಕದ ಅಧ್ಯಕ್ಷರೂ ಇದ್ದರು. ಅವರು ಬಳಸುವ ಪೆನ್ನಿಗೆ Presidential Pen ಎಂದು ಕರೆಯುವುದುಂಟು. ಇಂಥದೇ ಪೆನ್ನನ್ನು ಅವರು ಬಳಸಬೇಕು ಎಂದೇನೂ ಅಲ್ಲ. ಆದರೆ ಅವರು ಯಾವುದೇ ಪೆನ್ನನ್ನು ಬಳಸಲಿ, ಅದು ಲೋಕವಿಖ್ಯಾತವಾಗುವುದು ಸಹಜ. ಫ್ರಾಂಕ್ಲಿನ್ ರೂಸವೆಲ್ಟ್‌ರಿಂದ ಬಿಲ್ ಕ್ಲಿಂಟನ್ ತನಕ ಅಧ್ಯಕ್ಷರಾದವರೆಲ್ಲ ಪಾರ್ಕರ್ ಪೆನ್ನುಗಳನ್ನು (ಬೇರೆ ಬೇರೆ ಮಾದರಿಯವು) ಬಳಸುತ್ತಿದ್ದುದು ವಿಶೇಷವೇ ಸರಿ. 'ಅಮೆರಿಕ ಅಧ್ಯಕ್ಷರ ಅಚ್ಚುಮೆಚ್ಚಿನ ಪೆನ್' ಎಂದು ಪಾರ್ಕರ್ ತನ್ನ ಜಾಹೀರಾತಿನಲ್ಲಿ ಗರ್ವದಿಂದ ಹೇಳಿಕೊಂಡಿತ್ತು. ಅಧ್ಯಕ್ಷರು ಪಾರ್ಕರ್ ಪೆನನ್ನು ಬಳಸಲು 2 ಕಾರಣಗಳಿದ್ದವು. ಮೊದಲನೆಯದಾಗಿ ಅದರ ಉತ್ಕೃಷ್ಟ ಗುಣಮಟ್ಟ, ಎರಡನೆಯದಾಗಿ ಅಪ್ಪಟ ಸ್ವದೇಶಿ (ಅಮೆರಿಕನ್) ಎಂಬುದು. ಆರಂಭದಲ್ಲಿ ವಾಟರ್‌ಮನ್ ಪೆನ್ನನ್ನು ಬಳಸುತ್ತಿದ್ದ ರೂಸ್‌ವೆಲ್ಟ್ ಕ್ರಮೇಣ ಪಾರ್ಕರ್ ಪೆನ್ನಿಗೆ ಮೋಹಿತರಾದರು. ಅವರ ಉತ್ತರಾಧಿಕಾರಿಗಳಾದ ಹ್ಯಾರಿ ಟ್ರೂಮನ್ ಮತ್ತು ಐಸೆನ್‌ಹೋವರ್ ಪಾರ್ಕರ್ ಕಂಪನಿಯ ಫೌಂಟನ್ ಪೆನ್ನುಗಳನ್ನು ಬಳಸಲಾರಂಭಿಸಿದರು. ಎಡಗೈಯಲ್ಲಿ ಬರೆಯುತ್ತಿದ್ದ ಟ್ರೂಮನ್, ತಮಗೆ ಅನುಕೂಲವಾಗಲು ಪೆನ್ನನ್ನು ವಿಶೇಷವಾಗಿ ವಿನ್ಯಾಸ ಮಾಡಿಕೊಡುವಂತೆ, ಪಾರ್ಕರ್ ಕಂಪನಿಗೆ ಮನವಿ ಮಾಡಿಕೊಂಡಿದ್ದರು. ಕಂಪನಿಯು ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿತ್ತು. ಜಾನ್ ಎಫ್. ಕೆನಡಿಗೂ ಪಾರ್ಕರ್ ಪೆನ್ ಇಷ್ಟವಾಗಿತ್ತು. ಅವರು 'ಪಾರ್ಕರ್-45' ಪೆನ್ನನ್ನು ಬಳಸುತ್ತಿದ್ದರು. ಪಾರ್ಕರ್ ಸಂಸ್ಥೆ ಅವರ ಹೆಸರಿನ ಸಂಕ್ಷಿಪ್ತ ರೂಪ JFK ಎಂದು ಕೆತ್ತಿ ಅವರಿಗೆ ನೂರು ಪೆನ್ನುಗಳನ್ನು ಉಡುಗೊರೆಯಾಗಿ ನೀಡಿತ್ತು. ಕೆನಡಿ ತಮ್ಮ ಹೆಸರು ಬರೆದ ಆ ಪೆನ್ನನ್ನು ಗಣ್ಯವ್ಯಕ್ತಿಗಳಿಗೆ ನೆನಪಿನ ಉಡುಗೊರೆಯಾಗಿ ನೀಡುತ್ತಿದ್ದರು. ಕೆಲವು ಸಲ ಸಾಮಾನ್ಯರಿಗೂ ನೀಡಿ ಅಚ್ಚರಿಯುಂಟುಮಾಡುತ್ತಿದ್ದರು. ಅವರ ಜೇಬಿನಲ್ಲಿ ಆ ಸಂಸ್ಥೆಯ ಒಂದಕ್ಕಿಂತ ಹೆಚ್ಚು ಪೆನ್ನುಗಳು ಇರುತ್ತಿದ್ದವು. ಅವರ ನಂತರ ಅಧ್ಯಕ್ಷರಾದ ಲಿಂಡನ್ ಜಾನ್ಸನ್‌ಗೂ ಪಾರ್ಕರ್ ಪೆನ್ ಅಂದ್ರೆ ಪಂಚಪ್ರಾಣ. ಅವರು ಅಧ್ಯಕ್ಷರಾದ ಆರಂಭದಲ್ಲಿ ವೈಟ್ ಹೌಸಿಗೆ 60 ಸಾವಿರ ಪಾರ್ಕರ್ (ಈಸ್ಟರ್ ಬ್ರೂಕ್ ಫೌಂಟನ್ ಪೆನ್) ಪೆನ್ ಪೂರೈಸುವಂತೆ ಆದೇಶಿಸಿದ್ದರು. ಜಾನ್ಸನ್ ಅವರು ಮಹತ್ವದ ಕಡತ ಅಥವಾ ಆದೇಶಗಳಿಗೆ ಸಹಿ ಹಾಕಿದ ನಂತರ ಅದನ್ನು ತಮ್ಮ ಆಪ್ತರಿಗೆ, ಗಣ್ಯರಿಗೆ ಉಡುಗೊರೆಯಾಗಿ ನೀಡುತ್ತಿದ್ದರು. ಅವರು ಸದಾ 5 ಪಾರ್ಕರ್ ಪೆನ್ನುಗಳನ್ನು ಇಟ್ಟುಕೊಳ್ಳುತ್ತಿದ್ದರು. ಪ್ರತಿ ಸಲ ಹೊಸ ಕಡತ ಸಹಿ ಮಾಡಲು ಅವರು ಹೊಸ ಪೆನ್ನನ್ನೇ ಉಪಯೋಗಿಸುತ್ತಿದ್ದರು. ಜಾನ್ಸನ್ ಅಧಿಕಾರ ಅವಧಿಯಲ್ಲಿ ಪಾರ್ಕರ್ ಕಂಪನಿ, ಜಾನ್ ಗಿಬ್ ಎಂಬ ವಿಶೇಷ ಪ್ರತಿನಿಧಿಯನ್ನು ವೈಟ್ ಹೌಸ್ ಬೇಡಿಕೆಗಳನ್ನು ಪೂರೈಸಲೆಂದೇ ನೇಮಿಸಿತ್ತು! ಗಿಬ್‌ನನ್ನು ಜಾನ್ಸನ್ ಆಗಾಗ ಭೇಟಿ ಮಾಡಿ, ಪಾರ್ಕರ್ ಬಿಡುಗಡೆ ಮಾಡಿದ ಹೊಸ ಪೆನ್ನುಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದರು. ಅದಾದ ಬಳಿಕ ರಿಚರ್ಡ್ ನಿಕ್ಸನ್, ಗೆರಾಲ್ಡ್ ಫೋರ್ಡ್ ಮತ್ತು ಜಿಮ್ಮಿ ಕಾರ್ಟರ್, ಪಾರ್ಕರ್ ಎವರ್ ಶಾರ್ಪ್ ಪೆನ್ನನ್ನು ಬಳಸುತ್ತಿದ್ದರು. ರೊನಾಲ್ಡ್ ರೇಗನ್ ಮತ್ತು ಜಾರ್ಜ್ ಬುಷ್ 'ಕ್ರಾಸ್ ಕಂಪನಿ'ಯ ಪೆನ್ನುಗಳನ್ನು ಇಷ್ಟಪಡುತ್ತಿದ್ದರು. 2007ರಿಂದ ಪಾರ್ಕರ್ ಕಂಪನಿಯ ಪೆನ್ನುಗಳಿಗೆ ಬೇರೆ ಕಂಪನಿಗಳ ಪೆನ್ನುಗಳು ಪ್ರಬಲ ಪ್ರತಿಸ್ಪರ್ಧೆಯೊಡ್ಡಲಾರಂಭಿಸಿದವು. ಅದಾಗಿ 4 ವರ್ಷಗಳ ಬಳಿಕ 2011ರಲ್ಲಿ ಪಾರ್ಕರ್ ಸಂಸ್ಥೆ ತನ್ನ ಪ್ರಧಾನ ಕಚೇರಿಯನ್ನು ಅಮೆರಿಕದಿಂದ ಫ್ರಾನ್ಸ್‌ಗೆ ವರ್ಗಾಯಿಸಿತು. ಒಂದು ಕಾಲಕ್ಕೆ ಅಮೆರಿಕ ಅಧ್ಯಕ್ಷರ ಪ್ರೀತಿಗೆ ಪಾತ್ರವಾಗಿದ್ದ ಪಾರ್ಕರ್, ಈಗ ಅಧ್ಯಕ್ಷರ ಪೆನ್ನುಗಳ ವಸ್ತು ಸಂಗ್ರಹಾಲಯವನ್ನು ಸೇರಿದೆ. ಇಂಗ್ಲೆಂಡಿನ ರಾಣಿ ಕೂಡ 30 ವರ್ಷ ಬಳಸಿದ್ದು ಪಾರ್ಕರ್ ಪೆನ್ನುಗಳನ್ನು.

ಮೋದಿ ಸುತ್ತಲೇ ಕಾಂಗ್ರೆಸಿನ ಗಿರಕಿ!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ರಾಜಕೀಯದಲ್ಲಿ ಟೀಕೆ-ಟಿಪ್ಪಣಿ ಸಾಮಾನ್ಯ. ಆಡಳಿತ ನಡೆಸುವ ಪಕ್ಷ ಅಥವಾ ವ್ಯಕ್ತಿಯ ವಿರುದ್ಧ ಟೀಕಿಸಿಕೊಂಡೇ ಅನೇಕರು 'ದೊಡ್ಡ ದೊಡ್ಡ' ಹುದ್ದೆಗೇರಿರುವ ಅಥವಾ ಅಧಿಕಾರದಲ್ಲಿರುವ ವ್ಯಕ್ತಿಗೆ 'ಜೈ' ಎಂದುಕೊಂಡೇ ರಾಜಕೀಯದ ಹತ್ತು ಹಲವು ಮೆಟ್ಟಿಲು ಏರಿರುವ ವ್ಯಕ್ತಿಗಳನ್ನು ಇತಿಹಾಸದಲ್ಲಿ ನೋಡಬಹುದು. ರಾಜಕೀಯದ ಮೆಟ್ಟಿಲುಗಳನ್ನು ಏರಲು 'ಟೀಕಾಸ್ತ್ರ' ಎಷ್ಟು ಸಹಕಾರಿಯೋ ಅನೇಕ ಸಮಯದಲ್ಲಿ ಅಷ್ಟೇ ಮಾರಕವಾಗಲಿದೆ ಎನ್ನುವುದನ್ನೂ ಮರೆಯಬಾರದು. ಟೀಕಾಸ್ತ್ರಗಳನ್ನು ಯಾವಾಗ? ಎಷ್ಟು ಪ್ರಮಾಣದಲ್ಲಿ ಯಾವೆಲ್ಲ ವಿಷಯದ ಮೇಲೆ ಪ್ರಯೋಗಿಸಬೇಕು ಎನ್ನುವುದರ ಮೇಲೆ ರಾಜಕೀಯದ 'ಪ್ಲಸ್-ಮೈನಸ್' ನಿರ್ಧಾರವಾಗುತ್ತದೆ.

ಕಳೆದ ಒಂದೂವರೆ ದಶಕದಿಂದ ಕಾಂಗ್ರೆಸ್ ರಾಷ್ಟ್ರ ಮಟ್ಟದಲ್ಲಿ ಬಹುದೊಡ್ಡ ಹಿನ್ನಡೆ ಅನುಭವಿಸಲು ಈ ಲೆಕ್ಕಾಚಾರದಲ್ಲಿ ತಪ್ಪು ಹೆಜ್ಜೆ ಇಟ್ಟಿರುವುದೇ ಕಾರಣ ಎಂದರೆ ತಪ್ಪಾಗುವುದಿಲ್ಲ. 2014ರ ಲೋಕಸಭಾ ಚುನಾವಣೆಗೆ ಬಿಜೆಪಿ ಅಂದಿನ ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಿಸಿದ ಕ್ಷಣದಿಂದ, ಈ ಟೀಕಾಸ್ತ್ರ ಪ್ರಯೋಗದ ವಿಷಯದಲ್ಲಿ ಕಾಂಗ್ರೆಸ್ ಎಡವಿಕೊಂಡು ಬಂದಿದೆ. ಅದರಲ್ಲಿಯೂ 2014 ಹಾಗೂ 2019ರ ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿ ಮಾಡಿಕೊಂಡ ಎಡವಟ್ಟುಗಳೇ ಇಂದಿನ ಕಾಂಗ್ರೆಸ್ ಸ್ಥಿತಿಗೆ ಕಾರಣ ಎಂದರೆ ಅಚ್ಚರಿಯೇನಿಲ್ಲ.

ಹಾಗೆ ನೋಡಿದರೆ, ಹಿಂದಿನ ಎರಡು ಚುನಾವಣೆಯಲ್ಲಿ ಮಾಡಿದ್ದ ತಪ್ಪಿನಿಂದ ಎಚ್ಚೆತ್ತುಕೊಳ್ಳುವ ಬದಲು ಅದನ್ನೇ ಇನ್ನಷ್ಟು ತೀವ್ರ ಸ್ವರೂಪದಲ್ಲಿ ಮಾಡುವ ಮೂಲಕ ಸಮಸ್ಯೆಯ ಜಾಲದಿಂದ ತಪ್ಪಿಸಿಕೊಳ್ಳುವುದಕ್ಕಿಂತ, ಜಾಲದಿಂದ ಹೊರಬರಲಾಗದ ರೀತಿಯಲ್ಲಿ ಕಾಂಗ್ರೆಸಿಗರು ಸಿಲುಕಿಕೊಳ್ಳುತ್ತಿದ್ದಾರೆ. ಕಾಂಗ್ರೆಸಿಗರು ಮಾತ್ರವಲ್ಲದೇ, ಇಡೀ 'ಇಂಡಿ' ಒಕ್ಕೂಟದವರೇ ಮೋದಿ ವಿರುದ್ಧದ ಟೀಕೆಗೆ ತಮ್ಮನ್ನು ತಾವು ಸೀಮಿತಗೊಳಿಸಿಕೊಳ್ಳುವ ಮೂಲಕ ದೇಶದ ಜನರ ಮುಂದೆ ತಮ್ಮನ್ನು ತಾವು ಕೆಳಗಿಳಿಸಿಕೊಳ್ಳುತ್ತಿದ್ದಾರೆ. ಈ ಹಿಂದಿನ ಲೋಕಸಭಾ ಚುನಾವಣೆಯ 'ಮೋದಿ ವೇವ್' ಗಮನಿಸಿದರೆ, 2024ರಲ್ಲಿ ಆ ವೇವ್ ಇರಲಿಲ್ಲ ಎನ್ನುವುದನ್ನು ಬಿಜೆಪಿಗರೇ ಒಪ್ಪಿಕೊಳ್ಳುತ್ತಾರೆ. ಆದರೆ 'ಇಂಡಿ' ಒಕ್ಕೂಟದ ನಾಯಕರ ಒಂದೊಂದು ಹೇಳಿಕೆಗಳು, ಈ ವೇವ್ ಅನ್ನು ಮರುಸೃಷ್ಟಿಸುವ ರೀತಿಯಲ್ಲಿವೆ.

ಹಿಂದಿನ ಎರಡು ಅವಧಿಯ ಆಡಳಿತವು ಮೋದಿ ಅವರ ಮೂರನೇ ಅವಧಿಯಲ್ಲಿಲ್ಲ, ಸಾಫ್ಟ್ ಆಗಿದ್ದಾರೆ ಎನ್ನುವ ಮಾತುಗಳನ್ನು ಸ್ವತಃ ಬಿಜೆಪಿ ಬೆಂಬಲಿಗರೇ ಹೇಳಿಕೊಂಡು ಬಂದಿದ್ದನ್ನು ಗಮನಿಸಿದ್ದೇವೆ. ಆದರೆ ಈ ಎಲ್ಲ ಕೊಸರಾಟಗಳನ್ನು ಹೋಗಿಸಿದ್ದು, ಮೋದಿಯ ನಾಯಕತ್ವದಲ್ಲಿ ದೇಶದ ಜನರಿಗೆ 'ನಂಬಿಕೆ' ಬರುವಂತೆ ಮಾಡಿದ್ದು ಆಪರೇಷನ್ ಸಿಂದೂರ ಎಂದರೆ ತಪ್ಪಿಲ್ಲ. ಪಹಲ್ಗಾಮ್ ದಾಳಿಯ ಬಳಿಕ ಮೋದಿ ಹಾಗೂ ಕೇಂದ್ರ ಸರಕಾರ ಮೊದಲ ಎರಡು ವಾರ ನಡೆದುಕೊಂಡ ರೀತಿ, ಅನೇಕರಲ್ಲಿ ಅಸಮಾಧಾನವನ್ನು ತಂದಿತ್ತು. ನಮ್ಮ ಮೇಲೆ ದಾಳಿ ನಡೆದರೂ, 'ಶಾಂತಿಪ್ರಿಯ' ರಾಷ್ಟ್ರ ಎನ್ನುವ ಬ್ರ್ಯಾಂಡ್ ಉಳಿಸಿಕೊಳ್ಳಲು 'ಮಾತಿನಲ್ಲಿಯೇ' ಹೋರಾಟ ಮಾಡಿ ಮುಗಿಸಿದ್ದ ಈ ಹಿಂದಿನ ಅನೇಕ ಪ್ರಧಾನಿಗಳ ಸಾಲಿಗೆ ಮೋದಿಯೂ ಸೇರಿಬಿಟ್ಟರೆ? ಎನ್ನುವ ಪ್ರಶ್ನೆಗಳು ಬಲ ಪಂಥೀಯರಲ್ಲಿಯೂ ಮೂಡಿದ್ದು ಸುಳ್ಳಲ್ಲ. ಆದರೆ ಅದಾದ ಬಳಿಕ ನಡೆದ ಆಪರೇಷನ್ ಸಿಂದೂರ, ಈ ಕಾರ್ಯಾಚರಣೆಯ ಭಾಗವಾಗಿ ಪಾಕಿಸ್ತಾನದ ರಾಜಧಾನಿ ಯವರೆಗೆ ನುಗ್ಗಿ ಅಲ್ಲಿನ ವಾಯುನೆಲೆಗಳನ್ನು ಧ್ವಂಸ ಮಾಡುವ ಮೂಲಕ 'ನವಭಾರತ'ದಲ್ಲಿ ದಾಳಿಗೆ ಪ್ರತಿದಾಳಿ ನಿಶ್ಚಿತ ಎನ್ನುವ ಸಂದೇಶವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ನೀಡುವ ಮುಖಾಂತರ, ಸರಕಾರದ ಮೇಲೆ ದೇಶದೊಳಗೆ ಸಣ್ಣಕ್ಕೆ ಶುರುವಾಗಿದ್ದ ಅಸಮಾಧಾನವನ್ನು ತಣಿಸುವ ಪ್ರಯತ್ನವನ್ನು ಮೋದಿ ಸರಕಾರ ಮಾಡಿದೆ. ಇಡೀ ಕಾರ್ಯಾಚರಣೆಯ ಕ್ರೆಡಿಟ್ ಸೇನೆಗೆ ಸಲ್ಲಬೇಕು ಎನ್ನುವುದು ಸ್ಪಷ್ಟ. ಆದರೆ ಸೇನೆಗೆ ಆ ಪ್ರಮಾಣದಲ್ಲಿ 'ಅಧಿಕಾರ' ನೀಡುವ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಗಬಹುದಾದ ಸಮಸ್ಯೆಯನ್ನು ನಿಭಾಯಿಸಲು ಸಿದ್ಧವಾಗಿಯೇ ಅನುಮತಿ ನೀಡಿದ್ದು ಮೋದಿ ಸರಕಾರದ ಸಾಧನೆ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕು.

ಹಾಗೆ ನೋಡಿದರೆ, ಪಹಲ್ಗಾಮ್ ದಾಳಿ ಬಳಿಕ ನಡೆದ ಆಪರೇಷನ್ ಸಿಂದೂರದವರೆಗೆ ಇಡೀ ದೇಶ ಒಂದಾಗಿ ನಿಂತಿತ್ತು. ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆಯಿಂದ ಹಿಡಿದು ಬಹುತೇಕ ನಾಯಕರು ಕೇಂದ್ರದ ತೀರ್ಮಾನಕ್ಕೆ ನಾವೆಲ್ಲ ಬದ್ಧ ಎನ್ನುವ ಮೂಲಕ ದೇಶದ 'ಏಕತೆ'ಯನ್ನು ಸಾರಿದರು. ಅಲ್ಲಲ್ಲಿ ಸಣ್ಣ-ಪುಟ್ಟ ಹೇಳಿಕೆಗಳೂ ವಿವಾದಕ್ಕೆ ಕಾರಣವಾದರೂ, ಅದೆಲ್ಲ ಒಟ್ಟಾರೆ ಚಿತ್ರಣದಲ್ಲಿ ಸಣ್ಣ ವಿಷಯ ಎನ್ನುವುದು ಸ್ಪಷ್ಟ. ಈ ಮಟ್ಟಿಗೆ ಶತ್ರುರಾಷ್ಟ್ರದೊಂದಿಗೆ ಹೋರಾಡುವಾಗ ಕೇಂದ್ರ ಸರಕಾರಕ್ಕೆ ಆಂತರಿಕ 'ಬಲ' ಸಿಕ್ಕಿತ್ತು. ಆದರೆ ನಿಜವಾದ ವಾಗ್ಯುದ್ಧ ಶುರುವಾಗಿದ್ದೇ, 'ಕದನವಿರಾಮ'ದ ಬಳಿಕ.

ಹೌದು, ಅಮೆರಿಕ ಮಧ್ಯಸ್ಥಿಕೆಯಲ್ಲಿಯೋ ಅಥವಾ ಅಮೆರಿಕದ ಸಲಹೆ ಮೇರೆಗೋ ಪಾಕಿಸ್ತಾನದ ವಿರುದ್ಧದ ಕದನಕ್ಕೆ ಭಾರತ ಮೂರು ದಿನದ ಬಳಿಕ ವಿರಾಮ ಹೇಳಿತ್ತು. ಈ ರೀತಿಯ ಮಧ್ಯಪ್ರವೇಶ ನಿಶ್ಚಿತವೆಂದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಹಿಂದೆಯೂ ಪಾಕಿಸ್ತಾನ-ಭಾರತ ನಡುವಿನ ಯುದ್ಧಗಳ ಸಮಯದಲ್ಲಿ ಅಮೆರಿಕ ಮೂಗು ತೂರಿಸಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಪ್ರತಿ ಬಾರಿಯೂ 'ಮೂರನೇ ರಾಷ್ಟ್ರದ ಮಧ್ಯಸ್ಥಿಕೆ' ಬೇಡವೆಂದು ಭಾರತ-ಪಾಕ್ ತೀರ್ಮಾನಿಸಿದರೂ, ಅಂತಿಮವಾಗಿ ಒಂದಿಲ್ಲೊಂದು ರಾಷ್ಟ್ರಗಳು ಬರುತ್ತವೆ. ಜಿಯೋ ಪಾಲಿಟಿಕ್ಸ್‌ನಲ್ಲಿ ಈ ರೀತಿಯ ಮಧ್ಯಪ್ರವೇಶಗಳು ಸರ್ವೇಸಾಮಾನ್ಯ.

ಇಡೀ ಪ್ರಕರಣದಲ್ಲಿ ಕೇಂದ್ರದ ಬೆಂಬಲಕ್ಕೆ ಪ್ರತಿಪಕ್ಷಗಳು ನಿಂತಿದ್ದವು. ಯಾವಾಗ ಕೇಂದ್ರ ಸರಕಾರಕ್ಕೆ ಅದರಲ್ಲಿಯೂ ಮೋದಿ ನಾಯಕತ್ವಕ್ಕೆ ಕ್ರೆಡಿಟ್ ಸಿಗುತ್ತದೆ ಎನ್ನುವ ಸೂಚನೆ ಸಿಕ್ಕಿತೋ ಅಲ್ಲಿಂದ ಮೋದಿ ವಿರುದ್ಧದ ಕಾಂಗ್ರೆಸಿಗರ ಟೀಕಾಸ್ತ್ರ ಶುರುವಾಗಿದೆ. ಮೋದಿಯನ್ನು ಟಾರ್ಗೆಟ್ ಮಾಡಿ ಟೀಕಿಸುವ ಭರದಲ್ಲಿ ಕೆಲ ಕಾಂಗ್ರೆಸಿಗರು, ಭಾರತೀಯ ಯೋಧರ ಹೋರಾಟವನ್ನು ಪ್ರಶ್ನಿಸುವ ರೀತಿಯಲ್ಲಿ ಮಾತನಾಡುತ್ತಿರುವುದು ಕಾಂಗ್ರೆಸಿನ ಬಹುದೊಡ್ಡ ಸಮಸ್ಯೆಯಾಗಿದೆ. ಕಾಂಗ್ರೆಸಿನ ಕೆಲ ನಾಯಕರು, ಈ ವಿಷಯದಲ್ಲಿ ದೇಶದ ಭದ್ರತೆ, ಅಂತಾರಾಷ್ಟ್ರೀಯ ವಿಷಯ ಅಥವಾ ದೇಶದ ಏಕತೆಯ ವಿಷಯವಿದೆ ಎನ್ನುವುದಕ್ಕಿಂತ ಹೆಚ್ಚಾಗಿ, ಆಪರೇಷನ್ ಸಿಂದೂರದ ಕ್ರೆಡಿಟ್ ಮೋದಿ ತೆಗೆದುಕೊಂಡರೆ ನಮಗೆಲ್ಲ ಸಮಸ್ಯೆಯಾಗುವುದೋ ಎನ್ನುವ ಭಾವನೆಯಲ್ಲಿ ಮಾತನಾಡುತ್ತಿರುವುದು ಸ್ಪಷ್ಟ. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಈ ರೀತಿಯ ಕ್ರೆಡಿಟ್ ವಾರ್ ಸಾಮಾನ್ಯ. ಆದರೆ ಇತ್ತೀಚಿನ ದಿನದಲ್ಲಿ ಪ್ರತಿಪಕ್ಷಗಳು ಬಿಜೆಪಿಯ ಬಗ್ಗೆ ಆಲೋಚಿಸುವುದನ್ನು ಬಿಟ್ಟು, ಮೋದಿ ಸುತ್ತಲೇ ಗಿರಕಿ ಹೊಡೆಯುತ್ತಿವೆ. ಪಕ್ಷಕ್ಕಿಂತ ಹೆಚ್ಚಾಗಿ ವ್ಯಕ್ತಿಯನ್ನು ಟೀಕಿಸುವ ಅಥವಾ ವೈಯಕ್ತಿಕ ಟೀಕೆಯ ಮೂಲಕ ಜನರನ್ನು ಡೈವರ್ಟ್ ಮಾಡಬಹುದು ಎನ್ನುವ ಆಲೋಚನೆಯೇ ಪ್ರತಿಪಕ್ಷಗಳ ಬಹುದೊಡ್ಡ ಹಿನ್ನಡೆ.

ಆದರೆ ಕಾಂಗ್ರೆಸ್ ನಾಯಕರ ಈ ನಡೆ ಇದೇ ಮೊದಲಲ್ಲ. ಮೋದಿ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಬಿಜೆಪಿ ಘೋಷಿಸಿದ ದಿನದಿಂದಲೂ ಕಾಂಗ್ರೆಸಿನ ನಾಯಕರು ಮೋದಿ ಕೇಂದ್ರಿಕೃತ ಆಲೋಚನೆಯನ್ನು ಮಾಡುತ್ತಿದ್ದಾರೆ. ಅದು ಚುನಾವಣಾ ಪ್ರಚಾರವಿರಬಹುದು ಅಥವಾ ಕೇಂದ್ರ ಸರಕಾರದ ವಿಷಯದಲ್ಲಿರಬಹುದು. ಇದಕ್ಕಿಂತ ದೊಡ್ಡ ದುರಂತವೆಂದರೆ, ಕೇಂದ್ರ ಅಥವಾ ಮೋದಿ ನಾಯಕತ್ವವನ್ನು ಯಾರಾದರೂ 'ಬೆಂಬಲಿಸಿದರು' ಅದು ತಪ್ಪು ಎನ್ನುವ ಮನಸ್ಥಿತಿಗೆ ಕೆಲ ಕಾಂಗ್ರೆಸಿಗರು ಬಂದಿದ್ದಾರೆ. ತೀರಾ ಇತ್ತೀಚಿನ ಉದಾಹರಣೆ ಎಂದರೆ, ಆಪರೇಷನ್ ಸಿಂದೂರದ ವಿಷಯದಲ್ಲಿ ಶಶಿ ತರೂರ್ ಅವರು ಕೇಂದ್ರ ಸರಕಾರದ ನಡೆಯನ್ನು ಬೆಂಬಲಿಸಿ ಮಾತನಾಡಿದರು. ಅದಕ್ಕೂ ಕೆಲ ತಿಂಗಳಿಂದ ಕಾಂಗ್ರೆಸಿನ ಹಲವು ತಪ್ಪುಗಳನ್ನು ಆಂತರಿಕವಾಗಿ ಹಾಗೂ ಬಹಿರಂಗವಾಗಿ ತೋರಿಸುವ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಈ ಕಾರಣಕ್ಕೆ ಅವರನ್ನು 'ಸೈಡ್‌ಲೈನ್' ಮಾಡುವ ಪ್ರಯತ್ನವನ್ನು ಮಾಡಿದ್ದಾರೆ. ಯಾವ ಹಂತಕ್ಕೆ ಬಂದಿದೆ ಎಂದರೆ, ಪಾಕಿಸ್ತಾನದ ವಿರುದ್ಧದ ದಾಳಿಯ ಬಗ್ಗೆ ವಿದೇಶಗಳಿಗೆ ಹೋಗುವ ನಿಯೋಗಕ್ಕೆ ಶಶಿ ತರೂರ್ ಅವರ ಹೆಸರನ್ನು ನೀಡದಿರುವ ತೀರ್ಮಾನಕ್ಕೆ ಕಾಂಗ್ರೆಸ್ ಮಾಡಿತ್ತು. ಇಡೀ ದೇಶದಲ್ಲಿ ಗಾಂಧಿ ಕುಟುಂಬದ ಹೊರತಾಗಿಯೂ ಯಾರಿಗೆ ಕ್ರೆಡಿಟ್ ಕೊಟ್ಟರೂ, ಅದನ್ನು ವಿರೋಧಿಸಬೇಕು ಎನ್ನುವ ಸ್ಥಿತಿ ತಲುಪಿರುವುದು ಕಾಂಗ್ರೆಸ್‌ನ ಇಂದಿನ ಸ್ಥಿತಿಗೆ ಕಾರಣ ಎಂದರೆ ತಪ್ಪಾಗುವುದಿಲ್ಲ.

ಹಾಗೆ ನೋಡಿದರೆ, ಮೋದಿ ವಿರುದ್ಧದ ಕಾಂಗ್ರೆಸಿಗರ ಈ ಟೀಕಾಸ್ತ್ರದಿಂದ ಅವರ ಪಕ್ಷಕ್ಕೆ ಬಹುದೊಡ್ಡ ನಷ್ಟವಾಗಿರುವುದು ಇದೇ ಮೊದಲೇನಲ್ಲ. ಈ ಹಿಂದೆ 2014ರಲ್ಲಿ 'ಚಾಯ್ ವಾಲಾ' ಎಂದು ಟೀಕಿಸಿ ಬಹುದೊಡ್ಡ ಹೊಡೆತ ತಿಂದರು. 2019ರಲ್ಲಿಯೂ ಇದೇ ರೀತಿಯ ಹತ್ತಾರು ಟೀಕೆಗಳನ್ನು ಮೋದಿ ವಿರುದ್ಧ ಮಾಡಿಕೊಂಡೇ ಬಂದರು. ಕಾಂಗ್ರೆಸಿನ ನಾಯಕರು ಮಾಡಿದ ಬಹುತೇಕ ಟೀಕೆಗಳನ್ನೇ ಮೋದಿ ಆ್ಯಂಡ್ ಟೀಂ 'ಚುನಾವಣಾ ಅಭಿಯಾನ'ವನ್ನಾಗಿ ಮಾಡಿಕೊಂಡಿರುವುದನ್ನು ಇಡೀ ದೇಶ ನೋಡಿದೆ. ಕಾಂಗ್ರೆಸಿನಲ್ಲಿ, ಗಾಂಧಿ ಕುಟುಂಬವನ್ನು 'ಮೆಚ್ಚಿಸುವ' ಭರದಲ್ಲಿ ಮೋದಿ ಸೆಂಟ್ರಿಕ್ ಟೀಕೆಗಳನ್ನು ಮಾಡಿಕೊಳ್ಳುವ ಮನಸ್ಥಿತಿಯ ಅನೇಕ ನಾಯಕರಿದ್ದಾರೆ. ಈ ಮನಸ್ಥಿತಿಯೇ ಕಾಂಗ್ರೆಸ್‌ಗೆ ಪ್ರತಿ ಚುನಾವಣೆ ವೇಳೆ ಮಾರಕವಾಗುತ್ತಿದೆ.

ಕರ್ನಾಟಕ ಸೇರಿದಂತೆ ಕೆಲ ರಾಜ್ಯಗಳನ್ನು ಹೊರತುಪಡಿಸಿ, ಇನ್ನುಳಿದ ರಾಜ್ಯಗಳಲ್ಲಿ ಅಸ್ತಿತ್ವದ ಹುಡುಕಾಟದಲ್ಲಿರುವ ಕಾಂಗ್ರೆಸ್ ನಾಯಕರು, 'ಮೋದಿ' ಸುತ್ತ ತಮ್ಮ ದಾಳಿಯನ್ನು ಸೀಮಿತಗೊಳಿಸದೇ ಬಿಜೆಪಿ ಪಕ್ಷದ ಲೋಪದೋಷಗಳನ್ನು ಎತ್ತಿ ತೋರಿಸಬೇಕಿದೆ. ಕೇಂದ್ರ ಸರಕಾರವೆಂದರೆ, ಕೇವಲ ಮೋದಿ ಎನ್ನುವ ಸ್ಥಿತಿಯನ್ನು ಸೃಷ್ಟಿಸುವ ಮೂಲಕ ಕಾಂಗ್ರೆಸ್ ಪಕ್ಷವೇ ಬಿಟ್ಟಿ ಪ್ರಚಾರವನ್ನು ಪರೋಕ್ಷವಾಗಿ ನೀಡುತ್ತಿದೆ. ಹಾಗೆ ನೋಡಿದರೆ, ಕಾಂಗ್ರೆಸಿನ ಬಹುತೇಕ ನಾಯಕರು ಆಪರೇಷನ್ ಸಿಂದೂರವನ್ನು ವಿರೋಧಿಸಿದ್ದು ಮೋದಿ 'ಕ್ರೆಡಿಟ್' ಪಡೆಯುತ್ತಾರೆ ಎನ್ನುವ ಆತಂಕದಿಂದಲೇ ಹೊರತು ಇದರಲ್ಲಿ ಇನ್ಯಾವ ಉದ್ದೇಶ ವಿರಲಿಲ್ಲ. ಇನ್ನಾದರೂ ಮೋದಿಯನ್ನು ವಿರೋಧಿಸುವ ಭರದಲ್ಲಿ ದೇಶದ ಜನರಿಗೆ 'ಕಿರಿಕಿರಿ'ಯಾಗುವ ಹೇಳಿಕೆಗಳನ್ನು ನೀಡುವುದನ್ನು ಬಿಡಬೇಕು. ಇದನ್ನು ಮಾಡದೇ, ಕಾಂಗ್ರೆಸಿನ ಅಸ್ತಿತ್ವ ಅಥವಾ ಗಾಂಧಿ ಕುಟುಂಬದ ಅಸ್ತಿತ್ವವನ್ನು ಉಳಿಸುವ ಕಾರಣಕ್ಕೆ, ಮೋದಿಯನ್ನೇ ಟೀಕಿಸುತ್ತಾ ಹೋದರೆ ಅದರ ನೇರ ಲಾಭ ಬಿಜೆಪಿಗೆ ಹೊರತು, ಕಾಂಗ್ರೆಸ್‌ಗಲ್ಲ ಎನ್ನುವುದನ್ನು ಇನ್ನು ಮುಂದಾದರೂ ನಾಯಕರು ಅರ್ಥ ಮಾಡಿಕೊಳ್ಳಬೇಕಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ತಜ್ಞರ ಸಮಿತಿ ರಚಿಸಿ

ಕಿರುತೆರೆ ಹಾಸ್ಯ ಕಲಾವಿದ ರಾಕೇಶ್ ಪೂಜಾರಿ ಅವರ ಹಠಾತ್ ಸಾವಿನ ಸುದ್ದಿ ಮಾಸುವ ಮುನ್ನವೇ, ಮೊನ್ನೆ ಬಾಗಲಕೋಟೆಯಲ್ಲಿ ತಾಳಿ ಕಟ್ಟಿದ ಕೆಲ ಹೊತ್ತಿನಲ್ಲೇ ವರನು ಕುಸಿದುಬಿದ್ದು ಸಾವನ್ನಪ್ಪಿದ್ದಾನೆ. ಇವು ನಿಜಕ್ಕೂ ದಿಗ್ಭ್ರಮೆ ಮೂಡಿಸುವ ಸಂಗತಿಗಳು. ಕಾರಣ, ಹದಿಹರೆಯದವರೇ ಹಠಾತ್ ಸಾವಿಗೆ ಈಡಾಗುತ್ತಿರುವುದರ ಎರಡು ನಿದರ್ಶನಗಳಿವು. ಇಂಥ ಸಾವುಗಳಿಗೆ ಆಧುನಿಕ ಜೀವನಶೈಲಿ, ಆಹಾರಕ್ರಮದಂಥ ಕಾರಣಗಳು, ಕರೋನಾ ಲಸಿಕೆಯ ಪರಿಣಾಮದಂಥ ಗುಮಾನಿಯೂ ಇವೆ. ಅದರಲ್ಲೂ, ಡಿಜೆ ಹಾಡಿಗೆ ನರ್ತಿಸುತ್ತಿರುವಾಗಲೇ ಕೆಲವರು ಕುಸಿದುಬಿದ್ದ ಪ್ರಕರಣಗಳ ಪಾಲೇ ಹೆಚ್ಚು. ಡಿಜೆ ಸೌಂಡ್‌ಗಳ ಶಬ್ದವು ಅತಿರೇಕದ ಮಟ್ಟದಲ್ಲಿರುವುದೂ ಇದಕ್ಕೆ ಕಾರಣವಿರಬಹುದೇ? ಇಂಥ ಹಠಾತ್ ಸಾವುಗಳ ಕುರಿತು ತಜ್ಞರು ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಿದೆ ಮತ್ತು ಇಂಥ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

- ಮುರುಗೇಶ ಡಿ., ದಾವಣಗೆರೆ

ಇದು ಉತ್ತಮ ತಂತ್ರ

ಇ-ಖಾತಾ ವಿಲೇವಾರಿಯಲ್ಲಿ ಅಧಿಕಾರಿಗಳು ಯಾರದೋ ಒತ್ತಡ ಅಥವಾ ಪ್ರಭಾವಕ್ಕೆ ಮಣಿದು ಮನಸ್ಸಿಗೆ ಬಂದಂತೆ ವರ್ತಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಇದಕ್ಕೆ ಕಡಿವಾಣ ಹಾಕಲು ಬಿಬಿಎಂಪಿಯು 'ಫಸ್ಟ್ ಇನ್, ಫಸ್ಟ್ ಔಟ್' ಎನ್ನುವ ನೂತನ ಕ್ರಮವನ್ನು ಜಾರಿಗೆ ತಂದಿರುವುದು ಉತ್ತಮ ನಡೆ ಎನ್ನಬಹುದು. ಪ್ರಭಾವಿ ವ್ಯಕ್ತಿಗಳು ಕಂದಾಯ ಉಪವಿಭಾಗದ ಅಧಿಕಾರಿಗಳ ಮೇಲೆ ಒತ್ತಡ ಹೇರಿ ತಮ್ಮ ಇ-ಖಾತಾಗೆ ಅನುಮೋದನೆ ಪಡೆಯುತ್ತಿದ್ದರು. ಇದರಿಂದಾಗಿ ಮುಂಗಡವಾಗಿ ಸಲ್ಲಿಸಿದ್ದ ಅರ್ಜಿದಾರರಿಗೆ ವಿಳಂಬ ಆಗುತ್ತಿತ್ತು. ಆದರೆ ಈ ಹೊಸ ಕ್ರಮದಿಂದ ಮೊದಲು ಬಂದ ಅರ್ಜಿಗಳಿಗೆ ಅನುಮೋದನೆ ನೀಡದೆ ಮುಂದಿನ ಅರ್ಜಿಯನ್ನು ಪರಿಶೀಲನೆ ಮಾಡುವುದಾಗಲೀ ವಿಲೇವಾರಿ ಮಾಡುವುದಾಗಲೀ ಸಾಧ್ಯವಾಗುವುದಿಲ್ಲ. ಇನ್ನು ಮುಂದಿನ ದಿನಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪ್ರಶ್ನೆ ಪತ್ರಿಕೆಗಳ ಮೌಲ್ಯಮಾಪನದಂತೆ ಬೇರೆ ಒಂದು ವಿಭಾಗದ ಅರ್ಜಿಗಳಿಗೆ ಇನ್ನೊಂದು ವಿಭಾಗದ ಅಧಿಕಾರಿಗಳು ಅನುಮೋದನೆ ನೀಡುವ ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ಹಂಚಿಕೊಂಡಿದ್ದಾರೆ. ಇದು ಈ ಪ್ರಕ್ರಿಯೆಯ ವಿಳಂಬಕ್ಕೆ ಕಡಿವಾಣ ಹಾಕಲು ಉತ್ತಮ ತಂತ್ರ ಎನ್ನಬಹುದು. ಹಾಗಾಗಿ ಇದನ್ನು ಬೇಗ ಅನುಷ್ಠಾನಕ್ಕೆ ತಂದರೆ ಒಳ್ಳೆಯದು.

- ಕೆ.ಎನ್.ರಂಗನಾಥ್, ಉಜಿರೆ

ನಿಜಕ್ಕೂ 'ರಸದೌತಣ'ವೇ..

'ಮಬ್ಬಾಗಿ ಮುಸುಕಿತ್ತು ಮಠದೊಳಗಿನ ಮಾರ್ಜಾಲ' ಶೀರ್ಷಿಕೆಯನ್ನುಳ್ಳ 'ರಸದೌತಣ' ಅಂಕಣಬರಹ (ಮೇ 18) ಸೊಗಸಾಗಿತ್ತು. ಇದಕ್ಕೂ ಮುನ್ನ ಶ್ರಮಜೀವಿಯ ಕಥಾನಕವನ್ನು ಒಳಗೊಂಡು 6 ಕಂತುಗಳಲ್ಲಿ ಮೂಡಿಬಂದ ಬರಹವೂ ಸಾಕಷ್ಟು ರೋಚಕತೆಯಿಂದ ಕೂಡಿತ್ತು. ಈ ಬಾರಿಯ ವಿಷಯ-ವಸ್ತುವೂ ಪ್ರಸ್ತುತ ಕುತೂಹಲಕರ ಘಟ್ಟದಲ್ಲಿ ನಿಂತಿದ್ದು ಮುಂದಿನ ಭಾಗಕ್ಕಾಗಿ ಕಾಯುವಂತೆ ಮಾಡಿದೆ. ಅಂಕಣ ಬರಹವನ್ನು ಧಾರಾವಾಹಿ ಸ್ವರೂಪದಲ್ಲಿ ನೀಡುವ ಈ ಪ್ರಯೋಗ ಖುಷಿ ಕೊಟ್ಟಿದೆ. ಇಂಥ ಬರಹಗಳು ಪತ್ರಿಕೆಯಲ್ಲಿ ಹೆಚ್ಚೆಚ್ಚು ಮೂಡಿಬರಲಿ.

- ರಮೇಶ್ ನಾಯಕ್, ಚಿಕ್ಕಮಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಒತ್ತಾಸೆಯಾದವರಿಗೆ ನಾವೂ ಹೆಗಲಾಗಬೇಕಲ್ಲವೇ?

ನಮಗೆ ನೆರವಾಗುತ್ತಲೇ ಬಂದಿರುವ ರಷ್ಯಾ ಮತ್ತು ಇಸ್ರೇಲ್‌ಗೆ ನಾವು ನೇರವಾಗಿ ಇಂದಿಗೂ ಬೆಂಬಲ ಸೂಚಿಸಿಲ್ಲ. ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧವಾದಾಗ ಭಾರತ ತಟಸ್ಥವಾಗಿ ಉಳಿದುಕೊಂಡಿತು. ಮಾಧ್ಯಮಗಳ ಮುಂದೆ ಸ್ವತಃ ಮೋದಿಯವರು ಇದು ಯುದ್ಧದ ಸಮಯವಲ್ಲ ಎಂದು ಹೇಳಿಕೆ ನೀಡಿದರು. ಅಮೆರಿಕ ಬೇಡ ಎಂದರೂ ರಷ್ಯಾದಿಂದ ನಾವು ತೈಲ ಕೊಂಡದ್ದು ಬಿಟ್ಟರೆ ನಾವು ಅವರಿಗೆ ಇನ್ಯಾವ ರೀತಿಯ ಸಹಾಯವನ್ನೂ ಬಾಯಿಮಾತಿಗೂ ಮಾಡಲಿಲ್ಲ. ಇನ್ನು ಇಸ್ರೇಲ್ ಮತ್ತು ಗಾಜಾದಲ್ಲಿನ ಹಮಾಸ್ ವಿರುದ್ಧದ ಯುದ್ಧದಲ್ಲಿ ಕೂಡ ನಾವು ಇಸ್ರೇಲ್ ಪರ ಮಾತನಾಡದೆ ಸುಮ್ಮನೆ ಕುಳಿತೆವು.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಈ ಲೇಖನವನ್ನ ಬರೆಯುತ್ತಿರುವ ಸಮಯದಲ್ಲಿ ನಮ್ಮ ದೇಶದಲ್ಲಿ ಯುದ್ಧದ ಕಾವು ಇನ್ನೂ ಇಳಿದಿಲ್ಲ. ನಾವು ಪಾಕಿಸ್ತಾನಕ್ಕೆ ಬಹಳ ಪೆಟ್ಟು ಕೊಟ್ಟಿದ್ದೇವೆ. ಆದರೂ ಆ ದೇಶ 'ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎನ್ನುವಂತೆ ಜಾಗತಿಕ ಮಟ್ಟದಲ್ಲಿ ಪೋಸ್ ಕೊಡುತ್ತಾ, 'ನಾವು ಯುದ್ಧದಲ್ಲಿ ಗೆದ್ದಿದ್ದೇವೆ' ಎಂದು ಬೀಗುತ್ತಿದೆ. ಇಂದು ಜಗತ್ತಿಗೆಲ್ಲಾ ವಾಸ್ತವದ ಅರಿವಾಗಿದೆ. ಯಾವುದೇ ದೇಶಕ್ಕೂ ಯುದ್ಧ ಎಂದರೆ ಒಂದು ನಷ್ಟದ ಬಾಬತ್ತು. ಹಣ ಖರ್ಚಾಗುವುದನ್ನು ತಪ್ಪಿಸಲು ಆಗುವುದಿಲ್ಲ. ಹಾಗೆಯೇ ಜೀವಹಾನಿಯನ್ನು ಕೂಡ ತಪ್ಪಿಸಲಾಗುವುದಿಲ್ಲ. ವಸ್ತುಸ್ಥಿತಿ ಹೀಗಿದ್ದೂ , ಈ ಯುದ್ಧದಿಂದ ಭಾರತಕ್ಕೆ ಲಾಭವಾಗಿದೆ ಎಂದು ಹೇಳಬಹುದು. ಭಾರತದಲ್ಲಿ ತಯಾರಾದ ಕ್ಷಿಪಣಿಗಳ ತಾಕತ್ತು ಜಾಗತಿಕ ಮಟ್ಟದಲ್ಲಿ ಅನಾವರಣವಾಗಿದೆ. ಅದೇ ಸಮಯದಲ್ಲಿ ಚೀನಾ ಮತ್ತು ಅಮೆರಿಕದ ಡಿಫೆನ್ಸ್ ಸರಕುಗಳು 'ಢಮ್' ಎನ್ನುವಲ್ಲಿ ವಿಫಲವಾಗಿ 'ಠುಸ್' ಎಂದದ್ದು ಜಗತ್ತಿಗೆ ಕೇಳಿಸಿದೆ. ರಷ್ಯಾ ಮತ್ತು ಇಸ್ರೇಲ್ ತಂತ್ರಜ್ಞಾನ ಭಾರತಕ್ಕೆ ಈ ಯುದ್ಧದಲ್ಲಿ ಬಹಳಷ್ಟು ಸಹಾಯ ಮಾಡಿವೆ. ನೆಲದಲ್ಲಿಟ್ಟ ಸಣ್ಣ ಉಪಕರಣಗಳು ಆಕಾಶದಲ್ಲಿ ಬರುವ ಕ್ಷಿಪಣಿಗಳನ್ನು ಗುರುತಿಸಿ ಅವುಗಳನ್ನು ಗಾಳಿಯಲ್ಲೇ ಹೊಡೆದು ಉರುಳಿಸುವಲ್ಲಿ ಯಶಸ್ವಿಯಾಗಿವೆ. ಭಾರತದ ಸಂಕಷ್ಟದ ಸಮಯದಲ್ಲಿ ಸದಾ ನಿಲ್ಲುವ ಈ ಎರಡು ದೇಶಗಳನ್ನು ನಾವು ಮರೆಯಬಾರದು. ಒಂದು ದೀರ್ಘಕಾಲದ ಹಿತೈಷಿ ರಷ್ಯಾ. ಇನ್ನೊಂದು ಭಾರತೀಯರನ್ನು, ಹಿಂದೂಗಳನ್ನೂ ಇನ್ನಿಲ್ಲದೆ ಪ್ರೀತಿಸುವ ಇಸ್ರೇಲ್. ಭಾರತದ ಪರವಿದ್ದೇವೆ ಎಂದು ಘೋಷಣೆ ಮಾಡಿದ್ದ ಅಮೆರಿಕದ ದ್ವಿಮುಖ ನೀತಿ ಇಂದಿಗೆ ಎಲ್ಲರಿಗೂ ಗೊತ್ತಾಗಿದೆ. ಅಮೆರಿಕ ಒಂದು ಲಾಭಕೋರ ದೇಶ. ತನ್ನ ದೇಶಕ್ಕೆ ಮತ್ತು ಅಲ್ಲಿನ ಬಂಡವಾಳಶಾಹಿಗಳಿಗೆ ಲಾಭವಾಗದ ಯಾವ ಕಾರ್ಯವನ್ನೂ ಆ ದೇಶ ಮಾಡುವುದಿಲ್ಲ. ಇಂದಿಗೆ ಆ ದೇಶವನ್ನು ನಿಜಾರ್ಥದಲ್ಲಿ ಆಳುತ್ತಿರುವುದು ಬಂಡವಾಳಶಾಹಿಗಳು. ಟ್ರಂಪ್ ಸ್ವತಃ ಒಬ್ಬ ವ್ಯಾಪಾರಿ. ಎಲಾನ್ ಮಸ್ಕ್ ಆತನಿಗಿಂತ ಒಂದು ಕೈ ಮೇಲು. ಹೀಗಾಗಿ ಟ್ರಂಪ್ 'ಕಿಂಗ್' ಆದರೆ, ಎಲಾನ್ ಮಸ್ಕ್ 'ಕಿಂಗ್ ಮೇಕರ್'.

ಅಮೆರಿಕ ದೇಶವನ್ನು ನಾವು ಪಕ್ಕಕ್ಕಿಟ್ಟು ನಮಗೆ ಮಿತ್ರರಾಗಿರುವ ರಷ್ಯಾ ಮತ್ತು ಇಸ್ರೇಲ್ ಬಗ್ಗೆ ಒಂದಷ್ಟು ಗಮನಹರಿಸೋಣ. ಜಗತ್ತಿನ ಬಹುತೇಕ ದೇಶಗಳನ್ನ ನೋಡಿ, ಎಲ್ಲಾ ದೇಶಗಳೂ ನಾಲ್ಕು ಅಥವಾ ಐದು ವರ್ಷಕ್ಕೆ ಹೊಸ ನಾಯಕನನ್ನ ಆರಿಸಬೇಕು. ಇಲ್ಲವೇ ಹಳೆಯ ನಾಯಕನಲ್ಲಿ ಮತ್ತೆ ವಿಶ್ವಾಸ ವ್ಯಕ್ತಪಡಿಸಬೇಕು. ಆದರೆ ಜಗತ್ತಿನಲ್ಲಿ ಎರಡು ದೇಶಗಳಿವೆ, ಅವುಗಳಿಗೆ ಇಂಥ ಚಿಂತೆ ಇಲ್ಲ. ಒಂದು ಚೀನಾ, ಜಿನ್‌ಪಿಂಗ್ ಬದುಕಿರುವವರೆಗೆ ಅವರೇ ಅಧ್ಯಕ್ಷ. ಎರಡು ರಷ್ಯಾ, ಇಲ್ಲಿ 2036ರವರೆಗೆ ಪುಟಿನ್ ಅವರನ್ನ ಅಲುಗಾಡಿಸಲು ಯಾರಿಂದಲೂ ಸಾಧ್ಯವಿಲ್ಲ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಜಗತ್ತು ಪೂರ್ತಿ ಮುಂದಿನ ನಾಲ್ಕು ಅಥವಾ ಐದು ವರ್ಷದ ನಂತರವೇನು? ಎನ್ನುವುದು ತಿಳಿಯದೆ ಇರುತ್ತದೆ. ಆದರೆ ಇವೆರಡು ದೇಶಗಳಲ್ಲಿ ಮಾತ್ರ ಅಷ್ಟರಮಟ್ಟಿನ ಸ್ಥಿರತೆಯಿದೆ. ಇದರರ್ಥ ಬಹಳ ಸರಳ. ಜಗತ್ತಿನಲ್ಲಿ ಚೀನಾ ಮತ್ತು ರಷ್ಯಾ ದೇಶಗಳು ಮಾತ್ರ ದೂರಗಾಮಿ ಚಿಂತನೆ ಅಥವಾ ಪ್ಲಾನ್ ಮಾಡಬಲ್ಲವು; ಉಳಿದಂತೆ ಬೇರೆ ದೇಶಗಳು ಶಾರ್ಟ್ ಟರ್ಮ್ ಪ್ಲಾನ್ ಮಾತ್ರ ಮಾಡಬಲ್ಲವು. ಹೀಗಾಗಿ ಚೀನಾ ಮತ್ತು ರಷ್ಯಾ ಮುಂದಿನ 20/30/40 ವರ್ಷಗಳಿಗೆ ಪ್ಲಾನ್ ಮಾಡುತ್ತಿವೆ. ಇದು ಹೀಗೇ ಆಗಬೇಕು ಎನ್ನುವ ನೀಲನಕ್ಷೆ ಅವರ ಬಳಿಯಿದೆ. ಅಮೆರಿಕ ಮತ್ತು ಯುರೋಪು ಹಳೆಯ ಆಟಗಾರರು, ಅವರನ್ನ ಚೀನಾ ಮತ್ತು ರಷ್ಯಾ ಯಾವಾಗಲೋ ಪರದೆಯ ಆಚೆಗೆ ಸರಿಸಿಯಾಗಿದೆ. ಇದರಲ್ಲಿ ಚೀನಾ ಅದೆಷ್ಟೇ ಮುಂದುವರಿದರೂ ಭಾರತಕ್ಕೆ ಕವಡೆ ಕಾಸಿನ ಲಾಭವಿಲ್ಲ. ಹೀಗಾಗಿ ಅದನ್ನು ಕೂಡ ಬದಿಗಿರಿಸೋಣ. ರಷ್ಯಾ, 2036ರವರೆಗೆ ಭಾರತಕ್ಕೆ ನಿಜಕ್ಕೂ ಮಿತ್ರನಾಗಿ ಉಳಿಯಲಿದೆ. ಆ ನಂತರದ ಕಥೆ ಕೂಡ ವಿಭಿನ್ನವಾಗಿರುವುದಿಲ್ಲ ಎಂದು ಆಶಿಸೋಣ. ಭಾರತಕ್ಕೆ ಸಂಕಷ್ಟ ಎಂದಾಗೆಲ್ಲಾ ಓಡಿ ಬರುವ ದೇಶ ರಷ್ಯಾ.

ಇಸ್ರೇಲ್ ಎನ್ನುವ ಪದ ಎಷ್ಟು ಪವರ್‌ಫುಲ್ ಅಂತ ಹಲವು ಸಲ ಅನ್ನಿಸಿದೆ. ಜಗತ್ತಿನಲ್ಲಿ ಇರುವ ನೂರಾರು ದೇಶಗಳಲ್ಲಿ ಇಸ್ರೇಲ್ ಒಂದು! ಆದರೆ ನೂರರಲ್ಲಿ ಒಂದಾಗದೆ ಉಳಿದದ್ದು ಜಗತ್ತಿನಲ್ಲಿ ಅದಕ್ಕೆ ಆ ಮಟ್ಟದ ಕೀರ್ತಿ ತಂದುಕೊಟ್ಟಿದೆ ಎನ್ನಬಹುದು. ಇಸ್ರೇಲ್ ಅಂದಾಕ್ಷಣ ಸಾಮಾನ್ಯವಾಗಿ ಎಲ್ಲರ ಮನಸ್ಸಿನಲ್ಲಿ ನೆನಪು ಬರುವುದು ಪ್ಯಾಲೇಸ್ತೀನ್‌ನವರು ಮಾಡುವ ಒಂದು ದಾಳಿಗೆ ಉತ್ತರವಾಗಿ ಇವರು ಮಾಡುವ ಎರಡು ಅಥವಾ ಮೂರು ಮರುದಾಳಿಗಳು. ಇಸ್ರೇಲಿಗಳು ತಮ್ಮ ಮೇಲೆ ಆದ ಆಕ್ರಮಣಕ್ಕೆ ಹುಲುಬುತ್ತಾ ಅಥವಾ ಶೋಕ ಆಚರಿಸುತ್ತಾ ಕೂರುವ ಜಾಯಮಾನದವರಲ್ಲ. ದಾಳಿಗೆ ವಿರುದ್ಧವಾಗಿ ಅದಕ್ಕಿಂತ ಹೆಚ್ಚಿನ ಪ್ರಮಾಣದ ದಾಳಿ ಮಾಡುವುದು ಜಗತ್ತಿಗೆ ಇಸ್ರೇಲ್ ಬಗ್ಗೆ ತಿಳಿದಿರುವ ಅತಿ ಸಾಮಾನ್ಯ ವಿಷಯ. ಇಸ್ರೇಲ್ ತನ್ನ ಸುತ್ತ ಇರುವ ದೇಶಗಳೊಂದಿಗೆ ಒಳ್ಳೆಯ ಸಂಬಂಧ ಹೊಂದಿಲ್ಲ. ಇಸ್ರೇಲ್ ಸುತ್ತ ಲೆಬನಾನ್, ಸಿರಿಯಾ, ಸೌದಿ ಅರೇಬಿಯಾ, ಪ್ಯಾಲೇಸ್ತೀನ್, ಜೋರ್ಡಾನ್, ಈಜಿಪ್ಟ್ ದೇಶಗಳಿವೆ. ಇವೆಲ್ಲಾ ಮುಸ್ಲಿಂ ದೇಶಗಳು. ಈ ಎಲ್ಲಾ ದೇಶಗಳಿಗೂ ಇಸ್ರೇಲ್ ಎಂದರೆ ರಕ್ತ ಕುದಿಯುತ್ತದೆ. ಅದಕ್ಕೆ ಕಾರಣ 'ಇಸ್ರೇಲ್ ಇರುವ ಜಾಗ ನಮ್ಮದು, ಇಸ್ರೇಲ್‌ಗೆ ಸೇರಿದ್ದೇ ಅಲ್ಲ' ಎನ್ನುವ ಬಹಳ ಹಳೆಯ ವಾದ. ಹೀಗಾಗಿ ಇಸ್ರೇಲ್ ಸದಾ ಎಚ್ಚರದಿಂದ ಇರಬೇಕಾದ ಪರಿಸ್ಥಿತಿಯಲ್ಲಿದೆ. ಸದಾ ಒಂದಲ್ಲ ಒಂದು ಆಕ್ರಮಣಗಳಿಗೆ ಇಸ್ರೇಲ್ ಗುರಿಯಾಗುತ್ತಲೇ ಇರುತ್ತದೆ. ಇಸ್ರೇಲ್‌ಗೆ ನೀವು ಭೇಟಿ ಕೊಟ್ಟಿದ್ದೆ ಆದರೆ ಅಲ್ಲಿ ಅಘೋಷಿತ ಯುದ್ಧದ ಪರಿಸರ ಇರುವುದು ನಿಮ್ಮ ಅರಿವಿಗೆ ಬಂದೀತು. ಹಾಗೆಂದು ಜನ ಭಯಭೀತರಾಗಿದ್ದಾರೆ ಎಂದುಕೊಂಡರೆ ಅದು ತಪ್ಪು. ಜನ ಸಾಮಾನ್ಯ ರೀತಿಯಲ್ಲಿ ತಮ್ಮ ಜೀವನ ನಡೆಸುತ್ತಾ ಇರುತ್ತಾರೆ. ಜೋರಾಗಿ ಸೈರನ್ ಕೂಗುತ್ತದೆ. ಆ ಸೈರನ್ ಯುದ್ಧ ಅಥವಾ ಆಪತ್ತು ಎನ್ನುವ ಸಂಕೇತ. ಜನ ಇಂಥ ಸೈರನ್‌ಗೆ ಹೊಂದಿಕೊಂಡಿದ್ದಾರೆ. ಅಲ್ಲಿ ಪ್ಯಾನಿಕ್ ಅನ್ನುವುದು ಇಲ್ಲ. ನಿಮ್ಮ ಪಕ್ಕದಲ್ಲಿ ಬೀಚ್‌ನಲ್ಲಿ ಮಲಗಿದ್ದ ಪುರುಷ ಅಥವಾ ಮಹಿಳೆ ಕೆಲವು ನಿಮಿಷಗಳಲ್ಲಿ ಸೈನಿಕರಾಗಿ ಬದಲಾಗುತ್ತಾರೆ. ಪ್ರವಾಸಿಗನಿಗೆ 'ಕೀಪ್ ಯುವರ್ ಕೂಲ್', 'ಎಲ್ಲಾ ಕಂಟ್ರೋಲ್‌ನಲ್ಲಿದೆ' ಎನ್ನುವ ತಣ್ಣನೆಯ ಭಾವನೆ ನೀಡುತ್ತಾರೆ .

'ರೋತ್ಸ್ ಚೈಲ್ಡ್' ಎನ್ನುವ ಯಹೂದಿ ಸಂಸ್ಥೆ ಮೂಲಭೂತವಾಗಿ ಜರ್ಮನಿ, ಫ್ರಾನ್ಸ್ ಮತ್ತು ಇಂಗ್ಲೆಂಡ್‌ನಲ್ಲಿ ಬಹಳ ಹಿಡಿತ ಹೊಂದಿದೆ. ಆರ್ಥಿಕ ವಲಯದಲ್ಲಿ ಇದು ಎಷ್ಟು ಪ್ರಬಲ ಸಂಸ್ಥೆ ಎಂದರೆ ಜಗತ್ತಿನ ಹಿರಿಯಣ್ಣ ಅಮೆರಿಕದ ಪ್ರೆಸಿಡೆಂಟ್ ಯಾರಾಗಬೇಕು ಎನ್ನುವುದನ್ನ ಕೂಡ ನಿರ್ಧರಿಸುವಷ್ಟು. ಬಹುತೇಕ ಎಲ್ಲಾ ಮುಖ್ಯ ದೇಶಗಳ ಸೆಂಟ್ರಲ್ ಬ್ಯಾಂಕ್‌ನಲ್ಲಿ ಇವರು ಪರೋಕ್ಷ ಅಥವಾ ಅಪರೋಕ್ಷವಾಗಿ ಹಿಡಿತ ಹೊಂದಿದ್ದಾರೆ ಎನ್ನುವುದು ಆರ್ಥಿಕವಲಯದಲ್ಲಿ ಆಗಾಗ್ಗೆ ಪಿಸುಗುಡುವ ವಿಷಯ. ಬೆಂಕಿಯಿಲ್ಲದೆ ಖಾಲಿ ಹೊಗೆ ಹೇಗೆ ತಾನೇ ಬಂದಿತು? ಹೀಗಾಗಿ ಅಮೆರಿಕ ಒಂದೇ ಅಲ್ಲದೆ ಜಗತ್ತಿನ ಮುಖ್ಯ ದೇಶಗಳ ಹಣಕಾಸು ಆಟವನ್ನ ನಿಯಂತ್ರಿಸುವುದು ರೋತ್ಸ್ ಚೈಲ್ಡ್ ಎನ್ನುವ ಯಹೂದಿ ಸಂಸ್ಥೆ. ಇಂಥ ಯಹೂದಿಗಳಿಗೆ ಭಾರತವೆಂದರೆ ಅತೀವ ಪ್ರೀತಿ. ಹೀಗಾಗಿ ಭಾರತದ ಮೇಲೆ ಆಕ್ರಮಣವಾದಾಗಲೆಲ್ಲಾ ಅವರು ನಮಗೆ ಬೆಂಬಲ ಸೂಚಿಸುತ್ತಾ ಬಂದಿದ್ದಾರೆ.

ಗಮನಿಸಿ- ಇಷ್ಟು ಸಹಾಯಮಾಡುವ ರಷ್ಯಾ ಮತ್ತು ಇಸ್ರೇಲ್‌ಗೆ ನಾವು ನೇರವಾಗಿ ಇಂದಿಗೂ ಬೆಂಬಲ ಸೂಚಿಸಿಲ್ಲ. ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧವಾದಾಗ ಭಾರತ ತಟಸ್ಥವಾಗಿ ಉಳಿದುಕೊಂಡಿತು. ಮೀಡಿಯಾ ಮುಂದೆ ಸ್ವತಃ ಮೋದಿಯವರು ಇದು ಯುದ್ಧದ ಸಮಯವಲ್ಲ ಎಂದು ಹೇಳಿಕೆ ನೀಡಿದರು. ಅಮೆರಿಕ ಬೇಡ ಎಂದರೂ ರಷ್ಯಾದಿಂದ ನಾವು ತೈಲ ಕೊಂಡದ್ದು ಬಿಟ್ಟರೆ ನಾವು ಅವರಿಗೆ ಇನ್ಯಾವ ರೀತಿಯ ಸಹಾಯವನ್ನೂ ಬಾಯಿಮಾತಿಗೂ ಮಾಡಲಿಲ್ಲ. ಇನ್ನು ಇಸ್ರೇಲ್ ಮತ್ತು ಗಾಜಾದಲ್ಲಿನ ಹಮಾಸ್ ವಿರುದ್ಧದ ಯುದ್ಧದಲ್ಲಿ ಕೂಡ ನಾವು ಇಸ್ರೇಲ್ ಪರ ಮಾತನಾಡದೆ ಸುಮ್ಮನೆ ಕುಳಿತೆವು. ಆದರೆ ಗಮನಿಸಿ, ಈ ಎರಡೂ ದೇಶಗಳು ಭಾರತದ ಈ ನಡೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೆ ನಮ್ಮ ಕಷ್ಟದ ಸಮಯದಲ್ಲಿ ನಮಗೆ ಸಹಾಯಹಸ್ತ ಚಾಚಿವೆ. ಇಸ್ರೇಲ್ ಈ ವಿಷಯದಲ್ಲಿ ಸದಾ ಒಂದು ಹೆಜ್ಜೆ ಮುಂದೆ. ಭಾರತ ಬೆಳಗಿನ 1:46ರಲ್ಲಿ ಪಾಕಿಸ್ತಾನದ ಮೇಲೆ ದಾಳಿ ಮಾಡುತ್ತೆ, ನೀವು ನಂಬುವುದಿಲ್ಲ ಬೆಳಗಿನ 1:47ಕ್ಕೆ ಇಸ್ರೇಲ್ 'ನಾವು ಭಾರತದೊಂದಿಗೆ ಇದ್ದೇವೆ' ಎಂದು ಟ್ವೀಟ್ ಮಾಡುತ್ತದೆ. ಅವರಿಗೆ ನಮ್ಮ ಪರ ನಿಲ್ಲಲು ಒಂದು ನಿಮಿಷವೂ ಬೇಡ. ಅವರು ಸದಾ ನಮ್ಮೊಂದಿಗೆ ಇದ್ದಾರೆ. ಆದರೆ ನಾವು? ಜಾಗತಿಕ ಮಟ್ಟದಲ್ಲಿ ಎಲ್ಲಾ ದೇಶಗಳು ಕೂಡ ತಮ್ಮ ಶಕ್ತ್ಯಾನುಸಾರ ದ್ವಿಮುಖ ನೀತಿಯನ್ನು ಅನುಸರಿಸುತ್ತವೆ. ಆದರೆ ರಷ್ಯಾ ಮತ್ತು ಇಸ್ರೇಲ್ ದೇಶಗಳು ಸದಾ ನಮ್ಮೊಂದಿಗೆ ಏಕಮುಖ ನೀತಿಯನ್ನು ಪ್ರದರ್ಶಿಸಿವೆ. ಇಂಥ ಮಿತ್ರದೇಶಗಳ ಸಂಕಷ್ಟ ಸಮಯದಲ್ಲಿ 'ನಾವು ನಿಮ್ಮೊಂದಿಗೆ ಇದ್ದೇವೆ' ಎನ್ನುವ ದಾಷ್ಟಿಕತೆಯನ್ನು ಭಾರತ ಬೆಳೆಸಿಕೊಳ್ಳಬೇಕಿದೆ. ಈ ನೈತಿಕ ಬೆಂಬಲ ನೀಡಿದರೆ ಸಾಕು. ಉಳಿದಂತೆ ರಷ್ಯಾ ಮತ್ತು ಇಸ್ರೇಲ್ ಎರಡೂ ತಮ್ಮ ವಿರುದ್ಧ ನಿಂತವರನ್ನು ಸದೆಬಡಿಯುವ ಶಕ್ತಿಯನ್ನು ಹೊಂದಿವೆ.

ಶೀತಲ ಸಮರದಲ್ಲಿ ರಷ್ಯಾವನ್ನು ಛಿದ್ರ ಮಾಡಿದ ಅಮೆರಿಕದ ಪಾರುಪತ್ಯ ಬಹಳ ದಿನ ನಡೆಯುವುದಿಲ್ಲ. ರಷ್ಯಾ ಅಂದಿನ ದಿನದ ಕುಸಿತವನ್ನು ಸಹಿಸಿಕೊಂಡು ಅದನ್ನು ಮರೆತು ಬಹುದೂರ ಸಾಗಿಬಂದಿದೆ. ತನ್ನ ಹಿಂದಿನ ಶಕ್ತಿಯನ್ನು ಅದು ಮರಳಿ ಪಡೆಯುವ ದಾರಿಯಲ್ಲಿದೆ. ಇನ್ನು ಇಸ್ರೇಲ್ ಎನ್ನುವ ದೇಶ ಭೂಪಟದಲ್ಲೇ ಇರಲಿಲ್ಲ. ಮೇ 14,1948ರಂದು ಹೊಸ ದೇಶವಾಗಿ ಉದಯಿಸಿದೆ. ವಿಸ್ತೀರ್ಣದಲ್ಲಿ ನಮ್ಮ ಮಿಜೋರಾಂ ರಾಜ್ಯಕ್ಕಿಂತ ಸ್ವಲ್ಪ ಕಡಿಮೆಯಿರುವ ಇಸ್ರೇಲ್ ಗೌರವದಲ್ಲಿ ಮಾತ್ರ ಜಗತ್ತನ್ನ ಆಕ್ರಮಿಸಿದೆ. ಅಮೆರಿಕದ ಸಂಸತ್ತು, ಮೀಡಿಯಾ ಹೌಸ್, ಬಹುಪಾಲು ವ್ಯಾಪಾರ ಇಸ್ರೇಲ್ ಯಹೂದಿಗಳ ಕೈಲಿದೆ. ಅಮೆರಿಕದ ಮೀಡಿಯಾ ಹೌಸ್‌ಗಳಲ್ಲಿ 90ಕ್ಕೂ ಹೆಚ್ಚಿನವು ಇಸ್ರೇಲಿಗಳ ಆಡಳಿತದಲ್ಲಿದೆ. ಹೀಗಾಗಿ ಇಸ್ರೇಲಿಗರಿಗೆ ನಮ್ಮಿಂದ ಹಣಕಾಸು ಅಥವಾ ತಂತ್ರಜ್ಞಾನದ ಸಹಾಯ ಬೇಕಿಲ್ಲ.

ನವಭಾರತವಿದು ಎಂದು ಹೆಮ್ಮೆಯಿಂದ ಹೇಳುವ ನಾವು ಈ ವರ್ಷದಿಂದಾದರೂ 'ನಮ್ಮೊಂದಿಗೆ ನಿಂತವರ ಜತೆ ನಾವು ನಿಲ್ಲುತ್ತೇವೆ' ಎನ್ನುವ ಮನಸ್ಥಿತಿ ಬೆಳೆಸಿಕೊಳ್ಳದೆ ಹೋದರೆ, ತಟಸ್ಥವಾಗಿ ಉಳಿದುಕೊಳ್ಳುವ ಹಳೆಯ ಚಾಳಿಯನ್ನು ಮುಂದುವರಿಸಿದರೆ ರಷ್ಯಾ ಮತ್ತು ಇಸ್ರೇಲ್‌ಗಳು ಕೂಡ ಮನಸ್ಸು ಬದಲಿಸಬಹುದು. ಇಂಥ ಎರಡು ಪ್ರಬಲ ರಾಷ್ಟ್ರಗಳು ಭಾರತದ ಬೆನ್ನಿಗಿದೆ ಎನ್ನುವುದು ಸುಕೃತ. ನಾವು ಅದನ್ನು ಗೌರವಿಸಬೇಕು. ಅವರ ಸಂಕಷ್ಟದಲ್ಲೂ ಜತೆಯಾಗಬೇಕು. 'ಒನ್ ವೇ' ಪ್ರೀತಿ ಬಹುಕಾಲ ಬಾಳುವುದಿಲ್ಲ ಎನ್ನುವ ಪರಿಜ್ಞಾನ ನಮ್ಮ ಕೇಂದ್ರ ಸರಕಾರಕ್ಕೆ ಬೇಗ ಬರಲಿ.

ಭಟ್ಟರ್ ಸ್ನ್ಯಾಕ್

- **ಕೆ.ಕೆ.ಪಾಟೀಲ, ವಿಜಯಪುರ**
ಭಟ್ರೇ, ಹೆಂಗಸರ ಬಗ್ಗೆ ಭಟ್ರು ಅವಹೇಳನಕಾರಿಯಾಗಿ ಬರೆದಿದ್ದಾರೆಂದು ಉಷಾ ಕತ್ತೆಮನೆ ಹೇಳಿದ್ದಾರಲ್ಲ?
– **ಈ ಮಾತನ್ನು ಹೆಂಗಸರು ಹೇಳಿದ್ದರೆ ಸೀರಿಯಸ್ ಆಗಿ ತೆಗೆದುಕೊಳ್ಳಬಹುದಿತ್ತು!**

- **ಕಡೂರು ಪ್ರಕಾಶ, (ಇಮೇಲ್ ಮೂಲಕ)**
ಭಟ್ರೇ, ಹೆಂಗಸರಿಗೆ ಉಚಿತ ಬಸ್ ಪ್ರಯಾಣ ಒದಗಿಸಿದ್ದರಿಂದ ಇಕಾನಮಿಗೆ ಒಳ್ಳೆಯದಾಗಿದೆಯಂತೆ?
– **ಹಾಗಾದ್ರೆ ಆ ಯೋಜನೆಯನ್ನು ಗಂಡಸರಿಗೂ ವಿಸ್ತರಿಸಬಹುದಲ್ಲ?!**

- **ರಾಜೀ, (ಇಮೇಲ್ ಮೂಲಕ)**
ಭಟ್ರೇ, ಶಿಕ್ಷಣ ಸಚಿವ ಮಧು ಬಂಗಾರಪ್ಪನವರಿಗೆ ಕರ್ತರಿ ಪ್ರಯೋಗ ಅಂದ್ರೆ ಏನು ಅಂತ ಗೊತ್ತಿಲ್ಲವಂತೆ?
– **ಸದ್ಯ ನನ್ನ ಹೇರ್ ಸ್ಟೈಲ್ ಬಗ್ಗೆ ಕಾಮೆಂಟ್ ಮಾಡ್ತಾ ಇದ್ದೀರಾ ಅಂತ ರೇಗಲಿಲ್ಲವಲ್ಲ?!**

- **ಶ್ರೀನಾಥ ಯಜುರ್ವೇದಿ, (ಇಮೇಲ್ ಮೂಲಕ)**
ಕೆಳಗಿನ ಕ್ರಮಾಂಕದಲ್ಲಿ ಬ್ಯಾಟ್ ಹಿಡಿದು ಬಂದರೂ ತಂಡವನ್ನು ಗೆಲುವಿನ ದಡಕ್ಕೆ ಸೇರಿಸುವವನನ್ನು ಏನೆಂದು ಕರೆಯುತ್ತೀರಿ?
– **ಮಹೇಂದ್ರ ಸಿಂಗ್ ದೋಣಿ!**

- **ಕಾಶಿ ಪ್ರಾಣೇಶ, ಕತ್ರಿಗುಪ್ಪೆ**
ಭಟ್ರೇ, ಹಿಂದಿನ ಕಾಲದಲ್ಲಿ ಹುಡುಗರು ಒಂದು ಕಣ್ಣು ಹೊಡೆದು ಹುಡುಗಿಯರಿಗೆ ಸಂದೇಶ ರವಾನಿಸುತ್ತಿದ್ದರು, ಈಗಿನವರು?
– **ಈಗ ಎರಡೂ ಕಣ್ಣುಗಳನ್ನು ಹೊಡೆಯುತ್ತಾರೆ!**

- **ರುಕ್ಕು, ಚಾಮರಾಜಪೇಟೆ**
ಭಟ್ರೇ, ಕಾಡಲ್ಲಿದ್ದು ನಾಡಿಗೆ ಉಪಟಳ ಕೊಡೋನು ನಕ್ಸಲೈಟ್. ಊರಲ್ಲಿದ್ದುಕೊಂಡೇ ಉಪಟಳ ಕೊಡೋನು?
– **ಲೋಕಲೈಟ್!**

- **ಗುರುನಾರಾಯಣ ಪಟಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಚಂದ್ರನ ಮೇಲೆ ಮಧುಚಂದ್ರಕ್ಕೆ ಹೋಗಬಹುದಾ?
– **ಕೆಲ ತಿಂಗಳ ಹಿಂದೆ ಇಸ್ರೋ ವಿಜ್ಞಾನಿಗಳು ಮಾಡಿದ್ದು ಮತ್ತಿನ್ನೇನನ್ನು?!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಕೆಲವರು ಹೆಂಡತಿಯನ್ನು ಬಂಗಾರ ಅಂತ ಕರೆಯುತ್ತಾರಲ್ಲ?
– **ಅದಕ್ಕೇ ಅವರು ತೂಕ ಜಾಸ್ತಿ ಮಾಡಿಕೊಳ್ಳೋದು!**

ಎರಡು ವರ್ಷಗಳ ಗ್ಯಾರಂಟಿ ಸಾಕಾರ



ಗುಣಗಾನ

ಬಿ.ಎಸ್.ಶಿವಣ್ಣ
vveditoped@gmail.com

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ 2023ರ ಮೇ 20 ಒಂದು ಅವಿಸ್ಮರಣೀಯ ದಿನ. ಇದು ಮೌಲ್ಯಾಧಾರಿತ ರಾಜಕಾರಣದ ಪ್ರತಿನಿಧಿ ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನವಾಗಿ ಇತಿಹಾಸದ ಮೈಲಿಗಲ್ಲಾಗಿದೆ. ಮೇ 20ರಂದು ಕಾಂಗ್ರೆಸ್ ಸರಕಾರವು 2 ವರ್ಷಗಳ ಆಡಳಿತವನ್ನು ಪೂರೈಸುತ್ತಿದ್ದು, ಈ ಅವಧಿಯಲ್ಲಿ ಜನಕೇಂದ್ರಿತ ಯೋಜನೆಗಳ ಮೂಲಕ ಅದು ರಾಜ್ಯದ ಜನರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತಂದಿದೆ.

ಹೌದು, ಸಿದ್ದರಾಮಯ್ಯ ಅವರ ಆಳ್ವಿಕೆ ಎಂದರೆ 'ಜನ ಕಲ್ಯಾಣ ಗ್ಯಾರಂಟಿ'. ಮುಖ್ಯಮಂತ್ರಿಯಾದ ಮೊದಲ ಅವಧಿಯಲ್ಲಿ 'ಭಾಗ್ಯಗಳ ಸರದಾರ' ಆಗಿದ್ದ ಸಿದ್ದರಾಮಯ್ಯ, ಈ ಬಾರಿ 'ಗ್ಯಾರಂಟಿ' ಯೋಜನೆಗಳ ಮೂಲಕ ರಾಷ್ಟ್ರ ರಾಜಕಾರಣದಲ್ಲೂ ಗಮನ ಸೆಳೆದಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದ್ದ ಬಿಜೆಪಿಯವರು, ಕೇಂದ್ರದಲ್ಲೂ ಮತ್ತು ಬೇರೆ ರಾಜ್ಯಗಳಲ್ಲೂ ಇದೇ ಯೋಜನೆಯನ್ನು ಜಾರಿಗೆ ತಂದಿದ್ದು ಸಿದ್ದರಾಮಯ್ಯನವರ ಜನಪರ ನಿಲುವಿಗೆ ದಕ್ಕಿದ ಯಶಸ್ಸು ಎಂದೇ ವ್ಯಾಖ್ಯಾನಿಸಬಹುದು.

ರಾಜ್ಯದ ಗ್ಯಾರಂಟಿ ಯೋಜನೆಗಳು ಜನರ ಜೀವನದಲ್ಲಿ ದಿಕ್ಸೂಚಿಯಾಗಿವೆ. ಕಾಂಗ್ರೆಸ್ ಸರಕಾರದ ಐದು ಗ್ಯಾರಂಟಿ ಯೋಜನೆಗಳು- ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಮತ್ತು ಯುವನಿಧಿ- ಕರ್ನಾಟಕದ ಜನತೆಯ ಪಾಲಿಗೆ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣದ ದಾರಿದೀಪವಾಗಿವೆ. ಈ ಯೋಜನೆಗಳು ಕೇವಲ ಚುನಾವಣಾ ಭರವಸೆಗಳಾಗಿ ಉಳಿಯಲಿಲ್ಲ; ಅವುಗಳನ್ನು ಕಾರ್ಯರೂಪಕ್ಕೆ ತಂದು ಜನರ ಬದುಕಿಗೆ ಭದ್ರತೆಯನ್ನು ಒದಗಿಸಲಾಗಿದೆ. ಬಂಡವಾಳ ವೆಚ್ಚವನ್ನು ಸರಿದೂಗಿಸುವ ಜತೆಗೆ ಇಂಥ ಕಲ್ಯಾಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿಸುವುದು ಆಳುವ ಸರಕಾರಕ್ಕೆ ಸದಾ ಸವಾಲು. ಆದರೆ ಸಿದ್ದರಾಮಯ್ಯನವರು ತಮ್ಮ ಅನುಭವ ಮತ್ತು ಆಡಳಿತಾತ್ಮಕ ಚಾಕಚಕ್ಯತೆಯಿಂದ ಇವೆರಡನ್ನೂ ಸರಿದೂಗಿಸಿದ್ದಾರೆ.

ಗೃಹಲಕ್ಷ್ಮೀ: ಈ ಯೋಜನೆಯಡಿ, ರಾಜ್ಯದ ಲಕ್ಷಾಂತರ ಕುಟುಂಬಗಳ ಮನೆಯ ಯಜಮಾನಿಯರಿಗೆ ಪ್ರತಿ ತಿಂಗಳು 2,000 ರು. ಆರ್ಥಿಕ ನೆರವು ಒದಗಿಸಲಾಗುತ್ತಿದೆ. ಈ ಯೋಜನೆಯಿಂದಾಗಿ ಮಹಿಳೆಯರು ತಮ್ಮ ಕುಟುಂಬದ ಮೂಲಭೂತ ಅಗತ್ಯಗಳನ್ನು ಪೂರೈಸುವುದರ ಜತೆಗೆ, ತಮ್ಮ ವೈಯಕ್ತಿಕ ಕನಸುಗಳಿಗೂ ಚಾಲನೆ ನೀಡಿದ್ದಾರೆ. ಗೃಹಲಕ್ಷ್ಮೀ ಯೋಜನೆಯು ಮಹಿಳಾ ಸಬಲೀಕರಣದೆಡೆಗಿನ ಒಂದು ದಿಟ್ಟಹೆಜ್ಜೆಯಾಗಿದೆ.

ಗೃಹಜ್ಯೋತಿ: ವಿದ್ಯುತ್ ಬಿಲ್‌ನ ಪಾವತಿಯಿಂದ ಕುಟುಂಬಗಳನ್ನು ಮುಕ್ತಗೊಳಿಸಿದ ಈ ಯೋಜನೆಯಡಿ, 200 ಯುನಿಟ್‌ವರೆಗೆ ಉಚಿತ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಇದರಿಂದಾಗಿ ಬಡವರು ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಆರ್ಥಿಕ ಉಳಿತಾಯವಾಗಿದ್ದು, ಈ ಹಣವನ್ನು ಶಿಕ್ಷಣ, ಆರೋಗ್ಯ ಮತ್ತು ಇತರ ಅಗತ್ಯಗಳಿಗೆ ಬಳಸಲು ಸಾಧ್ಯವಾಗಿದೆ.

ಅನ್ನಭಾಗ್ಯ: ಹಸಿವುಮುಕ್ತ ಕರ್ನಾಟಕದ ಕನಸನ್ನು ನನಸಾಗಿಸುವ ಈ ಯೋಜನೆಯಡಿ, ಬಿಪಿಎಲ್ ಕಾರ್ಡುದಾರರಿಗೆ ಉಚಿತ ಅಕ್ಕಿ ವಿತರಣೆಯ ಜತೆಗೆ, ಹಣಕಾಸಿನ ನೆರವನ್ನೂ ಒದಗಿಸಲಾಗುತ್ತಿದೆ. ಈ ಯೋಜನೆಯಿಂದಾಗಿ ರಾಜ್ಯದ ಲಕ್ಷಾಂತರ ಕುಟುಂಬಗಳಿಗೆ ಆಹಾರ ಭದ್ರತೆ ದಕ್ಕಿದಂತಾಗಿದೆ.

ಶಕ್ತಿ: ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಸೌಲಭ್ಯವನ್ನು ಒದಗಿಸುವ ಈ ಯೋಜನೆಯು, ಗ್ರಾಮೀಣ ಮತ್ತು ನಗರ ಪ್ರದೇಶಗಳ ಮಹಿಳೆಯರಿಗೆ ಸ್ವಾವಲಂಬನೆಯ ದಾರಿಯನ್ನು ತೋರಿಸಿದೆ. ಶಿಕ್ಷಣ, ಉದ್ಯೋಗ ಮತ್ತು ಆರೋಗ್ಯ ಸೇವೆಗಳಿಗೆ ಸುಲಭವಾಗಿ ತಲುಪಲು ಈ ಯೋಜನೆ ಸಹಕಾರಿಯಾಗಿದೆ.

ಯುವನಿಧಿ: ಯುವಜನರಿಗೆ ಆರ್ಥಿಕ ಸ್ವಾತಂತ್ರ್ಯ ಒದಗಿಸುವ ಈ ಯೋಜನೆಯಡಿ, ಪದವೀಧರರಿಗೆ ಮತ್ತು ಡಿಪ್ಲೊಮಾದಾರರಿಗೆ ತಿಂಗಳಿಗೆ ಕ್ರಮವಾಗಿ 3,000 ರು. ಮತ್ತು 1,500 ರು. ಭತ್ಯೆಯನ್ನು ಒದಗಿಸಲಾಗುತ್ತಿದೆ. ಇದರಿಂದಾಗಿ ಯುವಕರು ತಮ್ಮ ಕೌಶಲವನ್ನು ಅಭಿವೃದ್ಧಿಪಡಿಸಿಕೊಂಡು ಉದ್ಯೋಗಾವಕಾಶವನ್ನು ಸೃಷ್ಟಿಸಿಕೊಳ್ಳಲು ಸಾಧ್ಯವಾಗಿದೆ.

ಈ ಗ್ಯಾರಂಟಿ ಯೋಜನೆಗಳು ಕರ್ನಾಟಕದ ಜನರ ಬದುಕಿನಲ್ಲಿ ಆರ್ಥಿಕ ಸ್ಥಿರತೆಯನ್ನು ತಂದಿವೆ. ಸಿದ್ದರಾಮಯ್ಯ ಅವರು ತಮ್ಮ ಚುನಾವಣಾ ಭರವಸೆಗಳನ್ನು ಈಡೇರಿಸುವ ಮೂಲಕ, 'ನುಡಿದಂತೆ ನಡೆದ ಸರಕಾರ' ಎಂಬ ಘೋಷಣೆಗೆ ಸಾಕ್ಷಿಯಾಗಿದ್ದಾರೆ.

ಸಾಮಾಜಿಕ ನ್ಯಾಯ ಮತ್ತು ಕೋಮು ಸೌಹಾರ್ದ:

ಸಿದ್ದರಾಮಯ್ಯ ಅವರ ಆಡಳಿತದ ಮತ್ತೊಂದು ಪ್ರಮುಖ ಸಾಧನೆಯೆಂದರೆ, ಸಾಮಾಜಿಕ ನ್ಯಾಯ ಮತ್ತು ಕೋಮು ಸೌಹಾರ್ದದ ಸಂರಕ್ಷಣೆ. ಕರ್ನಾಟಕವು ಎಲ್ಲ ಜಾತಿ, ಧರ್ಮ ಮತ್ತು ಸಮುದಾಯಗಳಿಗೆ ಸಮಾನ ಅವಕಾಶಗಳನ್ನು ಒದಗಿಸುವ 'ಸರ್ವಜನಾಂಗದ ಶಾಂತಿಯ ತೋಟ'ವಾಗಿ ಮುಂದುವರಿದಿದೆ. ವಿಶೇಷವಾಗಿ, ಹಿಂದುಳಿದ ವರ್ಗಗಳು, ದಲಿತರು ಮತ್ತು ಅಲ್ಪಸಂಖ್ಯಾತರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮಾನ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಸರಕಾರವು ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ.

ಕೋಮು ಸೌಹಾರ್ದವನ್ನು ಕಾಪಾಡಲು ಸರಕಾರವು ದಿಟ್ಟಕ್ರಮಗಳನ್ನು ಕೈಗೊಂಡಿದೆ. ಕೋಮುಗಲಭೆಗಳನ್ನು ತಡೆಗಟ್ಟಲು ಕಾನೂನು-ಸುವ್ಯವಸ್ಥೆಯನ್ನು ಬಲಪಡಿಸಿದ್ದು, ಎಲ್ಲ ಸಮುದಾಯಗಳ ನಡುವೆ ಶಾಂತಿ ಮತ್ತು ಸೌಹಾರ್ದವನ್ನು ಉತ್ತೇಜಿಸುವ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಲಾಗಿದ್ದು, ಶೋಷಿತ ವರ್ಗಗಳ ದಶಕಗಳ ಕನಸಿಗೆ ಈ ಮೂಲಕ ಸಿದ್ದರಾಮಯ್ಯ ಬಲ ನೀಡಿದ್ದಾರೆ. ಅಷ್ಟೇ ಅಲ್ಲ, ದಲಿತ ಸಮುದಾಯದ ಮೀಸಲು ವರ್ಗೀಕರಣ ಸಮಸ್ಯೆಯ ಪರಿಹಾರಕ್ಕಾಗಿ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅಧ್ಯಕ್ಷತೆಯಲ್ಲಿ ಏಕಸದಸ್ಯ ಆಯೋಗ ರಚನೆ ಮಾಡಲಾಗಿದ್ದು ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ. ಇತ್ತೀಚೆಗಷ್ಟೇ ಕೇಂದ್ರ ಸರಕಾರವೂ ಜಾತಿಗಣತಿಯನ್ನು ಘೋಷಣೆ ಮಾಡಿದ್ದು, ಸಿದ್ದರಾಮಯ್ಯ ಮಾದರಿಯು 'ರಾಷ್ಟ್ರಕ್ಕೇ ಮಾದರಿ' ಎಂಬುದು ಮತ್ತೊಮ್ಮೆ ಸಾಬೀತಾದಂತಾಗಿದೆ.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ:

ಕರ್ನಾಟಕ ಸರಕಾರವು ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿದೆ. 2024ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 81.15ರಷ್ಟು ತೇರ್ಗಡೆ ಪ್ರಮಾಣ ದಾಖಲಾಗಿದ್ದು, ಈ ಬಾಬತ್ತಿನಲ್ಲಿ ಕಳೆದ ವರ್ಷಕ್ಕಿಂತ ಶೇ.7.89ರಷ್ಟು ಹೆಚ್ಚಳವಾಗಿದೆ. ಇದರ ಜತೆಗೆ, ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಮೂಲಸೌಕರ್ಯಗಳನ್ನು ಸುಧಾರಿಸಲಾಗಿದೆ. ವಿಶೇಷ ಚೇತನರಿಗಾಗಿ ಮಾಸಿಕ ಭತ್ಯೆಯನ್ನು ಜಾರಿಗೊಳಿಸಿದ್ದು, ದೇಶದಲ್ಲೇ ಮೊದಲಿಗನಾಗಿ ಕರ್ನಾಟಕವು ಮಾದರಿಯಾಗಿದೆ. ಅಷ್ಟೇ ಅಲ್ಲ, ಈ ಬಾರಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳ ಶುಲ್ಕ ಹೆಚ್ಚಳಕ್ಕೆ ಖಾಸಗಿ ಸಂಸ್ಥೆಗಳಿಂದ ಎಷ್ಟೇ ಒತ್ತಡ ಬಂದರೂ ಮಣಿಯದಿರುವ ಮೂಲಕ ವಿದ್ಯಾರ್ಥಿಗಳು ಹಾಗೂ ಪೋಷಕರ ಹಿತಾಸಕ್ತಿಯ ರಕ್ಷಣೆ ಮಾಡಿರುವುದು ಸಿದ್ದರಾಮಯ್ಯ ಸರಕಾರದ ಜನಕೇಂದ್ರಿತ ಆಡಳಿತದ ಮತ್ತೊಂದು ಹೆಜ್ಜೆ.

ಆರೋಗ್ಯ ಕ್ಷೇತ್ರದಲ್ಲಿ, ಸರಕಾರಿ ಆಸ್ಪತ್ರೆಗಳನ್ನು ಆಧುನೀಕರಿಸಲಾಗಿದ್ದು, ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ.

ಆರ್ಥಿಕ ಸ್ಥಿರತೆ ಮತ್ತು ಮೂಲಸೌಕರ್ಯ ಅಭಿವೃದ್ಧಿ:

ಕಾಂಗ್ರೆಸ್ ಸರಕಾರವು ರಾಜ್ಯದ ಆರ್ಥಿಕ ಸ್ಥಿರತೆಗೆ ಒತ್ತುನೀಡಿದೆ. ಕೃಷಿ, ಕೈಗಾರಿಕೆ ಮತ್ತು ಐಟಿ ಕ್ಷೇತ್ರಗಳಿಗೆ ಉತ್ತೇಜನ ನೀಡುವ ಮೂಲಕ ರಾಜ್ಯದ ಜಿಡಿಪಿಯನ್ನು ಬಲಪಡಿಸಲಾಗಿದೆ. ರೈತರಿಗೆ ಸಾಲಮನ್ನಾ, ಕೃಷಿ ಸಬ್ಸಿಡಿಗಳು ಮತ್ತು ಆಧುನಿಕ ಕೃಷಿ ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸಲಾಗಿದೆ. ಮೂಲಸೌಕರ್ಯ ಅಭಿವೃದ್ಧಿಯಲ್ಲಿ, ರಸ್ತೆಗಳು, ಸೇತುವೆಗಳು ಮತ್ತು ಸಾರ್ವಜನಿಕ ಸಾರಿಗೆಯ ಸುಧಾರಣೆಗೆ ಒತ್ತುನೀಡಲಾಗಿದೆ. ಇದರ ಜತೆಗೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಅನುದಾನ, ಪೌರ ಕಾರ್ಮಿಕರ ವೇತನ ಪರಿಷ್ಕರಣೆ, ಪೋಡಿ ಮುಕ್ತ ಗ್ರಾಮ, ಖಾತಾ ಸಮಸ್ಯೆ ಪರಿಹಾರ, ಕಾವೇರಿ ನೀರು ಸಂಪರ್ಕ, ಕೇಂದ್ರ ಸರಕಾರದ ಅಸಹಕಾರದ ಮಧ್ಯೆಯೂ ನೀರಾವರಿ ಯೋಜನೆಗಳ ವಿಸ್ತರಣೆ, ಮೆಟ್ರೋ ಜಾಲ ಹೆಚ್ಚಳ ಇವು ಸಿದ್ದರಾಮಯ್ಯ ಸರಕಾರ ಕೈಗೊಂಡ ಅಭಿವೃದ್ಧಿಯ ಮೈಲುಗಲ್ಲುಗಳಾಗಿವೆ.

ಜನಪ್ರಿಯ ನಾಯಕತ್ವ:

ಸಿದ್ದರಾಮಯ್ಯ ಅವರ ನಾಯಕತ್ವವು ಜನರಲ್ಲಿ ಭರವಸೆ ಮೂಡಿಸಿದೆ. ತಮ್ಮ ಸರಳತೆ, ಜನಸ್ನೇಹಿ ಧೋರಣೆ ಮತ್ತು ದಿಟ್ಟ ನಿರ್ಧಾರಗಳಿಂದ ಅವರು ಕರ್ನಾಟಕದ ಜನತೆಯ ಮನಸ್ಸಿನಲ್ಲಿ ಗಾಢವಾದ ಛಾಪನ್ನು ಒತ್ತಿದ್ದಾರೆ. ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಸಂಪುಟದ ಸಹೋದ್ಯೋಗಿಗಳ ಸಮನ್ವಯದ ಆಡಳಿತವು ಸರಕಾರದ ಕಾರ್ಯಕ್ಷಮತೆಯನ್ನು ಇನ್ನಷ್ಟು ಹೆಚ್ಚಿಸಿದೆ.

ಸಂಭ್ರಮದ ಕ್ಷಣ:

ಮೇ 20ರಂದು ಹೊಸಪೇಟೆಯಲ್ಲಿ ಎರಡು ವರ್ಷದ ಗ್ಯಾರಂಟಿ ಸಂಭ್ರಮವನ್ನು ಆಚರಿಸಲು ಸಿದ್ದರಾಮಯ್ಯ ಅವರು ಜನತೆಗೆ ಆಹ್ವಾನವನ್ನು ನೀಡಿದ್ದಾರೆ. ಈ ಸಂಭ್ರಮವು ಕೇವಲ ಸರಕಾರದ ಸಾಧನೆಯ ಆಚರಣೆಯಷ್ಟೇ ಅಲ್ಲ, ಜನರ ಜತೆಗಿನ ಸರಕಾರದ ಬಾಂಧವ್ಯವನ್ನು ಗಟ್ಟಿಗೊಳಿಸುವ ಕ್ಷಣವೂ ಆಗಿದೆ. ಕಾಂಗ್ರೆಸ್ ಸರಕಾರವು ತನ್ನ ಜನಪರ ಯೋಜನೆಗಳ ಮೂಲಕ ಕರ್ನಾಟಕವನ್ನು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಸುತ್ತಿದೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಎರಡು ವರ್ಷಗಳ ಆಡಳಿತವು ಕರ್ನಾಟಕದ ಜನತೆಗೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಭದ್ರತೆಯನ್ನು ಒದಗಿಸಿದೆ. ಗ್ಯಾರಂಟಿ ಯೋಜನೆಗಳು, ಸಾಮಾಜಿಕ ನ್ಯಾಯ, ಶಿಕ್ಷಣ, ಆರೋಗ್ಯ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಮೂಲಕ ಸರಕಾರವು ಜನರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತಂದಿದೆ. ''ಕರ್ನಾಟಕವೇ ನನ್ನ ಕರ್ಮಭೂಮಿ, ಕನ್ನಡವೇ ನನ್ನ ಉಸಿರು'' ಎಂದು ಹೇಳುವ ಸಿದ್ದರಾಮಯ್ಯ ಅವರ ಧ್ಯೇಯವು ರಾಜ್ಯವನ್ನು ಸಮೃದ್ಧಿಯ ಹಾದಿಯಲ್ಲಿ ಕೊಂಡೊಯ್ಯುತ್ತಿದೆ. ಈ ಎರಡು ವರ್ಷಗಳ ಸಾಧನೆಯು ಕರ್ನಾಟಕದ ಜನತೆಗೆ ಹೆಮ್ಮೆಯ ಕ್ಷಣವಾಗಿದ್ದು, ಭವಿಷ್ಯದಲ್ಲಿ ಇನ್ನಷ್ಟು ಅಭಿವೃದ್ಧಿಯ ಭರವಸೆಯನ್ನು ಮೂಡಿಸಿದೆ.

(ಲೇಖಕರು ರಾಮಮನೋಹರ್ ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷರು)

ಕಾಂಗ್ರೆಸ್ ಸರಕಾರಕ್ಕೆ ಎರಡು ವರ್ಷ ಜನರಿಗೆ ತಂದಿತು ಅತೀವ ಹರ್ಷ

ಪ್ರಶಂಸಾಪರ್ವ

ದಿನೇಶ್ ಗೂಳಿಗೌಡ
vveditoped@gmail.com

ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯಪೂರ್ವ ದಿಂದಲೂ ಜನರಿಗೆ ಬದುಕನ್ನು ಕಟ್ಟಿ ಕೊಡುವ ಕೆಲಸವನ್ನು ಮಾಡುತ್ತಲೇ ಬಂದಿದ್ದು, ಈಗಿನ ಕಾಂಗ್ರೆಸ್ ಸರಕಾರವೂ ಇದಕ್ಕೆ ಬದ್ಧವಾಗಿದೆ. ಬಿಜೆಪಿಯ ದುರಾಡಳಿತದಿಂದ ಬಸವಳಿದಿದ್ದ ರಾಜ್ಯದ ಜನರ ಬಾಳನ್ನು 'ಗ್ಯಾರಂಟಿ' ಯೋಜನೆಗಳು ಹಸನಾಗಿಸುತ್ತಿವೆ. ಸರಕಾರವು ಜನರಿಗೆ ನೆಮ್ಮದಿಯ ಬದುಕನ್ನು ಕಟ್ಟಿಕೊಟ್ಟಿದ್ದರ ಜತೆಗೆ, ರಾಜ್ಯದ ಅಭಿವೃದ್ಧಿಗೂ ಹತ್ತಾರು ಯೋಜನೆಗಳನ್ನು ರೂಪಿಸಿ, ಅವನ್ನು ಸಮರ್ಥವಾಗಿ ಜಾರಿಗೆ ತಂದ ಪರಿಣಾಮ 'ಕರ್ನಾಟಕ ಮಾಡೆಲ್' ಈಗ 'ಭಾರತದ ಮಾಡೆಲ್' ಆಗಿಬಿಟ್ಟಿದೆ. ಕರ್ನಾಟಕದತ್ತ ಭಾರತವಷ್ಟೇ ಅಲ್ಲದೆ, ಇಡೀ ವಿಶ್ವವೇ ತಿರುಗಿನೋಡುತ್ತಿದೆ.

ಸರಕಾರವು ಅಸ್ತಿತ್ವಕ್ಕೆ ಬಂದ ದಿನದಿಂದಲೂ ವಿಪಕ್ಷದವರು ಒಂದಿಲ್ಲೊಂದು ಟೀಕೆ ಮಾಡುತ್ತಾ, ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಲೇ ಬಂದರು, ರಾಜ್ಯ ದಿವಾಳಿಯಾಗಲಿದೆ ಎಂದೇ ಬೊಬ್ಬೆ ಹೊಡೆದರು. ಆದರೆ ಆರ್ಥಿಕ ಶಿಸ್ತಿನ ಎಲ್ಲೆಮೀರದೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಜತೆಜತೆಗೆ ಅಭಿವೃದ್ಧಿಯ ಖಾತ್ರಿಯನ್ನೂ ಕಾಂಗ್ರೆಸ್ ಸರಕಾರ ನೀಡುತ್ತಿದೆ ಎಂಬುದನ್ನು ಹಲವು ಅಂಕಿ-ಅಂಶಗಳು ಸಾಬೀತುಪಡಿಸುತ್ತಿವೆ. ಜಿಎಸ್‌ಡಿಪಿ ಬೆಳವಣಿಗೆಯಲ್ಲಿ ದೇಶದಲ್ಲೇ ಮೊದಲ ಸ್ಥಾನಕ್ಕೇರಿರುವ ಕರ್ನಾಟಕ, ತೆರಿಗೆ ಸಂಗ್ರಹಣೆ ಮತ್ತು ವಿದೇಶಿ ಬಂಡವಾಳ ಹೂಡಿಕೆಯಲ್ಲಿ 2ನೇ ಸ್ಥಾನಕ್ಕೇರಿದೆ. 'ಕೇರ್ ಎಡ್ಜ್' ವರದಿ ಪ್ರಕಾರ, ದೇಶದಲ್ಲೇ ಅತ್ಯುತ್ತಮ ಸಾಧನೆ ಮಾಡಿದ ರಾಜ್ಯಗಳ ಪೈಕಿ ಕರ್ನಾಟಕ 3ನೇ ಸ್ಥಾನದಲ್ಲಿದೆ. ದೇಶದ ಒಟ್ಟಾರೆ ಜಿಡಿಪಿ ಬೆಳವಣಿಗೆಯು ಶೇ. 8.2ರಷ್ಟು ಇದ್ದರೆ, ಕರ್ನಾಟಕದ ಜಿಡಿಪಿ ಶೇ.10.2ರಷ್ಟು ದಾಖಲಾಗಿದ್ದು ತೆರಿಗೆ ಸಂಗ್ರಹದಲ್ಲಿ 2ನೇ ಸ್ಥಾನವನ್ನು ತಲುಪಿದೆ. ಸರಕಾರದ ದೂರದೃಷ್ಟಿ ಯೋಜನೆಗಳೇ ಇದಕ್ಕೆ ಕಾರಣ.

ಕಾಂಗ್ರೆಸ್ ಸರಕಾರದ 'ಗ್ಯಾರಂಟಿ' ಮಾದರಿಯನ್ನು ಕೇಂದ್ರದ ಬಿಜೆಪಿ ಯಥಾವತ್ ನಕಲು ಮಾಡಿದೆ. ವಿಪರ್ಯಾಸವೆಂದರೆ, ಕಾಂಗ್ರೆಸ್ ಸರಕಾರವು ಗ್ಯಾರಂಟಿಗಳ ಜಾರಿಯ ವಿಷಯದಲ್ಲಿ ನುಡಿದಂತೆ ನಡೆದರೆ, ಬಿಜೆಪಿ ಆಡಳಿತದ ರಾಜ್ಯಗಳು ಅವುಗಳ ಜಾರಿಗೆ ತಿಣುಕಾಡುತ್ತಿವೆ! ಬಹುಮುಖ್ಯವಾಗಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮಾನ್ ಯಾಂಗ್ ಅವರು ಕಾಂಗ್ರೆಸ್ ಸರಕಾರದ ಐದು ಗ್ಯಾರಂಟಿ ಯೋಜನೆಗಳನ್ನು ಪ್ರಶಂಸಿಸಿದ್ದಾರೆ. ಕರ್ನಾಟಕ ಸರಕಾರದ 'ಜಾತಿಗಣತಿ ಮಾದರಿ'ಯನ್ನು ದೇಶಾದ್ಯಂತ ಮೊದಲ ಬಾರಿಗೆ ಜಾರಿ ಮಾಡಲು ಕೇಂದ್ರ ಸರಕಾರ ಮುಂದಾಗಿದೆ. ತನ್ಮೂಲಕ ಕರ್ನಾಟಕ ಸರಕಾರದ ಮಾಡೆಲ್, 'ದೇಶದ ಮಾಡೆಲ್' ಕೂಡ ಆಗಿದೆ ಎಂಬುದು ಹೆಮ್ಮೆಯ ಸಂಗತಿ.

2024ರ ವರ್ಷದಲ್ಲಿ, ಉದ್ಯೋಗ ಸೃಷ್ಟಿಯ ವಿಷಯದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರುವ ಕರ್ನಾಟಕವು ಶೇ.63.93ರಷ್ಟು ಉದ್ಯೋಗಾವಕಾಶವನ್ನು ಹೊಂದಿದ್ದು, ಉದ್ಯೋಗ ಪಡೆಯಲು ಅರ್ಹರಾಗಿರುವ ಪದವೀಧರರ ವಿಷಯದಲ್ಲಿ 7ನೇ ಸ್ಥಾನವನ್ನು ಹೊಂದಿದೆ. ಕಲಬುರಗಿ ಜಿಲ್ಲೆಯಲ್ಲಿ 1 ಸಾವಿರ ಎಕರೆ ಪ್ರದೇಶದಲ್ಲಿ 'ಪಿಪಿಪಿ' ಮಾದರಿಯಲ್ಲಿ 'ಮೆಗಾ ಜವಳಿ ಪಾರ್ಕ್ ಸ್ಥಾಪಿಸಲು ಯೋಜಿಸಿರುವ ಕಾಂಗ್ರೆಸ್ ಸರಕಾರ, 1 ಲಕ್ಷ ಜನರಿಗೆ ನೇರ ಉದ್ಯೋಗ ಹಾಗೂ 2 ಲಕ್ಷ ಜನರಿಗೆ ಪರೋಕ್ಷ ಉದ್ಯೋಗ ಸೃಷ್ಟಿಸಲು ಪಣತೊಟ್ಟಿದೆ. 'ಇನ್ವೆಸ್ಟ್ ಕರ್ನಾಟಕ' ಕಾರ್ಯಕ್ರಮದಲ್ಲಿ 10 ಲಕ್ಷ ಕೋಟಿ ರು. ಹೂಡಿಕೆಯ ಗುರಿಯನ್ನು ಪರಿಪೂರ್ಣವಾಗಿ ಸಾಧಿಸಲಾಗಿದ್ದು ಇದರಿಂದ 6 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ.

ದೊಡ್ಡ ದೊಡ್ಡ ಕಂಪನಿಗಳ ಜತೆಗೂಡಿ 1 ಲಕ್ಷ ಮಂದಿ ಯುವಜನರಿಗೆ ತರಬೇತಿ ನೀಡಲಾಗುತ್ತಿದೆ. 100 ಕೇಂದ್ರಗಳಲ್ಲಿ 30 ಸಾವಿರ ಮಹಿಳೆಯರಿಗೆ ಉದ್ಯೋಗಾಧಾರಿತ ಕೌಶಲದ ತರಬೇತಿ ನೀಡಲು ಸ್ವ-ಉದ್ಯೋಗ ಯೋಜನೆ ಜಾರಿ ಮಾಡುವ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಕಾಂಗ್ರೆಸ್ ಸರಕಾರ ಮುಂದಾಗಿದೆ.

ಕೇಂದ್ರ ಸರಕಾರದ ತೆರಿಗೆ ಹಂಚಿಕೆ ಮತ್ತು ಅನುದಾನದಲ್ಲಿನ ಅನ್ಯಾಯದ ನಡುವೆಯೂ ಕಾಂಗ್ರೆಸ್ ಸರಕಾರವು ತಾನು ಅಸ್ತಿತ್ವಕ್ಕೆ ಬಂದ ಎರಡೇ ವರ್ಷದಲ್ಲಿ ಕರ್ನಾಟಕದ ಮಾಡೆಲ್ ಅನ್ನು ರಾಷ್ಟ್ರಕ್ಕೆ ತೋರಿಸಿಕೊಟ್ಟಿದೆ. ಉಳಿದಿರುವ ಮೂರು ವರ್ಷಗಳಲ್ಲಿ ಇಡೀ ವಿಶ್ವವೇ ಕನಾಟಕದತ್ತ ತಿರುಗಿ ನೋಡುವಂತೆ ಮಾಡಿ, ತನ್ನ ಈ ಸಾಧನೆಯನ್ನು ಮುಂದಿಟ್ಟುಕೊಂಡು ಜನರ ಬಳಿಗೆ ತೆರಳಿ, ಮತ್ತೊಮ್ಮೆ ಜನಾಶೀರ್ವಾದ ಪಡೆದು ಕಾಂಗ್ರೆಸ್ ಸರಕಾರವು ಅಸ್ತಿತ್ವಕ್ಕೆ ಬರಲಿದೆ.

(ಲೇಖಕರು ಶಾಸಕರು, ಕರ್ನಾಟಕ ವಿಧಾನಪರಿಷತ್)

ಪ್ರತ್ಯೇಕ ಧರ್ಮ ಎಂದು ಸಾಬೀತುಪಡಿಸಲು ಯಾವುದೇ ವಿಶೇಷ ಸಂಶೋಧನೆ ಬೇಕಿಲ್ಲ

ಬಸವ ಮಂಟಪ

ರವಿ ಹಂಜ್
vveditoped@gmail.com

ಭಾಗ-2

ಕುರಾನಿನ ಒಂದೊಂದು ಹದೀತುಗಳನ್ನು ಅವುಗಳ ಸಮಗ್ರ ಉಪಕ್ರಮದಲ್ಲಿ ವಿಶ್ಲೇಷಿಸದೆ, ಪೈಗಂಬರರ ಅಂದಿನ ಸಾಮಾಜಿಕ ಜೀವನಕ್ಕೆ ತೂಲಿಸದೆ ಉಗ್ರರು ಕೇವಲ ಇಂದಿನ ವರ್ತಮಾನದ ಸಾಂದರ್ಭಿಕಕ್ಕೆ ಉಲ್ಲೇಖಿಸಿ ಹೇಗೆ ಉಗ್ರವಾದವನ್ನು ಸಮರ್ಥಿಸಿಕೊಳ್ಳುವರೋ, ಅದೇ ರೀತಿ ಬಸವ ತಾಲಿಬಾನಿಗಳು ಸಮಗ್ರತೆ ಮತ್ತು ಷಟ್‌ಸ್ಥಲಗಳಿಗೆ ಅನುಗುಣವಾಗಿ ವಚನಗಳನ್ನು ವಿಶ್ಲೇಷಿಸದೆ ಅದನ್ನು ತಮ್ಮ ಸೈದ್ಧಾಂತಿಕ ಉದ್ದೇಶಕ್ಕೆ ಬಳಸುತ್ತಿರುವುದು ಸುಸ್ಪಷ್ಟ. ಹಾಗಾಗಿಯೇ ಇವರ ನಿವೃತ್ತ ಪ್ರೊಫೆಸರ್ ಕಂ ಮುಖಂಡ ಪ್ರೊ.ಯಾಪಲಪರವಿಯವರು ತಮ್ಮ ಸತ್ಯ-ಮಿಥ್ಯ ವೇದಿಕೆಯ ಮೇಲಿದ್ದ ಸಮಸ್ತ ಖಾವಿಧಾರಿಗಳನ್ನುದ್ದೇಶಿಸಿ, ''ನೀವು ಇಷ್ಟಲಿಂಗ ಪೂಜೆಯನ್ನು ಸರಳೀಕರಿಸಬೇಕು. ಬೇರೆ ಪಂಥದೋರು ನೀವು ಎಲ್ಲೆನ್ನ ಹೋಗ್ರಿ, ಫೀಸ್ ಕಟ್ರಿ ಅಂತ ಅನ್ನೋಹಂಗ ಸಿಂಪ್ಲಿಫೈ ಮಾಡ್ರಿ. ಯಾಕಂದ್ರ, ನಮ್ಮ ಹುಡುಗರು ಎಲ್ಲೆಲ್ಲೋ ಹೋಗ್ತಾ ಇರ್ತಾರ. ಏಯ್ ಲಿಂಗ ಕಟ್ಕೊಂಡೀರಿ, ಅಲ್ಲಿಗೆಲ್ಲಾ ಹೋಗಬ್ಯಾಡ್ರಿ ಅಂದ್ರ, ಅವು ನಮ್ಮ ಮಾತು ಕೇಳಂಗಿಲ್ಲ. ಹೋಗೇ ತೀರ್ತಾವ. ಯಾಕಂದ್ರ ನಾವೂ ಅಂಥ ಕೆಲವು ಕಡೆ ಹೋಗ್ತಾ ಇರ್ತೇವಿ'' ಎಂದು ನಗುತ್ತಾ ತಮ್ಮ 'ಹೆಮ್ಮೆಯ ಲಂಪಟ' ನೋಟ ಬೀರಿದರು. ಅದನ್ನು ಕೇಳಿ ಆ ಖಾವಿಧಾರಿಗಳು, ಸಭಿಕರು ಎಲ್ಲರೂ ''ಹೌದೌದು, ನಮ್ದು ಬೀ ವಹೀಚ್ ಬಾ'' ಎನ್ನುವಂತೆ ಸಹಮತದ ಲಂಪಟ ನಗೆ ನಕ್ಕರು. ಅಂದರೆ ಧರ್ಮಕ್ಕಾಗಿ ಹೋರಾಡುತ್ತಿರುವ ಈ ಲಿಂಗವಂತರು ಅಂಥ ಹೋಗಬಾರದ ಕಡೆ ಹೋಗುವ ಜಾಗಗಳು ಯಾವುವು? ಖುದ್ದು ಓದುಗರು ಈ ಧರ್ಮಭಂಜಕರ ಮಾತಿನ ಸಾಲುಗಳ ನಡುವಿನ ಧಾರ್ಮಿಕತೆ, ನೈತಿಕತೆ ಎಷ್ಟರ ಮಟ್ಟಿಗೆ ಕುಸಿದಿದೆ ಎಂದು ವಿಶ್ಲೇಷಿಸಿ ವಿಮರ್ಶಿಸಿ. ಇಂಥ ವಿಶ್ವಾಸಘಾತುಕ ಕೃತ್ಯಕ್ಕೆ ಯಾವ ಯಾವ ರಾಜಕಾರಣಿ ಬೆಂಬಲಿಸಿದ್ದಾನೆ ಎಂದೂ ನಿರ್ಣಯಿಸಿ. ಏಕೆಂದರೆ, ಧರ್ಮೋ ಭಕ್ಷತಿ ಭಕ್ಷಿತಃ!

ಇರಲಿ, ಇಷ್ಟಲಿಂಗಕ್ಕೆ ಯಾವುದೇ ಮೈಲಿಗೆಯಿಲ್ಲ. ಹಾಗಾಗಿ ಲಿಂಗವಂತನು ಗರ್ಭಗುಡಿ ಅಥವಾ ಶೌಚಾಲಯಕ್ಕೆ ಹೋಗಲಿ, ಕಾಯಕದಲ್ಲಿರಲಿ ಅಥವಾ ನಿರ್ವಸ್ತ್ರನಾಗಿ ಮೈಥುನದಲ್ಲಿರಲಿ, ಇಷ್ಟಲಿಂಗವನ್ನು ಬಿಚ್ಚಿಡಬಾರದು ಎಂದೇ ದೀಕ್ಷಾಬೋಧೆಯ ವಿಧಿವಿಧಾನವು ತಿಳಿಸುತ್ತದೆ. ಇಂಥ ಒಂದು ಮೂಲಭೂತ ವಿಷಯವೂ ಈ ಗಾಂಪರ ಗುಂಪಿಗೆ ಗೊತ್ತಿಲ್ಲ. ಬಿಳಿಯ ವಸ್ತ್ರಧಾರಿ ಸ್ತ್ರೀಪುರುಷ ಕೋರಸ್ ಸಹನಟಿ/ಟ ಶರಣರನ್ನು ಬಿಡಿ, ಕಾವಿ ಧರಿಸಿ ಲಿಂಗದೀಕ್ಷೆ ಕೊಡುವ ನಟುವಾಂಗ ಅನುರಕ್ತರಾದರೂ ಅರಿತಿರಬೇಕಲ್ಲವೇ? 'ಇಸೀ ಲಿಯೇ ಯೇ ಸಬ್ ಕೆ ಸಬ್ ವಹೀಚ್ ಲಿಂಗಾಹತಿ ಹಿ ಹೈ!' ಹೀಗೆ ಸ್ಪಷ್ಟವಾಗಿ ಅಧರ್ಮೀಯರಾದ ಇವರನ್ನು ತಮ್ಮ ಧರ್ಮದ ರಕ್ಷಕರು ಎಂದು ಬಗೆಯುವುದು ಬಸವಣ್ಣನಿಗೆ ಮಾಡುವ ಘನಘೋರ ಅಪಚಾರವಾಗಿದೆ ಎಂದು ಅಖಂಡ ವೀರಶೈವ ಲಿಂಗವಂತರು ಒತ್ತು ಹಾಕಿ, ಬಣ್ಣದ ಮೆರುಗು ಕೊಟ್ಟು ದಾಖಲಿಸಿಟ್ಟುಕೊಳ್ಳುವುದು ಸದ್ಯದ ತುರ್ತು.

ವೀರಶೈವವು ಧಾರ್ಮಿಕಮತವಾದರೆ ಲಿಂಗಾಯತವು ಅದರ ಸಾಧನೆಯ ಮಾರ್ಗ ಮಾತ್ರ. ಹಾಗಾಗಿ ಈ ಸಮಯಸಾಧಕರು ಹಚ್ಚಿರುವ ಮೂಗಿನ ತುಪ್ಪದ ಪ್ರತ್ಯೇಕ ಧರ್ಮ ಎಂದಿಗೂ ಕೈಗೂಡದು. ಜನರಿಗೆ ಮಂಕುಬೂದಿ ಎರಚಿದಂತೆ ನ್ಯಾಯಾಂಗಕ್ಕೆ ಮಂಕುಬೂದಿ ಎರಚಲಾಗದು. ಹಾಗಾಗಿ 'ನಮ್ಮಂತೆಯೇ ಪರರು' ಎಂದುಕೊಂಡ ಈ ಡಾಂಭಿಕರ ಹುಸಿ ಭರವಸೆ ಫಲ ನೀಡದು. ವೀರಶೈವ ಲಿಂಗಾಯತ ಎರಡೂ ಭಿನ್ನವಲ್ಲದ ಕಾರಣವಾಗಿಯೇ ಜಾಗತಿಕ ಲಿಂಗಾಯತ ಮಹಾಸಭಾದ ಉಪಾಧ್ಯಕ್ಷರು ತಮ್ಮ ಮಗನ ವೈವಾಹಿಕ ಸಂಬಂಧವನ್ನು ವೀರಶೈವ ಮಹಾಸಭಾದ ಅಧ್ಯಕ್ಷರ ಮೊಮ್ಮಗಳೊಂದಿಗೆ ಬೆಳೆಸಿದ್ದಾರೆ. ಇದು ಗುರುಹಿರಿಯರು ನಿಶ್ಚಯಿಸಿದ ಮದುವೆಯೇ ಹೊರತು ಪ್ರೇಮವಿವಾಹವಲ್ಲ. ಒಂದು ವೇಳೆ ವೀರಶೈವ ಲಿಂಗಾಯತ ಬೇರೆಯದೇ ಆಗಿದ್ದರೆ ಅದರ ಮುಖಂಡರು ಈ ವಿವಾಹದ ಮೂಲಕ ಏನು ಸಂದೇಶ ಕೊಡುತ್ತಿದ್ದಾರೆ ಎಂಬುದು ಅವರ ನೈತಿಕತೆಯ ಮೂಲಭೂತ ಪ್ರಶ್ನೆಯಾಗುತ್ತದೆ. ಇಷ್ಟೇ ಧರ್ಮ ಭಂಜಕದ ಮೂಲಭೂತ ತರ್ಕ! ಯಾವೊಬ್ಬ ನಾಯಕ, ಮಠಾಧೀಶನೂ ನಿಮ್ಮ ಒಳಿತನ್ನು ಕಾಪಾಡುತ್ತಿಲ್ಲ. ಅವರೀರ್ವರೂ ಕಾಪಾಡುತ್ತಿರುವುದು ತಮಗೆ ದಕ್ಷಿಣೆ ಕಕ್ಕಬಲ್ಲ, ವೋಟು ಹೆಕ್ಕಬಲ್ಲ ತಾಕತ್ತಿನವರನ್ನೇ ಹೊರತು ಧರ್ಮದ ಅಸ್ತಿತ್ವವನ್ನಲ್ಲ.

ಹಾಗಾಗಿಯೇ ನಿರ್ವೀರ್ಯಶವ ಮಹಾಸಭಾ ಮತ್ತು ಲಿಂಗಾಹತ ಮಹಾಸಭಾ ಎರಡೂ ಅಖಂಡ ವೀರಶೈವರ ಹಿತ ಕಾಪಾಡುವವರಲ್ಲ. ಅಲ್ಲಿರುವ ಎಲ್ಲರೂ ಫಲಾನುಭವ ಬಯಸುವ ಅನುರಕ್ತರೇ ಹೊರತು ಯಾರೂ ಸರ್ವಸಂಗಪರಿತ್ಯಾಗಿಗಳಲ್ಲ. ಇವರೆಲ್ಲರೂ 'ನೀನು ಚಿವುಟಿದಂತೆ ಮಾಡು, ನಾನು ಸಮಾಧಾನ ಮಾಡಿದಂತೆ ನಟಿಸುತ್ತೇನೆ' ಎನ್ನುವ ಪರಸ್ಪರ ಸಹಕಾರಿ ಫಲಾನುಭವಿಗಳೇ ಆಗಿದ್ದಾರೆ. ಧರ್ಮಭಂಜಕ, ಮತ್ತೆ ಕಲ್ಯಾಣದ ರಂಗಜಂಗಮನ ಪರಮ ಭಕ್ತನಾದ ಪ್ರಚ್ಛನ್ನ ರೇಣುಕನೆಂಬುವವ ನಿರ್ವೀರ್ಯಶವ ಮಹಾಸಭಾದ ಕಾರ್ಯದರ್ಶಿಯಾಗಿರುವುದಲ್ಲದೇ ಮಹಾಸಭಾದ ಆಯಕಟ್ಟಿನ ಜಾಗಗಳಲ್ಲಿ ಶ್ಯಾನೆ ಜನ 'ಸಾಣೆ' ಶಿಷ್ಯಂದಿರು ತುಂಬಿದ್ದಾರೆ ಎಂಬುದೇ ಈ ಸಹಕಾರಕ್ಕೆ ಸಾಕ್ಷಿಯಾಗಿದೆ. ಈ ಕಾರ್ಯದರ್ಶಿಯು ಮಹಾಸಭಾದ ಧಾರ್ಮಿಕ ಕಚೇರಿಯಲ್ಲಿ ಕುಳಿತೇ ಪೂರ್ಣಾವಧಿ ವರ್ಗಾವಣೆ ದಂಧೆ, ಸರಕಾರಿ ದಲಾಲಿ ಮಾಡುತ್ತಿರುವುದನ್ನು ಅರ್ಧ ಗಂಟೆ ಮಹಾಸಭಾ ಕಚೇರಿಯ ಮುಂದೆ ನಿಂತರೆ ಸಾಕು ಅರ್ಥವಾಗುತ್ತದೆ. 'ಸ್ವಜಾತಿ ಬಂಧು' ಎಂಬ ಕಾರಣಕ್ಕೆ ಈ ಕಾರ್ಯದರ್ಶಿಯು ಹೇಳಿದಂತೆ ರಾಷ್ಟ್ರೀಯ ಅಧ್ಯಕ್ಷರು ತಲೆಯಾಡಿಸುತ್ತಾರೆ ಎಂದು ಎಲ್ಲೆಡೆ ಸುದ್ದಿಯಿದೆ. ಹೀಗೆ ಮಹಾಸಭಾದ ಪವಿತ್ರ ಉದ್ದೇಶಗಳು ಇಂಥ ಅಪವಿತ್ರ 'ಮೈತ್ರಿ'ಯಿಂದ ಕಲುಷಿತಗೊಂಡಿವೆ ಎಂಬುದು ಕಣ್ಣಿಗೆ ರಾಚಿದರೂ ಕಾಣದಷ್ಟು ಸಮಾಜ ಕುರುಡು ಕೂಪಮಂಡೂಕವಾಗಿ ನುಣ್ಣಗೆ ಸಾಣೆ ಹಿಡಿಸಿಕೊಂಡಿದೆ.

ಇಂಥ ವಿಷ ವರ್ತುಲದಲ್ಲಿ ಸಿಲುಕಿರುವ ಸಮಾಜವನ್ನು ಸತ್ಯಾಸತ್ಯತೆಯ ಮಂಥನದ ಮೂಲಕ ಚಿಂತನೆಗೆ ಹಚ್ಚಿರುವ 'ವಿಶ್ವವಾಣಿ'ಯನ್ನು ಬಸವ ವಿರೋಧಿ, ಲಿಂಗಾಯತ ವಿರೋಧಿ, ಜಾಹೀರಾತು ಪತ್ರಿಕೆ ಇತ್ಯಾದಿಯಾಗಿ ಬಿಂಬಿಸುವ ಪ್ರಯತ್ನವನ್ನು ಈ ಬೆತ್ತಲಾದ 'ನಾಟಕೀಯ ವ್ಯಕ್ತಿತ್ವದ ಅಸ್ವಸ್ಥರು' ಹತಾಶರಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಯತ್ನಿಸಿದ್ದಾರೆ. 'ಮುಳುಗುತ್ತಿರುವವನಿಗೆ ಹುಲ್ಲು ಕಡ್ಡಿಯೂ ಆಸರೆ' ಎಂಬ ಗಾದೆಯನ್ನು ಅವರ ಪ್ರಯತ್ನಗಳು ಸಾಬೀತುಪಡಿಸುತ್ತಿವೆ. ಅಂದಹಾಗೆ, 'ವಿಶ್ವವಾಣಿ' ಪತ್ರಿಕೆಯು ಹೆಚ್ಚು ಆನ್‌ಲೈನ್ ವೀಕ್ಷಕರನ್ನು ಹೊಂದಿದ ಕನ್ನಡ ದೈನಿಕ ಎಂದು ಗುರುತಿಸಲ್ಪಟ್ಟಿದೆ. ಮೇಲಾಗಿ ಈ ಸರಣಿಯಲ್ಲಿ ಕೊಟ್ಟಿರುವ ಎಲ್ಲಾ ಸಂಶೋಧನ ಮಾಹಿತಿ, ಸಾಕ್ಷಿ, ಪುರಾವೆಗಳು ಸಾರ್ವತ್ರಿಕವಾಗಿ ಸದಾ ತೆರೆದಿಟ್ಟಿರುವ ಮಾಹಿತಿ! ಸಮಾಜದ ಕಟ್ಟಕಡೆಯ ಯಾ ಮೊತ್ತಮೊದಲ ಎಂಬ ಭೇದವಿಲ್ಲದೆ ಯಾರು ಬೇಕಿದ್ದರೂ ತಮ್ಮ ಬೆರಳ/ಬಾಯಿಯ ತುದಿಯ ತಂತ್ರಜ್ಞಾನವನ್ನು ಬಳಸಿ ತಮ್ಮ ಮಿದುಳ ತುದಿಯ ನರಮಂಡಲದಿಂದ ಲಿಂಗಪ್ರಮಾಣವಾಗಿ ಪರಿಶೀಲಿಸಬಹುದು.

ಆಚರಣೆ, ಸಂಪ್ರದಾಯ, ವಿಚಾರ, ಜೀವನಶೈಲಿಯಲ್ಲಿ ಯಾವುದೇ ವ್ಯತ್ಯಾಸವಿಲ್ಲದ ಲಿಂಗವಂತ ವೀರಶೈವ ಸಮಾಜ 'ಅರಿದೊಡೆ ಆರದು, ಮರೆದೊಡೆ ಮೂರದು' ಎಂಬುದನ್ನು ಅರಿತುಕೊಳ್ಳಬೇಕು. ಏಕೆಂದರೆ, ಈ ಮತಧರ್ಮವು ಆರದೆ ಸದಾ ಬೆಳಗುವುದೋ ಮೂರಾಬಟ್ಟೆಯಾಗುವುದೋ ಎಂದು ನಿಶ್ಚಯಿಸುವ ಸಮಯ ಈಗ ಅದರ ಮುಂದಿದೆ, ಅದೇ ಕೇಂದ್ರ ಸರಕಾರ ಘೋಷಿಸಿರುವ ಜಾತಿ ಗಣತಿ!

ಇಲ್ಲಿ ಈ ಪಂಥವು ಭಂಜಕಪೂರ್ವವಿದ್ದ ಧಾರ್ಮಿಕ ಸಮನ್ವಯದ ಒಗ್ಗಟ್ಟನ್ನು ದಾಖಲಿಸಬೇಕಿದೆ. ಇಲ್ಲದಿದ್ದರೆ ಅದು ಸದ್ಯದ ರಾಜ್ಯ ಸರಕಾರ ಪ್ರಕಟಿಸಿರುವ ಮತ್ತು ಜ್ವಲಂತ ಸುದ್ದಿಯಾಗಿರುವ ಜಾತಿಗಣತಿ ಉರ್ಫ್ ಸಮೀಕ್ಷೆಯಂತೆಯೇ ಇರುತ್ತದೆ, ಎಚ್ಚರ! ಮಾಹಿತಿ ತಂತ್ರಜ್ಞಾನದ ಈ ಯುಗಮಾನದಲ್ಲಿ ಯಾವುದೇ ಇತಿಹಾಸ, ಸಾಕ್ಷಿ ಪುರಾವೆ, ವಿಶ್ಲೇಷಣೆಗಳನ್ನು ಕುಳಿತಲ್ಲೇ ಪರಿಶೀಲಿಸಬಹುದು. ಹಾಗಿದ್ದಾಗ ಪ್ರತ್ಯೇಕಿಗಳ ಹುಸಿಯನ್ನು ನಂಬಿ ವಿಭಜಿಸಿಕೊಂಡರೆ ಮುಂದಿನ ಜನಾಂಗವು ತಮ್ಮ ವಂಶಜರು ತಂತ್ರಜ್ಞಾನದ ಯುಗದಲ್ಲಿಯೂ ಇಷ್ಟೊಂದು ಕಡುಮೂರ್ಖರಿದ್ದರೇ ಅಥವಾ ಇಷ್ಟೊಂದು ಅನೈತಿಕ ಆತ್ಮವಂಚನೆ ಮಾಡಿಕೊಂಡಿದ್ದರೇ ಎಂದು ಶಪಿಸುವುದು ನಿಶ್ಚಿತ.

ಇನ್ನು ಭಾರತದ ಪ್ರಪ್ರಥಮ ದಾಖಲಿತ ಜನಗಣತಿಯನ್ನು ಆರಂಭಿಸಿದ್ದ ಹತ್ತೊಂಬತ್ತನೇ ಶತಮಾನದ ಬ್ರಿಟಿಷ್ ಅಧಿಕಾರಿ ಫ್ರಾನ್ಸಿಸ್ ಬುಕನನ್ ''ವೀರಶೈವವು ಒಂದು ಜಾತಿಯಾಗಿರದೆ ತನ್ನದೇ ಆದ ಅಗಾಧವೆನ್ನುವಂಥ ಸಾಮಾಜಿಕ ವ್ಯವಸ್ಥೆಯಾಗಿದೆ. ಹಿಂದೂ ಎಂಬುದು ಹೇಗೆ ಒಂದು ಸಾಮಾಜಿಕ ವ್ಯವಸ್ಥೆಯಾಗಿದೆಯೋ ಹಾಗೆಯೇ ವೀರಶೈವವೂ ಒಂದು ಪರ್ಯಾಯ ಸಾಮಾಜಿಕ ವ್ಯವಸ್ಥೆಯಾಗಿದೆ. ಅದಲ್ಲದೆ ವೀರಶೈವರು ಬೇರೆ ಧರ್ಮ ಮತ್ತು ವರ್ಗಗಳ ಜನರನ್ನು ಮತಾಂತರದ ಮೂಲಕ ಒಳಗೊಳ್ಳುತ್ತಾರೆ'' ಎಂದು ದಾಖಲಿಸಿದ್ದಾನೆ. ಹಾಗೆಯೇ ಇನ್ನಿತರೆ ಬ್ರಿಟಿಷ್ ಭಾರತದ ಜನಗಣತಿ ಅಧಿಕಾರಿಗಳು ವೀರಶೈವರಲ್ಲಿನ ವೈವಿಧ್ಯಮಯ ಉದ್ಯೋಗಗಳು, ಜೀವನ ಶೈಲಿಗಳು, ಸಂಸ್ಕೃತಿ ವೈವಿಧ್ಯಗಳು ಈ ಜನಾಂಗವನ್ನು ಒಂದು ವರ್ಗಕ್ಕೆ ಸೀಮಿತಗೊಳಿಸುವುದನ್ನು ಅತ್ಯಂತ ಕಷ್ಟಕರವಾಗಿಸಿದೆ ಎನ್ನುತ್ತಲೇ ತಮ್ಮ 1881ರ ಜನಗಣತಿಯಲ್ಲಿ ವೀರಶೈವರನ್ನು ಹಿಂದೂ ಧರ್ಮದ 'ಶೂದ್ರ'ರೆಂದು ದಾಖಲಿಸಿದ್ದಾರೆ. ಫ್ರಾನ್ಸಿಸ್ ಬುಕನನ್ ಹ್ಯಾಮಿಲ್ಟನ್ ಮತ್ತು ಬ್ರಿಟಿಷ್ ಜನಗಣತಿ ಅಧಿಕಾರಿಗಳ ಅಭಿಪ್ರಾಯದಂತೆ ವೀರಶೈವವು ಬೌದ್ಧ, ಜೈನ, ಸಿಖ್ ಧರ್ಮಗಳಂತೆಯೇ ಹಿಂದೂ ಸಂಸ್ಕೃತಿಯ ಧರ್ಮವಾಗುತ್ತದೆ. ಈ ವಿವರಗಳು 1871 and the 1881 colonial era census of British India ವರದಿಗಳಲ್ಲಿವೆ. ಆಸಕ್ತರು ಗಮನಿಸಬಹುದು.

ಇನ್ನು ಈ ಜನಗಣತಿಯಲ್ಲಿ ಬ್ರಿಟಿಷರು ತಮ್ಮನ್ನು 'ಶೂದ್ರ' ಎಂದ ವರ್ಗೀಕರಿಸಿದ್ದನ್ನು ವಿರೋಧಿಸಿ ವೀರಶೈವರು, ಬ್ರಾಹ್ಮಣರ ಕೈಯಿಂದ ಮಾಡಿದ ಅಡುಗೆಯನ್ನೂ ತಿನ್ನದ ನಮ್ಮನ್ನು ಕನಿಷ್ಠ 'ಬ್ರಾಹ್ಮಣ-ಸಮಾನ' ಎಂದು ಪರಿಗಣಿಸಬೇಕು ಎಂದು 1881ರ ಜನಗಣತಿಯನ್ನು ಒಪ್ಪದೆ ತಿರಸ್ಕರಿಸಿದ್ದರು. ಕಡೆಗೆ 1926ರಲ್ಲಿ ಬಾಂಬೆ ಹೈಕೋರ್ಟ್ 'ವೀರಶೈವರು ಶೂದ್ರರಲ್ಲ' ಎಂದು ತೀರ್ಪು ಕೊಟ್ಟು ವೀರಶೈವರ ಬೇಡಿಕೆಯನ್ನು ಈಡೇರಿಸುತ್ತದೆ. ಇಂಥ ಐತಿಹಾಸಿಕ ತೀರ್ಪನ್ನು ಭಂಜಕರು ಇದು ಕೇವಲ ಜಂಗಮರಿಗೆ ಅನ್ವಯಿಸಿದೆ ಎಂದು ಸುಳ್ಳು ಬಿತ್ತಿ ಜನಾಂಗೀಯ ದ್ವೇಷವನ್ನು ಹಬ್ಬಿಸಿದ್ದಾರೆ. ಈ ಕೋರ್ಟ್ ದಾಖಲೆಯನ್ನು ಯಾರು ಬೇಕಿದ್ದರೂ ಖುದ್ದು ಓದಿ ತಿಳಿದುಕೊಳ್ಳಬಹುದು.

ಈ ತೀರ್ಪಿಗೂ ಮುನ್ನ 1910ರಲ್ಲಿ ಮಹಾಸಭಾ 'ಬಸವ ಮತ್ತು ಅಲ್ಲಮ' ಇಬ್ಬರನ್ನೂ ಜಂಟಿಯಾಗಿ ವೀರಶೈವ ಧರ್ಮವನ್ನು ಪ್ರಚುರಪಡಿಸಿದವರೆಂದು ತನ್ನ ಸಂಕಥನವನ್ನು ಮಂಡಿಸಿ ವೀರಶೈವವು ಬೇರೆಯದೇ ಆದ ಧರ್ಮ ಎಂಬ ಬೇಡಿಕೆಯನ್ನು ಇಟ್ಟಿತ್ತು. ಆದರೂ ಪ್ರತ್ಯೇಕ ಧರ್ಮ ಮಾನ್ಯತೆ ಅಂದೂ ಸಿಕ್ಕಿರಲಿಲ್ಲ. ಏಕೆಂದರೆ ಅಂದಿನ ವೀರಶೈವ ಮಹಾಸಭಿಕರು ಸಹ ಅಬ್ರಹಾಮಿಕ್ ಧರ್ಮಗಳ ರೀತಿ ಅಂದಿನ ಸರಕಾರದ ಪ್ರಕಾರ ಧರ್ಮಕ್ಕೊಬ್ಬ ಸಂಸ್ಥಾಪಕ ಇರಲೇಬೇಕು ಎಂದು ತಿಳಿದಿದ್ದರೇ ಹೊರತು ಹಿಂದೂ ಮೂಲದ ವಿಕಸಿತ ಧರ್ಮಗಳನ್ನು ತಾರ್ಕಿಕವಾಗಿ ಬ್ರಿಟಿಷರಿಗೆ ತಿಳಿಸುವ ಪ್ರಯತ್ನವನ್ನು ಮಾಡಲಿಲ್ಲ. ಅಂದಿನ ಬ್ರಿಟಿಷ್ ಆಡಳಿತದಲ್ಲಿ ಸರಕಾರಕ್ಕೆ ತಿಳಿಸುವುದು ಕಷ್ಟವಿದ್ದರೂ ಇದ್ದಿತೇನೋ!

ಇಂತಪ್ಪ ಬ್ರಿಟಿಷ್ ಆಡಳಿತದ 1910ರ ಬೇರೆಯದೇ ಆದ ಧರ್ಮ ಎಂಬ ಸಂಕಥನವು ಇಪ್ಪತ್ತೊಂದನೇ ಶತಮಾನದ ಪ್ರಜಾಪ್ರಭುತ್ವದಲ್ಲಿ 'ನಿಜದ ಕಾಳಾಮುಖ ಪರಂಪರೆಯ ವೀರಶೈವ ಜಂಗಮನಾಗಿದ್ದ ಅಲ್ಲಮ'ನನ್ನು ಬಯಲಾಗಿಸಿ ಇಲ್ಲಮನೆನ್ನಿಸಿ ಅದೇ ಜಂಗಮ ಬಸವನನ್ನು 'ಸಂಕಥನದ ಬಸವಣ್ಣ'ನಾಗಿಸಿ ತಮ್ಮ ಧರ್ಮ ಸಂಸ್ಥಾಪಕನೆಂದು ಈಗ ಮೀಸಲಾತಿ ಬೇಕೆನ್ನುತ್ತಿದೆ. ಯಾವ ಪಂಥ ನಾವು ಶೂದ್ರರಲ್ಲ ಎಂದಿತ್ತೋ ಅದೇ ಪಂಥ ತಮ್ಮ ಆದಿ ಪರಂಪರೆಯ ಅಲ್ಲಮನನ್ನು ಅಕ್ಷರಶಃ ಗುಹೆಗೆ ತಳ್ಳಿ ಬಸವಣ್ಣನಿಗೆ ಕಿರೀಟ ತೊಡಿಸಿ ಕುದುರೆಯ ಮೇಲೆ ಕೂರಿಸಿ ವೀರ-ಶೈವನಾಗಿಸಿತ್ತೋ ಅದೇ ರಾಜಕೀಯ-ಪ್ರೇರಿತವರ್ಗ ಬಸವಣ್ಣನನ್ನು ನೆಲದ ಮೇಲೆ ಕುಳ್ಳಿರಿಸಿ ಕೈಗೆ ಓಲೆಗರಿ ಕಟ್ಟು ಕೊಟ್ಟು ಲಿಂಗಾಯತ ಧರ್ಮ ಸಂಸ್ಥಾಪಕ ಎನ್ನುತ್ತಿದೆ. ಹಾಗಾಗಿ ಈ ಪ್ರಚ್ಛನ್ನ ಪ್ರತ್ಯೇಕತೆಯ ಅಧಃಪತನದ ಫಲಿತಾಂಶ ಸುಸ್ಪಷ್ಟ.

ಸಮಗ್ರವಾಗಿ ಈ ಎಲ್ಲಾ ಹಿನ್ನೆಲೆಯಲ್ಲಿ ವೀರಶೈವ ಲಿಂಗವಂತ ಮತವು ಪ್ರತ್ಯೇಕ ಧರ್ಮ ಎಂದು ಸಾಬೀತುಪಡಿಸಲು ಯಾವುದೇ ವಿಶೇಷ ಸಂಶೋಧನೆ, ಸಂಕಥನ, ಮಾರ್ಪು, ತೋರ್ಪು ಬೇಕಿಲ್ಲ. ಕೇವಲ ಭಾರತೀಯ ಪ್ರಜಾಪ್ರಭುತ್ವದ ಸಾಂವಿಧಾನಿಕ ಅಂಶಗಳನ್ನು ನ್ಯಾಯಯುತವಾಗಿ ಪ್ರಶ್ನಿಸಿದರೆ ಸಾಕು, ಪ್ರತ್ಯೇಕ ಧರ್ಮದ ಮಾನ್ಯತೆ ಸಿಗಲೇಬೇಕು! ಏಕೆಂದರೆ ಇದು ಅಬ್ರಹಾಮಿಕ್ ಮತದ ಬ್ರಿಟಿಷ್ ಆಡಳಿತವಲ್ಲ, ನಮ್ಮದೇ ಆದ ಹಿಂದೂ ಪ್ರಭೇದದ ಧರ್ಮದವರಿಗಾಗಿಯೇ ರೂಪುಗೊಂಡ ಪ್ರಜಾಪ್ರಭುತ್ವ ರಾಷ್ಟ್ರ. ಈಗ ಬೇಕಿರುವುದು ಅಂಥ ಸಮಗ್ರತೆಯ ಕಾನೂನಾತ್ಮಕ ಹೋರಾಟದ ತಾರ್ಕಿಕ ಮಾರ್ಗ ಮಾತ್ರ! ಏಕೆಂದರೆ, ಭಾರತದ ಸಂವಿಧಾನದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಪ್ರಕಾರ: ಯಾವುದೇ ವ್ಯಕ್ತಿ ಯಾವುದೇ ಧರ್ಮವನ್ನು ನಂಬುವ ಅಥವಾ ನಂಬದಿರುವ ಹಕ್ಕನ್ನು ಹೊಂದಿದ್ದಾನೆ. ಧರ್ಮವನ್ನು ಪ್ರಚಾರ ಮಾಡುವ, ಆಚರಿಸುವ, ಪ್ರಸಾರ ಮಾಡುವ, ಧಾರ್ಮಿಕ ನಂಬಿಕೆಗಳನ್ನು ವ್ಯಕ್ತಪಡಿಸುವ, ಧಾರ್ಮಿಕ ಪದ್ಧತಿಗಳನ್ನು ಆಚರಿಸುವ ಮತ್ತು ಇತರರೊಂದಿಗೆ ತನ್ನ ನಂಬಿಕೆಗಳನ್ನು ಹಂಚಿಕೊಳ್ಳಲು ಸ್ವತಂತ್ರನಾಗಿದ್ದಾನೆ. ಹಾಗೆಯೇ ಧಾರ್ಮಿಕ ಸಂಪ್ರದಾಯಗಳನ್ನು ನಿರ್ವಹಿಸುವ ಹಕ್ಕನ್ನು ಸಂವಿಧಾನ ಗುರುತಿಸುತ್ತದೆ.

ಅಂದು ಫ್ರಾನ್ಸಿಸ್ ಬುಕನನ್ ಹ್ಯಾಮಿಲ್ಟನ್ ಮತ್ತು ಬ್ರಿಟಿಷ್ ಜನಗಣತಿ ಅಧಿಕಾರಿಗಳ ಅಭಿಪ್ರಾಯದಂತೆ ವೀರಶೈವವು ಬೌದ್ಧ, ಜೈನ, ಸಿಖ್ ಮತಧರ್ಮಗಳಂತೆಯೇ ಬೇರೆಯದೇ ಮತದಂತಿದ್ದರೂ ಅದನ್ನು ಹಿಂದೂ ಧರ್ಮ ಎಂದು ಗುರುತಿಸುವ ಅನಿವಾರ್ಯತೆ ಅವರಿಗಿದ್ದ ಕಾರಣ 'ಶೂದ್ರ' ಎಂದು ನಮೂದಿಸಿದ್ದರು. ಆದರೆ ಈಗ ಹಿಂದೂ ಎಂಬುದು ಧರ್ಮವಲ್ಲ, ಅದೊಂದು ಸಂಸ್ಕೃತಿ ಎಂದು ಸುಪ್ರೀಂಕೋರ್ಟ್ ಹೇಳಿದೆ. ಹಾಗಾಗಿ, ''ಧಾರ್ಮಿಕ ಸಂಪ್ರದಾಯಗಳನ್ನು ನಿರ್ವಹಿಸುವ ಹಕ್ಕನ್ನು ಸಂವಿಧಾನ ಗುರುತಿಸುತ್ತದೆ'' ಎಂಬುದನ್ನು ಸ್ಪಷ್ಟವಾಗಿ ಸರಕಾರ ಗುರುತಿಸಿಲ್ಲ ಎಂದಾಗುತ್ತದೆ. ನಮ್ಮ ಧರ್ಮ ವೀರಶೈವ ಧರ್ಮ. ಇದು ಸನಾತನವಾಗಿ ವಿಕಾಸಗೊಂಡ ಧರ್ಮ. ಇದರ ಧರ್ಮಗ್ರಂಥ ಶಕ್ತಿವಿಶಿಷ್ಟಾದ್ವೈತ. ನಮ್ಮ ಧರ್ಮದ ರೀತಿಯೇ ಹಿಂದೂ ಪ್ರಭೇದದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪಾಲಿಸುವ ವಿಕಸಿತ-ಮತಧರ್ಮದ ಅನ್ಯಧರ್ಮೀಯರೂ ಸಂವಿಧಾನದ ಮೂಲಭೂತ ಹಕ್ಕಾದ ಧಾರ್ಮಿಕ ಹಕ್ಕಿನಿಂದ ವಂಚಿತರಾಗಿದ್ದಾರೆ. ಧಾರ್ಮಿಕ ಹಕ್ಕಿನ ಎಲ್ಲಾ ಅಂಶಗಳನ್ನು ಪಾಲಿಸಲು ನಮಗೆ ಸ್ವಾತಂತ್ರ್ಯವಿದ್ದರೂ ಭಾರತ ಗಣರಾಜ್ಯದಲ್ಲಿ ಸಾಂವಿಧಾನಿಕವಾಗಿ ನಮ್ಮ ಧರ್ಮಕ್ಕೆ ಸರಕಾರ ಮಾನ್ಯತೆ ನೀಡದೆ ತಾರತಮ್ಯತೆ ಪಾಲಿಸುತ್ತಿದೆ. ಹಾಗಾಗಿ ತಕ್ಷಣಕ್ಕೆ ನಮ್ಮ ಧರ್ಮವನ್ನು ಅಧಿಕೃತ ಧರ್ಮ ಎಂದು ಸರಕಾರ ಘೋಷಿಸಬೇಕು ಎಂದು ದಾವೆ ಹೂಡಬೇಕು. ಹಾಗಾದಾಗ ಕೇವಲ ವೀರಶೈವ ಅಲ್ಲದೆ ಅನ್ಯಾಯಕ್ಕೊಳಗಾಗಿರುವ ಹಿಂದೂ ಪ್ರಭೇದದ ಎಲ್ಲಾ ವಿಕಸಿತ ಧರ್ಮಗಳಿಗೂ ನ್ಯಾಯ ಸಿಗುತ್ತದೆ. ಅಂಥ ಸಮೂಹ ನಾಯಕತ್ವದ ಹೋರಾಟವನ್ನು ಸಂಯುಕ್ತ ವೀರಶೈವ ಧರ್ಮೀಯರು ಆರಂಭಿಸಿ ಸತ್ಯ ಭಾರತದ ದರ್ಶನಕ್ಕೆ ಮುಂದಾಗಬೇಕು. ಹೀಗೆ ಹಿಂದೂ ಪ್ರಭೇದದ ಧರ್ಮಗಳು ಅಧಿಕೃತ ಧರ್ಮಗಳಾದಾಗ ಸತ್ಯಾಧರಿತ ವಾಸ್ತವಿಕ ಧರ್ಮ ಸಮನ್ವಯದ ಚಿತ್ರಣ ಸಿಗುತ್ತದೆ. ಇಲ್ಲದಿದ್ದರೆ ಭಾರತವು ಪ್ರಚ್ಛನ್ನ ಇಸ್ಲಾಮಿಕ್ ಸ್ಟೇಟ್ ಎಂಬ ಬೂದಿ ಮುಚ್ಚಿದ ಕೆಂಡದಂತಿರುವ ವಾಸ್ತವವು ಪ್ರತ್ಯೇಕಿಗಳ ಅಪಾನವಾಯುವನ್ನೇ ಇಂಧನವಾಗಿ ಬಳಸಿ ಮುಂದೆ ಭಗಭಗ ಎಂದು ಪ್ರಜ್ವಲಿಸುತ್ತದೆ.

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 15

ನಾಡಿನ ಸರ್ವತೋಮುಖ ಅಭಿವೃದ್ಧಿಗೆ

ಗ್ಯಾರಂಟಿ ಸರಕಾರ

ಎರಡನೇ ವರ್ಷದ ಸಂಭ್ರಮದಲ್ಲಿರುವ ರಾಜ್ಯ ಸರಕಾರದ ರಿಪೋರ್ಟ್ ಕಾರ್ಡ್

ಅಧಿಕಾರಕ್ಕೆ ಬಂದ ಆರೇ ತಿಂಗಳಲ್ಲಿ 'ನುಡಿದಂತೆ' ಐದು ಗ್ಯಾರಂಟಿಗಳ ಅನುಷ್ಠಾನ

ಗ್ಯಾರಂಟಿಯ ಜತೆಜತೆಗೆ ಅಭಿವೃದ್ಧಿಗೆ ಲಕ್ಷ ಕೋಟಿಗೂ ಮಿಗಿಲಾದ ಅನುದಾನ ಮೀಸಲು

ಇಂದು ಒಂದು ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕುಪತ್ರ ವಿತರಣೆ

ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸಲು 3.10 ಲಕ್ಷ ರೈತರಿಗೆ 628.23 ಕೋಟಿ ಸಹಾಯಧನ

3541 ಫಲಾನುಭವಿಗಳಿಗೆ ಕೃಷಿ ವಿಕಾಸ ಯೋಜನೆಯಲ್ಲಿ ಸಹಾಯ

ವರ್ಷ ದ್ವಿತೀಯ ಸಾಧನೆ ಅದ್ವಿತೀಯ

[illegible] ಅನುಕೂಲವಾಗುತ್ತಿದೆ. ಶಕ್ತಿ ಯೋಜನೆಯ ಕುರಿತು ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವು ಅಧ್ಯಯನಗಳು ನಡೆದಿದ್ದು, ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ. ಶಕ್ತಿ ಯೋಜನೆ ನಮ್ಮ ಆರ್ಥಿಕ ಶಕ್ತಿಗೆ ನವ ಚೈತನ್ಯವನ್ನೇ ಉಂಟು ಮಾಡಿದೆ. ಈ ರೀತಿಯ ಯಾವುದೇ ಸರಕಾರಿ ಯೋಜನೆಗಳು ಬಂದರೂ, ಅದು ಪೂರ್ಣ ಪ್ರಮಾಣದಲ್ಲಿ ನಾಡಿನ ಜನರಿಗೆ ತಲುಪುವುದಿಲ್ಲ ಎನ್ನುವ ಸಾಮಾನ್ಯ ಆರೋಪವಿದೆ. ಆದರೆ ಸರಕಾರ ಈ ಎಲ್ಲ ಯೋಜನೆಗಳನ್ನು ಡಿಬಿಟಿ ಮೂಲಕ ನೇರ ಫಲಾನುಭವಿಗಳ ಖಾತೆಗೆ ಹಾಕುವ ತೀರ್ಮಾನವನ್ನು ಕೈಗೊಳ್ಳುವ ಮೂಲಕ ಭ್ರಷ್ಟಾಚಾರಕ್ಕೆ ಅವಕಾಶ ಸಿಗದಂತೆ ನೋಡಿಕೊಂಡಿತ್ತು. ಇನ್ನು ಈ ಪಂಚಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಬಹುಪಾಲು ಕುಟುಂಬಗಳು ವಾರ್ಷಿಕ 60ರಿಂದ 70 ಸಾವಿರ ಸರಾಸರಿ ಲಾಭ ಪಡೆಯುತ್ತಿದೆ ಎನ್ನುವುದು ವಾಸ್ತವ.

10 ಕೆಜಿ ಅಕ್ಕಿಯನ್ನು ಒದಗಿಸಿದ ಸರಕಾರ

ಕಾಂಗ್ರೆಸ್ ಸರಕಾರ ಅಧಿಕಾರ ಅನ್ನಭಾಗ್ಯ ಯೋಜನೆಯಲ್ಲಿ 10 ಕೆಜಿ ಅಕ್ಕಿಯನ್ನು ನೀಡುವುದಾಗಿ ಘೋಷಿಸಿದ ಬಳಿಕ ಬಿಪಿಎಲ್ ಕಾರ್ಡ್ ಹೊಂದಿರುವ ವ್ಯಕ್ತಿಗೆ 10 ಕೆ.ಜಿ ಅಕ್ಕಿ ನೀಡಲು ಅಗತ್ಯ ಅಕ್ಕಿಯ ದಾಸ್ತಾನು ಇರಲಿಲ್ಲ. ಈ ಸಮಯದಲ್ಲಿ ಹೆಚ್ಚು ಅಕ್ಕಿ ಬೆಳೆಯುವ ರಾಜ್ಯಗಳಿಂದ ಹಾಗೂ ಕೇಂದ್ರ ಸರಕಾರದಿಂದ ಅಕ್ಕಿ ಖರೀದಿಸಲು ಸರಕಾರ ಪ್ರಯತ್ನಿಸಿದರೂ, ಕೇಂದ್ರದಿಂದ ನಿರೀಕ್ಷಿತ 'ಸಹಾಯ' ಸಿಗಲಿಲ್ಲ. ಆದರೆ ನಾಡಿನ ಜನರಿಗೆ ನೀಡಿರುವ ವಚನವನ್ನು ತಪ್ಪಬಾರದು ಎನ್ನುವ ಉದ್ದೇಶದಿಂದ ರಾಜ್ಯ ಸರಕಾರ ಒಂದುವರೆ ವರ್ಷಕ್ಕೂ ಹೆಚ್ಚು ಕಾಲ ಐದು ಕೆ.ಜಿ. ಅಕ್ಕಿ ಹಾಗೂ ಐದು ಕೆ.ಜಿ ಮೌಲ್ಯದ ಹಣವನ್ನು ಬಿಪಿಎಲ್ ಕಾರ್ಡ್‌ನಲ್ಲಿರುವ ಯಜಮಾನಿನ ಖಾತೆಗೆ ಹಾಕಲಾಯಿತು. ಇದೀಗ ಅಕ್ಕಿ ಲಭ್ಯವಾಗಿರುವುದರಿಂದ, ಹಣದ ಬದಲು ಹೆಚ್ಚುವರಿ ಐದು ಕೆ.ಜಿ. ಅಕ್ಕಿ ನೀಡಲಾಗುತ್ತಿದೆ.

ಮೂಗು ಮುರಿದವರಿಗೆ ಅಭಿವೃದ್ಧಿಯಿಂದಲೇ ಉತ್ತರ

ಆರಂಭದಲ್ಲಿ ಕಾಂಗ್ರೆಸ್ ಪಕ್ಷ ಈ ಪಂಚ ಗ್ಯಾರಂಟಿಗಳನ್ನು ಘೋಷಿಸಿದಾಗ ಪ್ರತಿಪಕ್ಷಗಳು ಈ ಯಾವ ಯೋಜನೆಗಳು ಜಾರಿಯಾಗುವುದಿಲ್ಲ ಎಂದು ಮೂಗುಮುರಿದಿದ್ದ ಹೆಚ್ಚು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಇಡೀ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಕೆಲವೇ ದಿನದಲ್ಲಿ ಈ ಎಲ್ಲ ಯೋಜನೆಗಳ ಅನುಷ್ಠಾನಕ್ಕೆ ಅನುಮೋದನೆ ನೀಡಿದರು. ಬಳಿಕ ತಾಂತ್ರಿಕ ಸಿದ್ಧತೆ ಮಾಡಿಕೊಂಡು, ಅಧಿಕಾರಕ್ಕೆ ಬಂದ ಆರು ತಿಂಗಳು ಕಳೆಯುವುದರೊಂದಿಗೆ ಪಂಚಗ್ಯಾರಂಟಿ ಯೋಜನೆಗಳೂ ಜಾರಿಗ ಬರುವಂತೆ ನೋಡಿಕೊಂಡರು. ಕರ್ನಾಟಕದಲ್ಲಿ ಈ ಪಂಚ ಗ್ಯಾರಂಟಿಗಳು ಯಶಸ್ವಿಯಾಗುತ್ತಿದ್ದಂತೆ, ವಿರೋಧಿಸಿದ್ದವರೂ ಸೇರಿದಂತೆ ಬಹುತೇಕರು 'ಕರ್ನಾಟಕ ಮಾದರಿ'ಯ ಗ್ಯಾರಂಟಿ ಯೋಜನೆಗಳನ್ನು ಜಾರಿವಗೆ ತರುವ ಮೂಲಕ ದೇಶದ ಇತಿಹಾಸದಲ್ಲಿ 'ಸಾರ್ವತ್ರಿಕ ಮೂಲ ಆದಾಯ'ಕ್ಕೆ ಹೊಸ ಆಯಾಮವನ್ನು ಬರೆಯಲು ಕರ್ನಾಟಕ ಮುನ್ನಡಿ ಬರೆದಿದೆ.

ಕರ್ನಾಟಕವನ್ನು ಸಮತೆ, ಸಾಮರಸ್ಯದ ನಾಡಾಗಿ, ಅಭಿವೃದ್ಧಿ, ನವೋನ್ವೇಷಣೆಯ ಬೀಡಾಗಿ ಜಾಗತಿಕವಾಗಿ ಮುಂಚೂಣಿಯಲ್ಲಿ ನಿಲ್ಲಿಸುವ ಉದ್ದೇಶದೊಂದಿಗೆ, ನಿಮ್ಮೆಲ್ಲರ ಪ್ರಚಂಡ ಆಶೀರ್ವಾದದಿಂದ ನಾವು ಅಧಿಕಾರಕ್ಕೆ ಬಂದು ಎರಡು ವರ್ಷಗಳು ಸಂದಿವೆ. 'ನುಡಿದಂತೆ ನಡೆಯುವ' ನಿಮ್ಮೆಲ್ಲರ ಈ ನೆಚ್ಚಿನ ಸರಕಾರ ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಾಡಿನ ಸಾಮಾಜಿಕ ಬದುಕಿನಲ್ಲಿ ಆರ್ಥಿಕ ಪ್ರಗತಿಯಲ್ಲಿ ಗಣನೀಯವಾದ ಗುಣಾತ್ಮಕ ಬದಲಾವಣೆಗಳನ್ನು ತರುವಲ್ಲಿ ಯಶಸ್ವಿಯಾಗಿದೆ. ಎಲ್ಲರನ್ನೂ ಒಳಗೊಳ್ಳುವ, ಎಲ್ಲ ಕ್ಷೇತ್ರಗಳನ್ನು ವ್ಯಾಪಿಸುವ ಸುಸ್ಥಿರ, ಸರ್ವಾಂಗೀಣ ಪ್ರಗತಿಯ ಸಾಂವಿಧಾನಿಕ ಆಶಯವನ್ನು ಇಂದು ದೇಶದಲ್ಲಿಯೇ ಅಭೂತಪೂರ್ವ ರೀತಿಯಲ್ಲಿ ಸಾಕಾರಗೊಳಿಸುತ್ತಿರುವ ರಾಜ್ಯ ಕರ್ನಾಟಕವಾಗಿದೆ. ಸರಳವಾಗಿ ವಿವರಿಸಬೇಕೆಂದರೆ ಘನತೆಯ ಜೀವನ, ವಿಪುಲ ಅವಕಾಶ ಹಾಗೂ ಸಂಪನ್ಮೂಲಗಳ ಸೃಜನೆ, ಭವಿಷ್ಯವರ್ತಿ ಯಾದ ಆಲೋಚನೆಗಳು, ಯೋಜನೆಗಳ ಅನುಷ್ಠಾನಗಳು ನಮ್ಮ ರಾಜ್ಯವನ್ನು ಇಂದು ಪ್ರಗತಿಪಥದಲ್ಲಿ ದೇಶದಲ್ಲಿಯೇ ಅತ್ಯಂತ ವೇಗವಾಗಿ ಮುನ್ನುಗ್ಗುತ್ತಾ, ಜಾಗತಿಕವಾಗಿ ಅಭಿವೃದ್ಧಿ ಹೊಂದಿರುವ ದೇಶಗಳಿಗೆ ಸರಿಸಮನಾಗಿ ಹೆಜ್ಜೆ ಇರಿಸುವಂತೆ ಮಾಡಿವೆ. ಇದುವೇ ನಾವು ನಮ್ಮನ್ನು ಆರಿಸಿದ ಮತದಾರರಿಗೆ ಮಾಡುತ್ತಿರುವ ಋಣಸಂದಾಯ. ನಮ್ಮಗ್ಯಾರಂಟಿ ಯೋಜನೆಗಳು ನಾಡಿನ ಜನರ ಕಷ್ಟಕಾರ್ಪಣ್ಯಗಳನ್ನು ತಗ್ಗಿಸಿ, ಘನತೆಯ ಜೀವನದ ಮೂಲಕ ಬದುಕು ಕಟ್ಟಿಕೊಳ್ಳಲು ಒದಗಿಸಿರುವ ರಕ್ಷಣೆಗಳಾಗಿವೆ. ಬೆಲೆ ಏರಿಕೆ, ಆರ್ಥಿಕ ಹೊರೆ, ಬಡತನಗಳಂತಹ ಮಹಾಮಾರಿಗಳ ವಿರುದ್ಧ ಒದಗಿಸಿರುವ ಪ್ರಬಲ ಅಸ್ತ್ರಗಳಾಗಿವೆ. ಪ್ರತಿಯೊಬ್ಬ ನಾಗರಿಕನೂ ಸಮಾಜದಲ್ಲಿ ಆತ್ಮಗೌರವದಿಂದ ಬಾಳಲು, ತನ್ನ ಪ್ರಾಥಮಿಕ ಅವಶ್ಯಕತೆಗಳಿಗಾಗಿ ಯಾರ ಮುಂದೆಯೂ ದೈನ್ಯನಾಗದೆ ಬದುಕಲು ಒದಗಿಸಿರುವ ಆಸರೆಗಳಾಗಿವೆ.

– ಸಿದ್ದರಾಮಯ್ಯ, ಮುಖ್ಯಮಂತ್ರಿ

ಪಂಚ ಗ್ಯಾರಂಟಿಗೆ ಖರ್ಚಾಗಿದ್ದು ಎಷ್ಟು?

ಗ್ಯಾರಂಟಿಗಳಿಗೆ ಖರ್ಚಾದ ಒಟ್ಟು ಮೊತ್ತ 89425 ಕೋಟಿ ರು.

ಯೋಜನೆ	ಫಲಾನುಭವಿಗಳ ಸಂಖ್ಯೆ	ಖರ್ಚಾದ ಮೊತ್ತ
ಶಕ್ತಿ	458 ಕೋಟಿ	8815
ಗೃಹಲಕ್ಷ್ಮಿ	1.25 ಕೋಟಿ	47,773
ಗೃಹಜ್ಯೋತಿ	1.63 ಕೋಟಿ	18,900
ಅನ್ನಭಾಗ್ಯ	4.42 ಕೋಟಿ	13564
ಯುವನಿಧಿ	3.70 ಲಕ್ಷ	376

(ಕೋಟಿ ರು.ಗಳಲ್ಲಿ)

ಶಕ್ತಿ ಯೋಜನೆಯಿಂದ ಬಹಳಷ್ಟು ಸ್ತ್ರೀ ಪ್ರಯಾಣಿಕರಿಗೆ ಅನುಕೂಲವಾಗಿದೆ. ಅದರಲ್ಲೂ ಹೊರಗಡೆ ದುಡಿಯಲು ದಿನನಿತ್ಯ ಪ್ರಯಾಣಿಸುತ್ತಿರುವ ಮಹಿಳೆಯರಿಗೆ ಇದರಿಂದ ಬಹಳಷ್ಟು ಪ್ರಯೋಜನವಾಗಿದೆ. ರಾಜ್ಯದ ಎಲ್ಲ ಮಹಿಳೆಯರ ಪರವಾಗಿ ಸರಕಾರಕ್ಕೆ ಅನಂತ ಧನ್ಯವಾದಗಳು.

– ವರಲಕ್ಷ್ಮೀ, ದೊಡ್ಡಬಳ್ಳಾಪುರ

ಗೃಹಜ್ಯೋತಿ ಯೋಜನೆಯಲ್ಲಿ 200 ಯುನಿಟ್‌ವರೆಗಿನ ಉಚಿತ ವಿದ್ಯುತ್ ಯೋಜನೆಯ ಪರಿಣಾಮ ನಮ್ಮ ಕುಟುಂಬಕ್ಕೆ ವಾರ್ಷಿಕವಾಗಿ 2-3 ಸಾವಿರ ರು. ಉಳಿತಾಯವಾಗುತ್ತಿದೆ. ಈ ಹಣವನ್ನು ತರಕಾರಿ, ಆಹಾರ ಪದಾರ್ಥಗಳ ಖರೀದಿಗೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಬಳಸಿಕೊಳ್ಳಲಾಗುತ್ತಿದೆ. ಸರಕಾರದ ಉತ್ತಮ ಯೋಜನೆ ಇದಾಗಿದ್ದು, ಬಡ ಕುಟುಂಬಗಳಿಗೆ ಆರ್ಥಿಕವಾಗಿ ಬಲ ನೀಡಿದೆ.

– ಸುನೀಲ ಗೋಳಾ ಕಲ್ಲಹಂಗರಗಾ, ಜೇವರ್ಗಿ, ಕಲಬುರಗಿ

ಅನ್ನಭಾಗ್ಯ ಯೋಜನೆ ಪ್ರತಿ ದಿನದ ಅನ್ನದ ಚಿಂತೆಯನ್ನು ನೀಗಿಸಿದೆ. ಯೋಜನೆಯಿಂದಾಗಿ ನಾವೆಲ್ಲಾ ಹೊಟ್ಟೆ ತುಂಬಾ ಊಟ ಮಾಡಲು ಸಾಧ್ಯವಾಗಿದ್ದು, ಆರ್ಥಿಕವಾಗಿ ತುಂಬಾ ನೆರವಾಗಿದೆ. ನಮ್ಮಂತಹವರ ಹೊಟ್ಟೆಯ ಹಸಿವನ್ನು ನೀಗಿಸಲು ಇಂತಹ ಯೋಜನೆ ಜಾರಿಗೊಳಿಸಿದ ಸರಕಾರಕ್ಕೆ ಧನ್ಯವಾದಗಳು.

– ಫರೀನಾಬಾನು, ಕನಕಪುರ

2023-24ನೇ ಸಾಲಿನಲ್ಲಿ ನಾನು ಪದವಿಯಲ್ಲಿ ತೇರ್ಗಡೆ ಹೊಂದಿದ್ದೇನೆ ಪ್ರಸ್ತುತ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದೇನೆ. ರಾಜ್ಯ ಸರಕಾರದ ಪ್ರಮುಖ ಗ್ಯಾರಂಟಿ ಯೋಜನೆಯಾದ ಯುವನಿಧಿ ಯೋಜಯಲ್ಲಿ ನೋಂದಾಯಿಸಿಕೊಂಡಿದ್ದು, ಪ್ರತಿ ತಿಂಗಳು ಬರುವ ಸಹಾಯಧನದಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕಗಳನ್ನು ಕೊಂಡುಕೊಳ್ಳಲು ಸಹಾಯವಾಗುತ್ತಿದೆ. ಸರಕಾರಕ್ಕೆ ಧನ್ಯವಾದ ತಿಳಿಸುತ್ತೇನೆ.

– ವೀರೇಶ್.ಕೆ, ಬಳ್ಳಾರಿ

ಹೊಲದಲ್ಲಿ ಕೂಲಿ ಕೆಲಸ ಮಾಡುವುದರೊಂದಿಗೆ ತಮ್ಮ ಜಮೀನಿನಲ್ಲಿ ಬೆಳೆಯುವ ಮಾವಿನ ಕಾಯಿ ಹಾಗೂ ನಿಂಬೆ ಹಣ್ಣುಗಳಿಂದ ಉಪ್ಪಿನಕಾಯಿ ತಯಾರಿಸಿ ಗ್ರಾಮಗಳಲ್ಲಿ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದೆ. ಆದರೆ ಉಪ್ಪಿನಕಾಯಿಗೆ ಬೇಕಿರುವ ಸಾಮಗ್ರಿ ಖರೀದಿಸಲು ಹಣವಿರಲಿಲ್ಲ. ಸರಕಾರ ಜಾರಿಗೊಳಿಸಿದ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಉಳಿಸಿ ಉಪ್ಪಿನಕಾಯಿ ಮಾಡಲು ಹೆಚ್ಚಿನ ಬಂಡವಾಳ ತೊಡಗಿಸಲು ಸಾಧ್ಯವಾಯಿತು. ಈ ಹಣದಿಂದ ಎಲೆಕ್ಟ್ರಿಕ್ ತೂಕದ ಯಂತ್ರ, ಉಪ್ಪಿನಕಾಯಿ ಡಬ್ಬಿಗಳು ಹಾಗೂ ಇನ್ನಿತರ ಕಚ್ಚಾ ಪದಾರ್ಥಗಳನ್ನು ಖರೀದಿಸಿ ಬೇಡಿಕೆಗೆ ತಕ್ಕಂತೆ ಉಪ್ಪಿನಕಾಯಿಗಳನ್ನು ಪೂರೈಸಲು ಸಾಧ್ಯವಾಗಿದೆ.

– ದ್ರಾಕ್ಷಾಯಿಣಿ ಈರಯ್ಯ ಮಠಪತಿ ಎಂ. ಕಲ್ಲಾಪೂರ, ರಾಮದುರ್ಗ

1,20,975.59 ಹೆಕ್ಟೇರ್ ನೆಡುತೋಪು ನಿರ್ಮಾಣ

ದಶಕಗಳ ನೀರಾವರಿ ಯೋಜನೆಯ ಕನಸು ನನಸು

ರಾಜ್ಯದಲ್ಲಿ ದಶಕಗಳಿಂದ ಬಾಕಿ ಉಳಿದಿದ್ದ ಹತ್ತಾರು ನೀರಾವರಿ ಯೋಜನೆಗಳಿಗೆ ಇದೀಗ ವೇಗ ಸಿಕ್ಕಿದೆ. ಎತ್ತಿನಹೊಳೆ ಯೋಜನೆಯನ್ನು ಕಾರ್ಯಸಾಧುವೇ ಅಲ್ಲವೆಂದು ಮೂಗು ಮುರಿದಿದ್ದ ಅನೇಕರಿಗೆ, ಇದೀಗ ಅಚ್ಚರಿಯಾಗಿರುವುದು ಸುಳ್ಳಲ್ಲ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯು ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಕಾಮಗಾರಿಗೆ ಇದ್ದ ವಿವಿಧ ತೊಡಕುಗಳನ್ನು ಪರಿಹರಿಸಿ ಅನುಷ್ಠಾನ ತ್ವರಿತಗೊಳಿಸಲಾಗಿದೆ. ಪ್ರಸ್ತುತ ಎತ್ತಿನಹೊಳೆ ಯೋಜನೆಯ ಮೊದಲನೇ ಹಂತದಲ್ಲಿ ಏತ ಕಾಮಗಾರಿಗಳು ಮತ್ತು ವಿದ್ಯುತ್ ಪೂರೈಕೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ದಿನಾಂಕ: 06.09.2024ರಂದು ಲೋಕಾರ್ಪಣೆ ಮಾಡಲಾಗಿದೆ. ಗುರುತ್ವ ಕಾಲುವೆಯ ಸರಪಳಿ: 32.50 ಕಿ.ಮೀ.ನಲ್ಲಿರುವ ಎಸ್ಕೇಪ್‌ನಿಂದ ವೇದಾ ವ್ಯಾಲಿ ಮುಖಾಂತರ ವಾಣಿವಿಲಾಸ ಸಾಗರ ಅಣೆಕಟ್ಟೆಗೆ ತಾತ್ಕಾಲಿಕವಾಗಿ ನೀರು ಹರಿಸಲಾಗಿದೆ.

2023-24ನೇ ಸಾಲಿನ ಆಯವ್ಯಯದಲ್ಲಿ ಜಲ ಸಂಪನ್ಮೂಲ ಇಲಾಖೆಗೆ ಒಟ್ಟು 16,369.10 ಕೋಟಿ ಅನುದಾನ ಒದಗಿಸಲಾಗಿದೆ. ಮಾರ್ಚ್-2024ರ ಅಂತ್ಯಕ್ಕೆ 18,198.84 ಕೋಟಿ ಆರ್ಥಿಕ ಪ್ರಗತಿ ಸಾಧಿಸಿ, 53,824.49 ಎಕರೆ (21,782 ಹೆಕ್ಟೇರ್) ನೀರಾವರಿ ಸಾಮರ್ಥ್ಯವನ್ನು ಕಲ್ಪಿಸಲಾಗಿದೆ. 2024-25ನೇ ಸಾಲಿನ ಆಯವ್ಯಯದಲ್ಲಿ ಜಲ ಸಂಪನ್ಮೂಲ ಇಲಾಖೆಗೆ ಒಟ್ಟು 19,121.80 ಕೋಟಿ ಅನುದಾನ ಒದಗಿಸಲಾಗಿದ್ದು, 18,114.12 ಕೋಟಿ ಆರ್ಥಿಕ ಪ್ರಗತಿ ಸಾಧಿಸಿ 59523 ಎಕರೆ (25,088 ಹೆಕ್ಟೇರ್) ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.

ನಾರಾಯಣಪುರ ಜಲಾಶಯದ ಹಿನ್ನೀರಿನಲ್ಲಿ ನೀರನ್ನು ಎತ್ತಿ ಪೈಪ್‌ಲೈನ್ ಮುಖಾಂತರ ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ಮತಕ್ಷೇತ್ರದಡಿಯಲ್ಲಿ ಸುಮಾರು 20,243 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಬೂದಿಹಾಳ-ಪೀರಾಪುರ ಯೋಜನೆಯನ್ನು ಪೂರ್ಣಗೊಳಿಸಿ, ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ. ಭೀಮಾ ನದಿಯಿಂದ ನೀರನ್ನು ಎತ್ತಿ ಯಾದಗಿರಿ ಜಿಲ್ಲೆಯ 35 ಕೆರೆ ತುಂಬುವ ಯೋಜನೆಯನ್ನು ಪೂರ್ಣಗೊಳಿಸಲಾಗಿದ್ದು, ಪ್ರಾಯೋಗಿಕವಾಗಿ ನೀರನ್ನು ಹರಿಸಲಾಗಿದೆ. ತಿಮ್ಮಾಪುರ ಏತ ನೀರಾವರಿ ಯೋಜನೆಯ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ, ಗೂಗಲ್ ಬ್ರಿಡ್ಜ್-ಕಂ-ಬ್ಯಾರೇಜ್‌ನಿಂದ ಗಣೇಕಲ್ ಸಮತೋಲನಾ ಜಲಾಶಯಕ್ಕೆ ನೀರನ್ನು ತುಂಬಿಸುವ ಯೋಜನೆ ಮತ್ತು ಪಿರಿಯಾಪಟ್ಟಣ ತಾಲೂಕಿನ ಮುತ್ತಿನಮುಳುಸೋಗೆ ಗ್ರಾಮದ ಹತ್ತಿರ ಕಾವೇರಿ ನದಿಯಿಂದ ನೀರೆತ್ತಿ 79 ಗ್ರಾಮಗಳಲ್ಲಿ ಬರುವ 150 ಕೆರೆಗಳು ಹಾಗೂ ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಲೋಕಾರ್ಪಣೆಗೊಳಿಸಲಾಗಿದೆ. ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಬಾಳಂಬೀಡು ಮತ್ತು ಇತರೆ 162 ಕೆರೆಗಳಿಗೆ ವರದಾ ನದಿಯಿಂದ ನೀರನ್ನು ತುಂಬಿಸುವ ಯೋಜನೆ ಹಾಗೂ ಹಿರೇಕೌಂಶಿ ಮತ್ತು ಇತರೆ 77 ಕೆರೆಗಳಿಗೆ ವರದಾ ನದಿಯಿಂದ ನೀರನ್ನು ತುಂಬಿಸುವ ಯೋಜನೆಗಳನ್ನು ಲೋಕಾರ್ಪಣೆ ಮಾಡಲಾಗಿದೆ.

ಜನರ ಕಷ್ಟಗಳಿಗೆ ಕಾಂಗ್ರೆಸ್ ಸರಕಾರ ಬೆಲ್ಲ ಸಕ್ಕರೆಯಾಗಿದೆ. ಮನೆ, ಮನೆಗೆ ಮಲ್ಲಿಗೆಯಾಗಿದೆ ಎಂದರೆ ತಪ್ಪಾಗಲಾರದು. ಬೆಲೆ ಏರಿಕೆಯಿಂದ ಬಳಲಿ ಜನರಿಗೆ ಸಂಜೀವಿನಿಯಾಗಿ, ಮಹಿಳೆಯರ ಕಷ್ಟಗಳಿಗೆ ಹೆಗಲಾಗಿ, ರಾಜ್ಯದ ಜವಾಬ್ದಾರಿಯ ನೊಗ ಹೊತ್ತು ಎಲ್ಲರನ್ನು ಒಳಗೊಂಡು ನುಡಿದಂತೆ ನಡೆದು, ನಡೆದಂತೆ ನುಡಿದು ಜನಸಾಮಾನ್ಯರ ಕೈ ಹಿಡಿದು ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು ತತ್ವದಲ್ಲಿ ನಂಬಿಕೆಯಿಟ್ಟು ಕಳಂಕರಹಿತವಾಗಿ ಹೆಜ್ಜೆ ಹಾಕಿದ್ದೇವೆ. ಕಳೆದ ಎರಡು ವರ್ಷಗಳಲ್ಲಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರಕಾರ ಜನರ ಖಾತೆಗೆ ನೇರವಾಗಿ ಹಣ ವರ್ಗಾವಣೆ ಮಾಡಿ, ಜನರಿಂದಲೇ ಆರ್ಥಿಕ ಚಟುವಟಿಕೆಗಳಿಗೆ ವೇಗ ನೀಡಿದೆ. ಇಡೀ ದೇಶವೇ ನಮ್ಮ ಕಡೆ ತಿರುಗಿ ನೋಡುವಂತಹ ಕರ್ನಾಟಕ ಮಾದರಿಯನ್ನು ಹುಟ್ಟು ಹಾಕಿದ್ದು ನಮ್ಮ ಹೆಗ್ಗಳಿಕೆ. ರಾಷ್ಟ್ರೀಯ ಮಟ್ಟದಲ್ಲಿ ಎದ್ದ ಟೀಕೆ- ಟಿಪ್ಪಣಿಗಳಿಗೆ ನಮ್ಮ ಗ್ಯಾರಂಟಿ ಯೋಜನೆಗಳ ಗೆಲುವು ಜಾರಿಗೆ ಬಂದ ಕೆಲವೇ ದಿನಗಳಲ್ಲಿ ತಕ್ಕ ಉತ್ತರ ನೀಡಿದೆ. ಕುಟುಂಬದ ಯಜಮಾನಿಯ ಖಾತೆಗೆ ಪ್ರತಿ ತಿಂಗಳು ಗೃಹಲಕ್ಷ್ಮಿ ಯೋಜನೆ ಮೂಲಕ 2 ಸಾವಿರ. 162 ಕೋಟಿ ಮನೆಗಳಿಗೆ ಗೃಹಜ್ಯೋತಿ ಯೋಜನೆಯ ಅಡಿ 1.62 ಕೋಟಿ ಮನೆಗಳಿಗೆ ಉಚಿತ ವಿದ್ಯುತ್ ಶಕ್ತಿ ಯೋಜನೆಯ ಅಡಿ ಮಹಿಳೆಯರಿಗೆ ಸರಕಾರಿ ಬಸ್ ಗಳಲ್ಲಿ ಉಚಿತ ಪ್ರಯಾಣ. 4.09 ಕೋಟಿ ಫಲಾನುಭವಿಗಳಿಗೆ 10 ಕೆ.ಜಿ ಉಚಿತ ಅಕ್ಕಿ. ಡಿಪ್ಲೊಮೊ, ಪದವಿ ಓದಿದ 3.70 ಲಕ್ಷ ಯುವಕರಿಗೆ ತಿಂಗಳಿಗೆ ಕ್ರಮವಾಗಿ 3,000 ಹಾಗೂ 1,500 ರೂಪಾಯಿ ನೀಡಿ ದಾಖಲೆ ಬರೆದಿದ್ದೇವೆ. ಬಡತನ ರೇಖೆಯಿಂದ ಮೇಲಕ್ಕೆತ್ತಿದ್ದೇವೆ. ಕೆರೆಯ ನೀರನು ಕೆರೆಗೆ ಚೆಲ್ಲಿ ಭವಿಷ್ಯದ ಕರುನಾಡಿಗೆ ಅಡಿಪಾಯ ಕಟ್ಟಿದ್ದೇವೆ.

– ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

4983 ಹೊಸ ಬಸ್ಸುಗಳು

ಸರಕಾರದ ಶಕ್ತಿ ಯೋಜನೆಯಿಂದ ಸಾರಿಗೆ ಸಂಸ್ಥೆಗಳ ಶಕ್ತಿ ಕುಂದಿದೆ ಎನ್ನುವ ಪ್ರತಿಪಕ್ಷಗಳ ಆರೋಪ ಸುಳ್ಳು ಎನ್ನುವುದು ರಾಜ್ಯ ರಸ್ತೆಯಲ್ಲಿ ಓಡಾಡುತ್ತಿರುವ ಬಸ್ಸುಗಳುಸಾಕ್ಷಿಯಾಗಿವೆ. ಕಳೆದ ಎರಡು ವರ್ಷದ ಅವಧಿಯಲ್ಲಿ ಒಟ್ಟು 4983 ಹೊಸ ಬಸ್ಸುಗಳನ್ನು ಸೇವೆಗೆ ಸೇರ್ಪಡೆಗೊಳಿಸಲಾಗಿದೆ. ಒಟ್ಟು 1368 ವಾಹನಗಳನ್ನು ಪುನಶ್ಚೇತನಗೊಳಿಸಿ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ. 2096 ವಿವಿಧ ವರ್ಗದ ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇರ ನೇಮಕಾತಿ ಮೂಲಕ ನೇಮಕ ಮಾಡಲಾಗಿದೆ ಹಾಗೂ 958 ಮೃತಾವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲಾಗಿದೆ. ಒಟ್ಟು 8 ಕಡೆಗಳಲ್ಲಿ ಬಸ್ ಘಟಕ, 24 ಸ್ಥಳಗಳಲ್ಲಿ ಬಸ್ ನಿಲ್ದಾಣಗಳ ಮರು ನಿರ್ಮಾಣ/ ನೂತನ ಬಸ್ ನಿಲ್ದಾಣ, 7 ವಿವಿಧ ಸ್ಥಳಗಳಲ್ಲಿ ಸಿಬ್ಬಂದಿ ವಸತಿ ಸಮುಚ್ಚಯ ನಿರ್ಮಿಸಲಾಗಿದೆ. ಬಿಎಂಟಿಸಿ ವ್ಯಾಪ್ತಿಯ 9 ಸ್ಥಳ/ಘಟಕಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಲಾಗಿದೆ. ದೇಶದ ರಸ್ತೆ ಸಾರಿಗೆ ಸಂಸ್ಥೆಗಳ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಕರ್ತವ್ಯ ನಿರತ ಹಾಗೂ ಕರ್ತವ್ಯದ ಮೇಲಿಲ್ಲದ ಅವಧಿಯ ಅಪಘಾತಗಳಿಗೆ ವಿವಿಧ ಬ್ಯಾಂಕ್/ ಸಂಸ್ಥೆಗಳ ವತಿಯಿಂದ 1 ಕೋಟಿ ರು.ಹಾಗೂ ಮೇಲ್ಪಟ್ಟು ಮೊತ್ತದ ಅಪಘಾತ ವಿಮಾ ಯೋಜನೆ ಸೌಲಭ್ಯ ಜಾರಿ ಮಾಡಲಾಗಿದೆ.

ಕೃಷಿಕರ ಬವಣೆ ನೀಗಿಸಲು ಸಮಗ್ರ ಯೋಜನೆ

ರಾಜ್ಯದ ರೈತರ ಸರ್ವತೋಮುಖ ಅಭಿವೃದ್ಧಿಗೆ ಪಣತೊಟ್ಟಿರುವ ರಾಜ್ಯ ಸರಕಾರ, 2024-25ನೇ ಸಾಲಿನಲ್ಲಿ ಕೃಷಿ ಕ್ಷೇತ್ರವನ್ನು ಸುಸ್ಥಿರ ಹಾಗೂ ಲಾಭದಾಯಕವಾಗಿಸುವ ಈ ಯೋಜನೆಯಲ್ಲಿ ಸಮಗ್ರ ಕೃಷಿ ಪದ್ಧತಿ ಘಟಕದ 1038 ಫಲಾನುಭವಿಗಳಿಗೆ, ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ ಕಲ್ಪಿಸುವ ಕಾರ್ಯಕ್ರಮದಡಿ 38 ಫಲಾನುಭವಿಗಳಿಗೆ ಮತ್ತು ರೈತರಿಗೆ ಮಾರ್ಗದರ್ಶನ ಘಟಕದಡಿ 14222 ಮಣ್ಣು ಮಾದರಿ ಸಂಗ್ರಹಣೆ ಹಾಗೂ 459 ತರಬೇತಿಗಳಿಗೆ ಒಟ್ಟು 9.87ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

ರೈತ ಸಿರಿ ಯೋಜನೆಯಡಿ ಬೆಳೆ ಸಮೀಕ್ಷೆ ಮಾಹಿತಿ ಆಧರಿಸಿ ಸಿರಿಧಾನ್ಯ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ 10,000 ದಂತೆ ಗರಿಷ್ಠ 2 ಹೆಕ್ಟೇರ್ ಮಿತಿಯೊಳಗೆ 2023-24 ನೇ ಸಾಲಿನಲ್ಲಿ ಒಟ್ಟು 25214 ರೈತರಿಗೆ 20.83 ಕೋಟಿ ಪ್ರೋತ್ಸಾಹಧನವನ್ನು ಹಾಗೂ 2024-25ನೇ ಸಾಲಿನಲ್ಲಿ ಒಟ್ಟು 22341 ರೈತರಿಗೆ ರು. 14.93 ಕೋಟಿ ಪ್ರೋತ್ಸಾಹಧನವನ್ನು ಡಿಬಿಟಿ ಮೂಲಕ ಪಾವತಿಸಲಾಗಿದೆ. ಕಣ್ಮರೆಯಾಗುತ್ತಿರುವ ಮತ್ತು ಆಯಾ ಸ್ಥಳೀಯ ಪ್ರದೇಶಕ್ಕೆ ಸೂಕ್ತವಾದ ದೇಸಿ ತಳಿಗಳ ಬೀಜಗಳನ್ನು ಸಂರಕ್ಷಿಸುವ ಮುಖ್ಯ ಉದ್ದೇಶದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸಾವಯವ ಮತ್ತು ಸಿರಿಧಾನ್ಯ ಹಬ್ ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪಾದಕರಿಗೆ, ಮಾರುಕಟ್ಟೆದಾರರಿಗೆ ಹಾಗೂ ಗ್ರಾಹಕರಿಗೆ ಅನುಕೂಲವಾಗುವಂತೆ ಮಾರುಕಟ್ಟೆ ಸಂಪರ್ಕವನ್ನು ವಿಸ್ತರಿಸಲು ಮತ್ತು ಆರೋಗ್ಯವನ್ನು ಸುಧಾರಿಸಲು ಸಾವಯವ ಮತ್ತು ಸಿರಿಧಾನ್ಯ ಹಬ್ ಅನ್ನು ಬೆಂಗಳೂರಿನ ಹೆಬ್ಬಾಳದಲ್ಲಿ 20 ಕೋಟಿ ರು.ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ. 2023-24ನೇ ಸಾಲಿನಲ್ಲಿ ವಿವಿಧ ಕೃಷಿ ಬೆಳೆಗಳನ್ನು 114.27 ಲಕ್ಷ ಹೆಕ್ಟೇರ್ ನಲ್ಲಿ ಬಿತ್ತನೆ ಕೈಗೊಳ್ಳುವ ಗುರಿಗೆ, 104.05 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿದ್ದು ಶೇ. 91.05 ರಷ್ಟು ಪ್ರಗತಿ ಸಾಧಿಸಲಾಗಿದೆ. 2024-25ನೇ ಸಾಲಿನ ಎಲ್ಲಾ ಹಂಗಾಮುಗಳಿಗೆ ಸೇರಿ ವಿವಿಧ ಕೃಷಿ ಬೆಳೆಗಳನ್ನು 114.49 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆ ಕೈಗೊಳ್ಳುವ ಗುರಿಗೆ, 111.64 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿದ್ದು ಶೇ.97.51 ರಷ್ಟು ಪ್ರಗತಿ ಸಾಧಿಸಲಾಗಿದೆ. 2023-24ನೇ ಸಾಲಿನಲ್ಲಿ 42.27 ಲಕ್ಷ ಮೆಟ್ರಿಕ್ ಟನ್ ವಿವಿಧ ರಾಸಾಯನಿಕ ರಸಗೊಬ್ಬರಗಳ ಬೇಡಿಕೆಗೆ 41.71 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಸರಬರಾಜಾಗಿದ್ದು ಒಟ್ಟು 40.03 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿರುತ್ತದೆ. 2024-25ನೇ ಸಾಲಿನಲ್ಲಿ 42.49 ಲಕ್ಷ ಮೆಟ್ರಿಕ್ ಟನ್ ವಿವಿಧ ರಾಸಾಯನಿಕ ರಸಗೊಬ್ಬರಗಳ ಬೇಡಿಕೆಗೆ 45.62 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಸರಬರಾಜಾಗಿದ್ದು ಒಟ್ಟು 48.90 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿದೆ.

ಬೆಂಗಳೂರಿಗೆ ಬ್ರ್ಯಾಂಡ್ ನಿರಂತರ ಕ್ರಮ

ಇನ್ನು ಕರ್ನಾಟಕದ ಫೇಸ್ ಎನಿಸಿರುವ ಬೆಂಗಳೂರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾದರಿ ನಗರವನ್ನಾಗಿ ಮಾಡಬೇಕು ಎನ್ನುವ ಆಕಾಂಕ್ಷೆಯೊಂದಿಗೆ ರಾಜ್ಯ ಸರಕಾರ ಬ್ರ್ಯಾಂಡ್ ಬೆಂಗಳೂರು ಎನ್ನುವ ಪರಿಕಲ್ಪನೆಯಲ್ಲಿ ಮಹತ್ವದ ಹೆಜ್ಜೆಯಿರಿಸಿದೆ. ಇದಕ್ಕೆ ಪೂರಕವಾಗಿ ಬೆಂಗಳೂರಿನ ವ್ಯಾಪ್ತಿಯನ್ನು ಹಿರಿದಾಗಿರುವ ಉದ್ದೇಶದಿಂದ, ಬಿಬಿಎಂಪಿಯ ಬದಲಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ರಚಿಸಲಾಗಿದೆ.

ಬಿಬಿಎಂಪಿಯ ವಿವಿಧ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ರಸ್ತೆ ಮತ್ತು ಚರಂಡಿಗಳು ಹಾಗೂ ರಸ್ತೆ ಗುಂಡಿ ಮುಚ್ಚುವಿಕೆಗಾಗಿ 480 ಕೋಟಿ ಹಾಗೂ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 250 ಕೋಟಿ ಒದಗಿಸಲಾಗಿದೆ. ರಾಜ್ಯ ಸರಕಾರದ ಅನುದಾನದಿಂದ 800 ಕೋಟಿ ವೆಚ್ಚದಲ್ಲಿ 65 ಕಿ.ಮೀ ರಸ್ತೆಗಳ ಶಾಶ್ವತ ಅಭಿವೃದ್ಧಿಗಾಗಿ ವೈಟ್‌ಟಾಪಿಂಗ್ ಕಾಮಗಾರಿ ಕೈಗೊಳ್ಳಲು ಅನುದಾನ ಒದಗಿಸಿದ್ದು, ಕಾಮಗಾರಿಗಳು ಆರಂಭವಾಗಿರುತ್ತವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 900 ಕೋಟಿ ವೆಚ್ಚದಲ್ಲಿ 87 ಕಿ.ಮೀ. ರಸ್ತೆಗಳ ಶಾಶ್ವತ ಅಭಿವೃದ್ಧಿಗಾಗಿ ವೈಟ್‌ಟಾಪಿಂಗ್ ಕಾಮಗಾರಿ ಕೈಗೊಳ್ಳಲು ಅನುದಾನ ಒದಗಿಸಿದ್ದು, ಕಾಮಗಾರಿಗಳು ಆರಂಭವಾಗಿರುತ್ತವೆ. ಸುಮಾರು 50 ಕಿ.ಮೀ.ಗಳ ಬಫರ್ ವಲಯದಲ್ಲಿ 200 ಕೋಟಿ ಮೊತ್ತದಲ್ಲಿ ಹೊಸ ರಸ್ತೆಗಳ ನಿರ್ಮಾಣ ಮತ್ತು 100 ಕೋಟಿ ಮೊತ್ತದಲ್ಲಿ ಹಳೆ ರಸ್ತೆಗಳ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಅದಲ್ಲದೇ, ಪಾಲಿಕೆಯ ವ್ಯಾಪ್ತಿಯಲ್ಲಿ ಆಸ್ತಿಗಳ ನಿರ್ವಹಣೆಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪಾರದರ್ಶಕವಾಗಿ ನಿರ್ವಹಿಸುವ ಸಲುವಾಗಿ ಆಸ್ತಿಗಳ ದಾಖಲೆಗಳನ್ನು ಕಾಪಾಡುವ ಉದ್ದೇಶದಿಂದ ಇ-ಆಸ್ತಿ ಯೋಜನೆಯನ್ನು ಜಾರಿಗೆ ತರಲಾಗಿದೆ.

ಮೆಟ್ರೋಗೆ ನಿರಂತರ ಬೆಂಬಲ

ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2, ನಾಲ್ಕು ವಿಸ್ತರಣೆಗಳನ್ನು ಮತ್ತು 61 ನಿಲ್ದಾಣಗಳನ್ನು (49 ಎತ್ತರದ ಮತ್ತು 12 ಸುರಂಗ ಮಾರ್ಗ) ಹೊಂದಿರುವ ಒಟ್ಟು 75.06 ಕಿ.ಮೀ. ಉದ್ದವನ್ನು ಒಳಗೊಂಡಿರುವ ಎರಡು ಹೊಸ ಮಾರ್ಗಗಳನ್ನು ಒಳಗೊಂಡಿದೆ. ಅಂದಾಜು ಯೋಜನಾ ವೆಚ್ಚ 30,695 ಕೋಟಿಗಳಾಗಿದೆ.

ನೇರಳೆ ಮಾರ್ಗದ ಪೂರ್ವ ವಿಸ್ತರಣೆಯು ಬೈಯಪ್ಪನಹಳ್ಳಿಯಿಂದ ಕೃಷ್ಣರಾಜಪುರದವರೆಗೆ 2.10 ಕಿ.ಮೀ. ಉದ್ದ ಮತ್ತು ಕೆಂಗೇರಿಯಿಂದ ಚಲ್ಲಘಟ್ಟದವರೆಗೆ 2.05 ಕಿ.ಮೀ ಉದ್ದದ ನೇರಳೆ ಮಾರ್ಗವನ್ನು ದಿನಾಂಕ:09.10.2023 ರಂದು ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಲಾಗಿದೆ. ಹಸಿರು ಮಾರ್ಗದ ಪಶ್ಚಿಮ ವಿಸ್ತರಣೆಯು ನಾಗಸಂದ್ರದಿಂದ ಮಾದಾವರವರೆಗಿನ 3.14 ಕಿ.ಮೀ.ಗಳ 3 ನಿಲ್ದಾಣಗಳೊಂದಿಗೆ ದಿನಾಂಕ: 07.11.2024ರಂದು ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಲಾಗಿದೆ. ಎರಡನೇ ಹಂತದಲ್ಲಿ 34.65 ಕಿ.ಮೀ. ಉದ್ದದ ಮೆಟ್ರೋ ಮಾರ್ಗವನ್ನು ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಲಾಗಿದೆ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸೆಂಟ್ರಲ್ ಸಿಲ್ಕ್ ಬೋರ್ಡ್ (ನೀಲಿ ಮಾರ್ಗ) ನಿಂದ ಸಂಪರ್ಕಿಸಲು 30 ನಿಲ್ದಾಣಗಳೊಂದಿಗೆ 58.19 ಕಿ.ಮೀ. ಅನುಮೋದಿಸಲಾಗಿದೆ. ಕೇಂದ್ರ ರೇಷ್ಮೆ ಮಂಡಳಿಯಿಂದ ಕೃಷ್ಣರಾಜಪುರದವರೆಗಿನ ಹೊರ ವರ್ತುಲ ರಸ್ತೆಯ 19.75 ಕಿ.ಮೀ. ಉದ್ದದ ಮಾರ್ಗಕ್ಕೆ 13 ಎತ್ತರದ ನಿಲ್ದಾಣಗಳನ್ನು ಹೊಂದಿರುವ ಹಂತ-2ಎ ಮತ್ತು ಕೃಷ್ಣರಾಜಪುರದಿಂದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ ಹಂತ-2ಬಿ ಯನ್ನು 17 ಎತ್ತರದ ನಿಲ್ದಾಣಗಳನ್ನು ಹೊಂದಿರುವ 38.44 ಕಿ.ಮೀ. ಉದ್ದದ ಮಾರ್ಗಕ್ಕೆ ಯೋಜನೆಗಾಗಿ ಕರ್ನಾಟಕ ಸರಕಾರ 5,577.89 ಕೋಟಿ ಬಿಡುಗಡೆ ಮಾಡಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿನ ಕೊಮ್ಮಘಟ್ಟ ಗ್ರಾಮದ ಫೇಸ್-1 ರಲ್ಲಿ 480 ವಸತಿ ಘಟಕಗಳನ್ನು 245 ಕೋಟಿ ವೆಚ್ಚದಲ್ಲಿ, ಫೇಸ್-2 ರಲ್ಲಿ 360 ವಸತಿ ಘಟಕಗಳನ್ನು 145.97 ಕೋಟಿ ವೆಚ್ಚದಲ್ಲಿ ಹಾಗೂ ಫೇಸ್-3 ರಲ್ಲಿ 336 ವಸತಿ ಘಟಕಗಳನ್ನು 123 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕೋನದಾಸನಪುರ (ಫೇಸ್-2) ಗ್ರಾಮದಲ್ಲಿ ರೂ.225 ಕೋಟಿ ಮೊತ್ತದಲ್ಲಿ 672 ವಸತಿ ಘಟಕಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿದೆ. ಬೆಂಗಳೂರು ದಕ್ಷಿಣ ತಾಲೂಕು, ದಾಸನಪುರ ಹೋಬಳಿ, ಹುಣ್ಣಿಗೆರೆ ಗ್ರಾಮದಲ್ಲಿ ವಿಲ್ಲಾಗಳು ಮತ್ತು 320 ಸಂಖ್ಯೆಯ ವಸತಿ ಘಟಕಗಳನ್ನು ರೂ.280.94 ಕೋಟಿ ಮೊತ್ತದಲ್ಲಿ ನಿರ್ಮಿಸಿದ್ದು ಶೀಘ್ರದಲ್ಲಿ ಹಂಚಿಕೆಗೆ ಬಿಡುಗಡೆ ಮಾಡಲಾಗುವುದು.

18ಲಕ್ಷ ರೈತರಿಗೆ ಬೆಳೆವಿಮೆ

- 2023-24ನೇ ಸಾಲಿನಲ್ಲಿ 25.03 ಲಕ್ಷ ರೈತ ಪ್ರಸ್ತಾವನೆಗಳು 20.53 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೋಂದಣಿಯಾಗಿವೆ. ಇಲ್ಲಿಯವರೆಗೆ ಅರ್ಹ 18.65 ಲಕ್ಷ ರೈತ ಫಲಾನುಭವಿಗಳಿಗೆ ರು.2107.50 ಕೋಟಿ ಬೆಳೆ ವಿಮೆ ಪರಿಹಾರವನ್ನು ವಿಮಾ ಸಂಸ್ಥೆಗಳಿಂದ ಇತ್ಯರ್ಥ ಪಡಿಸಲಾಗಿದೆ.
- 2024ರ ಮುಂಗಾರು ಹಂಗಾಮಿನಲ್ಲಿ 22.97 ಲಕ್ಷ ರೈತ ಪ್ರಸ್ತಾವನೆಗಳು 17.60 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೋಂದಣಿಯಾಗಿವೆ. ಇದರಲ್ಲಿ 8.47 ಲಕ್ಷ ರೈತ ಫಲಾನುಭವಿಗಳಿಗೆ ರು.1324.23 ಕೋಟಿ ಬೆಳೆ ವಿಮೆ ಪರಿಹಾರವನ್ನು ಲೆಕ್ಕಾಚಾರ ಮಾಡಲಾಗಿದ್ದು, ವಿಮಾ ಸಂಸ್ಥೆಗಳಿಂದ ಇತ್ಯರ್ಥಪಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.
- 2024-25ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ 4.07 ಲಕ್ಷ ರೈತ ಪ್ರಸ್ತಾವನೆಗಳು 4.44 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೋಂದಣಿಯಾಗಿರುತ್ತವೆ. ಒಟ್ಟು 27.04 ಲಕ್ಷ ರೈತ ಪ್ರಸ್ತಾವನೆಗಳು 22 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೋಂದಣಿಯಾಗಿದ್ದು, ಇದು ದಾಖಲೆ ಮಟ್ಟದ ನೋಂದಣಿಯಾಗಿದೆ.

ತೋಟಗಾರಿಕಾ ಇಲಾಖೆಯ ಸಾಧನೆ

- ರಾಜ್ಯದಲ್ಲಿ ಉತ್ಪಾದಿಸುವ ಜೇನುತುಪ್ಪಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಹಾಗೂ ಮಾರುಕಟ್ಟೆ ವೇದಿಕೆಯನ್ನು ಒದಗಿಸುವ ಸಲುವಾಗಿ ಇಲಾಖೆಯಿಂದ ಝೇಂಕಾರ, ಜೀವನೋಲ್ಲಾಸಕ್ಕೆ ಜೇನು ಎಂಬ ಬ್ರ್ಯಾಂಡ್‌ನ್ನು ನೋಂದಾಯಿಸಲಾಗಿದೆ.
- 2025-26ನೇ ಸಾಲಿಗೆ ರಾಜ್ಯದ ತೋಟಗಾರಿಕೆ ಇಲಾಖೆಗೆ ಸ್ಕೋಚ್ ಕನ್ಸಲ್ಟೆನ್ಸಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ರವರಿಂದ ಉತ್ತಮ ರೈತ ಉತ್ಪಾದಕ ಸಂಘದ ಆಡಳಿತಕ್ಕಾಗಿ ಸ್ಕೋಚ್ ಪ್ರಶಸ್ತಿ ಲಭಿಸಿದೆ.
- ಹೈದರಾಬಾದ್‌ನ ಅಗ್ರಿ ಫಿಲ್ಮ್ ಫೆಸ್ಟಿವಲ್-2023 ರಲ್ಲಿ ತೋಟಗಾರಿಕೆ ಇಲಾಖೆಗೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿಗಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ-ಐಹೆಚ್‌ಡಿ)ಯ ಪ್ರಾದೇಶಿಕ ಭಾಷಾ ಚಲನಚಿತ್ರ ವಿಭಾಗದಲ್ಲಿ ಅತ್ಯುತ್ತಮ ಸಾಕ್ಷ್ಯಚಿತ್ರ ಪ್ರಶಸ್ತಿ ನೀಡಲಾಗಿದೆ.

ಹೈನುಗಾರಿಕೆಗೆ ಹೆಚ್ಚಿನ ಒತ್ತು

ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಯೋಜನೆಯಲ್ಲಿ ರಾಜ್ಯದ 8.75 ಲಕ್ಷ ಹಾಲು ಉತ್ಪಾದಕರಿಗೆ 2023-24 ನೇ ಸಾಲಿನಲ್ಲಿ 1161.80 ಕೋಟಿ ವಿತರಿಸಲಾಗಿದೆ ಹಾಗೂ 2024-25 ನೇ ಸಾಲಿನಲ್ಲಿ ರು. 1692.30 ಕೋಟಿ ಪ್ರೋತ್ಸಾಹ ಧನವನ್ನು ರಾಜ್ಯದ 9.07 ಲಕ್ಷ ಹಾಲು ಉತ್ಪಾದಕರಿಗೆ ಡಿಬಿಟಿ ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಪ್ರೋತ್ಸಾಹಧನ ಪಾವತಿಸಲಾಗಿದೆ. ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಅಡಿ ಉಳಿಕೆಯಾಗುವ ರು.6.79ಕೋಟಿಗಳ ಅನುದಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 1164 ಫಲಾನುಭವಿಗಳಿಗೆ ಹಾಗೂ ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆ (ಆರ್‌ಕೆವಿವೈ ಯೋಜನೆ) ಅಡಿಯಲ್ಲಿ ಆಸಕ್ತ ರೈತರಿಗೆ ರು.4.57 ಕೋಟಿಗಳ ಅನುದಾನದಲ್ಲಿ 2734 ಫಲಾನುಭವಿಗಳಿಗೆ ಒಂದು ಮಿಶ್ರತಳಿ ಹಸು ವಿತರಿಸಲಾಗಿದೆ. ರಾಜ್ಯದಲ್ಲಿ ಮುಂಗಾರುಮಳೆ ಕೊರತೆಯಿಂದಾಗಿ ಬರಘೋಷಿತ ತಾಲೂಕುಗಳಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಮೇವು ಉತ್ಪಾದನೆ ಹೆಚ್ಚಿಸುವ ಉದ್ದೇಶದಿಂದ ಖಆಖಈ ನಿಧಿಯಿಂದ ಬಿಡುಗಡೆಯಾದ ರು.45.82 ಕೋಟಿಗಳ ಅನುದಾನದಲ್ಲಿ ಒಟ್ಟು 1302701 ಮೇವಿನ ಬೀಜದ ಮಿನಿಕಿಟ್‌ಗಳನ್ನು ರೈತರಿಗೆ ವಿತರಿಸಲಾಗಿದೆ. ಕುರಿ/ಮೇಕೆಗಳ ಆಕಸ್ಮಿಕ ಸಾವಿಗೆ ಅವುಗಳ ಮಾಲೀಕರಿಗೆ ಪರಿಹಾರವಾಗಿ 5000 ರು.ಗಳಂತೆ ರಂತೆ 2023-24 ನೇ ಸಾಲಿನಲ್ಲಿ ಮಾರ್ಚ್ 2024ರ ಅಂತ್ಯಕ್ಕೆ 29966 ಕುರಿ/ಮೇಕೆಗಳ ಮರಣಕ್ಕೆ ರು.14.67 ಕೋಟಿಗಳ ಪರಿಹಾರಧನ ವಿತರಿಸಲಾಗಿದೆ. 2024-25 ನೇ ಸಾಲಿನಲ್ಲಿ ರು.20.00 ಕೋಟಿ ಅನುದಾನ ನಿಗದಿಯಾಗಿದ್ದು, ಇದುವರೆಗೂ 43344 ಕುರಿ/ಮೇಕೆಗಳು ಮರಣ ಹೊಂದಿದ್ದು ರು. 19.86 ಕೋಟಿ ಪರಿಹಾರ ಧನ ವಿತರಿಸಲಾಗಿದೆ.

ತೆರಿಗೆ ಸಂಗ್ರಹದಲ್ಲಿ ಸಾಧನೆ

ರಾಜ್ಯದಲ್ಲಿ ಪಂಚಗ್ಯಾರಂಟಿ ಯೋಜನೆ ಯಶಸ್ವಿಯಾಗಿ ನಡೆಯಲು ತೆರಿಗೆ ಸಂಗ್ರಹ ಅತ್ಯಗತ್ಯವಾಗಿತ್ತು. ಆದ್ದರಿಂದ ಮುಖ್ಯಮಂತ್ರಿಗಳ ಸೂಚನೆಯಂತೆ, ಅಧಿಕಾರಿಗಳು ವಿವಿಧ ತೆರಿಗೆ ಸಂಗ್ರಹದಲ್ಲಿ ನಿಗದಿತ ಗುರಿಯನ್ನು ತಲುಪಿರುವುದು ಅಂಕಿ-ಅಂಶಗಳಲ್ಲಿ ಸ್ಪಷ್ಟವಾಗುತ್ತದೆ. ವಾಣಿಜ್ಯ ತೆರಿಗೆಗಳ ಇಲಾಖೆಗೆ 2023-24ನೇ ಸಾಲಿಗೆ ವಾರ್ಷಿಕ ತೆರಿಗೆ ಸಂಗ್ರಹಣೆ ಗುರಿಯನ್ನು 94,341 ಕೋಟಿ ರು.ಗಳಿಗೆ ನಿಗದಿ ಪಡಿಸಲಾಗಿದ್ದು, 94,363 ಕೋಟಿ ರು. ಸಂಗ್ರಹಿಸಿ ನಿಗದಿಪಡಿಸಲಾದ ಗುರಿಗೆ ಶೇ.100 ರಷ್ಟು ತೆರಿಗೆ ಸಂಗ್ರಹಿಸಲಾಗಿದೆ. 2024-25ನೇ ಸಲಿನಲ್ಲಿ ಶೇ.98 ರಷ್ಟು ತೆರಿಗೆ ಸಂಗ್ರಹಿಸಲಾಗಿದೆ.

ಇನ್ನು ಅಬಕಾರಿ ಇಲಾಖೆಯಲ್ಲಿ 2023-24ನೇ ಸಾಲಿನಲ್ಲಿ 34,628.98 ಕೋಟಿ ರಾಜಸ್ವ ಸಂಗ್ರಹಣೆಯಾಗಿದ್ದು, ಕಳೆದ ಸಾಲಿನ ಇದೇ ಅವಧಿಗೆ ಹೋಲಿಸಿದರೆ 4,708.61 ಕೋಟಿಗಳ ಹೆಚ್ಚಿನ ರಾಜಸ್ವ ಸಂಗ್ರಹಣೆಯಾಗಿದೆ. 2024-25ನೇ ಸಾಲಿನಲ್ಲಿ ಮಾರ್ಚ್ ಅಂತ್ಯಕ್ಕೆ 35,530 ಕೋಟಿ ರಾಜಸ್ವ ಸಂಗ್ರಹಣೆಯಾಗಿದ್ದು, ಕಳೆದ ಸಾಲಿನ ಇದೇ ಅವಧಿಗೆ ಹೋಲಿಸಿದರೆ 901.02 ಕೋಟಿಗಳ ಹೆಚ್ಚಿನ ರಾಜಸ್ವ ಸಂಗ್ರಹಣೆಯಾಗಿದೆ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಪರಿಶಿಷ್ಟ ಜಾತಿ, ಪಂಗಡಗಳ ಉದ್ದಿಮೆದಾರರ 533 ಪ್ರಕರಣಗಳಿಗೆ 664.61 ಕೋಟಿ ಸಾಲ ಮಂಜೂರು ಮಾಡಿದೆ. ಮಹಿಳಾ ಉದ್ಯಮಿಗಳ 689 ಪ್ರಕರಣಗಳಿಗೆ 1036.77 ಕೋಟಿ ಸಾಲ ಸೌಲಭ್ಯ ನೀಡಲಾಗಿದೆ. ಅಲ್ಪಸಂಖ್ಯಾತ ವರ್ಗದ ಉದ್ದಿಮೆದಾರರ 54 ಪ್ರಕರಣಗಳಿಗೆ 105.82 ಕೋಟಿ ಸಾಲ ಮಂಜೂರು ಮಾಡಲಾಗಿದೆ. ಹಿಂದುಳಿದ ವರ್ಗಗಳ ಉದ್ದಿಮೆದಾರರ 23 ಪ್ರಕರಣಗಳಿಗೆ 42.25 ಕೋಟಿ ಸಾಲ ಮಂಜೂರು ಮಾಡಲಾಗಿದೆ. ಹಿಂದುಳಿದ ಜಿಲ್ಲೆಗಳ ಉದ್ದಿಮೆದಾರರ 705 ಘಟಕಗಳಿಗೆ 929.57 ಕೋಟಿ ಸಾಲ ಮಂಜೂರು ಮಾಡಲಾಗಿದೆ.

ಪ್ರಕರಣ ವಿಲೇವಾರಿಗೆ ಕ್ರಮ

ಬಡವರ ಪ್ರಕರಣಗಳನ್ನು ಆದ್ಯತೆಯ ಮೇಲೆ ಇತ್ಯರ್ಥಪಡಿಸಲು ಸಿವಿಲ್ ಪ್ರಕ್ರಿಯಾ ಸಂಹಿತೆಗೆ ರಾಜ್ಯ ತಿದ್ದುಪಡಿ ಮಾಡಲಾಗಿದ್ದು ರಾಷ್ಟ್ರಪತಿಗಳ ಅಂಕಿತ ದೊರಕಿದೆ. ಅದೇ ರೀತಿ ಸಿವಿಲ್ ಪ್ರಕ್ರಿಯಾ ಸಂಹಿತೆಗೆ 2ನೇ ತಿದ್ದುಪಡಿ ನ್ಯಾಯಾಲಯಗಳಲ್ಲಿ ಪ್ರಕರಣಗಳ ತ್ವರಿತ ವಿಲೇವಾರಿಯನ್ನು ನಿಶ್ಚಿತಗೊಳಿಸುತ್ತದೆ. ಅರ್ಜಿಯ ಮೊದಲನೇ ವಿಚಾರಣೆಯ ದಿನದಂದು ತೀರ್ಪಿನ ದಿನಾಂಕ ನಿರ್ಧರಿಸುವ ಐತಿಹಾಸಿಕ ಕ್ರಮಕ್ಕೆ ಕರ್ನಾಟಕ ನಾಂದಿ ಹಾಡಿದೆ. ಈ ತಿದ್ದುಪಡಿಗೆ ರಾಷ್ಟ್ರಪತಿಗಳ ಅಂಕಿತದ ನಿರೀಕ್ಷೆಯಲ್ಲಿ ಸರಕಾರವಿದೆ. ಇನ್ನು ಇಡೀ ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ, ಮೈಕ್ರೋ ಫೈನಾನ್ಸ್ ಕಿರುಕುಳ ತಡೆಗೆ ಪರಿಣಾಮಕಾರಿಯಾದ ಕಾನೂನು ರೂಪಿಸಿರುವ ಸರಕಾರ, ಸಾಲ ವಸೂಲಾತಿಗೆ ಕಿರುಕುಳ ನೀಡುವ ವ್ಯಕ್ತಿಗಳಿಗೆ ಮತ್ತು ಒತ್ತಡ ತಂತ್ರಗಳನ್ನು ಅನುಸರಿಸುವ ಸಂಸ್ಥೆಗಳು ಮತ್ತು ವ್ಯಕ್ತಿಗಳಿಗೆ ಕನಿಷ್ಠ 10 ವರ್ಷ ಶಿಕ್ಷೆ ವಿಧಿಸುವ ಕಾನೂನು ತರಲಾಗಿದೆ.

ಬರಲಿದೆ ಚಿತ್ರನಗರಿ

ಹಲವು ದಶಕದ ಕನಸಾಗಿರುವ ಚಿತ್ರನಗರಿಗೆ ಕೊನೆಗೂ ಕಾಲ ಕೂಡಿಬಂದಿದ್ದು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಪಿಪಿಪಿ ಮಾದರಿಯಲ್ಲಿ ನಂಜನಗೂಡು ತಾಲೂಕು ಇಮ್ಮಾವು ಗ್ರಾಮದಲ್ಲಿ ಚಿತ್ರನಗರಿಯನ್ನು ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲು, ಜಮೀನನ್ನು ಇಲಾಖೆಗೆ ನೇರವಾಗಿ ಕೆ.ಐ.ಡಿ.ಬಿ.ಯಿಂದ ಹಸ್ತಾಂತರಿಸಿದ್ದು ನೋಂದಣಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. 2024ರ ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ ಇಲಾಖೆ ಪ್ರದರ್ಶಿಸಿದ ಕರ್ನಾಟಕದ ಸಾಂಸ್ಕೃತಿಕ ನಾಯಕ-ವಿಶ್ವಗುರು ಬಸವಣ್ಣ ಹಾಗೂ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಬಿಂಬಿಸುವ ಸ್ತಬ್ಧಚಿತ್ರಕ್ಕೆ ಪ್ರಥಮ ಬಹುಮಾನ ದೊರೆತಿದೆ.

2023-24ರ ಬಜೆಟ್ ಘೋಷಣೆಯಂತೆ ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರ ಮಾಸಾಶನವನ್ನು ಮಾಸಿಕ 10 ಸಾವಿರದಿಂದ 12 12 ಸಾವಿರಗಳಿಗೆ, ಕುಟುಂಬ ಮಾಸಾಶನವನ್ನು ಮಾಸಿಕ 3 ಸಾವಿರ ರು.ಗಳಿಂದ 6 ಸಾವಿರ ರು.ಗಳಿಗೆ ಹೆಚ್ಚಿಸಿ ಪಾವತಿಸಲಾಗುತ್ತಿದೆ. ಕನ್ನಡ ಪತ್ರಿಕಾ ರಂಗದಲ್ಲಿ ಟಿಯೆಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಯನ್ನು ಬಾಕಿ ಇದ್ದ 2019 ರಿಂದ 2023ರ ವರ್ಷಕ್ಕೆ ಆಯ್ಕೆ ಮಾಡಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. 2024-25ನೇ ಸಾಲಿನ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಟ್ಟು 200 ಪತ್ರಕರ್ತರಿಗೆ ಮಾಧ್ಯಮ ಕಿಟ್‌ಗಳನ್ನು ವಿತರಿಸಲಾಗಿದೆ.

ಆರೋಗ್ಯ ಸಂಜೀವಿನಿ ಯಶಸ್ವಿ

ಸರಕಾರಿ ನೌಕರರು ಹಾಗೂ ಸಿಬ್ಬಂದಿಗಳ ಬಹು ವರ್ಷದ ಬೇಡಿಕೆಯಾಗಿದ್ದ ಆರೋಗ್ಯ ಸಂಜೀವಿನಿ ಯೋಜನೆಯನ್ನು ರಾಜ್ಯ ಸರಕಾರ ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಇನ್ನು ಕ್ರೀಡಾ ಸಾಧಕರನ್ನು ಉತ್ತೇಜಿಸುವ ದೃಷ್ಟಿಯಿಂದ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ವಿಶೇಷ) ನಿಯಮಗಳು 2023 ರಚಿಸಲಾಗಿದೆ. ರಾಜ್ಯ ಸಿವಿಲ್ ಸೇವೆಗಳಲ್ಲಿನ ಗುಂಪು-ಡಿ ಮತ್ತು ಗುಂಪು-ಸಿ ವೃಂದಗಳಿಗೆ ಸೇರಿದ ಹುದ್ದೆಗಳಿಗೆ ನೀಡುವ ಮುಂಬಡ್ತಿಯಲ್ಲಿ ಎದ್ದು ಕಾಣುವ ಅಂಗವೈಕಲ್ಯವನ್ನುಳ್ಳ ಸರಕಾರಿ ನೌಕರರಿಗೆ ಶೇಕಡ 4ರಷ್ಟು ಮೀಸಲು ಕಲ್ಪಿಸಿ ಆದೇಶಿಸಲಾಗಿರುತ್ತದೆ. ರಾಜ್ಯ ಸರಕಾರದ ವಿವಿಧ ಇಲಾಖೆಗಳಲ್ಲಿ ನಡೆಯುವ ಎಲ್ಲಾ ಹೊರಗುತ್ತಿಗೆ ನೇಮಕಾತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮವನ್ನು ಕೆಲವೊಂದು ಸೂಚನೆ ಗಳ ಮೇರೆಗೆ ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿ ಆದೇಶ ಹೊರಡಿಸಲಾಗಿದೆ.

ಸಮಸ್ಯೆ ಆಲಿಸಿದ ನಾಡ ದೊರೆ

ನಾಡಿನ ಜನರ ಸಮಸ್ಯೆ ಆಲಿಸಲು ರಾಜ್ಯ ಸರಕಾರ ಎರಡು ಬಾರಿ ಆಯೋಜಿಸಿದ ಮುಖ್ಯಮಂತ್ರಿ ಜನಸ್ಪಂದನ ಕಾರ್ಯಕ್ರಮಕ್ಕೆ ಭಾರಿ ಪ್ರತಿಕ್ರಿಯೆ ಬಂದಿತ್ತು. 2023-24ನೇ ಸಾಲಿಗೆ ದಿನಾಂಕ: 09-05-2025ರ ಅಂತ್ಯಕ್ಕೆ ಒಟ್ಟು 9,002 ಕುಂದುಕೊರತೆಗಳು ಮತ್ತು 10,078 ಅರ್ಜಿ/ ಮನವಿ/ ಕೋರಿಕೆಗಳನ್ನು ನೋಂದಾಯಿಸಲಾಗಿದೆ ಮತ್ತು ಒಟ್ಟು 8,957 ಕುಂದುಕೊರತೆಗಳು ಮತ್ತು 10,026 ಅರ್ಜಿ/ ಮನವಿ/ ಕೋರಿಕೆಗಳನ್ನು ಪರಿಹರಿಸಲಾಗಿದೆ. ಆರ್.ಟಿ.ಐ. ಆನ್‌ಲೈನ್ ಪೋರ್ಟಲ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಕಳೆದೆರಡು ವರ್ಷಗಳಿಂದ, 1,31,481 ಆರ್.ಟಿ.ಐ. ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸಿ, 89,182 ಆರ್.ಟಿ.ಐ. ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ ಮತ್ತು 27,750 ಪ್ರಥಮ ಮೇಲ್ಮನವಿಗಳನ್ನ ಆನ್‌ಲೈನ್ ಮೂಲಕ ಸ್ವೀಕರಿಸಿ, 13,604 ಪ್ರಥಮ ಮೇಲ್ಮನವಿಗಳನ್ನು ಇತ್ಯರ್ಥ ಪಡಿಸಲಾಗಿದೆ.

ಪರಿಶಿಷ್ಟರ ಅಭಿವೃದ್ಧಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಇಡೀ ಕಾಂಗ್ರೆಸ್ ಸರಕಾರದ ಸಿದ್ಧಾಂತ 'ಹಿಂದುಳಿದವರಿಗೆ ಅಗತ್ಯ ನೆರವನ್ನು ನೀಡುವ ಮೂಲಕ ಮುನ್ನಲೆಗೆ ಬರುವಂತೆ' ಮಾಡುವುದಾಗಿದೆ. ಈ ಹಿನ್ನಲೆಯಲ್ಲಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ಅನುದಾನವನ್ನು ಮೀಸಲಿಟ್ಟಿದ್ದಾರೆ. 2023-24ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಂದ ಪರಿಶಿಷ್ಟ ಜಾತಿ, ಪಂಗಡದವರ ಅಭಿವೃದ್ಧಿಗಾಗಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಲ್ಲಿ ಒಟ್ಟು 35,221.85 ಕೋಟಿ ಅನುದಾನ ಒದಗಿಸಿದ್ದು, 34,245.77 ಕೋಟಿ ಅನುದಾನ ವೆಚ್ಚ ಮಾಡಲಾಗಿದೆ. 2024-25ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಂದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಒಟ್ಟು 39,957.77 ಕೋಟಿ ಅನುದಾನ ಒದಗಿಸಿದ್ದು, 38,591.20 ಕೋಟಿ ಅನುದಾನವನ್ನು ವೆಚ್ಚ ಮಾಡಲಾಗಿದೆ. ಇನ್ನು ಪ್ರಮುಖವಾಗಿ ಪ.ಜಾತಿ ಮತ್ತು ಪ.ಪಂಗಡದವರ ಅಭಿವೃದ್ಧಿಯ ಹಿತದೃಷ್ಟಿಯಿಂದ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಕಾಯ್ದೆ 2013 ರ ಸೆಕ್ಷನ್ 7(ಡಿ) ಯನ್ನು ರದ್ದುಗೊಳಿಸಲು ಕಾಯ್ದೆಗೆ ತಿದ್ದುಪಡಿ ತಂದಿದ್ದು, ಡೀಮ್ಡ್ ವೆಚ್ಚವನ್ನು ತಡೆಗಟ್ಟಲು ಕ್ರಮವಹಿಸಲಾಗಿದೆ.

ಒಬಿಸಿ ಅಭಿವೃದ್ಧಿಗೆ ಕ್ರಮ

2023-24ನೇ ಸಾಲಿನಲ್ಲಿ 2,443 ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ 2,15,041 ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿದ್ದರೆ, 2024-25ನೇ ಸಾಲಿನಲ್ಲಿ 2,597 ವಿದ್ಯಾರ್ಥಿ ನಿಲಯಗಳಲ್ಲಿ 2,43,836 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ ಹಾಗೂ 174 ಮೊರಾರ್ಜಿ ದೇಸಾಯಿ ವಸತಿ ಶಾಲೆ/ ಕಾಲೇಜುಗಳಲ್ಲಿ 43,070 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ. 2023-24ರಲ್ಲಿ ಶುಲ್ಕ ವಿನಾಯಿತಿ ಕಾರ್ಯಕ್ರಮದಲ್ಲಿ ಹಿಂದಿನ ಸಾಲುಗಳಲ್ಲಿ ಬಾಕಿಯಿದ್ದ ಬಾಬ್ತು 312.20 ಕೋಟಿ ಮೊತ್ತವನ್ನು 3,49,741 ವಿದ್ಯಾರ್ಥಿಗಳಿಗೆ ಹಾಗೂ 2024-25ರಲ್ಲಿ 471.27 ಕೋಟಿ ರು.ಗಳನ್ನು 5,55,285 ವಿದ್ಯಾರ್ಥಿಗಳಿಗೆ ಪಾವತಿಸಲಾಗಿದೆ. ವಿದ್ಯಾಸಿರಿ ಯೋಜನೆಯಡಿ 39,332 ವಿದ್ಯಾರ್ಥಿಗಳಿಗೆ ಒಟ್ಟು ರೂ.58.99 ಕೋಟಿಗಳ ಹಾಗೂ 2024-25ರಲ್ಲಿ 49.96 ಕೋಟಿ ರು.ಗಳನ್ನು 32,984 ವಿದ್ಯಾರ್ಥಿಗಳಿಗೆ ಸಹಾಯಧನ ವನ್ನು ಮಂಜೂರು ಮಾಡಲಾಗಿರುತ್ತದೆ. 2023-24ನೇ ಸಾಲಿನಲ್ಲಿ ಹಾಸ್ಟೆಲ್ ಕಟ್ಟಡಗಳ ನಿರ್ಮಾಣಕ್ಕೆ ರು.145.83 ಕೋಟಿ ಅನುದಾನವನ್ನು 76 ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ಬಳಸಲಾಗಿದ್ದು, 50 ವಿದ್ಯಾರ್ಥಿ ನಿಲಯಗಳ ಕಟ್ಟಡ ಗಳು ಪೂರ್ಣಗೊಂಡಿದೆ. 2024-25ರ ಆಯವ್ಯಯ ಘೋಷಣೆಯಂತೆ, 30 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣವನ್ನು ರೂ.4.00 ಕೋಟಿಗಳ ಘಟಕ ವೆಚ್ಚದಂತೆ ಒಟ್ಟು ರು.120.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ.

ಸಮಾಚಾರ ಸಣ್ಣದಲ್ಲ

ಧರ್ಮಗ್ರಂಥ ಸುಟ್ಟ ಪ್ರಕರಣ: ಪ್ರತಿಭಟನೆ

ಹುಕ್ಕೇರಿ: ಜಿಲ್ಲೆಯ ಸಂತಿ ಬಸ್ತವಾಡ ಗ್ರಾಮದಲ್ಲಿ ಇಸ್ಲಾಂ ಧರ್ಮದ ಕುರಾನ್ ಗ್ರಂಥವನ್ನು ಬೆಂಕಿ ಹಚ್ಚಿರುವ ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಿದರು ತಾಲೂಕಿನ ಮುಸ್ಲಿಂ ಮುಖಂಡರು ಹೊಸ ಬಸ್ ನಿಲ್ದಾಣ ಬಳಿಯ ಪೈಗಂಬರ್ ದರ್ಗಾದಿಂದ ಕೋರ್ಟ್‌ನ ಬಸವೇಶ್ವರ ವೃತ್ತದ ಬೃಹತ್ ರ್‍ಯಾಲಿ ನಡೆಸಿದರು. ನಂತರ ಮಾನವ ಸರಪಳಿ ನಿರ್ಮಿಸಿ ರಸ್ತೆ ಬಂದ್ ಮಾಡಿ ಪ್ರತಿಭಟಿಸಿದರು. ಜಮಾತ ಅಧ್ಯಕ್ಷ ಸಲೀಮ ನದಾಫ ಮಾತನಾಡಿ, ಜಿಲ್ಲೆಯ ಸಂತಿ ಬಸ್ತವಾಡ ಗ್ರಾಮದಲ್ಲಿ ಇಸ್ಲಾಂ ಧರ್ಮದ ಪವಿತ್ರ ಗ್ರಂಥವಾದ ಕುರಾನನ್ನು ಕದ್ದು ಅದಕ್ಕೆ ಬೆಂಕಿ ಹಚ್ಚಿದ್ದು ಖಂಡನೀಯವೆಂದರು. ಬೆಂಕಿ ಹಚ್ಚಿದ ಸಮಾಜಘಾತುಕರನ್ನುಹುಡುಕಿ ಅವರನ್ನು ಬಂಧಿಸಿ ಕಠಿಣ ಶಿಕ್ಷೆ ನೀಡಬೇಕೆಂದು ಆಗ್ರಹಿಸಿದರು. ಗ್ರೇಡ್ 2 ತಹಸೀಲ್ದಾರ ಪ್ರಕಾಶ ಕಲ್ಲೋಳಿ ಅವರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಸ್ಲಿಂ 11 ಜಮಾತಅಧ್ಯಕ್ಷ ಸಲೀಮ ನದಾಫ, ನಜೀರಹ್ಮದ ಮೋಮಿನದಾದಾ, ಸರ್ಫರಾಜ ಮಕಾನದಾರ, ನಿಸ್ಸಾರ ಮುಲ್ಲಾ, ಬಾಬಾಜಾನ ಮೊಕಾಶಿ, ಹಮೀದ ಮುಲ್ಲಾ ಸೇರಿದಂತೆ ಅನೇಕರಿದ್ದರು.

ವಿಶ್ವಜೇನು ದಿನಾಚರಣೆ ಮೇ 20ರಂದು

ಗುಳೇದಗುಡ್ಡ: ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿವಿ, ಸಿಬಿಬಿಓ ವಿಸ್ತರಣಾ ನಿರ್ದೇಶನಾಲಯ ಬಾಗಲಕೋಟ ಹಾಗೂ ಮಕರಂದ ಜೇನು ಕೃಷಿ ರೈತ ಉತ್ಪಾದಕರ ಕಂ. ಬಾಗಲಕೋಟೆ ಇವರ ಆಶ್ರಯದಲ್ಲಿ ವಿಶ್ವ ಜೇನು ದಿನಾಚರಣೆ ಕಾರ್ಯಕ್ರಮ ಮೇ 20ರಂದು ಬೆಳಿಗ್ಗೆ 10.30ಕ್ಕೆ ಸಮೀಪದ ಇಂಜನವಾರಿ ಗ್ರಾಮದ ಜೇನು ಕೃಷಿಕ ತಿಪ್ಪಣ್ಣ ಗೌಡರ ಅವರ ತೋಟದಲ್ಲಿ ಹಮ್ಮಿಕೊಳ್ಳಲಾಗಿದೆ. ಸ್ಥಳೀಯ ಒಪ್ಪತ್ತೇಶ್ವರ ಮಠದ ಶ್ರೀಅಭಿನವ ಒಪ್ಪತ್ತೇಶ್ವರ ಸ್ವಾಮಿಗಳು ಕಾರ್ಯಕ್ರಮ ಸಾನಿಧ್ಯ ವಹಿಸಲಿದ್ದು, ತೋಟಗಾರಿಕಾ ವಿಜ್ಞಾನಗಳ ವಿವಿಯ ವಿಸ್ತರಣಾ ನಿರ್ದೇಶಕ ಡಾ. ವೆಂಕಟೇಶಲು ಬಿ. ಅಧ್ಯಕ್ಷತೆ ವಹಿಸುವರು. ತೋಟಗಾರಿಕಾ ವಿವಿಯ ಡೀನ್ ಡಾ.ಬಾಲಾಜಿ ಕುಲಕರ್ಣಿ, ಡಾ. ಸತ್ಯನಾರಾಯಣ ಸಿ, ಡಾ. ರಾಮನಗೌಡ ಎಚ್., ಕೃಷಿ ಅಧಿಕಾರಿ ಆನಂದಗೌಡ ಗೌಡರ, ಗೋಳಪ್ಪ ಹೊರಟ್ಟಿ, ಬಸನಗೌಡ ಗೌಡರ, ವೀರಯ್ಯಸ್ವಾಮಿ ಸೂಳಿಕೇರಿ, ಶ್ರೀಪಾದ ವಿಶ್ವೇಶ್ವರ, ಜೇನು ಕೃಷಿ ರೈತ ತಿಪ್ಪಣ್ಣ ಗೌಡರ, ಪ್ರಶಾಂತ ನಾಯಕ, ಪುಷ್ಪಾ ಅಂಗಡಿ, ಧರಿಯಪ್ಪ ಕಿತ್ತೂರ, ಮಹಾದೇವ ನಾಯಕ ಮತ್ತಿತರರು ಉಪಸ್ಥಿತರಿರುವರು.

ತಾಯಿ ವಾತ್ಸಲ್ಯ, ತ್ಯಾಗದ ಪ್ರತೀಕ

ಹುಕ್ಕೇರಿ: ಮಕ್ಕಳು ತಾಯಿ ತಂದೆಗೆ ಗೌರವ ನೀಡಬೇಕು, ತಂದೆ ತಾಯಿಗಳು ಕೂಡ ಮಕ್ಕಳ ಭಾವನೆಗಳನ್ನು ಅರಿತು ಪ್ರೀತಿ ವಿಶ್ವಾಸದಿಂದ ನಡೆದು ಪರಿಶುದ್ಧ ಬದುಕು ಸಾಗಿಸಬೇಕು ಎಂದು ಎಕ್ಸಾಸ್ಟಿಸ್ ಮಿನಿಸ್ಟ್ರಿಪ್ ಚರ್ಚ ಸಭಾಪಾಲಕಿ ಜಯಶ್ರೀ ಕೋಲಕಾರ ಹೇಳಿದರು. ಅವರು ಪಟ್ಟಣದ ಎಕ್ಸಾಸ್ಟಿಸ್ ಮಿನಿಸ್ಟ್ರಿಪ್ ಚರ್ಚ ಹಮ್ಮಿಕೊಂಡ ತಾಯಿಂದಿರ ದಿನಾಚಾರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಅಮ್ಮ ಮಮತೆಯ ಮೂರ್ತಿ ಬದುಕಿನ ಶಕ್ತಿ, ನಿಸ್ವಾರ್ಥ ಮನಸ್ಸುಳ ತಾಯಿ ಮಕ್ಕಳ ಪ್ರೀತಿಗೋಸ್ಕರ ತ್ಯಾಗಮಯಿ ಜೀವನ ಸಾಗಿಸುತ್ತಾಳೆ. ತಾಯಿ ತ್ಯಾಗದ ಪ್ರತಿಯ ಪೂರಕವಾಗಿ ಮನಸ್ಸುಗಳಿಗೆ ನೋವುವಾಗಿ ಅವರ ಕಣ್ಣೀರ ಬರದಂತೆ ನಡೆದುಕೊಳ್ಳುವುದು ನಮ್ಮೆಲ್ಲರ ಜವ್ದಾರಿಯಾಗಿದೆ ಎಂದು ಹೇಳಿದರು. ಡಾ. ಪ್ರಣಯ ಕೋಲಕಾರ ಮಾತನಾಡಿದರು. ಈ ಸಂದರ್ಭದಲ್ಲಿ ಮಾಳವ್ವ ಕಾಂಬಳೆ, ರೂಪಾ ಸಾಲಿಮನಿ, ಮಂಗಲ ದರಬಾರೆ, ಲಕ್ಷ್ಮಿ ಕೊಂಡಿ, ರೇಖಾ ವಂದಾಳೆ, ಸಂಗೀತಾ ಸಾಲಿಮನಿ, ರೇಖಾ ಮಾಳಗೆ ನೀಲವ್ವಾ ಕಾಂಬಳೆ,. ರೇಣುಕಾ ಕಾಂಬಳೆ, ಲಕ್ಷ್ಮಿ ಕರಮನಿ, ಮಲ್ಲಪ್ಪಾ ವಂದಾಳೆ, ಜಯಸೇನ ಕಟ್ಟಿ, ಕುಮಾರ ಸಾಲಿಮನಿ, ವಿಠಲ್ ಸಾಲಿಮನಿ, ಪ್ರಕಾಶ ಕಾಂಬಳೆ, ಮಹೇಶ ಕಾಂಬಳೆ, ಶ್ರವಣ ಕಂಕಣವಾಡಿ, ಮತ್ತಿತರರು ಉಪಸ್ಥಿತರಿದ್ದರು.

ಆರೋಗ್ಯ ಶಿಬಿರದ ಪ್ರಯೋಜನ ಪಡೆಯಿರಿ

ಕಾಗವಾಡ: ಆರೋಗ್ಯ ಶಿಬಿರದ ಮುಖ್ಯ ಉದ್ದೇಶವೆಂದರೆ ಸಮುದಾಯದ ಪ್ರತಿಯೊಬ್ಬರು ಆರೋಗ್ಯದಿಂದ ಬಾಳಬೇಕು, ಬದುಕಬೇಕು. ಆರೋಗ್ಯದಿಂದ ಇರುವುದು ನನ್ನ ಜನ್ಮ ಸಿದ್ಧ ಹಕ್ಕು ಎಂದು ತಿಳಿದು ಕೊಳಬೇಕೆಂದು ಹಿರಿಯ ಆರೋಗ್ಯ ನಿರಕ್ಷಣಾಧಿಕಾರಿ ಮಂಜುನಾಥ ಕೂಡಲಗಿ ಹೇಳಿದರು. ಅವರು ಶನಿವಾರ ದಿ. 17 ರಂದು ತಾಲೂಕಿನ ಐನಾಪುರ ಪಟ್ಟಣದ ಜೈ ಭೀಮ ನಗರದಲ್ಲಿರುವ ಕರುಣಾ ಬೌದ್ಧ ವಿಹಾರದಲ್ಲಿ ದ ಬುಧಿಷ್ಟ ಸೊಸೈಟಿ ಆಫ್ ಇಂಡಿಯಾ, ಆಶ್ರಯದಲ್ಲಿ ತಥಾಗತ ಗೌತಮ ಬುದ್ಧರ 2569 ನೇ ಜಯಂತಿಯ ಅಂಗವಾಗಿ ಏರ್ಪಡಿಸಿದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಗೌತಮ ಬುದ್ಧ ಹಾಗೂ ಡಾ ಬಾಬಾಸಾಬ ಅಂಬೆಡ್ಕರವರ ವಿಗ್ರಹಗಳಿಗೆ ಪೂಜೆ ಸಲ್ಲಿಸಿ, ಚಾಲನೆ ನೀಡಿ, ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಕಾಗವಾಡ ಸಮುದಾಯ ಕೇಂದ್ರದ ಶಿವಪ್ಪಾ ಯಡ್ರಾಂವಿ ಪಾಲ್ಗೊಂಡಿದ್ದರು.

{ಈಶ್ವರ ಬಿ.ಖಂಡ್ರೆ } ಸಚಿವ

ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಇತ್ತೀಚಿಗೆ ಕೆಕೆಆರ್‌ಡಿಬಿ ಅನುದಾನದಲ್ಲಿ ಎಐ ಕ್ಯಾಮೆರಾ ಒಳಗೊಂಡ ಕಮಾಂಡ್ ಸೆಂಟರ್ ಸ್ಥಾಪನೆ ಮಾಡಲಾಗಿದೆ. ಮುಂದೆಯೂ ಕಾನೂನು ಸುವ್ಯವಸ್ಥೆಗೆ ಎಲ್ಲ ರೀತಿಯಲ್ಲಿ ಕ್ರಮವಹಿಸಲಾಗುವುದು.

ಛತ್ರಪತಿ ಶಿವಾಜಿ ಮಹಾರಾಜರ ನೂತನ ಮೂರ್ತಿ ಅನಾವರಣ | ಸತೀಶ ಜಾರಕಿಹೊಳಿ ಭಾಗಿ

ಹೆಬ್ಬಾಳಕರ್‌ರಿಂದ ಸಮಾಜಮುಖಿ ಕಾರ್ಯ: ಸಚಿವ

ಸುಳೇಬಾವಿ (ಬೆಳಗಾವಿ): ಸಚಿವೆ ಲಕ್ಷ್ಮೀ ಹೆಬ್ಬಾಳಕರ ಮತ್ತು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಅವರು ಅಭಿವೃದ್ಧಿ ಜತೆಗೆ ಸಮಾಜಮುಖಿ ಕೆಲಸಗಳನ್ನೂ ಮಾಡುತ್ತಿದ್ದಾರೆ ಎಂದು ಲೋಕೋಪಯೋಗಿ ಸಚಿವರೂ, ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಸತೀಶ ಜಾರಕಿಹೊಳಿ ಪ್ರಶಂಸಿದರು.

ಸುಳೇಭಾವಿ ಗ್ರಾಮದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಮತ್ತು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಅವರು ಸ್ವಂತ ಹಣದಿಂದ ಪ್ರತಿಷ್ಠಾಪಿಸಿರುವ ಛತ್ರಪತಿ ಶಿವಾಜಿ ಮಹಾರಾಜರ ನೂತನ ಮೂರ್ತಿಯನ್ನು ಭಾನುವಾರ ಸಂಜೆ ಅನಾವರಣಗೊಳಿಸಿ ಅವರು ಮಾತನಾಡಿದರು.

ಇದೊಂದು ಐತಿಹಾಸಿಕ ದಿನ. ಇಲ್ಲಿ ಶಿವಾಜಿ ಮಹಾರಾಜರ ಭವ್ಯ ಮೂರ್ತಿ ಆಗಬೇಕೆಂದು ಬಹಳ ವರ್ಷದ ಕನಸಿತ್ತು. ಅದನ್ನು ಹೆಬ್ಬಾಳಕರ ಮತ್ತು ಹಟ್ಟಿಹೊಳಿ ನೆರವೇರಿಸಿದ್ದಾರೆ. ಸರಕಾರದ ಹಣದಲ್ಲಿ ಇಂತಹ ಮೂರ್ತಿ ಸ್ಥಾಪಿಸಲು ಅವಕಾಶ ಕಡಿಮೆ. ಆದರೆ ಹೆಬ್ಬಾಳಕರ ಅವರು ಸ್ವಂತ ಹಣದಿಂದ ನೆರವೇರಿಸಿದ್ದಾರೆ. ಅಭಿವೃದ್ಧಿ ಜೊತೆಗೆ ಸಮಾಜಮುಖಿ ಕೆಲಸವನ್ನೂ ಮಾಡುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಶಿವಾಜಿ ಮಹಾರಾಜರ ನೂತನ ಮೂರ್ತಿ ಅನಾವರಣ ಕಾರ್ಯಕ್ರಮವನ್ನು ಸಚಿವ ಸತೀಶ ಜಾರಕಿಹೊಳಿ ಅವರು ಉದ್ಘಾಟಿಸಿದರು.

> **ನಮ್ಮ ಸರಕಾರ ಜನಪರ ಕೆಲಸ ಮಾಡುತ್ತಿದ್ದು, ಗ್ಯಾರಂಟಿ ಯೋಜನೆಗಳು ಜನರ ಬದುಕು ಕಟ್ಟಲು ಸಹಕಾರಿಯಾಗಿವೆ. ಗೃಹಲಕ್ಷ್ಮೀ ಹಣವಂತೂ ಬಡವರ ಮಕ್ಕಳ ವಿದ್ಯಾಭ್ಯಾಸ, ವೈದ್ಯಕೀಯ ವೆಚ್ಚ ಸೇರಿದಂತೆ ಅನೇಕ ಕೆಲಸಗಳಿಗೆ ಸಹಕಾರಿಯಾಗಿದೆ. ಬುದ್ಧ, ಬಸವಣ್ಣ, ಅಂಬೇಡ್ಕರ್ ನಮಗೆಲ್ಲರಿಗೂ ಆದರ್ಶ.**
>
> **ಸತೀಶ ಜಾರಕಿಹೊಳಿ,** ಸಚಿವ

ನಮ್ಮ ಸರಕಾರ ಜನಪರ ಕೆಲಸ ಮಾಡುತ್ತಿದ್ದು, ಗ್ಯಾರಂಟಿ ಯೋಜನೆಗಳು ಜನರ ಬದುಕು ಕಟ್ಟಲು ಸಹಕಾರಿಯಾಗಿವೆ. ಗೃಹಲಕ್ಷ್ಮೀ ಹಣವಂತೂ ಬಡವರ ಮಕ್ಕಳ ವಿದ್ಯಾಭ್ಯಾಸ, ವೈದ್ಯಕೀಯ ವೆಚ್ಚ ಸೇರಿದಂತೆ ಅನೇಕ ಕೆಲಸಗಳಿಗೆ ಸಹಕಾರಿಯಾಗಿದೆ. ಬುದ್ಧ, ಬಸವಣ್ಣ, ಅಂಬೇಡ್ಕರ್ ನಮಗೆಲ್ಲರಿಗೂ ಆದರ್ಶ ಎಂದರು.

ಛತ್ರಪತಿ ಶಿವಾಜಿ ಮಹಾರಾಜರ ತಂದೆ ಶಹಾಜಿ ಮಹಾರಾಜರ ಸಮಾಧಿ ಇರುವ ಚನ್ನಗಿರಿ ತಾಲೂಕಿನ ಹೊದಗೆರೆ ಗ್ರಾಮದಲ್ಲಿ ಭವ್ಯ ಸ್ಮಾರಕ ಮಾಡಲು ಲೋಕೋಪಯೋಗಿ ಇಲಾಖೆಯಿಂದ 5 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಇನ್ನು ಕೆಲವೇ ದಿನಗಳಲ್ಲಿ ಕೆಲಸ ಆರಂಭವಾಗಲಿದೆ ಎಂದು ಸತೀಶ ಜಾರಕಿಹೊಳಿ ತಿಳಿಸಿದರು.

ಸುಳೇಭಾವಿ ಗ್ರಾಮದಲ್ಲಿ ಯಾವುದೇ ಜಾತಿ, ಧರ್ಮದ ಭೇದ ಭಾವ ಇಲ್ಲದೇ ಇರುವುದು ಹೆಮ್ಮೆಯ ವಿಷಯ. ಶಿವಾಜಿ ಮಹಾರಾಜರ ಹೋರಾಟ, ಆದರ್ಶ ನಮಗೆಲ್ಲರಿಗೂ ಪ್ರೇರಣೆ. ಇಂಥ ಕಾರ್ಯಕ್ರಮಗಳು ನಮಗೆ ದಾರಿದೀಪ ಆಗಬೇಕು. ಸುಂದರವಾದ ಸ್ಮಾರಕ ನಿರ್ಮಾಣ ಮಾಡಿರುವುದು ಸಂತೋಷದ ವಿಷಯ. ಇಡೀ ಜಿಲ್ಲೆಯಲ್ಲೇ ಇಂತಹ ಸುಂದರ ಮೂರ್ತಿ ಬೇರೆಲ್ಲೂ ಇಲ್ಲ ಎಂದರು. ಲಕ್ಷ್ಮೀ ಹೆಬ್ಬಾಳಕರ್ ಮತ್ತು ಚನ್ನರಾಜ ಹಟ್ಟಿಹೊಳಿ ಅವರು ಸತೀಶ್ ಜಾರಕಿಹೊಳಿ ಅವರನ್ನು ಸನ್ಮಾನಿಸಿದರು.

ಅಂಬೇಡ್ಕರ್ ಸಾಧನೆ ಎಲ್ಲರಿಗೂ ದಾರಿದೀಪ

ಅಂಬೇಡ್ಕರ್ ಅವರ ನೂತನ ಮೂರ್ತಿಯನ್ನು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಅನಾವರಣಗೊಳಿಸಿದರು.

ಬಿಜಗರಣಿ: ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಮಾತನಾಡಲು ನಿಂತರೆ ಒಂದು ದಿನ ಸಾಲುವುದಿಲ್ಲ. ಪ್ರತಿಯೊಬ್ಬರು ಅವರ ಜೀವನ ಚರಿತ್ರೆಯನ್ನು ಓದಬೇಕು. ಅವರ ಸಾಧನೆಯನ್ನು ತಿಳಿದುಕೊಳ್ಳಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಬಿಜಗರಣಿ ಗ್ರಾಮದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ನೂತನ ಮೂರ್ತಿಯನ್ನು ಅನಾವರಣಗೊಳಿಸಿ ಮಾತನಾಡಿದ ಸಚಿವರು, ಇಂದಿನ ಯುವಕರು ಅಂಬೇಡ್ಕರ್ ಅವರ ಆದರ್ಶವನ್ನು ಇಟ್ಟುಕೊಂಡು ಓದಬೇಕು, ಬೆಳೆಯಬೇಕು, ಜೀವಿಸಬೇಕು. ಇದೇ ಅವರಿಗೆ ನಿಜವಾಗಿ ನಾವು ನೀಡಬಹುದಾದ ಕೊಡುಗೆ ಎಂದರು.

ಲಕ್ಷ್ಮೀ ತಾಯಿ ಫೌಂಡೇಷನ್ ವತಿಯಿಂದ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ದೇಶಕ್ಕಾಗಿ ಸೇವೆ ಸಲ್ಲಿಸಿರುವ ಮಹನೀಯರ ಬಗ್ಗೆ ಇಂದಿನ ಪೀಳಿಗೆಗೆ ತಿಳಿಸುವ ಉದ್ದೇಶದಿಂದ ಕ್ಷೇತ್ರದಲ್ಲಿ ಅನೇಕ ಮಹನೀಯರ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಲಾಗುತ್ತಿದೆ ಎಂದು ಹೇಳಿದರು.

ಅಂಬೇಡ್ಕರ್ ಅವರ ಬದುಕು, ತತ್ವ, ಆದರ್ಶಗಳು ನಮ್ಮೆಲ್ಲರ ಪಾಲಿಗೆ ಮಾರ್ಗದರ್ಶನ ವಾಗಿವೆ. ಸಮಾನತೆ ಮತ್ತು ಪ್ರಗತಿಯ ಕನಸು ಕಂಡ ಮೇರು ನಾಯಕ ಅವರು. ಅವರ ಆದರ್ಶ ಎಲ್ಲರ ಜೀವನಕ್ಕೆ ದಾರಿದೀಪ. ಬಾಬಾ ಸಾಹೇಬರ ಚಿಂತನೆಗಳು ಇಂದಿಗೂ, ಎಂದಿಗೂ ಯುವಜನತೆಗೆ ಸ್ಫೂರ್ತಿ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಈ ಸಂದರ್ಭದಲ್ಲಿ ಯುವರಾಜ್ ಕದಂ, ಮಾವಳ್ಳಿ ಶಂಕರ್, ಸಿದ್ದಪ್ಪ ಕಾಂಬಳೆ, ಮನೋಹರ್ ಬೆಳಗಾಂವ್ಕರ್, ಸಂತೋಷ ಕಾಂಬಳೆ, ಸುತಾರಿ ಜಾಧವ್, ಮಹೇಶ ಕೋಲಕಾರ್, ನಿಂಗಪ್ಪ ಜಾಧವ್, ಗ್ರಾಮ ಪಂಚಾಯತ್ ಅಧ್ಯಕ್ಷರಾದ ರೇಖಾ ನಾಯ್ಕ್, ನಾಮದೇವ್ ಮೊರೆ, ಯಲ್ಲಪ್ಪ ಬೆಳಗಾಂವ್ಕರ್, ಬಾಳು ದೇಸೂರಕರ್, ತೆರಸೆ ಕುಟುಂಬದವರು ಸೇರಿದಂತೆ ಗ್ರಾಮದ ಮಹಿಳೆಯರು ಉಪಸ್ಥಿತರಿದ್ದರು.

ಕಾಮಗಾರಿಗೆ ಶಾಸಕ ಪಟ್ಟಣರಿಂದ ಭೂಮಿಪೂಜೆ

ಕಾಮಗಾರಿಗೆ ಸೋಮವಾರ ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಭೂಮಿಪೂಜೆ ನೆರವೇರಿಸಿದರು.

ರಾಮದುರ್ಗ: ತಾಲೂಕಿನ ನಂದಿಹಾಳದಿಂದ ಕಾಡರಕೊಪ್ಪವರೆಗೆ ಸುಮಾರು ರು. 50 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸೋಮವಾರ ವಿಧಾನಸಭೆ ಮುಖ್ಯ ಸಚೇತಕ, ಶಾಸಕ ಅಶೋಕ ಪಟ್ಟಣ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅಶೋಕ ಪಟ್ಟಣ, ಗ್ರಾಮಸ್ಥರು ರಸ್ತೆ ಅಗಲೀಕರಣಕ್ಕೆ ಅನವಶ್ಯಕ ತಂಟೆ-ತಕರಾರು ಮಾಡದೆ ಗುತ್ತಿಗೆದಾರರಿಂದ ಗುಣಮಟ್ಟದ ಕಾಮಗಾರಿ ಮಾಡಿಸಿಕೊಳ್ಳಬೇಕು. ಗ್ರಾಮಸ್ಥರ ಇನ್ನುಳಿದ ಬೇಡಿಕೆಗಳನ್ನು ಹಂತ ಹಂತವಾಗಿ ಇಡೇರಿಸುತ್ತೇನೆ. ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ರಾಮಣ್ಣ ಬೀಡಕಿ, ಬಸನಗೌಡ ಪ್ಯಾಟಿಗೌಡ್ರ, ಖಾನಗೌಡ ಪಾಟೀಲ, ಹಣಮಂತ ದೇಸಾಯಿ, ಸದಾಶಿವ ಮಾದರ, ಲಕ್ಷ್ಮಣ ಲಮಾಣಿ, ರಾಜು ವಾಸನ, ರಂಗಪ್ಪ ಚನ್ನಪ್ಪಗೌಡ್ರ, ರಾಜು ಮಾನೆ, ಭೀಮಶಿ ಬಂಡಿವಡ್ಡರ, ಜುಲೆಪ್ಪ ಲಮಾಣಿ ಸೇರಿದಂತೆ ಇತರರಿದ್ದರು.

ಅಹಿಂಸಾ ತತ್ವ ಸಾರಿದ ಕೀರ್ತಿ ವಿದ್ಯಾನಂದರಿಗೆ ಸಲ್ಲುತ್ತದೆ: ಶ್ರೀ

ಕಾಗವಾಡ: ಜೈನ ಸಮಾಜವು ಇಡೀ ವಿಶ್ವದಲ್ಲಿಯೇ ಅಹಿಂಸಾ ತತ್ವ-ಸಿದ್ಧಾಂತಗಳನ್ನು ಪಾಲಿಸಿಕೊಂಡು ಬಂದಿರುವ ಸಮಾಜವಾಗಿದ್ದು, 21ನೇ ಶತಮಾನದ ರಾಷ್ಟ್ರಸಂತ ವಿದ್ಯಾನಂದ ಮುನಿಮಹಾರಾಜರು ಜೈನ ಸಂಸ್ಕೃತಿ, ಅಹಿಂಸಾ ಧರ್ಮವನ್ನು ವಿಶ್ವವ್ಯಾಪಿ ಪಸರಿಸಿದವರು. ದಕ್ಷಿಣ ಭಾರತದ ಜೈನ ತೀರ್ಥ ಕ್ಷೇತ್ರವಾದ ಶ್ರವಣಬೆಳಗೊಳವನ್ನು ವಿಶ್ವ ಭೂಪಟದಲ್ಲಿ ಬಿಂಬಿಸಿದ ಶ್ರೇಯ ಅವರದ್ದಾಗಿದೆಯೆಂದು ಶ್ರವಣಬೆಳಗೊಳದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯರು ಹೇಳಿದರು.

ಅವರು, ರವಿವಾರ ದಿ. 18 ರಂದು ತಾಲೂಕಿನ ಶೇಡಬಾಳ ಪಟ್ಟಣದ ವಿದ್ಯಾನಂದ ಮುನಿರಾಜ ಕನ್ನಡ ಪ್ರಾಥಮಿಕ ಶಾಲಾ ಆವರಣದಲ್ಲಿ ರಾಷ್ಟ್ರಸಂತ ವಿದ್ಯಾನಂದ ಮುನಿರಾಜರ ಜನ್ಮ ಶತಾಬ್ದಿ ಮಹೋತ್ಸವದ ವರ್ಷಾಚರಣೆ ಸಮಾರೋಪ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ, ಮಾತನಾಡುತ್ತಿದ್ದರು.

ವಿಜಯಪೂರ ಜ್ಞಾನಯೋಗ ಆಶ್ರಮದ ಜ್ಞಾನಾನಂದ ಸ್ವಾಮೀಜಿ ಮಾತನಾಡಿ, ವಿದ್ಯಾನಂದ ಮಹಾರಾಜರ ಬಾಲ್ಯದಿಂದ ಸಮಾಧಿ ವರೆಗಿನ ವಿಸ್ತೃತವಾದ ಮಾಹಿತಿಯನ್ನು ನೀಡಿ ಮಹಾರಾಜರು ವಿಶ್ವಕ್ಕೆ ನೀಡಿರುವ ಕೊಡುಗೆ ಬಗ್ಗೆ ತಿಳಿಸಿದರು.



ವಿದ್ಯಾನಂದ ಮುನಿಗಳ ಭಾವಚಿತ್ರದ ಪೂಜೆ ನೆರವೇರಿಸುತ್ತಿರುವ ಶ್ರೀಗಳು ಮತ್ತು ಗಣ್ಯರ ಚಿತ್ರ.

ಮುಖ್ಯ ಅತಿಥಿಗಳಾಗಿ ಅಥಣಿ ಶಾಸಕ ಲಕ್ಷ್ಮಣ ಸವದಿ, ಕಾಗವಾಡ ಶಾಸಕ ರಾಜು ಕಾಗೆ ಭಾಗವಹಿಸಿ, ಮಾತನಾಡುತ್ತ, ಪ.ಪೂ. ವಿದ್ಯಾನಂದ ಮುನಿರಾಜರು ಶೇಡಬಾಳದ ಸುಪುತ್ರರು, ಕೇಂದ್ರ ಸರಕಾರ ಅವರ ಸ್ಮರಣಾರ್ಥವಾಗಿ ಶೇಡಬಾಳದ ರೈಲು ನಿಲ್ದಾಣಕ್ಕೆ ವಿದ್ಯಾನಂದ ಮುನಿರಾಜ ನಿಲ್ದಾಣ ಎಂದು ನಾಮಕರಣ ಮಾಡಬೇಕು. ಈ ನಿಟ್ಟಿನಲ್ಲಿ ತಾವು ಪ್ರಯತ್ನಿಸುವುದಾಗಿ ತಿಳಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಜೈನ ಅಸೋಸಿಯೆಶನ್‌ನ ಉಪಾಧ್ಯಕ್ಷ ಶಿತಲಗೌಡ ಪಾಟೀಲ, ಸಂಸ್ಥೆಯ ಅಧ್ಯಕ್ಷ ಹಾಗೂ ಕಾರ್ಯಕ್ರಮದ ಸಂಯೋಜಕ ಪ್ರಕಾಶ ನಾಂದ್ರೆ, ಡಾ. ಅಶೋಕ ಪಾಟೀಲ, ಡಾ. ಮಹಾದವಲ ಭೋಮಾಜ, ಪ.ಪಂ. ಅಧ್ಯಕ್ಷ ಉತ್ಕರ್ಷ ಪಾಟೀಲ, ಹಿರಿಯ ಸಾಹಿತಿ ಬಾಹುಬಲಿ ಭೋಸಗೆ, ರವೀಂದ್ರ ನರಸಾಯಿ ಸೇರಿದಂತೆ ವಿದ್ಯಾನಂದ ಮಹಾರಾಜರ ಜೈನ ಹಾಗೂ ಜೈನೇತರ ಭಕ್ತರು ಉಪಸ್ಥಿತರಿದ್ದರು. ಜೈನ ಸಮಾಜದ ಶಾಸ್ತ್ರಿ ಡಾ.ರಾಜೇಂದ್ರ ಸಾಂಗಾವೆ, ಗುರುಮಾತೆ ಅರ್ಚನಾ ಪಾಟೀಲ ನಿರೂಪಿಸಿದರು.

ಯಲ್ಲಮ್ಮನ ಗುಡ್ಡ: ಸೌಕರ್ಯ ಕಲ್ಪಿಸಲು ಯೋಜನೆ ಸಿದ್ಧ

ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ರಾಜ್ಯ ಮಟ್ಟದ ಸಮಿತಿ 2 ನೇ ಸಭೆ ಜರುಗಿತು.

ಸವದತ್ತಿ: ಉತ್ತರ ಕರ್ನಾಟಕದ ಪ್ರಮುಖ ಶ್ರದ್ಧಾಕೇಂದ್ರ ಸವದತ್ತಿ ಯಲ್ಲಮ್ಮನ ಗುಡ್ಡದಲ್ಲಿ ಭಕ್ತರ ಅನುಕೂಲಕ್ಕಾಗಿ ಮೂಲಸೌಕರ್ಯ ಕಲ್ಪಿಸುವ ಸಮಗ್ರ ಯೋಜನೆ ಸಿದ್ಧಗೊಂಡಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ಭಕ್ತರಿಗೆ ಅನುಕೂಲವಾಗಲಿದೆ ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಹೇಳಿದರು.

ಇಲ್ಲಿನ ಯಲ್ಲಮ್ಮ ದೇವಸ್ಥಾನದ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಸೋಮವಾರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ರಾಜ್ಯ ಮಟ್ಟದ ಸಮಿತಿ 2 ನೇ ಸಭೆಯಲ್ಲಿ ಮಾತನಾಡಿ, ಸ್ವಚ್ಛತೆ, ಟ್ರಾಫಿಕ್ ನಿಯಂತ್ರಣ, ಅತಿಕ್ರಮಣ ತೆರವಿಗೆ ಶ್ರಮಿಸಿದ ಹಾಗೂ ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳು. ಮೊದಲನೇ ಸಭೆಯ ಸಲಹೆಯಂತೆ ಅಭಿವೃದ್ಧಿಯ ನಕ್ಷೆ ತಯಾರಿಸಿದ್ದು, ಪೂರಕವಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನುದಾನ ಬಿಡುಗಡೆ ಮಾಡಿವೆ. ಲೋಕೋಪಯೋಗಿ ಇಲಾಖೆಯಡಿ ರಸ್ತೆ ನಿರ್ಮಾಣ ಸೇರಿ ನಿರೀಕ್ಷೆಯಂತೆ ಎಲ್ಲ ರೀತಿಯಿಂದ ಸಹಕಾರ ದೊರೆತಿದೆ.

ಕೇಬಲ್ ಕಾರ್ ವ್ಯವಸ್ಥೆ, ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆ, ಕ್ಯೂ ಕಾಂಪ್ಲೆಕ್ಸ್, ಉಳಿದುಕೊಳ್ಳಲು ವ್ಯವಸ್ಥೆ, ಗೌರವ ಘಟಕ, ಚಕ್ಕಡಿ ಕಟ್ಟಿಕೊಂಡು ಬರುವವರಿಗೆ ಪಶು ಆಹಾರಕ್ಕಾಗಿ ಮೇವು ದಾಸೋಹ ಸಂಕೀರ್ಣ, ರಿಂಗ್ ರಸ್ತೆ, ವಯಸ್ಸಾದವರಿಗೆ ದರ್ಶನಕ್ಕೆ ವ್ಯವಸ್ಥೆ ಮುಂತಾದವು ಸೇರಿದಂತೆ ಎಲ್ಲಾ ಮೂಲಸೌಕರ್ಯ ಕಲ್ಪಿಸಲು ಸ್ಥಳ ಹಾಗೂ ನೀಲಿನಕ್ಷೆ ಕುರಿತು ಜಿಲ್ಲಾಧಿಕಾರಿಯಿಂದ ಮಾಹಿತಿ ಪಡೆದರು.

> **ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಅಗತ್ಯ ಮೂಲಸೌಕರ್ಯಕ್ಕೆ ವ್ಯವಸ್ಥೆ ಕಲ್ಪಿಸಲಾಗುವದು. ದೇವಸ್ಥಾನ ಪ್ರಾಧಿಕಾರ ಹಾಗೂ ಪ್ರವಾಸೋದ್ಯಮ ಪ್ರಾಧಿಕಾರದಿಂದ ಭಕ್ತರು, ಪ್ರವಾಸಿಗರ ಪ್ರಮಾಣ ಮತ್ತಷ್ಟು ಹೆಚ್ಚಾಗಲಿದೆ. ಎಲ್ಲರ ಸಹಕಾರದಿಂದ ದೇವಸ್ಥಾನದಲ್ಲಿನ ಅತಿಕ್ರಮಣ ತೆರವು ಕಾರ್ಯಾಚರಣೆ ಯಶಸ್ವಿಯಾಗಿದೆ. ಅಭಿವೃದ್ಧಿಗೆ ವ್ಯಾಪಾರಸ್ಥರ ಬೆಂಬಲವೂ ಇದೆ. 10ಶೇ ಬಾಡಿಗೆ ಹೆಚ್ಚಿಸಿ ವ್ಯಾಪಾರಕ್ಕೆ ಅನುಕೂಲ ಕಲ್ಪಿಸುವಂತೆ ಬೇಡಿಕೆ ಇಟ್ಟಿದ್ದಾರೆ. ಸುಮಾರು ವರ್ಷಗಳಿಂದ ವ್ಯಾಪಾರ ನಡೆಸಿಕೊಂಡು ಬಂದ ವ್ಯಾಪಾರಸ್ತರಿಗೆ ಕೊಟ್ಟ ಮಾತಿನಂತೆ ಅವಕಾಶ ಕಲ್ಪಿಸಿಕೊಡಬೇಕಿದೆ.**
>
> **ವಿಶ್ವಾಸ ವೈದ್ಯ,** ಶಾಸಕ

ಲೋಕೋಪಯೋಗಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಮಾತನಾಡಿ, ಕ್ಷೇತ್ರದಲ್ಲಿ ಸೌಕರ್ಯಗಳು ಅಚ್ಚುಕಟ್ಟಾಗಿದ್ದರೆ, ಆದಾಯವೂ ಹೆಚ್ಚಾಗುತ್ತದೆ. ಈ ಆದಾಯದಿಂದ ಭಕ್ತರಿಗೆ ಇನ್ನೂ ಹೆಚ್ಚಿನ ಮೂಲಭೂತ ಸವಲತ್ತು ಒದಗಿಸಬಹುದು. ಒಟ್ಟಾರೆ ಕ್ಷೇತ್ರ ಆಕರ್ಷಣೀಯವಾಗಿರಲಿದೆ ಎಂದರು.

ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾತನಾಡಿದರು. ಈ ವೇಳೆ ಎಸ್ ಪಿ ಭೀಮಾ ಶಂಕರ್ ಗುಳೇದ್, ಯಲ್ಲಮ್ಮ ದೇವಸ್ಥಾನ ಪ್ರಾಧಿಕಾರ ಕಾರ್ಯದರ್ಶಿ ಅಶೋಕ್ ದುಡಗುಂಟಿ, ಪ್ರವಾಸೋದ್ಯಮ ಕಾರ್ಯದರ್ಶಿ ಗೀತಾ ಕೌಲಗಿ, ತಹಸೀಲ್ದಾರ್ ಮಲ್ಲಿಕಾರ್ಜುನ ಹೆಗ್ಗಣ್ಣವರ, ತಾ ಪಂ ಇ ಒ ಆನಂದ ಬಡಕುಂದ್ರಿ, ದೇವಸ್ಥಾನ ಸಹ ಕಾರ್ಯದರ್ಶಿ ನಾಗರತ್ನಾ ಚೋಳಿನ್, ಸೇರಿ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಪರಿಸರ ಸ್ವಚ್ಛವಾಗಿ ಇಟ್ಟುಕೊಳ್ಳಲು ಮನವಿ

ಯರಗಟ್ಟಿ: ಡೆಂಘೀ ಜ್ವರ ಸೊಳ್ಳೆಗಳ ಮೂಲಕ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ. ಮುಂಗಾರು ಮಳೆ ಪ್ರಾರಂಭವಾಗಿದ್ದು, ಹಳ್ಳ ಕೊಳ್ಳಗಳಲ್ಲಿ ನೀರು ನಿಲ್ಲುತ್ತದೆ. ಹೆಚ್ಚಾಗಿ ಸೊಳ್ಳೆಗಳು ನಿಂತ ನೀರಿನಲ್ಲಿ ಉತ್ಪತ್ತಿಯಾಗುತ್ತವೆ. ಹೀಗಾಗಿ ಪ್ರತಿಯೊಬ್ಬರು ತಮ್ಮ ಮನೆಯ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಿ ಎಂದು ಆಯ್ ಆರ್ ಗಂಜಿ ಹೇಳಿದರು. ಅವರು ಇಂದು ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ಡೆಂಗ್ಯೂ ಜಾಗೃತಿ ಜಾಥಾ ಮತ್ತು ಮಾನವ ಸರಪಳಿ ಉದ್ಘಾಟನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮೇ 16 ರಂದು ಆರೋಗ್ಯ ಇಲಾಖೆಯಿಂದ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತದೆ. ಡೆಂಗ್ಯೂ ನಿಯಂತ್ರಣದ ಜಾಗೃತಿ ಜಾಥಾ ಕಾರ್ಯಕ್ರಮ ಮಾಡುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವಂತಹ ಕೆಲಸ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಸಾರ್ವಜನಿಕರು ಡೆಂಗ್ಯೂ ಜ್ವರದ ಲಕ್ಷಣಗಳು ಕಂಡು ಬಂದರೆ ತಕ್ಷಣ ಹತ್ತಿರದ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದುಕೊಳ್ಳಬೇಕು. ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಿ ರೋಗ ಹರಡದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಆರೋಗ್ಯಧಿಕಾರಿ ಡಾ ಬಿ. ಎಸ್. ಬಳ್ಳೂರ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ. ರಮಾಶ್ರೀ ಕಣಗಲಿ, ಎನ್. ಎಂ. ಹಾರಗೊಪ್ಪ, ಸುನೀಲ ಕಾಶನ್ನವರ, ಮಹಾಂತೇಶ ಕತ್ತಿ, ರಾಮಚಂದ್ರ ಚನ್ನಯ್ಯನವರ, ಬಸವಬರಾಜ ಮಳಗಲಿ, ಸಮೀರ ಗೊರೇಖಾನ, ಪ್ರಕಾಶ ಮಾಂಗ ಉಪಸ್ಥಿತರಿದ್ದರು.

ಸರಕಾರದ ಯೋಜನೆ ತರಲು ಪ್ರಯತ್ನ

ಯರಗಟ್ಟಿ: ಸವದತ್ತಿ ತಾಲೂಕಿನ ಬೈಲಹೊಂಗಲ ಮತಕ್ಷೇತ್ರದ ಶಾಲೆಗಳ ಹೋಬಳಿ ಮಟ್ಟದ ''ನಮ್ಮ ಶಾಲೆ ನಮ್ಮ ಜವಾಬ್ದಾರಿ'' ಕಾರ್ಯಕ್ರಮವನ್ನು ಸವದತ್ತಿ ತಾಲೂಕಿನ ಕೆಪಿಎಸ್ ಯಕ್ಕುಂಡಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಬೈಲಹೊಂಗಲ ಮತಕ್ಷೇತ್ರದ ಶಾಸಕರಾದ ಮಹಾಂತೇಶ ಕೌಜಲಗಿ ಉದ್ಘಾಟಿಸಿ ಮಾತನಾಡಿ ಅವರು ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಸರಕಾರ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿದ್ದು. ನನ್ನ ಮತಕ್ಷೇತ್ರ ದ ಸರಕಾರಿ ಶಾಲೆಯ ವಿದ್ಯಾರ್ಥಿನಿ ಈ ವರ್ಷ ಎಸ್ ಎಸ್ ಎಲ್.ಸಿ.ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆಯುವ ಮೂಲಕ ಬೆಳಗಾವಿ ಜಿಲ್ಲೆಯ ಹೆಸರು ತಂದಿದ್ದು, ಸರಕಾರದ ವಿವಿಧ ಯೋಜನೆಗಳನ್ನು ಕೂಡ ದೊರಕಿಸುವಲ್ಲಿ ನಾನು ಕೂಡ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.

ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮೋಹನ ದಂಡಿನ ಅವರು ''ನಮ್ಮ ಶಾಲೆ ನಮ್ಮ ಜವಾಬ್ದಾರಿ'' ಕಾರ್ಯಕ್ರಮದ ಬಗ್ಗೆ ಮಾಹಿತಿಗಳನ್ನು ಹಂಚಿಕೊಂಡರು. ನಂತರ ಪಾಲಕರ ಜೊತೆಗೆ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಶ್ರೀಶಿವಾನಂದ ಕಂಬಾರ ಹಾಗೂ ಶ್ರೀಶಿವಾನಂದ ಸುರಕೋಡ ಅವರು ಸಮೀಕ್ಷಾ ಫಾಮ್ ್ಗಳಿಗೆ ಅವರನ್ನು ಸಂದರ್ಶನ ಮಾಡುವ ಮೂಲಕ ಪಾಲಕರಿಂದ ಮಾಹಿತಿಯನ್ನು ಪಡೆದುಕೊಂಡು ಭರ್ತಿಯನ್ನು ಮಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮೋಹನ ಎನ್ ದಂಡಿನ, ಕ್ಷೇತ್ರ ಸಮನ್ವಯಾಧಿಕಾರಿಗಳಾದ ಬಿ ಎನ್ ಬ್ಯಾಳಿ. ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕರಾದ ಮೈತ್ರಾದೇವಿ ವಸ್ತ್ರದ ಪದವಿ ಪೂರ್ವ ಕಾಲೇಜು ಯಕ್ಕುಂಡಿ ಪ್ರಾಚಾರ್ಯರಾದ ಎ ಎಮ್ ಮಿರಜಕರ. ಕೆ ಪಿ ಎಸ್ ಯಕ್ಕುಂಡಿ ಪ್ರಾಥಮಿಕ ವಿಭಾಗದ ಮುಖ್ಯ ಗುರುಮಾತೆಯರಾದ ವಿಜಯಲಕ್ಷ್ಮಿ ಎಸ್ ಗದ್ದಿಗೌಡರ. ಸಿ.ಆರ್.ಪಿ.ಗಳಾದ ಎಸ್ ಎಸ್ ಮಲ್ಲನ್ನವರ, ಎಮ್ ಜಿ ಬಾಳೆಕುಂದರಗಿ, ಎಮ್ ಎಮ್ ಬೊಳೆತ್ತಿನ, ಆರ್ ಎಸ್ ಮುರಗೋಡ,ಎನ್ ಬಿ ಪೆಂಟೆದ , ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರಾದ ಡಿ ಎಲ್ ಭಜಂತ್ರಿ ಅಜೀಂ ಪ್ರೇಮ್ ಜಿ ಫೌಂಡೇಶನ್ ವತಿಯಿಂದ ಸರ್ವೆ ನಮೂನೆಗಳನ್ನು ತುಂಬುವ ಸಂಪನ್ಮೂಲ ವ್ಯಕ್ತಿಗಳಾದ ಶಿವಾನಂದ ಕಂಬಾರ ಉಪಸ್ಥಿತರಿದ್ದರು.

ನಮ್ಮ ಶಾಲೆ ನಮ್ಮ ಜವಾಬ್ದಾರಿ ಕಾರ್ಯಕ್ರಮದಲ್ಲಿ ಶಾಸಕರಾದ ಮಹಾಂತೇಶ ಕೌಜಲಗಿ ಅವರು ಮಾತನಾಡಿದರು.

ರಂಗ ಸೃಷ್ಟಿಯಿಂದ ಕೃತಜ್ಞತಾ ಸಮರ್ಪಣೆ

ಬೆಳಗಾವಿ: ಹೇಮರಡ್ಡಿ ಮಲ್ಲಮ್ಮ ನಾಟಕವನ್ನು ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸಿದ ಹಿನ್ನೆಲೆಯಲ್ಲಿ ರಂಗಸೃಷ್ಟಿ ತಂಡದ ಕಲಾವಿದರಿಗೆ ಕೃತಜ್ಞತೆ ಸಮರ್ಪಣೆ ಕಾರ್ಯಕ್ರಮ ಈಚೆಗೆ ನಡೆಯಿತು. ಬೆಳಗಾವಿಯ ಸ್ಕೌಟ್ಸ್ ಸಭಾಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಲ್ಲ ಕಲಾವಿದರಿಗೆ ಗೌರವ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ರಂಗಸೃಷ್ಟಿ ಅಧ್ಯಕ್ಷ ರಮೇಶ ಜಂಗಲ್ ಅವರು ಮಾತನಾಡಿ, ನಿರೀಕ್ಷೆಗೂ ಮೀರಿ ನಾಟಕ ಯಶಸ್ವಿಯಾಗಿದೆ. ಸಭಾಭವನ ಕಿಕ್ಕಿರಿದು ತುಂಬಿದ್ದರಿಂದ ನೂರಾರು ಜನರು ವಾಪಸ್ ಹೋಗಬೇಕಾಯಿತು. ಇದರ ಶ್ರೇಯಸ್ಸು ಎಲ್ಲ ಕಲಾವಿದರಿಗೆ ಸಲ್ಲುತ್ತದೆ. ಹಾಗಾಗಿ ಎಲ್ಲ ಕಲಾವಿದರಿಗೆ ಧನ್ಯವಾದ ಮತ್ತು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು. ನಾಟಕ ರಚನೆಕಾರ ಡಾ.ರಾಮಕೃಷ್ಣ ಮರಾಠೆ, ಹೊಸಬರೂ ಸೇರಿದಂತೆ ಎಲ್ಲ ಕಲಾವಿದರೂ ಅತ್ಯಂತ ಮನೋಜ್ಞವಾಗಿ ಅಭಿನಯಿಸುವ ಮೂಲಕ ನಾಟಕವನ್ನು ಯಶಸ್ವಿಗೊಳಿಸಿದ್ದಾರೆ ಎಂದರು. ಇದೇ ವೇಳೆ, ನಾಟಕ ನಿರ್ದೇಶಕ ಶಿರೀಶ್ ಜೋಶಿ ದಂಪತಿಯ ವಿವಾಹ ವಾರ್ಷಿಕೋತ್ಸವ ಆಚರಿಸಿ, ಚಾರ್ ಧಾಮ ಪ್ರವಾಸಕ್ಕೆ ಹೊರಟಿರುವ ಸಂದರ್ಭದಲ್ಲಿ ಶುಭ ಕೋರಲಾಯಿತು. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ವೇಮನ ಅಧ್ಯಯನ ಪೀಠದ ಸಂಯೋಜಕ ಎಚ್.ಬಿ.ನೀಲಗುಂದ ದಂಪತಿ ಉಪಸ್ಥಿತರಿದ್ದರು. ರಂಗಸೃಷ್ಟಿಯ ಎಲ್ಲ ಪದಾಧಿಕಾರಿಗಳು ಹಾಗೂ ಕಲಾವಿದರು ಕುಟುಂಬ ಸಮೇತ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

ಗುಳೇದಗುಡ್ಡ: ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ ವತಿಯಿಂದ ನಡೆದ ಬಿ.ಎ ಪದವಿಯ ಮೂರನೇ ಸೆಮಿಸ್ಟರನ ಗಣೀತಾತ್ಮಕಅರ್ಥಶಾಸ್ತ್ರ ವಿಷಯದಲ್ಲಿ ಪಟ್ಟಣದ ಭಂಡಾರಿ ಹಾಗೂ ರಾಠಿ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿನಿ ಅಂಜು ಮುಂಡಾಸದ ಹಾಗೂ ಸುವರ್ಣ ಭಾವಿ ಇಬ್ಬರೂ ಅವರು 100ಕ್ಕೆ 100 ಅಂಕ ಪಡೆದ್ದಾರೆ. ಅಂಜು ಮುಂಡಾಸದ ಬಿ.ಎ. ಮೂರನೇ ಸೆಮಸ್ಟರ್‌ನಲ್ಲಿ ಶೇ.97 ಅಂಕದೊಂದಿಗೆ ತೇರ್ಗಡೆದರೆ, ಸುವರ್ಣ ಭಾವಿ ಶೇ.92 ಅಂಕದೊಂದಿಗೆ ಮೂರನೇ ಸೆಮಿಸ್ಟರ್ ತೇರ್ಗಡೆಯಾಗಿದ್ದು, ಶನಿವಾರ ಕಾಲೇಜಿನಲ್ಲಿ ನಡೆದ ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಇಬ್ಬರೂ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಟ್ರಸ್ಟ್‌ನ ಗೌರವಕಾರ್ಯದರ್ಶಿ ರವೀಂದ್ರ ಪಟ್ಟಣಶೆಟ್ಟಿ, ವಿಠ್ಠಲ ಕಾವಡೆ, ಸಿದ್ದಲಿಂಗಪ್ಪ ಬರಗುಂಡಿ, ಸಿದ್ರಾಮಯ್ಯ ಪುರಾಣಿಕಮಠ, ಪ್ರಾಚಾರ್ಯ ಎನ್.ವೈ. ಬಡನ್ನವರ, ಪ್ರೊ.ಎಂ.ಎಸ್. ಪಾಟೀಲ, ಪ್ರೊ.ಪಿ.ಬಿ. ಕಣವಿ ಇದ್ದರು.

ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಸಿಂದಗಿ: ಶ್ರೀಧರಸ್ವಾಮಿ ವಿದ್ಯಾವರ್ಧಕ ಸಂಘ ವಿಜಯಪುರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಪಟ್ಟಣದ ಆರ್.ಡಿ.ಪಾಟೀಲ ಪಿಯು ಕಾಲೇಜು ಎದುರುಗಡೆ ಇರುವ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಕ್ಕೆ 2025–26ನೇ ಸಾಲಿಗೆ ಮೆಟ್ರಿಕ್ ನಂತರದ ಯಾವುದೇ ತರಗತಿಯಲ್ಲಿ ಓದುತ್ತಿರುವ ಗ್ರಾಮೀಣ ಬಾಲಕಿಯರಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿನಿಯರು ಹಿಂದಿನ ವರ್ಷ ಉತ್ತೀರ್ಣರಾದ ಅಂಕಪಟ್ಟಿ ವರ್ಗಾವಣೆ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಾಸ ಮಾಡುವ ಅಂತರದ ಪ್ರಮಾಣ ಪತ್ರ ಆಧಾರ ಕಾರ್ಡ್, ಬಿಪಿಎಲ್ ಕಾರ್ಡ್ ಫೋಟೋ ಪ್ರತಿಯೊಂದಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂ.15ಕೊನೆಯ ದಿನ. ಮಾಹಿತಿಗಾಗಿ ಮೊ: 97415 67545, 94487 52781 ಸಂಪರ್ಕಿಸಬಹುದು ಎಂದು ಸಂಸ್ಥೆಯ ಅಧ್ಯಕ್ಷ ಕೆ.ಎನ್. ಮೇಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗಲಿದ ಜೀವ

ಲತಾ ದತ್ತಾತ್ರೇಯ ಮಠ

ಬಾಗಲಕೋಟೆ: ಇಲ್ಲಿನ ಗಣೇಶ ಗಿರಿ(ಕೆಚ್‌ಬಿ ಕಾಲೋನಿ) ಬಡಾವಣೆ ನಿವಾಸಿ ಲತಾ ದತ್ತಾತ್ರೇಯ ಮಠ (75) ಹೃದಯಾಘಾತದಿಂದ ಸೋಮವಾರ ನಿಧನರಾದರು. ಅವರಿಗೆ ಒಬ್ಬ ಪುತ್ರ ಹಾಗೂ ಅಪಾರ ಬಂಧು ಬಳಗ ಇದ್ದಾರೆ.

ಬಸವಣ್ಣೆಪ್ಪ ಜವಳಗಿ

ಗುಳೇದಗುಡ್ಡ: ಪಟ್ಟಣದ ನಗರಖಾನ ಪೇಟೆಯ ಭಾವಿಕಟ್ಟಿ ನಾಟ್ಯ ಸಂಘದ ಹಿರಿಯರಾದ ಬಸವಣ್ಣೆಪ್ಪ ಶಿವಪ್ಪ ಜವಳಗಿ(86) ನಿಧನ ಹೊಂದಿದರು. ಮೃತರಿಗೆ ಪತ್ನಿ, ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಇದ್ದಾರೆ.

ಈಶ್ವರ ಕಥೆಹೊನ್ನ



ಮುಧೋಳ: ನಗರದ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಈಶ್ವರ ಹೊಳಬಸಪ್ಪ ಕಥೆಹೊನ್ನ (86) ರವಿವಾರ ನಿಧನರಾಇದ್ದಾರೆ. ಮೃತರು ಪತ್ರಕರ್ತ ಮಹಾಂತೇಶ್ ಸೇರಿದಂತೆ ಪುತ್ರ, ಪುತ್ರಿಯರು ಅಪಾರ ಬಂಧು – ಬಳಗವನ್ನು ಅಗಲಿದ್ದಾರೆ. ಈಶ್ವರ ಇವರ ನಿಧನಕ್ಕೆ ಸಚಿವ ಆರ್. ಬಿ. ತಿಮ್ಮಾಪುರ, ಸಂಸದ ಜಿ. ಎಂ. ಕಾರಜೋಳ. ಮಾಜಿ ಸಚಿವ ಎಂ. ಆರ್. ನಿರಾಣಿ, ವೀರಶೈವ ಲಿಂಗಾಯತ ಸಮಾಜದ ಪ್ರಮುಖರು. ಕಾ. ನೀ. ಪ. ಹಾಗೂ ಇತರೆ ಸಂಘ ಸಂಸ್ಥೆಯವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ ಎಚ್.ವಿಶ್ವನಾಥ್ } ಎಂಎಲ್‌ಸಿ

ರಾಜ್ಯದ ನೀರಾವರಿ ಯೋಜನೆಗಳು ಕುಂಟುತ್ತಾ ಸಾಗಿವೆ. ಕಿಕ್ ಬ್ಯಾಕ್ ಪಡೆಯಲು ನೀರಾವರಿ ಇಲಾಖೆ ಇಟ್ಟುಕೊಂಡಿದ್ದಾರೆ. ಜನರ ತೆರಿಗೆ ಹಣವನ್ನು ಪೋಲು ಮಾಡುತ್ತಿದ್ದಾರೆ. ಯಾವುದೇ ಮಾನದಂಡವಿಲ್ಲದೇ ಎಲ್ಲರಿಗೂ 2 ಸಾವಿರ ಕೊಡ್ತಿದಾರೆ. ಇದನ್ನು ಹುಚ್ಚರ ಸರಕಾರ ಅನ್ನದೇ ಇನ್ನೇನು ಹೇಳಬೇಕು?



ಸಾಧನಾ ಸಮಾವೇಶಕ್ಕೆ ವಿರೋಧ | ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಆಕ್ರೋಶ

ವಸೂಲಿ ಸರಕಾರ: ಬಿಜೆಪಿ

ಬಾಗಲಕೋಟೆ: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಲ್ಲಿ ರಾಜ್ಯವನ್ನು ಹಿಂದೆಂದೂ ಕಾಣದ ದುಸ್ಥಿತಿಗೆ ದೂಡಿದೆ. ಇದು ಆಡಳಿತ ನಡೆಸುವ ಸರಕಾರವಲ್ಲ. ಕೇವಲ ವಸೂಲಿ ಸರಕಾರ ಎಂದು ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿನ ನವನಗರದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭ್ರಷ್ಟಾಚಾರ, ವಿವಿಧ ಹಗರಣಗಳಲ್ಲಿ ಮುಳುಗಿ ಹೋಗಿರುವ ರಾಜ್ಯ ಸರಕಾರ ದೇಶದಲ್ಲಿ ಯುದ್ಧದ ಪರಿಸ್ಥಿತಿ ಇರುವಾಗ ಸಾಧನಾ ಸಮಾವೇಶ ಮಾಡುತ್ತಿದೆ ಎಂದು ಸರಕಾರದ ವಿರುದ್ಧ ಹರಿಹಾಯ್ದರು. ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ದಿನನಿತ್ಯದ ವಸ್ತುಗಳ ಬೆಲೆ ಏರಿಕೆ, ಹಿಂದು ಕಾರ್ಯಕರ್ತರ ಹತ್ಯೆ ಸೇರಿದಂತೆ ಜನರಿಗೆ ಬೇಸರವಾಗುವ ರೀತಿಯಲ್ಲಿ ಆಡಳಿತ ನಡೆಸುತ್ತಿದ್ದು, ಕಾಂಗ್ರೆಸ್ ಕನ್ನಡಿಗರ ಬದುಕಿಗೆ ಶಾಪವಾಗಿದೆ ಎಂದರು. ಸಿಎಂ ಸಿದ್ದರಾಮಯ್ಯ ಕುಟುಂಬ ಬುಡಾ ಹಗರಣದಲ್ಲಿ ಸಿಲುಕಿದರೇ, ವಾಲ್ಮೀಕಿ ನಿಗಮದ ಹಗರಣದಲ್ಲಿ ಸಚಿವರೇ ಜೈಲಿಗೆ ಹೋದರು. ಎಸ್ಸಿಎಸ್ಟಿಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಅನುದಾನವನ್ನು ಗ್ಯಾರಂಟಿಗಳಿಗೆ ಬಳಕೆ, ಹೀಗೆ ರಾಜ್ಯ ಸರಕಾರ ಯಾವುದೇ ವರ್ಗದ ಜನರ ಅಭಿವೃದ್ಧಿ ಮಾಡದೇ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದೆ ಎಂದರು.

ಸಚಿವ ಸಂತೋಷ ಲಾಡ್ ಅವರು ಯಾರ ಮಾತು ಕೇಳಿ ಯುದ್ಧ ನಿಲ್ಲಿಸಬೇಕು ಎಂದು ಹೇಳುತ್ತಿದ್ದಾರೆ. ಇವರನ್ನು ಕೇಳಿ ಯುದ್ಧ ಮಾಡುವುದು ಹಾಗೂ ನಿಲ್ಲಿಸಬೇಕಾ? ಈ ಬಗ್ಗೆ ಕೇಂದ್ರದ ನಾಯಕರು ನಿರ್ಧರಿಸುತ್ತಾರೆ. ಯುದ್ಧದ ಬಗ್ಗೆ ಸಂಬಂಧಪಟ್ಟವರು ಮಾತನಾಡಿದರೆ ಸೂಕ್ತ ಎಂದರು.

ಬಿಜೆಪಿ ವಕ್ತಾರ ಸತ್ಯನಾರಾಯಣ ಹೇಮಾದ್ರಿ, ಹಾಗೂ ಜಿಲ್ಲಾ ಮಾಧ್ಯಮ ಸಂಚಾಲಕ ಶಿವಾನಂದ ಸುರಪುರ ಸೇರಿ ಇತರರಿದ್ದರು.

ಬಾಗಲಕೋಟೆಯ ಬಿಜೆಪಿ ಕಚೇರಿಯಲ್ಲಿ ಮುಖಂಡರು ಕಾಂಗ್ರೆಸ್ ಸರಕಾರ ವಿರುದ್ಧದ ಪೋಸ್ಟರ್ ಬಿಡುಗಡೆಗೊಳಿಸಿದರು.

> ಬಾಗಲಕೋಟೆ ರೈಲ್ವೆ ನಿಲ್ದಾಣ ಮೇ 22 ರಂದು ಉದ್ಘಾಟನೆಗೊಳ್ಳುತ್ತಿದೆ. ಈ ಕಾರ್ಯಕ್ರಮಕ್ಕೆ ರೈಲ್ವೆ ಇಲಾಖೆ ರಾಜ್ಯ ಸಚಿವ ಸೋಮಶೇಖರ ಆಗಮಿಸುತ್ತಿದ್ದಾರೆ. ಜಿಲ್ಲೆಯ ವಿವಿಧೆಡೆ ನಿರ್ಮಿಸಬೇಕಿರುವ ರೈಲ್ವೆ ಓವರ್ ಬ್ರಿಡ್ಜ್‌ಗೆ ರಾಜ್ಯ ಸರಕಾರ ಭೂಮಿ ನೀಡಬೇಕಿದೆ.
>
> ಪಿ.ಸಿ.ಗದ್ದಿಗೌಡರ, ಸಂಸದ

ಸಿಎಂ ಸಿದ್ದರಾಮಯ್ಯ ಅಲ್ಲ, ಅವರು ಪತ್ರ ರಾಮಯ್ಯ

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಅಧಿಕಾರಿಗಳು ಜನರಿಗೆ ಧಮ್ಕಿ ನೀಡಿದರೆ ಪೊಲೀಸರು ಸಾರ್ವಜನಿಕರ ಮೇಲೆ ದರ್ಪ ತೋರುತ್ತಿದ್ದಾರೆ. ಸಿದ್ದರಾಮಯ್ಯ ಬಾದಾಮಿ ಶಾಸಕರಾಗಿದ್ದಾಗ ಕ್ಷೇತ್ರದ ಅಭಿವೃದ್ಧಿಗೆ ಅಂದಿನ ಸಿಎಂ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆಯುತ್ತಿದ್ದರು. ಇಂದು ಅವರೇ ಸಿಎಂ ಇದ್ದು, ಜಿಲ್ಲೆಯ ಅಭಿವೃದ್ಧಿಗೆ ಕೊಡುಗೆ ಶೂನ್ಯ. ತಾವು ಸಿಎಂ ಆದ ಮೇಲೆ ಕೇಂದ್ರ ಪತ್ರ ಬರೆಯುವುದನ್ನು ಪ್ರಾರಂಭಿಸಿದ್ದಾರೆ. ಸಿಎಂ ಸಿದ್ದರಾಮಯ್ಯ ಅಲ್ಲ, ಪತ್ರರಾಮಯ್ಯ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಲೇವಡಿ ಮಾಡಿದರು.

ಮೇ 23ಕ್ಕೆ ಕೊಲ್ಹಾರಕ್ಕೆ ಡಿಸಿಎಂ ಸಚಿವರಿಂದ ಸ್ಥಳ ಪರಿಶೀಲನೆ

ಕೊಲ್ಹಾರ: ಪಟ್ಟಣದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮ ಹಾಗೂ ವಿವಿಧ ಸರಕಾರಿ ಕಾಮಗಾರಿಗಳ ಲೋಕಾರ್ಪಣಾ ಕಾರ್ಯಕ್ರಮದ ಪ್ರಯುಕ್ತ ಮೇ 23 ರಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಕೊಲ್ಹಾರ ಪಟ್ಟಣಕ್ಕೆ ಆಗಮಿಸುವ ಹಿನ್ನಲೆಯಲ್ಲಿ ಸಚಿವ ಶಿವಾನಂದ ಪಾಟೀಲ್ ರವಿವಾರ ಕಾರ್ಯಕ್ರಮ ನಡೆಯಲಿರುವ ಸ್ಥಳವನ್ನು ಪರಿಶೀಲನೆ ನಡೆಸಿದರು.

ಉಪ ಮುಖ್ಯಮಂತ್ರಿಗಳ ಆಗಮನ, ವಾಸ್ತವ್ಯ, ಖಾಸಗಿ ಹಾಗೂ ಸರಕಾರಿ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಜೊತೆಗೆ ಶಿಷ್ಟಾಚಾರ ಅನುಸರಿಸುವ ಕುರಿತು ಪರಿಶೀಲನೆ ನಡೆಸಿರು.

ಸ್ಥಳದಲ್ಲಿದ್ದ ತಹಶೀಲ್ದಾರ್ ಎಸ್.ಎಸ್ ನಾಯಕಲಮಠ, ಪ.ಪಂ ಮುಖ್ಯಾಧಿಕಾರಿ ವಿರೇಶ್ ಹಟ್ಟಿ, ಪುನರ್ವಸತಿ ಪುನರ್ ನಿರ್ಮಾಣ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಸ್.ಐ ಶೀಲವಂತ ಅವರಿಂದ ಕಾರ್ಯಕ್ರಮದ ಕುರಿತು ಹಾಗೂ ಕಾಮಗಾರಿಗಳ ಲೋಕಾರ್ಪಣೆ ಬಗೆಗೆ ಮಾಹಿತಿ ಪಡೆದುಕೊಂಡರು.

ಗರಂ ಆದ ಸಚಿವರು: ಪುನರ್ವಸತಿ ಪುನರ್ ನಿರ್ಮಾಣ ಕಾರ್ಯನಿರ್ವಾಹಕ ಅಭಿಯಂತರ ಎಸ್.ಎಸ್ ಹಿರೇಗೌಡರ ಸ್ಥಳದಲ್ಲಿರದನ್ನು ಗಮನಿಸಿ ಸಚಿವ ಶಿವಾನಂದ ಪಾಟೀಲ್ ಗರಂ ಆದ ಘಟನೆ ಜರುಗಿತು. ಸ್ಥಳದಲ್ಲಿದ್ದ ತಹಸೀಲ್ದಾರ್ ಎಸ್.ಎಸ್ ನಾಯಕಲಮಠ ಅವರಿಗೆ ಉಪಮುಖ್ಯಮಂತ್ರಿಗಳು ಆಗಮಿಸುವ ಕಾರ್ಯಕ್ರಮದ ಬಗ್ಗೆ ಬೇಜವಾಬ್ದಾರಿ ತೋರಿ ಕರ್ತವ್ಯ ನಿರ್ಲಕ್ಷ್ಯ ವೆಸಗಿರುವ ಹಿರೇಗೌಡರ ವಿರುದ್ಧ ಕಾರಣ ಕೇಳಿ ನೋಟಿಸ್ ನೀಡುವಂತೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು, ಧಾರ್ಮಿಕ ಕಾರ್ಯಕ್ರಮದ ಆಯೋಜಕರು ಇದ್ದರು.

ಡಿಸಿಎಂ ಆಗಮನದ ಹಿನ್ನೆಲೆಯಲ್ಲಿ ಸಚಿವರಿಂದ ಸ್ಥಳ ಪರಿಶೀಲನೆ ನಡೆಸಲಾಯಿತು.

ಜಿಲ್ಲೆಯಲ್ಲಿ ಬೆಂಬಲ ಬೆಲೆಗೆ ಭರ್ಜರಿ ತೊಗರಿ ಖರೀದಿ

ವಿಜಯಪುರ: ಕೇಂದ್ರ ಸರಕಾರದ ಕನಿಷ್ಠ ಬೆಂಬಲ ಬೆಲೆ ಯೋಜ ನೆಯಡಿ ಜಿಲ್ಲೆಯಲ್ಲಿ ನೊಂದಾಯಿಸಿಕೊಂಡ 45,843 ರೈತರ ಪೈಕಿ 39537 ರೈತರಿಂದ ಈವರೆಗೆ ರಾಜ್ಯದಲ್ಲಿಯೇ ಅತಿ ಹೆಚ್ಚು ಪ್ರಮಾ ಣದ 6.56 ಲಕ್ಷ ಕ್ವಿಂಟಾಲ್ ತೊಗರಿಯನ್ನು ಜಿಲ್ಲೆಯಲ್ಲಿ ಖರೀದಿ ಸಲಾಗಿದೆ ಎಂದು ಕನಿಷ್ಠ ಬೆಂಬಲ ಬೆಲೆ ಕಾರ್ಯಪಡೆ ಸಮಿತಿ ಅಧ್ಯಕ್ಷರಾದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿಯೇ ಅತಿ ಹೆಚ್ಚು ಪ್ರಮಾಣದ ತೊಗರಿಯನ್ನು ವಿಜಯ ಪುರ ಜಿಲ್ಲೆಯಲ್ಲಿ ಖರೀದಿಸಲಾಗಿದ್ದು, ಕಲಬುರಗಿ ದ್ವೀತಿಯ ಸ್ಥಾನದ ಲ್ಲಿದೆ. ಜಿಲ್ಲೆಯಲ್ಲಿ 10 ತೊಗರಿ ಖರೀದಿ ಕೇಂದ್ರಗಳನ್ನು ತೆರೆಯಲಾ ಗಿದ್ದು, 9.02 ಲಕ್ಷ ಕ್ವಿಂಟಾಲ್ ಪ್ರಮಾಣಕ್ಕೆ 45,843 ರೈತರು ನೊಂದ ಣಿ ಮಾಡಿಕೊಂಡಿದ್ದಾರೆ.

ಈವರೆಗೆ ಜಿಲ್ಲೆಯಲ್ಲಿ 39,537 ರೈತರಿಂದ 6.56ಲಕ್ಷ ಕ್ವಿಂಟಾಲ್ ತೊಗರಿ ಖರೀದಿಸಲಾಗಿದ್ದು, ಪ್ರತಿ ಕ್ವಿಂಟಾಲ್ ತೊಗರಿ ಬೆಂಬಲೆ ರು.7550 ರಂತೆ ನಾಫೆಡ್ ಸಂಸ್ಥೆಯಿಂದ 22,030 ರೈತರಿಗೆ 270 ಕೋಟಿ ರು.ಗಳನ್ನು ಹಾಗೂ 450 ರು.ರಂತೆ ರಾಜ್ಯ ಪ್ರೊತ್ಸಾಹ ಧನವನ್ನು ರು.10.44 ಕೋಟಿಗಳನ್ನು 14,613 ರೈತರಿಗೆ ಡಿಬಿಟಿ ಮೂಲಕ ಜಮೆ ಮಾಡಲಾಗಿದ್ದು, ಬಾಕಿ ಉಳಿದ ರೈತರಿಗೆ ಹಂತ ಹಂತವಾಗಿ ಜಮೆ ಮಾಡಲಾಗುತ್ತಿದೆ. ತೊಗರಿ ಖರೀದಿ ಪ್ರಕ್ರಿಯೆಯು ಮೇ 31ರವರೆಗೆ ಚಾಲ್ತಿಯಲ್ಲಿರುವುದರಿಂದ ಜಿಲ್ಲೆಯಲ್ಲಿ ತೊಗರಿ ಬೆಳೆದಿರುವ ರೈತರು ತಮ್ಮ ಸಮೀಪದ ಪಿಎಸಿಎಸ್, ಟಿಎಪಿಸಿಎಂಎಸ್, ಎಫ್‌ಪಿಒ ಸಂಘಗಳಲ್ಲಿ ತೊಗರಿ ಮಾರಾಟ ಮಾಡಿ ಬೆಂಬಲ ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಅವರು ಪ್ರಕಟಣೆಯಲ್ಲಿ ಮನವಿ ಮಾಡಿಕೊಂಡಿದ್ದಾರೆ.

ನೂರಾರು ಮೀಟರ್ ಉದ್ದದ ತ್ರಿವರ್ಣ ಧ್ವಜ | ಸಾವಿರಾರು ದೇಶ ಭಕ್ತರು ಭಾಗಿ

ಆಪರೇಷನ್ ಸಿಂದೂರ ಯಶಸ್ವಿ : ತಿರಂಗಾ ಯಾತ್ರೆ

ಬಾಗಲಕೋಟೆ: ಆಪರೇಷನ್ ಸಿಂದೂರ ಯಶಸ್ವಿಯಾದ ಹಿನ್ನಲೆಯಲ್ಲಿ ಬಿಜೆಪಿಯಿಂದ ಹಮ್ಮಿಕೊಂಡಿದ್ದ ತಿರಂಗಾ ಯಾತ್ರೆಯಲ್ಲಿ ಸಾವಿರಾರೂ ಸಂಖ್ಯೆಯಲ್ಲಿ ಜನರು ಪಾಲ್ಗೊಂಡು ಭಾರಿ ಸ್ಪಂದನೆ ನೀಡಿದರು.

ಇಲ್ಲಿನ ಬಿವಿವಿ ಸಂಘದ ಆವರಣದಲ್ಲಿರುವ ಬೀಳೂರು ಗುರುಬಸವ ದೇವಸ್ಥಾನದಿಂದ ಆರಂಭವಾದ ತಿರಂಗಾ ಯಾತ್ರೆ ಪಶು ಆಸ್ಪತ್ರೆ, ಟೆಂಗಿನಮಠ, ಪೊಲೀಸ್ ಚೌಕ್, ವಲ್ಲಭಾಯಿ ಚೌಕ್, ಎಂ.ಜಿ.ರಸ್ತೆ ಮೂಲಕ ಬಸವೇಶ್ವರ ವೃತ್ತ ತಲುಪಿ ಸಮಾಪಸ್ತಿಗೊಂಡಿತು. 300 ಅಡಿ ಹಾಗೂ 100 ಅಡಿ ಉದ್ದದ ತ್ರಿವರ್ಣ ಧ್ವಜ ಹಿಡಿದು ಸಾಗಿದ್ದು ಆಕರ್ಷಕವಾಗಿತ್ತು, ದೇಶ ಭಕ್ತಿ ಇಮ್ಮಡಿಗೊಳಿಸುವಂತೆ ಮಾಡಿತು.

ಚರಂತಿಮಠದ ಪ್ರಭು ಸ್ವಾಮೀಜಿ ಮಾತನಾಡಿ, ಭಯೋತ್ಪಾದನೆ ನಿರ್ಮೂಲನೆಗೆ ಭಾರತ ಪಣ ತೊಟ್ಟಿದೆ. ಇದಕ್ಕೆ ಪೂರ್ವಭಾವಿಯಾಗಿ ಆಪರೇಷನ್ ಸಿಂದೂರ ಮಾಡಿದ್ದಾರೆ ನಮ್ಮ ಸೈನಿಕರು. ಕೇವಲ ಉಗ್ರರರ ನೆಲೆಯನ್ನು ಗುರಿಯಾಗಿಸಿ ನಡೆಸಿದ ದಾಳಿಯು ತಲ್ಲಣಗೊಳಿಸಿದೆ ಎಂದರು.

ಗುಳೇದಗುಡ್ಡ ಒಪ್ಪತ್ತೇಶ್ವರ ಮಠದ ಒಪ್ಪತ್ತೇಶ್ವರ ಸ್ವಾಮೀಜಿ ಮಾತನಾಡಿ, ಭಾರತವು ಅಘಾದವಾದ ಶಕ್ತಿ ಹೊಂದಿದೆ. ನಮ್ಮ ಸೈನಿಕರ ಬಲದ ಮುಂದೆ ಯಾವ ರಾಷ್ಟ್ರಗಳು ನಿಲ್ಲುವ ಸಾಮರ್ಥ್ಯ ಹೊಂದಿಲ್ಲ. ಗುಡಿಯೊಳಗಿನ ದೇವಗ್ಗಿಂತ ಗಡಿಯಲ್ಲಿನ ದೇವರು(ಸೈನಿಕರು) ದೊಡ್ಡವರು. ಪ್ರತಿಯೊಬ್ಬರು ಸೈನಿಕರ ಬಗ್ಗೆ ಗೌರವ ಹೊಂದಬೇಕು ಎಂದರು.

ನಗರದ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆಯಲ್ಲಿ ಮಾಜಿ ಸೈನಿಕರು, ನಿವೃತ್ತ ಯೋಧರು, ವಕೀಲರು, ರೋಟರಿ ಕ್ಲಬ್ ಸದಸ್ಯರು, ಅಕ್ಕನ ಬಳಗ ಸದಸ್ಯರು, ಸಾವಿರಾರು ವಿದ್ಯಾರ್ಥಿಗಳು ಹೆಜ್ಜೆ ಹಾಕಿದರು.

ಬೋಲೋ ಭಾರತ ಮಾತಾಕೀ ಜೈ, ಜೈ ಜವಾನ ಜೈ ಕಿಸಾನ್ ಘೋಷಣೆಗಳು ಆಕಾಶದೆತ್ತರಕ್ಕೆ ಪ್ರತಿಧ್ವನಿಸಿದವು. ಮಾತೆ ಮಾಣಿಕ್ಕೇಶ್ವರಿ ಅಮ್ಮನವರು, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ನಂದು ಗಾಯಕವಾಡ ಸೇರಿದಂತೆ ಇತರರಿದ್ದರು.

ಬಾಗಲಕೋಟೆಯಲ್ಲಿ ಬಿಜೆಪಿಯಿಂದ ತಿರಂಗಾ ಯಾತ್ರೆ ಜರುಗಿತು.

> ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರಕಾರ ಭಯೋತ್ಪಾದನೆ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತಿದೆ. ಆಪರೇಷನ್ ಸಿಂದೂರ ಭಾರತದ ಯಶಸ್ವಿ ಕಾರ್ಯಾಚರಣೆ. ಉಗ್ರರನ್ನು ಟಾರ್ಗೆಟ್ ಮಾಡಿ ದಾಳಿ ನಡೆಸಿದ ನಮ್ಮ ಸೈನಿಕರು ತಮ್ಮ ಶೌರ್ಯದ ತಾಕತ್ತು ಪ್ರದರ್ಶಿಸಿದ್ದಾರೆ.
>
> ವೀರಣ್ಣ ಚರಂತಿಮಠ, ಮಾಜಿ ಶಾಸಕ

ಬಸ್ ನಿಲುಗಡೆಗೆ ಒತ್ತಾಯಿಸಿ ಮನವಿ

ತಾಳಿಕೋಟೆ: ತಾಲೂಕಿನ ಮಠಕಲ್ಲದೇವನಹಳ್ಳಿ (ಬಂಡೆಪ್ಪನಹಳ್ಳಿ) ಮತ್ತು ಬಂಡೆಪ್ಪನಹಳ್ಳಿ ಸಾಲವಾಡಗಿ ಗ್ರಾಮಗಳನ್ನು ಬಸ್ ನಿಲುಗಡೆಗೆ ಒಂದೇ ಗ್ರಾಮದ ಎರಡು ನಿಲುಗಡೆ ಸ್ಥಳಗಳನ್ನಾಗಿ ಪರಿಗಣಿಸಿ ಎಲ್ಲ ಪ್ರಕಾರದ ಬಸ್ ಗಳನ್ನು ಇವೆರಡೂ ಗ್ರಾಮಗಳಲ್ಲಿ ನಿಲುಗಡೆಯಾಗುವಂತೆ ಮಾಡಬೇಕು ಎಂದು ಒತ್ತಾಯಿಸಿ ಗ್ರಾಮಸ್ಥರು ಕಲಬುರಗಿಯ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಶನಿವಾರ ಮನವಿ ಸಲ್ಲಿಸಿದರು.

ಮಠಕಲ್ಲದೇವನಹಳ್ಳಿ(ಬಂಡೆಪ್ಪನಹಳ್ಳಿ)ಯು ಧಾರ್ಮಿಕ ಹಾಗೂ ಸಾಂಸ್ಕೃತಿಕ ತಾಣವಾಗಿದೆ. ಪ್ರತಿದಿನ ಬಂಡಿಸ್ವಾಮಿ, ನಿಂಗಯ್ಯಮುತ್ಯಾ ಹಾಗೂ ಕೊಳ್ಳದ ರೇಣುಕಾ ಯಲ್ಲಮ್ಮನ ದೇವಸ್ಥಾನಕ್ಕೆ ನೂರಾರು ಭಕ್ತರು ಭೇಟಿ ನೀಡುತ್ತಾರೆ. ತಾಳಿಕೋಟೆ ಮತ್ತು ಹುಣಸಗಿ ತಾಲ್ಲೂಕು ಕೇಂದ್ರಗಳ ಮಧ್ಯದಲ್ಲಿ 12 ಕಿಮೀ ಅಂತರದಲ್ಲಿರುವುದರಿಂದ ಕೃಷಿ, ಶಿಕ್ಷಣ, ವ್ಯಾಪಾರ, ಉದ್ಯೋಗ, ಆಸ್ಪತ್ರೆ, ಕೂಲಿ ಕೆಲಸಗಳಿಗೆಂದು ರೈತರು, ವಿದ್ಯಾರ್ಥಿಗಳು, ಮಹಿಳೆಯರು, ಮಕ್ಕಳು ಪ್ರತಿದಿನ ಬಹುಸಂಖ್ಯೆಯಲ್ಲಿ ಸಂಚರಿಸುತ್ತಾರೆ.

ಆದರೆ ದುರದೃಷ್ಟವಶಾತ್ ಗ್ರಾಮದಲ್ಲಿ ವೇಗದೂತ ಬಸ್ ನಿಲುಗಡೆಯಿಲ್ಲ. ಇದರಿಂದಾಗಿ ಗ್ರಾಮದ ಜನತೆ, ವೃದ್ಧರು, ಮಹಿಳೆಯರು, ರೋಗಿಗಳು ವಿದ್ಯಾರ್ಥಿಗಳು, ಯುವಕರು ಯಾತ್ರಾರ್ಥಿಗಳು ನಿತ್ಯ ಒಂದು ಕಿ.ಮೀನಷ್ಟು ನಡೆದುಕೊಂಡೇ ಹೋಗಬೇಕಾಗಿ ಬಂದಿದೆ. ಅವರೆಲ್ಲರಿಗೂ ಅನುಕೂಲವಾಗುವಂತೆ ಸಾರಿಗೆ ಘಟಕದ ಎಲ್ಲ ಬಸ್ಗಳು ಇಲ್ಲಿ ನಿಲುಗಡೆಯಾಗುವಂತೆ ಕ್ರಮವಹಿಸಬೇಕು.

ಒಂದು ಕಿ.ಮೀ. ಪರಸ್ಪರ ದೂರದಲ್ಲಿರುವ ಬ.ಸಾಲವಾಡಗಿ ಮತ್ತು ಮಠಕಲ್ಲದೇವನಹಳ್ಳಿಗಳನ್ನು ಒಂದೇ ಗ್ರಾಮದ ಎರಡು ನಿಲುಗಡೆಯೆಂದು ಪರಿಗಣಿಸಿ ಎಲ್ಲ ಪ್ರಕಾರದ ಸಾರಿಗೆ ವಾಹನಗಳು ನಿಲ್ಲುವಂತಾಗಬೇಕು. ಟಿಕೆಟ್ ದರದಲ್ಲಿ ಯಾವುದೇ ಬದಲಾವಣೆ ಮಾಡಬಾರದು. ಈ ಹಿಂದೆ ತಾಳಿಕೋಟೆ ಸಾರಿಗೆ ಘಟಕ ವ್ಯವಸ್ಥಾಪಕರಿಗೆ 9.11.2024 ರಂದು ಮನವಿ ನೀಡಲಾಗಿತ್ತು. ವರ್ಷದ ಹಿಂದೆ ಗುಲಬರ್ಗಾ ಡಿಪೋದವರಿಗೂ ಮನವಿ ಸಲ್ಲಿಸಲಾಗಿತ್ತು. ಆದರೆ ಇಂದಿನವರೆಗೆ ಯಾವುದೇ ಕ್ರಮ ಜರುಗಿಸಿಲ್ಲ. ಬಸ ದರ ಮತ್ತು ನಿಲುಗಡೆ ಸಂಬಂಧಿಸಿದ ಬೇಡಿಕೆ ಈಡೇರಿದರೆ ನಿತ್ಯ ನೂರಾರು ಜನತೆಗೆ ಅನುಕೂಲ ಮಾಡಿದಂತಾಗುತ್ತದೆ. ಕ್ರಮವಹಿಸದಿದ್ದಲ್ಲಿ ಮುಂದೆ ಉಂಟಾಗಬಹುದಾದ ಅನಾಹುತಗಳಿಗೆ ಸಂಬಂಧಿತ ಅಧಿಕಾರಗಳನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು ಎಂದು ಗ್ರಾಮಸ್ಥರು ನೀಡಿದ ಮನವಿಯಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಗ್ರಾಮದ ಶರಣು ಬಂಡೆಪ್ಪನಹಳ್ಳಿ, ಕಿರಣ್ ಬಡಿಗೇರ, ಲಕ್ಷ್ಮಣ ಎಚ್.ಬಿ. ಸಿದ್ದಣ್ಣಾ ಜಿ, ಸಂತೋಷ, ಜಗದೀಶ, ಲಕ್ಷ್ಮೀಬಾಯಿ, ಶಂಕ್ರಮ್ಮಾ, ದೇವಮ್ಮ, ಯಲ್ಲಮ್ಮ, ಕಾವ್ಯಾ ಇತರರು ಇದ್ದರು.

ಬಸ್ ನಿಲುಗಡೆಗೆ ಒತ್ತಾಯಿಸಿ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು.

ಬಡವರಿಗೆ, ದೀನ ದಲಿತರಿಗೆ ಕಾಂಗ್ರೆಸ್‌ನಿಂದ ರಕ್ಷಣೆ:ಸಚಿವ

ಇಂಡಿ: ಕಾಂಗ್ರೆಸ್ ಏನು ಮಾಡಿದೆ ಎಂದು ಬಿಜೆಪಿಯ ವರು ಪ್ರಶ್ನಿಸುತ್ತಾರೆ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು ಬಡವರನ್ನು ದೀನದುರ್ಬಲರ, ಅಲ್ಪಸಂಖ್ಯಾತರನ್ನು ಸಮಾನವಾಗಿ ಕಂಡಿದ್ದಾರೆ ಎಂದು ಅಬಕಾರಿ ಸಚಿವ ಆರ್.ಬಿ ತಿಮ್ಮಾಪೂರ ಹೇಳಿದರು.

ಮೇ 20 ರಂದು ಹೊಸಪೇಟೆಯಲ್ಲಿ ಜರುಗಲಿರುವ 2 ವರ್ಷ ಪೂರೈಸಿದ ಕಾಂಗ್ರೆಸ್ ಸರ್ಕಾರದ ಸಾಧನೆ ಹಾಗೂ ಒಂದು ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು. ಮಾಧ್ಯಮಗಳು ಇಂದು ಸುಳ್ಳು ಸುದ್ದಿಗಳು ಹರಡುತ್ತಿವೆ ಸತ್ಯದ ಪರವಾಗಿಲ್ಲ ಕಾಂಗ್ರೆಸ್ ಎನು ಮಾಡಿದೆ ಎಂದು ಬಿಜೆಪಿಯವರು ಪ್ರಶ್ನಿಸುತ್ತಾರೆ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು ಬಡವರು ದೀನದುರ್ಬ ಲರನ್ನು ಅಲ್ಪಸಂಖ್ಯಾತರನ್ನು ಸಮಾನವಾಗಿ ಕಂಡಿದ್ದಾರೆ ಎಂದು ತಿಳಿಸಿದರು.

ಬಡವರು ಹಸಿವಿನಿಂದ ಬಳಲಬಾರದು ಎಂದು ಅನ್ನಭಾಗ್ಯ ಯೋಜನೆ ತಂದಿದ್ದಾರೆ. ಬಡವರಿಗೆ ಭೂಮಿ ಇಲ್ಲ ಎಂದು ಉಳ್ಳುವವನೆ ಭೂಮಿಯ ಒಡೆಯ ಕಾಯ್ದೆ ಜಾರಿಗೆ ತಂದಿದ್ದಾರೆ.

ನಿಮ್ಮ ಪ್ರಧಾನಿ ಮೋದಿ ಮಾಡಿದ್ದು ಎನು ನನ್ನ ಪ್ರಶ್ನೆ ಪಾಕಿಸ್ತಾನ ಜೊತೆ ಜಗಳಾಡಿ ಎಂದರೆ ಓಣಿಯವರ ಜೊತೆ ಜಗಳ ಮಾಡುವುದು ಇದು ಯಾವ ನ್ಯಾಯ ? ಮುಸ್ಲಿಂ ಭಾರತ ದೇಶದವರಲ್ಲವೇ ದಿನಾಬೆಳಗಾದರೆ ಸಾಕು ಮುಸ್ಲಿಂರಿಗೆ ಬೈಯುವುದೇ ಬಿಜೆಪಿ ನಾಯಕರ ಅಭಿವೃದ್ದಿ ಮಂತ್ರನಾ ? ಇಂದು ದೇಶದಲ್ಲಿ ಉಗ್ರರು ನುಸುಳುತ್ತಿದ್ದಾರೆ ಇದಕ್ಕೆ ಯಾರು ಕಾರಣ ಕೇಂದ್ರ, ಬೇಹುಗಾರಿಕೆ ಸಂಪೂರ್ಣ ವಿಫಲವಾಗಿದೆ. ಶ್ರೀಮತಿ ಇಂಧಿರಾಗಾಂಧಿ ಬಗ್ಗೆ ಬಿಜೆಪಿಯವರು ಮಾತನಾಡಲು ನೈತಿಕತೆ ಇಲ್ಲ. ಗಾಂಧಿ ಮನೆತನ ತ್ಯಾಗದ ಸಂಕೇತ ಕರ್ನಾಟಕ ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ಜನತೆ ಹಸಿವಿನಿಂದ ಬಳಲಬಾರದು ಎಂದು ಹಸಿವು ಮುಕ್ತರಾಜ್ಯ ಮಾಡಿದ್ದಾರೆ. ಮೇ 20 ರಂದು ಕರ್ನಾಟಕ ರಾಜ್ಯ ಕಾಂಗ್ರೆಸ್ 2 ವರ್ಷದಲ್ಲಿ ಮಾಡಿರುವ ಯೋಜನೆಗಳ ಸಾಧನೆ ಸಮಾವೇಶ ಇರುವದರಿಂದ್ದ ಮತಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಮನವಿ ಮಾಡಿದರು.

ಇದೆ ಸಂದರ್ಭದಲ್ಲಿ ಸಚಿವ ಆರ್.ಬಿ ತಿಮ್ಮಾಪೂರ ಇವರಿಗೆ ಕಾರ್ಯಕರ್ತರೊಬ್ಬರು ಶಾಸಕ ಯಶವಂತರಾಯಗೌಡ ಪಾಟೀಲ ಕಾಂಗ್ರೆಸ್ ಪಕ್ಷದ ನಿಷ್ಠಾವಂತರಾಗಿರುವದರಿಂದ್ದ ಸಚಿವ ಸ್ಥಾನ ನೀಡಲು ತಮ್ಮ ಹೈಕಮಾಂಡ ಗಮನ ಹರಿಸಬೇಕು ಎಂದು ಮನವಿ ಮಾಡಿಕೊಂಡಾಗ ನೋಡಿ ಶಾಸಕ ಪಾಟೀಲರು ಅತ್ಯಂತ ಬುದ್ದಿವಂತ ಹಾಗೂ ರಾಜಕೀಯ ಚಾಣುಕ್ಯ ಮತಕ್ಷೇತ್ರ ಬಗ್ಗೆ ಇವರಷ್ಟು ಕಾಳಜೀ ನಾನು ಯಾವ ಶಾಸಕರಲ್ಲಿ ಕಂಡಿಲ್ಲ ಹೈಕಮಾಂ ಡವರೆಗೂ ಅವರ ಕೈ ಇರುವದರಿಂದ್ದ ನಾನು ಹೇಳುವು ದಕ್ಕಿಂತ ಅವರಿಗೆ ಈ ಬಾರಿ ಸಚಿವ ಸ್ಥಾನ ಸಿಗುವುದು ಸೂರ್ಯ–ಚಂದ್ರರಷ್ಟೇ ಸತ್ಯವಾಗಿದೆ ತಪ್ಪಿಸಲು ಅಸಾಧ್ಯ.

ಪೂರ್ವಭಾವಿಸಭೆಯ ಅಧ್ಯಕ್ಷತೆವಹಿಸಿ ಶಾಸಕ ಯಶವಂತರಾಯಗೌಡ ಪಾಟೀಲ ಮಾತನಾಡಿದರು.

ಶಿವಾನುಭವ ಭವನ ಲೋಕಾರ್ಪಣೆ ನಾಳೆ

ವಿಜಯಪುರ: ನಗರದ ಶ್ರೀ ಸಿದ್ದೇಶ್ವರ ಸಂಸ್ಥೆಯ ನೂತನ ಶಿವಾನುಭವ ಸಮುದಾಯ ಭವನದ ಲೋಕಾರ್ಪಣೆ ಸಮಾರಂಭ ಮೇ 21 ರಂದು ಸಂಜೆ 5–30ಕ್ಕೆ ಸಿದ್ದೇಶ್ವರ ದೇವಸ್ಥಾನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಸಿದ್ದೇಶ್ವರ ಸಂಸ್ಥೆಯ ಚೇರಮನ್ ಬಸಯ್ಯ ಹಿರೇಮಠ ಅವರು ತಿಳಿಸಿದ್ದಾರೆ. ಹುಬ್ಬಳ್ಳಿಯ ಮೂರುಸಾವಿರ ಮಠದ ಶ್ರೀ ಮನ್ಮಹಾರಾಜ ಜಗದ್ಗುರು ಡಾ.ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿಗಳು, ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿಗಳು, ವಿಜಯಪುರ ಜ್ಞಾನ ಯೋಗಾಶ್ರಮದ ಅಧ್ಯಕ್ಷ ಗುರುಗಳು ಬಸವಲಿಂಗ ಸ್ವಾಮೀಜಿಗಳು, ಜ್ಞಾನ ಯೋಗಾಶ್ರಮ ಮತ್ತು ಬಿಳಿಗಿರಿರಂಗನಬೆಟ್ಟದ ನಿರ್ಮಲಾನಂದ ಸ್ವಾಮೀಜಿ ಆಶ್ರಮದ ಶಾಂತಮಲ್ಲಿಕಾರ್ಜುನ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ನಡೆಯುವ ಲೋಕಾರ್ಪಣಾ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಸಿದ್ದೇಶ್ವರ ಸಂಸ್ಥೆಯ ಅಧ್ಯಕ್ಷರು ಹಾಗೂ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ರವರು ವಹಿಸಲಿದ್ದಾರೆ. ಸಚಿವ ಎಂ.ಬಿ.ಪಾಟೀಲ, ಶಾಸಕರಾದ ವಿಠ್ಠಲ ಕಟಕದೊಂಡ ರವರು ಮುಖ್ಯ ಅತಿಥಿಗಳಾಗಿ ಭಾಗವ ಹಿಸಲಿದ್ದಾರೆ. ಇದೇ ವೇಳೆ ದಿ.ಬಿ.ಎಂ.ಪಾಟೀಲ ಅವರ ಹೆಸರಿನಲ್ಲಿರುವ ಪ್ರಸಾದ ನಿಲಯ ಹಾಗೂ ದಿ.ಆರ್.ಆರ್.ಕಲ್ಲೂರ ಅವರ ಹೆಸರಿನಲ್ಲಿರುವ ಅಕ್ಷತಾ ಮಂಟಪಗಳ ಉದ್ಘಾಟನೆಯನ್ನು ನೆರವೇರಿಸಲಾಗುವುದು. ಸಮುದಾಯ ಭವನದಲ್ಲಿ ಭಾವಚಿತ್ರಗಳನ್ನು ಅಳವಡಿಸಲು ದೇಣಿಗೆ ನೀಡಿರುವ ದಾನಿಗಳನ್ನು ಆತ್ಮೀಯವಾಗಿ ಸನ್ಮಾನಿಸಲಾಗುವುದು.

ಟ್ರಸ್ಟ್‌ನಿಂದ ದೇವ ಋಷಿ ನಾರದ ಜಯಂತಿ

ಬಾಗಲಕೋಟೆ: ಯುವ ಪತ್ರಕರ್ತರು ದೇವ ಋಷಿ ನಾರದರ ಸಂವಾದ ಶೈಲಿ, ಹಾವ–ಭಾವ ಹಾಗೂ ವಾಕ್ಯ ರಚನೆಯನ್ನು ನೋಡಿ ಕಲಿಯಬೇಕು ಎಂದು ಆರ್‌ಎಸ್‌ಎಸ್‌ನ ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಾಂತದ ಪ್ರಚಾರಕ ಅರುಣಕುಮಾರ ಹೇಳಿದರು.

ನಗರದ ದೀಪಂ ಕಾಲೇನಿಯಲ್ಲಿರುವ ಆರ್‌ಎಸ್‌ಎಸ್‌ನ ಸಂಘಮಿತ್ರ ಕಾರ್ಯಾಲಯದಲ್ಲಿ ಸೇವಾ ಭಾರತಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ದೇವಋಷಿ ನಾರದ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಚಲನಚಿತ್ರ ನಿರ್ಮಾಪಕರು ನಾರದರನ್ನು ಹಾಸ್ಯಮಯವಾಗಿ ತೋರಿಸಿದ್ದಾರೆ. ಈ ಮೂಲಕ ನಾರದರು ಎಂದರೇ ಹಾಸ್ಯ ಮಾಡುವವರು ಎಂದು ನಾವು ತಿಳಿದುಕೊಂಡಿದ್ದೇವೆ. ಆದರೆ, ನಾರದರ ದೇವ, ಮಾನವ ಹಾಗೂ ರಾಕ್ಷಸರ ಲೋಕಕ್ಕೆ ಪ್ರವೇಶ ಹೊಂದಿದ್ದ ಏಕೈಕ ವ್ಯಕ್ತಿ. ಪತ್ರಕರ್ತರು ನಾರದರಷ್ಟೇ ಶುಭ್ರವಾದ ಚಾರಿತ್ರ್ಯ ಇಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ವೇದವ್ಯಾಸ ಋಷಿಗಳು ರಚಿಸಿರುವ ನಾಲ್ಕು ವೇದಗಳು ಜನಸಾಮಾನ್ಯರಿಗೆ ಅರ್ಥವಾಗುವ ಹಾಗೆ ಬರೆಯಿರಿ ಎಂದು ನಾರದರು ಹೇಳಿದ ನಂತರವೇ ವೇದವ್ಯಾಸರಿಂದ ಭಾಗವತ್ ರಚನೆಯಾಯಿತು ಎಂದು ತಿಳಿಸಿದರು. ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಛಾಪು ಮಾಡಿರುವ ಅನೇಕ ದಿಗ್ಗಜರ ಮೂಲ ಮುದ್ರಣ ಮಾಧ್ಯಮವಾಗಿದೆ. ಮುದ್ರಣ ಮಾಧ್ಯಮದಲ್ಲಿ ತಿದ್ದಿ ಕೊಳ್ಳಲು ಅವಕಾಶಗಳಿರುತ್ತವೆ. ಅದೇ ಇಲೆಟ್ರಾನಿಕ್ ಮಾಧ್ಯಮದಲ್ಲಿ ಅವಕಾಶಗಳು ಕಮ್ಮಿ. ಯುವ ಪತ್ರಕರ್ತರು ಒಂದು ತಿರುಳಿನೊಂದಿಗೆ ಎರಡು ಪುಟಗಟ್ಟಲೆ ಗಟ್ಟಿಯಾಗಿ ಬರೆಯುಂತಾಗಬೇಕು. ಇದಕ್ಕಿಂತ ಮೊದಲು ಮಾತ್ರ ಭಾಷೆಯ ಮೇಲೆ ಹಿಡಿತ ಸಾಧಿಸಿಕೊಂಡು ಮಾಧ್ಯಮ ಲೋಕಕ್ಕೆ ಕಾಲಿಡಬೇಕು ಎಂದು ಸಲಹೆ ನೀಡಿದರು. ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆನಂದ ದಲಭಂಜನ ಮಾತನಾಡಿ, ಎರಡು ದಶಕಗಳ ಹಿಂದೆ ಸುದ್ದಿಗಳನ್ನು ಕಳುಹಿಸಲು ಒದ್ದಾಡುವ ಸ್ಥಿತಿ ಇತ್ತು. ಇಂದಿನ ಆಧುನಿಕ ತಂತ್ರಜ್ಞಾನ ಎಲ್ಲವನ್ನು ಸುಲಲಿತಗೊಳಿಸಿದೆ. ಇಂದಿನ ದಿನಗಳಲ್ಲಿ ಸೋಷಿಯಲ್ ಮಿಡಿಯಾಗಳ ಮೂಲಕ ಜನರಿಗೆ ತ್ವರಿತಗತಿಯಲ್ಲಿ ಸುದ್ದಿಗಳನ್ನು ತಲುಪಿಸುವ ಜತೆಗೆ ಅವುಗಳಿಂದ ಆದಾಯ ಸಹ ಪಡೆಯಬಹುದಾಗಿದೆ ಎಂದರು. ಆರ್‌ಎಸ್‌ಎಸ್‌ನ ಜಿಲ್ಲಾ ಸಂಘಚಾಲಕ ಚಂದ್ರಶೇಖರ ದೊಡಮನಿ, ಮಾಜಿ ಶಾಸಕ ವೀರಣ್ಣ ಚರಂತಿಮಠ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಸೇರಿ ಇತರರಿದ್ದರು.

ನಾರದ ಜಯಂತಿ ಅಂಗವಾಗಿ ನಾರದರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಮಳೆಗೆ ಹುಲಿಗೆಮ್ಮನ ಹಂಡೆಕೊಳ್ಳಕ್ಕೆ ಜೀವಕಳೆ

ಗುಳೇದಗುಡ್ಡ: ಬಿಸಿಲಿನ ಬೇಗೆಯ ನಡುವೆಯೂ ಮಳೆರಾಯ ಅಬ್ಬರಿಸುತ್ತಿದ್ದಾನೆ. ಇದರಿಂದ ಕಳೆದ ಎರಡ್ಮೂರು ದಿನಗಳಿಂದ ಗುಳೇದಗುಡ್ಡ ತಾಲೂಕಿನಾದ್ಯಂತ ಮುಂಗಾರಮಳೆ ಸುರಿಯುತ್ತಿದ್ದು, ತಾಲೂಕಿನ ಕೆರೆ, ಹಳ್ಳ, ಕೊಳ್ಳಗಳು ತುಂಬುತ್ತಿವೆ. ಗುಡ್ಡಗಳು ಹಚ್ಚಹಸಿರಿನಿಂದ ಆವರಿಸಿದ್ದು, ಗುಡ್ಡಗಳಲ್ಲಿ ನೀರಿನ ಝರಿಗಳು ಉಂಟಾಗಿ ಸಣ್ಣಪುಟ್ಟ ಜಲಪಾತಗಳನ್ನು ಸೃಷ್ಟಿಸುತ್ತಿವೆ.

ಗುಳೇದಗುಡ್ಡ ಸಮೀಪದ ಹಾನಾಪೂರ ಎಲ್‌ಟಿ ಗ್ರಾಮದ ಹತ್ತಿರದ ಗುಡ್ಡದಲ್ಲಿನ ಹುಲಿಗೆಮ್ಮನ ಹಂಡೆಕೊಳ್ಳ ಎಂದು ಪ್ರಸಿದ್ಧವಾಗಿರುವ ಕಿರು ಜಲಪಾತಕ್ಕೆ ಈಗ ಮತ್ತೇ ಜೀವಬಂದಿದ್ದು, ಗುಡ್ಡದಲ್ಲಿ ಉಂಟಾದ ನೀರಿನ ಝರಿಗಳು ಇಲ್ಲಿ ಸುಂದರವಾದ ಜಲಪಾತವನ್ನು ಸೃಷ್ಟಿಸಿವೆ. ಹೀಗೆ ಸಾಗಿದ ನೀರು ಮುಂದೆ ಕರೆಯನ್ನು ತುಂಬಿಸುತ್ತದೆ. ಹಚ್ಚಹಸುರಿನ ಗುಡ್ಡದಲ್ಲಿ ಕಪ್ಪನೆ ಬಂಡೆಗಳ ನಡುವೆ ಹರಿಯುವ ಈ ಹುಲಿಗೆಮ್ಮನ ಹಂಡೆಕೊಳ್ಳ ಜಲಪಾತ ಗುಳೇದಗುಡ್ಡ ನಂದಿಕೇಶ್ವರ ರಸ್ತೆಗೆ ಸಮೀಪದಲ್ಲೇ ಇದ್ದು, ನೋಡುಗರನ್ನು ಕೈ ಬೀಸಿ ಕರೆಯುತ್ತದೆ. ಮಳೆಗಾಲದಲ್ಲಿ ಮಾತ್ರ ಕಾಣುವ ಈ ಕಿರುಜಲಪಾತವನ್ನು ನೋಡಲು ಗುಳೇದಗುಡ್ಡ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಆಗಮಿಸುತ್ತಾರೆ.

ಸಮಾಚಾರ ಸಣ್ಣದಲ್ಲ

ಮೇ 31ರಿಂದ 'ಕಣ್ಣನ್ ಜತೆ ಮಾತುಕತೆ'

ಶಿರಸಿ: ಕನ್ನಡದ ಪೂಜಾರಿ, ವಾಗ್ಮಿ, ಹರಟೆ ಕಾರ್ಯಕ್ರಮಗಳ ಖ್ಯಾತಿಯ ಹಿರೇಮಗಳೂರು ಕಣ್ಣನ್ ಅವರ ಜತೆ ಮಾತುಕತೆ ಎಂಬ ವಿಶಿಷ್ಟ ಕಾರ್ಯಕ್ರಮ ಮೇ 31 ಹಾಗೂ ಜೂನ್ 1ರಂದು ನಗರದ ಟಿಎಂಎಸ್ ಸಭಾಂಗಣದಲ್ಲಿ ಸಂಜೆ 5.30ರಿಂದ ನಡೆಯಲಿದೆ. ವಿಶ್ವಶಾಂತಿ ಸೇವಾ ಟ್ರಸ್ಟ್ ಕರ್ನಾಟಕ ಆಯೋಜಿಸಿದ ಕಾರ್ಯಕ್ರಮದಲ್ಲಿ ಕಣ್ಣನ್ ಅವರ ಜೊತೆ ಸಂಸ್ಕೃತಿ ಚಿಂತಕಿ ನಾಗಶ್ರೀ ತ್ಯಾಗರಾಜ್ ಸಂವಾದ ನಡೆಸಲಿದ್ದಾರೆ. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಜೀವ ಕಲ ಕಾರ್ಯಪಡೆ ಅಧ್ಯಕ್ಷ ಶ್ರೀನಿವಾಸ ಹೆಬ್ಬಾರ್, ಟ್ರಸ್ಟ್ ಅಧ್ಯಕ್ಷ, ಹಿರಿಯ ಪತ್ರಕರ್ತ ರವೀಂದ್ರ ಭಟ್ಟ, ಧಾರವಾಡ ಹಾಲು ಒಕ್ಕೂಟದ ಉಪಾಧ್ಯಕ್ಷ ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ, ರಾಜದೀಪ ಟ್ರಸ್ಟ್ ಅಧ್ಯಕ್ಷ ದೀಪಕ್ ದೊಡ್ಡೂರು ಭಾಗವಹಿಸಲಿದ್ದಾರೆ ಎಂದು ಟ್ರಸ್ಟ್ ಕಾರ್ಯದರ್ಶಿ ಗಾಯತ್ರೀ ರಾಘವೇಂದ್ರ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ತಹಸೀಲ್ದಾರ್ ಇಲ್ಲ, ಎಸಿ ಇಲ್ಲ, ಪೌರಾಯುಕ್ತರಿಲ್ಲ। ಆಡಳಿತ ಯಂತ್ರ ನಾಶ। ರೈತಮೋರ್ಚಾ ಉಪಾಧ್ಯಕ್ಷ ಅನಂತಮೂರ್ತಿ ಹೆಗಡೆ

ಮೇ 27ರಿಂದ ಅನಿರ್ದಿಷ್ಟಾವಧಿ ಬೃಹತ್ ಧರಣಿ

ಶಿರಸಿ: ಇಲ್ಲಿನ ಸರಕಾರದ ಆಡಳಿತ ಯಂತ್ರ ಸಂಪೂರ್ಣ ಹದಗೆಟ್ಟಿದ್ದು, ಯಾವ ಇಲಾಖೆಯಲ್ಲಿಯೂ ಜನತೆಯ ಕೆಲಸ ಆಗುತ್ತಿಲ್ಲ. ಕಳೆದ ಒಂದೂವರೆ ತಿಂಗಳುಗಳಿಂದ ಪೂರ್ಣಾವಧಿ ತಹಸೀಲ್ದಾರ್ ಇಲ್ಲ. ಶಿರಸಿಯ ಎಸಿ ಭಟ್ಕಳಕ್ಕೆ ಇನ್ಚಾರ್ಜ್ ಆಗಿದ್ದಾರೆ. ನಗರಸಭೆಯಲ್ಲಿ ಪೌರಾಯುಕ್ತರಿಲ್ಲ. ಒಂದು ವಾರದೊಳಗೆ ಎಲ್ಲ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು. ಇಲ್ಲವಾದಲ್ಲಿ ಮೇ 27ರಿಂದ ಅನಿರ್ದಿಷ್ಟಾವಧಿ ಬೃಹತ್ ಧರಣಿ ನಡೆಸಲಾಗುವುದು ಎಂದು ಸಾಮಾಜಿಕ ಹೋರಾಟಗಾರ, ಬಿಜೆಪಿ ಜಿಲ್ಲಾ ರೈತಮೋರ್ಚಾ ಉಪಾಧ್ಯಕ್ಷ ಅನಂತಮೂರ್ತಿ ಹೆಗಡೆ ಹೇಳಿದರು.

> ಭೀಮಣ್ಣ ನಾಯ್ಕ ಅವರು ಕ್ಷೇತ್ರದ ಶಾಸಕರಾಗಿರುವ ಕಾರಣಕ್ಕಾಗಿ ಅವರನ್ನು ಪ್ರಶ್ನಿಸುತ್ತಿರುವುದು ವಿನಃ ಅವರ ವಯಕ್ತಿಕ ಕಾರಣಕ್ಕಲ್ಲ. ಇಷ್ಟು ಸಮಸ್ಯೆಗಳಿಗೆ ಶಾಸಕರೇ ನೇರ ಹೊಣೆ ಹೊರಬೇಕಿದೆ. ಈ ಕೂಡಲೇ ಅವರು ಜನತೆಯ ಸಮಸ್ಯೆಗೆ ಸರಕಾರದಿಂದ ಪರಿಹಾರ ದೊರಕಿಸಲಿ.
> -ಅನಂತಮೂರ್ತಿ ಹೆಗಡೆ

ಅವರು ಸೋಮವಾರ ನಗರದ ಸಹಾಯಕ ಆಯುಕ್ತರ ಕಚೇರಿಯಲ್ಲಿ ಸಾರ್ವಜನಿಕರೊಡಗೂಡಿ ಸಹಾಯಕ ಆಯುಕ್ತರ ಮೂಲಕ ಜಿಲ್ಲಾಧಿಕಾರಿಗೆ, ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ನಿವೃತ್ತ ಸಾರಿಗೆ ಅಧಿಕಾರಿ ಜಿ.ಎಸ್ ಹೆಗಡೆ ಮಾತನಾಡಿ, ಶಿರಸಿ ತಹಸೀಲ್ದಾರ್‌ಗೆ ಭಟ್ಕಳಕ್ಕೆ ಇನ್ ಚಾರ್ಜ್ ಹಾಕಿರುವುದು ನಗೆಪಾಟಲಿನ ವಿಷಯ. ಆಡಳಿತ ಯಂತ್ರ ಎಷ್ಟರ ಮಟ್ಟಿಗೆ ಹದಗೆಟ್ಟಿದೆ ಎಂಬುವುದಕ್ಕೆ ಇದೇ ಸಾಕ್ಷಿ. ಶಿರಸಿಗೆ ಖಾಯಂ ತಹಸೀಲ್ದಾರ್ ನೇಮಕ ಮಾಡುವಲ್ಲಿ ಶಾಸಕರು, ಉಸ್ತುವಾರಿ ಸಚಿವರು ಹೆಚ್ಚಿನ ಗಮನ ಹರಿಸಬೇಕಿದೆ ಎಂದರು. ಬಿಜೆಪಿ ಗ್ರಾಮೀಣ ಮಂಡಲ ಅಧ್ಯಕ್ಷೆ ಉಷಾ ಹೆಗಡೆ ಮಾತನಾಡಿ, ಎರಡು ವರ್ಷಗಳಿಂದ ರಾಜ್ಯದಲ್ಲಿ ಕಾರ್ಯಾಂಗ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಈ ಬಾರಿ ಮುಂಗಾರು ಬೇಗನೇ ರಾಜ್ಯಕ್ಕೆ ಆಗಮಿಸಲಿದೆ ಎಂಬ ಸೂಚನೆ ಇದೆ. ಇಂತಹ ಪರಿಸ್ಥಿತಿಯಲ್ಲಿ ಶಿರಸಿಯಲ್ಲಿ ದಂಡಾಧಿಕಾರಿಗಳೇ ಇಲ್ಲ. ಮಾನ್ಸೂನ್ ಪೂರ್ವ ತಯಾರಿಗಾಗಿ ಸಾಕಷ್ಟು ಕೆಲಸಗಳು ಇವೆ. ಗ್ರಾಮೀಣ ರಸ್ತೆಗಳೆಲ್ಲ ಸಂಪೂರ್ಣ ಹದಗೆಟ್ಟಿವೆ. ಆದರೆ ಈ ಕುರಿತು ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ.

ಈ ಸಮಯದಲ್ಲಿ ರಾಘವೇಂದ್ರ ನಾಯ್ಕ್, ಹುತ್ತಗಾರ್ ಗ್ರಾ.ಪಂ ಅಧ್ಯಕ್ಷೆ ಶೋಭಾ ನಾಯ್ಕ್, ವಿ.ಎಂ ಹೆಗಡೆ, ಶ್ರೀಪಾದ್ ಹೆಗಡೆ, ಪ್ರಭಾವತಿ ಗೌಡ, ಅಂಕಿತ್ ಹೆಗಡೆ, ಸಾಲ್ಕಣಿ ಗ್ರಾ. ಪಂ ಅಧ್ಯಕ್ಷೆ ಅನಸೂಯಾ ಹೆಗಡೆ, ಶಿವಾನಂದ್ ದೇಶಳ್ಳಿ, ವಿಶ್ವನಾಥ್ ಗೌಡ, ಕಮಲಾಕರ ಜಿ ನಾಯ್ಕ್, ನಾರಾಯಣ ಹೆಗಡೆ, ಸುಬ್ರಾಯ ಹೆಗಡೆ, ರಾಘವೇಂದ್ರ ದೇವಾಡಿಗ, ಜ್ಯೋತಿ ಹೆಗಡೆ, ಸಚಿನ್ ಎಸ್ ಭಟ್ ಈ ವೇಳೆ ಉಪಸ್ಥಿತರಿದ್ದರು.



ನಗರದ ಸಹಾಯಕ ಆಯುಕ್ತರ ಕಚೇರಿಯಲ್ಲಿ ಸಾರ್ವಜನಿಕರೊಡಗೂಡಿ ಸಹಾಯಕ ಆಯುಕ್ತರ ಮೂಲಕ ಜಿಲ್ಲಾಧಿಕಾರಿಗೆ, ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

> ಕ್ಷೇತ್ರದ ಶಾಸಕರು ನಾಟಕ, ಟೂರ್ನಮೆಂಟ್‌ಗಳಿಗೆ ನೀಡುವ ಸಮಯವನ್ನು ಆಡಳಿತ ಸುಧಾರಣೆಗಾಗಿ ನೀಡಬೇಕಾದ ಅನಿವಾರ್ಯತೆ ಇದೆ.
> -ಉಷಾ ಹೆಗಡೆ,
> ಬಿಜೆಪಿ ಗ್ರಾಮೀಣ ಮಂಡಲ ಅಧ್ಯಕ್ಷೆ

> ಕ್ಷೇತ್ರದ ಶಾಸಕರು ನಾಟಕ, ಟೂರ್ನಮೆಂಟ್‌ಗಳಿಗೆ ನೀಡುವ ಸಮಯವನ್ನು ಆಡಳಿತ ಸುಧಾರಣೆಗಾಗಿ ನೀಡಬೇಕಾದ ಅನಿವಾರ್ಯತೆ ಇದೆ.
> -ಉಷಾ ಹೆಗಡೆ,
> ಬಿಜೆಪಿ ಗ್ರಾಮೀಣ ಮಂಡಲ ಅಧ್ಯಕ್ಷೆ

ಕೆಡಿಪಿ ಸಭೆಗೆ ಪುರುಸೊತ್ತಿಲ್ಲ. ಕಬ್ಬಡ್ಡಿ ಮ್ಯಾಚ್ ಬಿಡುವುದಿಲ್ಲ

ಸಮಸ್ಯೆಗಳ ಸರಮಾಲೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದರೂ ಸಹ ಶಾಸಕರಾದ ಭೀಮಣ್ಣ ನಾಯ್ಕ ಅವರು ಮಾತ್ರ ಜವಾಬ್ದಾರಿ ನುಣುಚಿಕೊಂಡು, ಕೆಡಿಪಿ ಸಭೆ ಮಾಡಲೂ ಪುರುಸೊತ್ತಿಲ್ಲ. ಕೆಡಿಪಿ ಸಭೆಯಲ್ಲಿ 10 ನಿಮಿಷ ಕಾದು ಅಧಿಕಾರಿಗಳ ಜತೆಗೆ ಚರ್ಚಿಸುವ ಬದಲು, ಶಾಸಕರು ಓಡಿ ಹೋಗುತ್ತಾರೆ. ಅಭಿವೃದ್ಧಿ ಕಾಮಗಾರಿಗಳ ಹೇಳ ಹೆಸರಿಲ್ಲದಂತಾಗಿದೆ. ಇನ್ನಾದರೂ ಭೀಮಣ್ಣ ನಾಯ್ಕ ಅವರು ಶಾಸಕತ್ವದ ಜವಾಬ್ದಾರಿ ನಿರ್ವಹಿಸಲಿ ಎಂದು ಅನಂತಮೂರ್ತಿ ಹೆಗಡೆ ಕಿವಿಮಾತು ಹೇಳಿದರು.

ಮನವಿಯಲ್ಲಿರುವ ಬೇಡಿಕೆಗಳೇನು ?

1) ಜನತೆಯ ಹಿತದೃಷ್ಟಿಯಿಂದ ಈ ಕೂಡಲೇ ಶಿರಸಿಗೆ ತಹಸೀಲ್ದಾರ್ ನೇಮಕ ಆಗಬೇಕಿದೆ.
2) ತಹಶೀಲ್ದಾರ್ ನೇಮಕ ಆಗುವರೆಗೆ ಇಲ್ಲಿನ ಅಧಿಕಾರಿಗಳೇ ಪ್ರಭಾರಿಯಾಗಿ ಜನರಿಗೆ ಪೂರ್ಣ ಕೆಲಸಕ್ಕೆ ದೊರೆಯುವಂತಾಗಬೇಕು. ಹೊರತೂ ಬೇರೆ ತಾಲೂಕಿನ ಅಧಿಕಾರಿಗನ್ನು ಪ್ರಭಾರಿಯಾಗಿ ನೇಮಿಸಬಾರದು.
3) ಶಿರಸಿ ಉಪವಿಭಾಗಕ್ಕೆ ಪೂರ್ಣ ಪ್ರಮಾಣದಲ್ಲಿ ಸಹಾಯಕ ಆಯುಕ್ತರ ಸೇವೆ ಲಭ್ಯವಾಗಬೇಕು. ಭಟ್ಕಳಕ್ಕೆ ಸ್ಥಳೀಯರನ್ನೇ ಸಹಾಯಕ ಆಯುಕ್ತರನ್ನಾಗಿ ಪ್ರಭಾರಿ ನೀಡಲಿ.
4) ಶಿರಸಿ ನಗರಸಭೆಯಲ್ಲಿಯೂ ಸಹ ಪ್ರಭಾರಿ ಬದಲಾಗಿ ಪೂರ್ಣ ಪ್ರಮಾಣದಲ್ಲಿ ಪೌರಾಯುಕ್ತರನ್ನು ನೇಮಕ ಮಾಡಬೇಕು.
5) ಶಿರಸಿ-ಸಿದ್ದಾಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಇಲಾಖೆಯಲ್ಲಿಯೂ ಜನರ ಕೆಲಸಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಈ ಕೂಡಲೇ ಅಧಿಕಾರಿಗಳು ಜನರಿಗೆ ಸ್ಪಂದಿಸುವಂತಾಗಬೇಕು.
6) ಮಳೆಗಾಲ ಸಮೀಪ ಇರುವುದರಿಂದ ಅತ್ಯಾವಶ್ಯಕ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಸೂಕ್ತ ನಿರ್ದೇಶನ ಮಾಡುವುದು.

ತಹಸೀಲ್ದಾರ್ ನೇಮಕಕ್ಕೆ ಒಂದು ವಾರಗಳ ಗಡುವು ಕೊಟ್ಟ ಅನಂತಮೂರ್ತಿ

ಜನತೆಯ ಹಿತದೃಷ್ಟಿಯಿಂದ ಈ ಕೂಡಲೇ ಶಿರಸಿಗೆ ತಹಸೀಲ್ದಾರ್ ನೇಮಕ ಆಗಬೇಕಿದೆ. ತಹಶೀಲ್ದಾರ್ ನೇಮಕ ಆಗುವರೆಗೆ ಇಲ್ಲಿನ ಅಧಿಕಾರಿಗಳೇ ಜನರಿಗೆ ಪೂರ್ಣ ಕೆಲಸಕ್ಕೆ ದೊರೆಯುವಂತಾಗಬೇಕು. ಜತೆಗೆ ಶಿರಸಿ ಉಪವಿಭಾಗಕ್ಕೆ ಪೂರ್ಣ ಪ್ರಮಾಣದಲ್ಲಿ ಸಹಾಯಕ ಆಯುಕ್ತರ ಸೇವೆ ಲಭ್ಯವಾಗಬೇಕು. ಮೇ.26ರೊಳಗೆ ಪರಿಹಾರ ದೊರೆಯದಿದ್ದಲ್ಲಿ ಎಲ್ಲ ಸಾರ್ವಜನಿಕರೊಡಗೂಡಿ ಮೇ.27ರಿಂದ ಬೇಡಿಕೆ ಈಡೇರುವವರೆಗೂ ಬೃಹತ್ ಅನಿರ್ದಿಷ್ಟಾವಧಿ ಬೃಹತ್ ಧರಣಿ ಕೈಗೊಳ್ಳಲಾಗುವುದು.

ಮನರಂಜನೆಯಿಂದ ದಣಿವಾರಿಸಿಕೊಳ್ಳುವ ಕಾರ್ಮಿಕರು

ನರಗುಂದ: ಕಬ್ಬಡ್ಡಿ ಆಟದಲ್ಲಿ ಪುರುಷರು, ಖೋಖೋ, ಸಕ್ಕ ಸರಗಿ ಆಟದಲ್ಲಿ ಮೈಮರೆತ ಮಹಿಳೆಯರು ಜತೆಗೆ ಸೋಬಾನ ಪದ, ಡೊಳ್ಳಿನ ಪದ, ತತ್ವ ಪದಗಳ ಗಾನಸುಧೆ ಕೃಷಿ ಜಮೀನಿನಲ್ಲಿ ಹರಿಯುತ್ತಿದೆ.

ನರಗುಂದ ತಾಲೂಕು ವ್ಯಾಪ್ತಿಯ ವಿವಿಧ ಗ್ರಾಪಂಗಳ ನರೇಗಾ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದರೆ ಇಂತಹ ಆಟ-ಗಾಯನ ಕಣ್ತುಂಬಿಕೊಳ್ಳಬಹುದು. ಉದ್ಯೋಗ ಖಾತ್ರಿ ಎಂದರೆ ಬರೀ ಕೂಲಿ ಕೆಲಸವಲ್ಲ ಮನರಂಜನೆಗೂ ಅಲ್ಲಿ ಅವಕಾಶ ಕಲ್ಪಿಸಿದ್ದರಿಂದ ಕೂಲಿಕಾರರು ಆಸಕ್ತಿಯಿಂದಲೇ ಕೆಲಸದಲ್ಲಿ ತೊಡಗುತ್ತಿದ್ದಾರೆ.

ಏಪ್ರಿಲ್ ತಿಂಗಳನಿಂದಲೇ ತಾಲೂಕಿನಾದ್ಯಂತ ನರೇಗಾ ಕಾಮಗಾರಿಗಳು ಪ್ರಾರಂಭವಾಗಿದ್ದು, ತಾಲೂಕಿನಲ್ಲಿ ಪ್ರತಿ ದಿನ 8 ಸಾವಿರಕ್ಕೂ ಹೆಚ್ಚು ಕೂಲಿಕಾರರು ನರೇಗಾ ಯೋಜನೆಯಡಿ ಸಾಮೂಹಿಕ ಬದು ನಿರ್ಮಾಣ ಕಾಮಗಾರಿಯಲ್ಲಿ ತೊಡಗಿದ್ದಾರೆ. ಕೂಲಿಕಾರರು ಕೆಲಸದ ದಣಿವು ತಣಿಸಲು ಬಿಡುವಿನ ಸಮಯದಲ್ಲಿ ಆಟೋಟಗಳಿಗೆ ಅವಕಾಶ ನೀಡಲಾಗಿದೆ.

ಸೋಬಾನೆ, ಹಂತಿ, ತತ್ವಪದಗಳನ್ನು ಸಾಮೂಹಿಕವಾಗಿ ಹಾಡುತ್ತಿದ್ದಾರೆ. ಇದರಿಂದ ಕೆಲಸದ ದಣಿವು ಕರಗಿ ಉಲ್ಲಾಸಗೊಳುತ್ತಿದೆ. ಜತೆಗೆ ಇತರೆ ಗ್ರಾಪಂ ಗಳಿಗೂ ಈ ಸಂಗತಿ ಪ್ರೇರಣೆಯಾಗಿದೆ. ಪುರುಷರು ಕಬ್ಬಡಿ ಆಟವಾಡಿದರೆ ಮಹಿಳೆಯರು ಖೋಖೋ ಆಟವಾಡುವ ಮೂಲಕ ಹಿರಿಯರು ಸೋಬಾನೆ ಪದಗಳನ್ನು ಹಾಡುವ ಮೂಲಕ ಎಲ್ಲರ ಗಮನ ಸೆಳೆಯುತ್ತಿದ್ದಾರೆ.

ನರಗುಂದ ತಾಲೂಕು ಕೊಣ್ಣೂರದಲ್ಲಿ ನರೇಗಾ ಮಹಿಳಾ ಕೂಲಿ ಕಾರ್ಮಿಕರು ಖೋ ಖೋ ಆಟದಲ್ಲಿ ತೊಡಗಿರುವುದು.

> ನರೇಗಾ ಯೋಜನೆಯಡಿ ಸಾಮೂಹಿಕ ಬದು ನಿರ್ಮಾಣ ಕಾಮಗಾರಿ ಸ್ಥಳದಲ್ಲಿ ಕೊಣ್ಣೂರ ಗ್ರಾಮದ ಕೂಲಿಕಾರರು ಕೆಲಸದ ಜತೆಗೆ ಮನರಂಜನೆಯಾಗಿ ದೇಸಿಯ ಆಟವಾದ ಕಬ್ಬಡಿ, ಖೋಖೋ ಸೋಬಾನೆ ಪದಗಳನ್ನು ಹಾಡುವ ಮೂಲಕ ತಾಲೂಕಿನಾದ್ಯಂತ ಗಮನ ಸೆಳೆಯುತ್ತಿದ್ದಾರೆ. ಗ್ರಾಮೀಣ ಕ್ರೀಡೆಗಳು ಕಣ್ಮರೆಯಾಗುತ್ತಿದ್ದು, ಇಂದು ನರೇಗಾ ಕಾಮಗಾರಿ ಸ್ಥಳದಲ್ಲಿ ಮರುಕಳಿಸುತ್ತಿವೆ.
> - ಎಸ್.ಕೆ. ಇನಾಮದಾರ,
> ತಾಪಂ ಇಒ

> ಎನ್‌ಎಂಎಂಎಸ್ ತಂತ್ರಾಂಶದಲ್ಲಿ ಈ ವರ್ಷ ಹೆಡ್‌ಕೌಂಟ್ ಮಾಡುವ ಮೂಲಕ ಹಾಜರಿ ಹಾಕಲಾಗುತ್ತದೆ. ಕೆಲಸದ ಸ್ಥಳದಲ್ಲಿ ಕನಿಷ್ಠ 4 ಗಂಟೆ ಸಮಯ ಕಳೆಯಬೇಕು. ಕೊಣ್ಣೂರ ಗ್ರಾಪಂ ಯಲ್ಲಿ ಸದ್ಯ 900ಕ್ಕೂ ಅಧಿಕ ಕೂಲಿಕಾರರು ಕೆಲಸದಲ್ಲಿ ಪ್ರತಿದಿನ ತೊಡಗಿಸಿಕೊಳ್ಳುತ್ತಿದ್ದಾರೆ. ನರೇಗಾ ಕಾಮಗಾರಿಗಳಲ್ಲಿ ತೊಡಗಿಕೊಳ್ಳುವ ಮಹಿಳೆಯರು ಪುರುಷರಷ್ಟೇ ಸಮಾನರು ಎಂಬುದನ್ನು ಇದು ಸಾರಲು ಸಹಕಾರಿಯಾಗಿದೆ.
> - ಮಂಜುನಾಥ ಗಣಿ,
> ಪಿಡಿಒ ಗ್ರಾಪಂ ಕೊಣ್ಣೂರ

ಕಾನೂನಿಗಿಂತ ಸಹಕಾರಿ ಅಧಿಕಾರಿಗಳು ದೊಡ್ಡವರಾದರೇ?

ಧಾರವಾಡ: ಈ ಹಿಂದೆ ಶಿವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿ ಚುಣಾವಣೆ ತರಾತುರಿಯಲ್ಲಿ ಮಾಡುತ್ತಿರುವುದನ್ನು ವಿರೋಧಿಸಿ ಸಂಘದ ಸದಸ್ಯರೊಬ್ಬರು ಡಿ.ಆರ್.ಸಿ.ಎಸ್ ಅವರಿಗೆ ದೂರು ಸಲ್ಲಿಸಿದ್ದರು.

ಈ ಅರ್ಜಿಯನ್ನು ಪರಿಶೀಲಿಸಿ ಡಿ.ಆರ್ .ಸಿ.ಎಸ್ ಇವರು 195 ದಿನಗಳ ಚುಣಾವಣಾ ಪೂರ್ವ ನೋಟಿಸ್ ನೀಡಿದ ನಂತರ ಸಂಘದ ಚುನಾವಣೆ ಜರುಗಿಸಲು ಆದೇಶ ನೀಡಿದ್ದರು. ಡಿ.ಆರ್.ಸಿ.ಎಸ್ ಮಾಡಿದ ಆದೇಶವನ್ನು ಪ್ರಶ್ನಿಸಿ ಸಂಘದ ಸದಸ್ಯರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆಯ ಹಂತದಲ್ಲಿ ಇರುವಾಗ ಶಿವಳ್ಳಿ ಸಂಘದ ಆಡಳಿತ ಅವಧಿ, ಜ. 5ಕ್ಕೆ ಮುಕ್ತಾಯ ವಾಗಿದ್ದ ರಿಂದ ಎ.ಆರ್.ಸಿ.ಎಸ್ ಅವರು ಪಿ.ಮಧು ಸೂದನ ಅವರನ್ನು ಶಿವಳ್ಳಿ ಸಂಘಕ್ಕೆ ಆಡಳಿತಾ ಧಿಕಾರಿ ಅಂತ ನೇಮಕಾತಿ ಮಾಡಿ ಆದೇಶ ಮಾಡಿದ್ದರು.

ಎ.ಆರ್.ಸಿ.ಎಸ್ ಇವರು ಮಾಡಿದ ಆದೇಶಕ್ಕೆ ತಡೆಯನ್ನು ಕೋರಿ ಸಂಘದರವರು ಹೈಕೋರ್ಟ್‌ಗೆ ಮತ್ತೆ ಅರ್ಜಿ ಸಲ್ಲಿಸಿದ್ದರು. ಆದರೆ ಹೈಕೋರ್ಟ್, ಶಿವಳ್ಳಿ ಹಾಲು ಉತ್ಪಾದಕರ ಸಂಘದ ಸದಸ್ಯರ ಮನವಿ ತಿರಸ್ಕರಿಸಿ, ಸಹಕಾರಿ ಸಂಘಗಳ ನಿಯಮದನ್ವಯ ಚುನಾವಣೆ ಜರುಗಿಸಬೇಕೆಂದು ಮಹತ್ವಪೂರ್ಣ (ಲ್ಯಾಂಡ್ ಮಾರ್ಕ್) ಆದೇಶ ನೀಡಿತ್ತು.

ಇದರಿಂದ ಹತಾಶರಾದ ಸಂಘದವರು ಜ. 4ರಂದು ಪ್ರಧಾನ ಕಾರ್ಯದರ್ಶಿಗಳಿಂದ ತಡೆ ಆಜ್ಞೆ ಮಾಡಿಸಿದರು. ಆದರೆ ಸಹಕಾರ ಕಾಯಿದೆಯಲ್ಲಿ ಹೀಗೆ ತಡೆಯಾಜ್ಞೆ ನೀಡಲು ಪ್ರದಾನ ಕಾರ್ಯದರ್ಶಿಗಳಿಗೆ ಯಾವುದೇ ಅಧಿಕಾರವಿರುವುದಿಲ್ಲ. ಸಹಕಾರ ಕಾನೂನು ಮತ್ತು ನಿಯಮಗಳ ಅನ್ವಯ ಶಿವಳ್ಳಿ ಸಂಘದ ಚುಣಾವಣೆ ಜರುಗಿಸಲು ಸ್ಪಷ್ಟವಾದ ಹೈಕೋರ್ಟ್ ಆದೇಶ ಇದ್ದರೂ ಸಹ, ಇದಕ್ಕೆ ವ್ಯತಿರಿಕ್ತವಾಗಿ ಕಾನೂನು, ನಿಯಮಗಳ ಬಾಹಿರವಾಗಿ ಮೇ 14 ರಂದು ಡಿ.ಆರ್.ಸಿ.ಎಸ್ ಅವರು ಚುಣಾವಣೆ ಜರುಗಿಸಲು ಸಂಘದ ಆಡಳಿತಾಧಿಕಾರಿ ಅವರನ್ನು ಚುಣಾವಣಾಧಿಕಾರಿ ಅಂತ ನೇಮಕ ಮಾಡಿರುತ್ತಾರೆ. ಇಲ್ಲದೆ ಹೋದಲ್ಲಿ ಮುಂದಿನ ದಿನಮಾನಗಳಲ್ಲಿ ಉಗ್ರ ಹೋರಾಟ ಅನಿವಾರ್ಯವಾಗುತ್ತದೆ ಎಂದು ಧಾರವಾಡದ ಬ್ಲಾಕ್ ಕಾಂಗ್ರೆಸ್ ಧಾರವಾಡ ಅಧ್ಯಕ್ಷ, ಅರವಿಂದ ಏಗನಗೌಡರ ಎಚ್ಚರಿಕೆ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಪುರಸಭೆ ಮುಖ್ಯಾಧಿಕಾರಿ ಅಧಿಕಾರಿ ಸ್ವೀಕಾರ

ಮುದಗಲ್: ಪಟ್ಟಣದ ಸಾರ್ವಜನಿಕರಿಗೆ ಬಹುದಿನಗಳ ಸಮಸ್ಯೆಯಾಗಿರುವ ಕುಡಿಯುವ ನೀರು ಸೇರಿದಂತೆ

ಮೂಲ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ನೂತನ ಮುಖ್ಯಾಧಿಕಾರಿ ಪ್ರವೀಣ ಬೋಗಾರ ಹೇಳಿದರು. ಪುರಸಭೆ ಕಾರ್ಯಾಲಯದಲ್ಲಿ ಅಧಿಕಾರ ಸ್ವೀಕರಿಸಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈಗಾಗಲೇ ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಕರ್ಯಗಳ ಕುರಿತು ಸಿಬ್ಬಂದಿಗಳ ಜೊತೆ ಸಭೆ ನಡೆಸಿ ಚರ್ಚಿಸಿದ್ದು, ಸಮಸ್ಯೆಗಳ ಕುರಿತು ನನ್ನ ಗಮನಕ್ಕೆ ತಂದಿದ್ದಾರೆ. ಸಾರ್ವಜನಿಕರಿಗೆ ಕುಡಿಯುವ ನೀರು ಹಾಗೂ ಖಾತಾ ನಕಲು ಸೇರಿದಂತೆ ಇತರೆ ಕೆಲಸಗಳಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಸೈನಿಕರ ಜತೆ ನಾವು ಎಂಬ ರವಾನೆ

ಲಿಂಗಸೂಗೂರು: ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂಧೂರ ಯಶಸ್ವಿಗೊಳಿಸಿದ ನಮ್ಮ ದೇಶದ ಹೆಮ್ಮೆಯ ಸೈನಿಕರಿ ಗಾಗಿ ರಾಷ್ಟ್ರೀಯ ಭದ್ರತೆಗಾಗಿ ನಾಗರಿ ಕರು ಎಂಬ ಸಂದೇಶದ ತಿರಂಗ ಯಾತ್ರೆಯನ್ನು ಶಾಸಕ ಮಾನಪ್ಪ ವಜ್ಜಲ್ ನೇತೃತ್ವದಲ್ಲಿ ಜರುಗಿತು. ಕುಟುಂಬಸ್ಥರೊಂದಿಗೆ ಪ್ರವಾಸಕ್ಕೆ ಹೋಗಿದ್ದ ಅಮಾಯಕ ಪ್ರವಾಸಿಗರನ್ನು ಕೊಂದ ಉಗ್ರರಿಗೆ ದೇಶದ ಸೈನಿಕರು ತಕ್ಕ ಉತ್ತರವನ್ನು ನೀಡಿದ್ದಾರೆ. ಹೆಣ್ಣು ಮಕ್ಕಳ ಸಿಂಧೂರ ಕಸಿದ ಉಗ್ರರನ್ನು, ಆಪರೇಷನ್ ಸಿಂಧೂರ ಹೆಸರಲ್ಲಿ ದಾಳಿ ಮಾಡಿ ಹಂತಕ ಉಗ್ರರನ್ನು ಸದೆ ಬಡಿದ್ದಿದ್ದಾರೆ. ಇದರ ನೇತೃತ್ವವನ್ನು ಹೆಣ್ಣು ಮಕ್ಕಳಿಗೆ ಕೊಟ್ಟು ಭಾರತದ ನಾರಿಯರ ಶಕ್ತಿ ಏನು ಎಂಬ ಸಂದೇಶವನ್ನು ಪ್ರಪಂಚಕ್ಕೆ ನೀಡಿದ್ದಾರೆ. ಪಾಕಿಸ್ತಾನ ಅಮೇರಿಕವನ್ನು ಮಧ್ಯಸ್ತಿಕೆ ವಹಿಸಿ ಯುದ್ಧ ನಿಲ್ಲಿಸುವಂತೆ ಹೇಳಿ ಎಂದು ಅಂಗಲಾಚಿ ಬೇಡಿಕೊಂದಿದ್ದರಿಂದ, ಸುಮಾರು ಸಲ ಅಮೇರಿಕ ಅಧ್ಯಕ್ಷ ನಮ್ಮ ದೇಶದ ಪ್ರಧಾನಿ ಅವರ ಹತ್ತಿರ ಮಾತನಾಡಿ ಕೆಲವು ಷರತ್ತುಗಳೊಂದಿಗೆ ಯುದ್ಧವನ್ನು ನಿಲ್ಲಿಸಿದ್ದಾರೆ. ಪಾಕಿಸ್ತಾನ, ಪಾಕಿಸ್ತಾನದ ಜನರು ನಮ್ಮ ಗುರಿಯಲ್ಲ. ಯಾವುದೇ ಕಾರಣಕ್ಕೂ ಉಗ್ರರನ್ನು ನಾವು ಬಿಡುವುದಿಲ್ಲ ಎಂಬ ಸ್ಪಷ್ಟ ಎಚ್ಚರಿಕೆಯನ್ನು ನಮ್ಮ ಪ್ರಧಾನ ಮಂತ್ರಿಗಳು ಕೊಟ್ಟಿದ್ದಾರೆ ಎಂದು ಹೇಳಿದರು. ಪಟ್ಟಣದ ದೊಡ್ಡ ಅಂಜನಯ್ಯ ದೇವಸ್ಥಾನದಿಂದ ರಾಯ ಚೂರು ರಸ್ತೆಯ ಲಕ್ಷ್ಮಿ ಗುಡಿಯವರೆಗೆ ನಡೆದ ಯಾತ್ರೆಯಲ್ಲಿ ವಿವಿಧ ಕಾಲೇಜು ಗಳ ವಿದ್ಯಾರ್ಥಿ ಗಳು.... ತ್ರಿವರ್ಣ ಧ್ವಜ ವನ್ನು ಹಿಡಿದು ದೇಶದ ಪರ ಘೋಷಣೆ ಗಳನ್ನು ಕೂಗುತ್ತ ಉತ್ಸಾಹದಿಂದ ಪಾಲ್ಗೊಂಡಿದ್ದರು. ಯಾತ್ರೆಯಲ್ಲಿ ಮಾಜಿ ಸೈನಿಕರು, ವಿವಿಧ ಕಾಲೇಜುಗಳ ಸಿಬ್ಬಂದಿಗಳು, ರಾಜಕೀಯ ಮುಖಂಡರು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಲಾರಿಗೆ ಬೈಕ್ ಡಿಕ್ಕಿ : ಸವಾರ ಸಾವು

ಪುತ್ತೂರು: ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಶಾಮಿಯಾನದ ಲಾರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನಪ್ಪಿದ ಘಟನೆ ಮೇ 18ರ ರಾತ್ರಿ ನಡೆದಿದೆ. ಮೃತರನ್ನು ಬೈಕ್ ಸವಾರ ಕುಂಜೂರುಪಂಜ ಸಮೀಪದ ಸುದೀಪ್ ಚೊಕ್ಕಾಡಿ ಎಂದು ಗುರುತಿಸಲಾಗಿದೆ.
ಪುತ್ತೂರು ಬೈಪಾಸ್ ರಸ್ತೆ ಮಾಣಿ ಮೈಸೂರು ರಾಷ್ಟ್ರೀಯ ಹೆದ್ದಾರಿ ಉರ್ಲಾಂಡಿಯಲ್ಲಿ ರಸ್ತೆ ಪಕ್ಕದಲ್ಲಿ ನಿಂತಿದ್ದ ಶಾಮೀಯಾನದ ಲಾರಿಗೆ ಬೈಕ್ ಡಿಕ್ಕಿಯಾಗಿದೆ. ಬೈಕ್ ಸವಾರ ಸುದೀಪ್ ಚೊಕ್ಕಾಡಿ ಮಚ್ಚಿಮಲೆ ಮನೆಯಿಂದ ನೇರಳಕಟ್ಟೆ ತಂಗಿ ಮನೆಗೆ ಬೈಕ್ ನಲ್ಲಿ ಹೋಗುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಸುದೀಪ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂಧಿಸದೆ ಮೃತಪಟ್ಟಿದ್ದಾರೆ.
ಪುತ್ತೂರು ನಗರ ಸಂಚಾರಿ ಠಾಣೆಯ ಪೊಲೀಸರು ಘಟನ ಸ್ಥಳಕ್ಕೆ ಬಂದು ಪರಿಶೀಲಿಸಿ ದೂರು ದಾಖಲಿಸಿದ್ದಾರೆ

ಸಂಕಲ್ಪ ಸಮಾವೇಶ ಬೃಹತ್ ಬೈಕ್ ರ‍್ಯಾಲಿ

ಹೊಸಪೇಟೆ: ಪ್ರಗತಿಯತ್ತ ಕರ್ನಾಟಕ – ಸಮರ್ಪಣೆ ಸಂಕಲ್ಪ ಎರಡು ವರ್ಷಗಳ ಜನಪರ ಸಾಧನೆಯ ಸಮರ್ಪಣೆ ಮತ್ತಷ್ಟು ಜನಪರ ಸೇವೆಯ ಪ್ರತಿಜ್ಞೆ ಎಂಬ ಧ್ಯೇಯವಾಕ್ಯದಡಿ ಒಂದು ಲಕ್ಷ ಕುಟುಂಬಗಳಿಗೆ ನೆಮ್ಮದಿ ಕಂದಾಯ ಗ್ರಾಮ ಹಕ್ಕು ಪತ್ರ ವಿತರಣೆ ಕಾರ್ಯಕ್ರಮ ನಿಮಿತ್ತವಾಗಿ ಬೈಕ್ ರ‍್ಯಾಲಿಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ಚಾಲನೆ ನೀಡುವ ಮೂಲಕ ರ‍್ಯಾಲಿಯಲ್ಲಿ ಭಾಗವಹಿಸಿದರು. ನಗರದ ಜಿಲ್ಲಾ ಕ್ರೀಡಾಂಗಣದಿಂದ ಆರಂಭವಾದ ಬೈಕ್ ರ‍್ಯಾಲಿ, ಬಾಬು ಜಗಜೀವನರಾಂ ವೃತ್ತ, ಡಾ.ಪುನೀತ್ ರಾಜಕುಮಾರ ವೃತ್ತ ಸೇರಿದಂತೆ ವಿವಿಧ ಪ್ರಮುಖ ಬೀದಿಗಳ ಮೂಲಕ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಮಾರ್ಗವಾಗಿ ಗಾಂಧಿ ಚೌಕ್‌ವರೆಗೆ ನಡೆಸಲಾಯಿತು. ರ‍್ಯಾಲಿಯಲ್ಲಿ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ. ಜೆಡ್.ಜಮೀರ್ ಅಹ್ಮದ್ ಖಾನ್, ಲೋಕಸಭಾ ಸದಸ್ಯ ಈ.ತುಕಾರಾಮ್, ಹೊಸಪೇಟೆ ಶಾಸಕ ಹೆಚ್.ಆರ್. ಗವಿಯಪ್ಪ, ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ಕಂಪ್ಲಿ ಶಾಸಕ ಜೆ.ಗಣೇಶ್, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ ಸೇರಿದಂತೆ ನೂರಾರು ಯುವಕರು ಭಾಗವಹಿಸಿದ್ದರು.

CHANGE OF NAME
I, **SAHIRABANU SHAIKH** (Old Name) have changed my name and shall hereafter be known as **SAYARA BANU BAKSAR HATALSAB BEPARI** (New Name) R/o Heblikar Plot No.05, Doddanayakankoppa, Dharwad-580008 Vide affidavit sworn before notary Somannavar B.N at Dharwad on 19/05/2025.

2 ವರ್ಷಗಳ ಸಾಧನೆ ಅನಾವರಣ | ಜನಪರ ಸೇವೆಗೆ ಪ್ರತಿಜ್ಞೆ | ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ವಿತರಣೆ

ವಿಜಯನಗರದಲ್ಲಿ ಸಾಧನಾ ಸಮಾವೇಶ ಇಂದು

ಹೊಸಪೇಟೆ: ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದು ಮೇ 20ಕ್ಕೆ ಎರಡು ವರ್ಷ ಪೂರ್ಣಗೊಳ್ಳಲಿದೆ. ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ ವಾಗ್ದಾನದಂತೆ ಸರಕಾರ ರಚನೆ ನಂತರದ ಮೊದಲ ಸಚಿವ ಸಂಪುಟದಲ್ಲಿಯೇ ಐದು ಗ್ಯಾರಂಟಿ ಯೋಜನೆಗಳನು ಅನುಷ್ಠಾನಕ್ಕೆ ತಾತ್ವಿಕ ಅನುಮೋದನೆ ನೀಡಲಾಗಿತ್ತು.

ಹಂತ ಹಂತವಾಗಿ ಐದು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ದೇಶದ ಇತರೆ ರಾಜ್ಯಗಳಿಗೂ ಮಾದರಿಯಾಗಿದೆ. ಜಾತಿ, ಧರ್ಮದ ಭೇಧವಿಲ್ಲದೆ ನಾಡಿನ ಎಲ್ಲ ಜನರ ಮನೆ ಮನೆಗಳಿಗೆ ಯೋಜನೆಗಳು ತಲುಪಿವೆ.

ಸರಕಾರ ಈ ಐತಿಹಾಸಿಕ ಸಾಧನೆಯನ್ನು ಸ್ಮರಣೀಯವಾಗಿಸಲು ಕಂದಾಯ ಇಲಾಖೆ ಮತ್ತು ವಿಜಯನಗರ ಜಿಲ್ಲಾಡಳಿತದಿಂದ

ಪ್ರಗತಿಯತ್ತ ಕರ್ನಾಟಕ ಸಮರ್ಪಣೆ ಸಂಕಲ್ಪ ಎಂಬ ಸಮಾವೇಶ ನಡೆಯಲಿದೆ. ಒಂದು ಲಕ್ಷ ಕುಟುಂಬಗಳಿಗೆ ಕಂದಾಯ ಗ್ರಾಮ ಹಕ್ಕು ಪತ್ರ ಸಮರ್ಪಣೆ ನೆಮ್ಮದಿ ಕಲ್ಪಿಸಲಾಗುತ್ತಿದೆ. ಎರಡು ವರ್ಷಗಳ ಸಾಧನೆಯನ್ನು ನಾಡಿನ ಜನರಿಗೆ ಸಮರ್ಪಣೆ ಮಾಡುವುದರೊಂದಿಗೆ ಮತ್ತಷ್ಟು ಜನಪರ ಸೇವೆಯ ಪ್ರತಿಜ್ಞೆಯನ್ನು ಈ ಸಂದರ್ಭದಲ್ಲಿ ಕೈಗೊಳ್ಳಲಾಗುವುದು.

ಜಿಲ್ಲಾ ಕ್ರೀಡಾಂಗಣ ಸಜ್ಜು:

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಜರುಗುವ ಕಾರ್ಯಕ್ರಮದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡುವರು. ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಮಾವೇಶದ ಅಧ್ಯಕ್ಷತೆ ವಹಿಸಲಿದ್ದಾರೆ.

ಗಣ್ಯರ ದಂಡು:

ಮುಖ್ಯ ಅತಿಥಿಗಳಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸರಕಾರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಆಹಾರ/ ಇಂಧನ ಸಚಿವ ಪ್ರಹ್ಲಾದ್ ಜೋಶಿ, ಜಲಶಕ್ತಿ/ರೈಲ್ವೆ ಸಚಿವ ವಿ.ಸೋಮಣ್ಣ, ಮಧ್ಯಮ ಕೈಗಾರಿಕೆ/ಕಾರ್ಮಿಕ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯ ವಿಧಾನಸಭೆಯ ವಿಪಕ್ಷ ನಾಯಕ ಆರ್.ಅಶೋಕ್, ವಿಧಾನ ಪರಿಷತ್ ನಾಯಕ ಛಲವಾದಿ ನಾರಾಯಣ ಸ್ವಾಮಿ ಭಾಗವಹಿಸುವರು.

ಪ್ರಿಯಾಂಕ ವಾದ್ರಾ :

ಲೋಕಸಭೆ ಸಂಸದರಾದ ಕೆ.ಸಿ.ವೇಣುಗೋಪಾಲ, ಪ್ರಿಯಾಂಕ ಗಾಂಧಿ ವಾದ್ರ, ರಾಜ್ಯ ಸಭೆ ಸಂಸದ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯ ಸರಕಾರದ ವಸತಿ, ವಕ್ಫ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಹಾಗೂ ವಿಜಯನಗರ ಕ್ಷೇತ್ರ ಶಾಸಕ ಹೆಚ್.ಆರ್.ಗವಿಯಪ್ಪ ಉಪಸ್ಥಿತರಿರಲಿದ್ದಾರೆ.

ಸಚಿವರ ತಂಡ:

ವಿಶೇಷ ಆಹ್ವಾನಿತರಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ, ಕಾನೂನು ಸಚಿವ ಹೆಚ್.ಕೆ.ಪಾಟೀಲ್, ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಇಂಧನ ಸಚಿವ ಕೆ.ಜಾರ್ಜ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಜವಳಿ,ಸಕ್ಕರೆ ಸಚಿವ ಶಿವಾನಂದ ಎಸ್.ಪಾಟೀಲ್, ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ, ಅರಣ್ಯ ಸಚಿವ ಈಶ್ವರ್ ಖಂಡ್ರೆ, ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ಗಣಿ, ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಹಜ್ ಹಾಗೂ ಪೌರಾಡಳಿತ ಸಚಿವ ರಹೀಂಖಾನ್, ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ, ರೇಷ್ಮೆ ಸಚಿವ ಕೆ.ವಿ.ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಸಾಂಖ್ಯಿಕ ಸಚಿವ ಡಿ.ಸುಧಾಕರ್, ಸಹಕಾರ ಸಚಿವ ಕೆ.ಎನ್.ರಾಜಣ್ಣ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಮೀನುಗಾರಿಕೆ ಸಚಿವ ಮಂಕಾಳ್ ವೈದ್ಯ, ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಆಗಮಿಸಲಿದ್ದಾರೆ.

ಹೊಸಪೇಟೆಯಲ್ಲಿ ಸಾಧನಾ ಸಮಾವೇಶಕ್ಕೆ ಸಜ್ಜಾಗಿರುವ ಬೃಹತ್ ವೇದಿಕೆ.

ಬೆಳಗ್ಗೆ 11.30ಕ್ಕೆ ಹೊಸಪೇಟೆ ಹೆಲಿಪ್ಯಾಡ್‌ಗೆ ಸಿಎಂ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 20ರಂದು ಹೊಸಪೇಟೆ ನಗರಕ್ಕೆ ಆಗಮಿಸಲಿದ್ದು, ಕಂದಾಯ ಇಲಾಖೆ ಮತ್ತು ವಿಜಯನಗರ ಜಿಲ್ಲಾಡಳಿತ ಆಯೋಜಿಸಿದ ಪ್ರಗತಿಯತ್ತ ಕರ್ನಾಟಕ ಸಮರ್ಪಣೆ ಸಂಕಲ್ಪ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಬೆಳಿಗ್ಗೆ 9 ಗಂಟೆಗೆ ಬೆಂಗಳೂರಿನಿಂದ ವಿಶೇಷ ವಿಮಾನದ ಮೂಲಕ ಹೊರಡುವ ಅವರು, 9.50 ಕ್ಕೆ ತೋರಣಗಲ್ಲಿನ ಜಿಂದಾಲ್ ಏರ್‌ಸ್ಟ್ರೀಪ್‌ಗೆ ಆಗಮಿಸುವರು. 11:30ಕ್ಕೆ ಹೊಸಪೇಟೆ ನಗರದ ಭಟ್ಟರಹಳ್ಳಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದ ಹೆಲಿಪ್ಯಾಡ್‌ಗೆ ಬಂದಿಳಿಯುವರು. ನಂತರ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿನ ಸಾಧನಾ ಸಮಾವೇಶದ ಅಧ್ಯಕ್ಷತೆ ವಹಿಸಲಿದ್ದಾರೆ. ನಂತರ 3.20ಕ್ಕೆ ವಿಶೇಷ ವಿಮಾನದಲ್ಲಿ ಹೆಚ್ಎಎಲ್ ವಿಮಾನ ನಿಲ್ದಾಣ ತಲುಪಲಿದ್ದಾರೆ.

ಲೋಕಸಭಾ ಸದಸ್ಯರಾದ ಈ.ತುಕಾರಾಮ್, ಡಾ.ಪ್ರಭಾ ಮಲ್ಲಿಕಾರ್ಜುನ್, ಹಗರಿಬೊಮ್ಮನಹಳ್ಳಿ ಶಾಸಕ ಕೆ.ನೇಮಿರಾಜ ನಾಯ್ಕ್, ಕೂಡ್ಲಿಗಿ ಶಾಸಕ ಡಾ.ಶ್ರೀನಿವಾಸ.ಎನ್.ಟಿ., ಹಡಗಲಿ ಶಾಸಕ ಕೃಷ್ಣನಾಯ್ಕ್, ಹರಪನಹಳ್ಳಿ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್, ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ್, ವೈ.ಎಂ.ಸತೀಶ್, ಶಶೀಲ್.ಜಿ.ನಮೋಶಿ, ಹೊಸಪೇಟೆ ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್.ಎನ್, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎನ್.ಎಫ್.ಇಮಾಮ್ ನಿಯಾಜಿ, ಕರ್ನಾಟಕ ಹಾಲು ಒಕ್ಕೂಟ ಅಧ್ಯಕ್ಷ ಭೀಮಾನಾಯ್ಕ್ ಗೌರವ ಉಪಸ್ಥಿತರಿರುವರು.

ರಾಜ್ಯ ಸರಕಾರ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಗೌರವ ಆಹ್ವಾನಿತರಾಗಿ ಭಾಗವಹಿಸುವರು.

ವಿಜಯನಗರ ನೆಲದಲ್ಲಿ ಸಮರ್ಪಣೆ ಸಮಾವೇಶ

ಅನಂತ ಪದ್ಮನಾಭ ರಾವ್ ಹೊಸಪೇಟೆ

ರಾಜ್ಯ ಸರಕಾರದ ಎರಡು ವರ್ಷಗಳ ಸಾಧನೆಗಳನ್ನು ಬಿಂಬಿಸುವ 'ಸಮರ್ಪಣೆ ಸಂಕಲ್ಪ ಸಮಾವೇಶಕ್ಕೆ ನಗರದ ಜಿಲ್ಲಾ ಕ್ರ?ಡಾಂಗಣದಲ್ಲಿ ಭವ್ಯ ವೇದಿಕೆ ನಿರ್ಮಾಣ ಪೂರ್ಣಗೊಂಡಿದ್ದು ಐತಿಹಾಸಿ ಸಮಾವೇಶದ ಉದ್ಘಾಟನೆಗೆ ಕ್ಷಣಗಣನೆ.

ಹೌದು, ವಿಜಯನಗರ ನೆಲದಿಂದ ಕೈಗೊಳ್ಳುವ ಕಾರ್ಯ ಸದಾ ವಿಜಯವಾಗಲಿದೆ ಎಂಬ ದೃಢವಾದ ವಿಶ್ವಾಸದೊಂದಿಗೆ ಸಿಎಂ ಸಿದ್ಧರಾಮಯ್ಯ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದು 2 ವರ್ಷ ಪೂರ್ಣಗೊಳ್ಳುವ ನಿಮಿತ್ತ ಸಮರ್ಪಣೆ ಸಂಕಲ್ಪ ಶೀರ್ಷಿಕೆ ಅಡಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಇದ್ದಕ್ಕಾಗಿ ಕಳೆದ ಹಲವು ದಿನಗಳಿಂದ ಸಿಎಂ, ಡಿಸಿಎಂ ಸೇರಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್, ಶಾಸಕ ಗವಿಯಪ್ಪ, ಸಚಿವ ಕೃಷ್ಣಾಬೈರೆಗೌಡ ಸಮಾವೇಶ ಸಿದ್ಧತೆ ಯಶಸ್ಸಿಗಾಗಿ ಟೊಂಕಕಟ್ಟಿ ನಿಂತಿದ್ದು ಎಐಸಿಸಿ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ರಾಷ್ಟ್ರೀಯ ನಾಯಕರ ಸ್ವಾಗತಕ್ಕೆ ಭವ್ಯ ವೇದಿಕೆ ಸಕಲ ರೀತಿಯಿಂದಲೂ ಸಿದ್ಧಗೊಂಡಿದೆ.

ಮೇ 20ರಂದು ರಾಜ್ಯದ ಬಹುತೇಕ ಜಿಲ್ಲೆಗಳಿಂದ ಕಾರ್ಯಕರ್ತರು, ಜನರು ಹೊಸಪೇಟೆಯತ್ತ ಸಾಗಲಿದ್ದು ಸಮಾವೇಶ ಮಹತ್ವ ಪಡೆದಿದೆ.

ಬೈಕ್ ರ‍್ಯಾಲಿ ಚಾಲನೆ

ಪ್ರಗತಿಯತ್ತ ಕರ್ನಾಟಕ – ಸಮರ್ಪಣೆ ಸಂಕಲ್ಪ ಎರಡು ವರ್ಷಗಳ ಜನಪರ ಸಾಧನೆಯ ಸಮರ್ಪಣೆ ಮತ್ತಷ್ಟು ಜನಪರ ಸೇವೆಯ ಪ್ರತಿಜ್ಞೆ ಎಂಬ ಧ್ಯೇಯವಾಕ್ಯದಡಿ ಒಂದು ಲಕ್ಷ ಕುಟುಂಬಗಳಿಗೆ ನೆಮ್ಮದಿ ಕಂದಾಯ ಗ್ರಾಮ ಹಕ್ಕು ಪತ್ರ ವಿತರಣೆ ಕಾರ್ಯಕ್ರಮ ನಿಮಿತ್ತವಾಗಿ ಬೈಕ್ ರ‍್ಯಾಲಿಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೋಮವಾರ ಚಾಲನೆ ನೀಡುವ ಮೂಲಕ ರ‍್ಯಾಲಿಯಲ್ಲಿ ಭಾಗವಹಿಸಿದರು.

ಈ ಭಾಗದಲ್ಲಿ ಹೆಚ್ಚು ಬಿಸಿಲು ಇರುವುದರಿಂದ ನೆರಳಿನ ವ್ಯವಸ್ಥೆ ಕಲ್ಪಿಸಲು ಸುಸಜ್ಜಿತ ಜರ್ಮನ್ ಟೆಂಟ್ ನಿರ್ಮಿಸಲಾಗುತ್ತಿದೆ. ಬೆಂಗಳೂರಿನ ಉಡುಪಾಸ್ ಸಂಸ್ಥೆಯವರು ವೇದಿಕೆ ನಿರ್ಮಿಸುತ್ತಿದ್ದಾರೆ. ಪ್ರಧಾನ ವೇದಿಕೆ ಜತೆಗೆ ಇನ್ನೂ ಎರಡು ಕಿರು ವೇದಿಕೆಗಳನ್ನು ನಿರ್ಮಿಸಲಾಗುತ್ತಿದೆ. 200 ಅಡಿ ಅಗಲ, 70 ಅಡಿ ಉದ್ದದ ಪ್ರಧಾನ ವೇದಿಕೆಯಲ್ಲಿ 300 ಗಣ್ಯರಿಗೆ ಆಸನದ ವ್ಯವಸ್ಥೆ ಮಾಡಲಾಗುತ್ತಿದೆ. ಮೊದಲ ಕಿರು ವೇದಿಕೆಯಲ್ಲಿ 50 ಮಾಜಿ ಸಚಿವರಿಗೆ ವೇದಿಕೆ ಕಲ್ಪಿಸಲಾಗುತ್ತಿದೆ. ಇನ್ನೊಂದರಲ್ಲಿ ನಿಗಮ ಮಂಡಳಿಗಳ ಅಧ್ಯಕ್ಷರು ಹಾಗೂ ಪಕ್ಷದ ಪ್ರಮುಖ 50 ಗಣ್ಯರಿಗೆ ಆಸನದ ವ್ಯವಸ್ಥೆ ಕಲ್ಪಿಸಲಾಗುತ್ತದೆ.

ರಾಜ್ಯದ ಮೂಲೆ ಮೂಲೆಯಿಂದ ಆಗಮಿಸುವ ಜನರಿಗೆ 1 ಲಕ್ಷದ 50 ಸಾವಿರ ಆಸನಗಳ ವ್ಯವಸ್ಥೆ ಕಲ್ಪಿಸಲಾಗಿದೆ. 50 ಸಾವಿರ ಕುರ್ಚಿಗಳನ್ನು ಹೆಚ್ಚುವರಿಯಾಗಿ ತರಿಸಲಾಗಿದೆ. ಕ್ರಿ?ಡಾಂಗಣದ ಅಕ್ಕಪಕ್ಕದ ರಸ್ತೆಯಲ್ಲೂ ಎಲ್ಇಡಿ ಪರದೆ ವ್ಯವಸ್ಥೆ ಮಾಡಲಾಗುತ್ತಿದೆ. ಭೋಜನದ ವ್ಯವಸ್ಥೆಗಾಗಿ

ಪ್ರಗತಿಯತ್ತ ಕರ್ನಾಟಕ ಸಂಕಲ್ಪ

ಸರಕಾರ ಈ ಐತಿಹಾಸಿಕ ಸಾಧನೆಯನ್ನು ಸ್ಮರಣೀಯವಾಗಿಸುವ ನಿಟ್ಟಿನಲ್ಲಿ ಮೇ.20 ರಂದು ಕಂದಾಯ ಇಲಾಖೆ ಮತ್ತು ವಿಜಯನಗರ ಜಿಲ್ಲಾಡಳಿತದ ವತಿಯಿಂದ ಪ್ರಗತಿಯತ್ತ ಕರ್ನಾಟಕ ಸಮರ್ಪಣೆ ಸಂಕಲ್ಪ ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಒಂದು ಲಕ್ಷ ಕುಟುಂಬಗಳಿಗೆ ಕಂದಾಯ ಗ್ರಾಮ ಹಕ್ಕು ಪತ್ರ ಸಮರ್ಪಣೆ ಮಾಡುವುದರೊಂದಿಗೆ ನೆಮ್ಮದಿ ಕಲ್ಪಿಸಲಾಗುತ್ತಿದೆ. ಎರಡು ವರ್ಷಗಳ ಸಾಧನೆಯನ್ನು ನಾಡಿನ ಜನರಿಗೆ ಸಮರ್ಪಣೆ ಮಾಡುವುದರೊಂದಿಗೆ ಮತ್ತಷ್ಟು ಜನಪರ ಸೇವೆಯ ಪ್ರತಿಜ್ಞೆಯನ್ನು ಈ ಸಂದರ್ಭದಲ್ಲಿ ಕೈಗೊಳ್ಳಲಾಗುವುದು.

ಟೆಂಟ್‌ಗಳನ್ನು ನಿರ್ಮಿಸಿ ಕೌಂಟರ್‌ಗಳನ್ನು ತೆರೆಯಲಾಗುತ್ತಿದೆ. ಈ ಭವ್ಯ ವೇದಿಕೆಯ ಅಕ್ಕಪಕ್ಕ ಹಾಗೂ ಹೊರಗೆ ಹಂಪಿ ಸ್ಮಾರಕಗಳನ್ನು ಹೋಲುವ ಕಂಬಗಳ ಮಾದರಿ ಬಳಸಲಾಗುತ್ತಿದೆ.

ಸಮಾವೇಶಕ್ಕೆ ವಿಜಯನಗರ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಕೊಪ್ಪಳ, ರಾಯಚೂರು ಭಾಗಗಳಿಂದ ಹೆಚ್ಚಿನ ಜನರು ಬರಲಿದ್ದಾರೆ. ಜನರನ್ನು ಕರೆತರಲು 3,700 ಸಾರಿಗೆ ಬಸ್, ಸ್ವಂತ ಖರ್ಚಿನಲ್ಲಿ 2000 ಬಸ್ ಸೇರಿ 10 ಸಾವಿರಕ್ಕೂ ಅಧಿಕ ವಾಹನಗಳನ್ನು ಮೀಸಲಿಡಲಾಗಿದೆ. ಜನರಿಗೆ ಐದು ಲಕ್ಷ ಪ್ಯಾಕೆಟ್ ನೀರು, ಮೂರು ಲಕ್ಷ ಪ್ಯಾಕೆಟ್ ಮಜ್ಜಿಗೆ, ಎರಡು ಲಕ್ಷ ಜನರಿಗೆ ಊಟ ಹಾಗೂ ಹೆಚ್ಚುವರಿ 50 ಸಾವಿರ ಜನರಿಗೆ ಊಟದ ವ್ಯವಸ್ಥೆ ಕೈಗೊಳ್ಳಲಾಗಿದೆ.

ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ ವಾಗ್ದಾನದಂತೆ ಸರ್ಕಾರ ರಚನೆ ನಂತರದ ಮೊದಲ ಸಚಿವ ಸಂಪುಟದಲ್ಲಿಯೇ ಐದು ಗ್ಯಾರಂಟಿ ಯೋಜನೆಗಳನು ಅನುಷ್ಠಾನಕ್ಕೆ ತಾತ್ವಿಕ ಅನುಮೋದನೆ ನೀಡಲಾಗಿತ್ತು.

ಹಂತ ಹಂತವಾಗಿ ಐದು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ದೇಶದ ಇತರೆ ರಾಜ್ಯಗಳಿಗೂ ಮಾದರಿಯಾಗಿದೆ. ಜಾತಿ, ಧರ್ಮ, ಭಾಷೆಯ ಭೇಧವಿಲ್ಲದೆ ನಾಡಿನ ಎಲ್ಲ ಜನರ ಮನೆ ಮನೆಗಳಿಗೆ ಯೋಜನೆಗಳು ತಲುಪಿವೆ. ಪ್ರಗತಿಯತ್ತ ಕರ್ನಾಟಕ ರಾಜ್ಯ ಮುನ್ನಡೆದಿದೆ.

ಹೊಸಪೇಟೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಜರುಗುವ ಕಾರ್ಯಕ್ರಮದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡುವರು. ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಮಾವೇಶದ ಅಧ್ಯಕ್ಷತೆ ವಹಿಸಲಿದ್ದಾರೆ.

ಬಾಲಕಿ ಕೊಲೆ ಪ್ರಕರಣ: ತನಿಖೆಗೆ ಆಗ್ರಹ

ಕೊಪ್ಪಳ: ಬೆಂಗಳೂರಿನ ಬಿಡದಿ ಬಳಿ 14 ವರ್ಷದ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿರುವ ಪ್ರಕರಣದ ಸಮಗ್ರ ತನಿಖೆಗೆ ಆಗ್ರಹಿಸಿ, ನಗರದ ತಹಸೀಲ್ದಾರ್ ಕಚೇರಿ ಮುಂದೆ ಎಸ್ಎಫ್ಐ ಸಂಘಟನೆ ನೇತೃತ್ವದಲ್ಲಿ ವಿದ್ಯಾರ್ಥಿಗಳು ಸೋಮವಾರ ಪ್ರತಿಭಟಿಸಿದರು.

ನಗರದ ತಹಸೀಲ್ದಾರ್ ಕಚೇರಿ ಬಳಿ ಜಮಾಯಿಸಿದ ನೂರಾರು ವಿದ್ಯಾರ್ಥಿನಿಯರು, ಸೂಕ್ತ ತನಿಖೆಗೆ ಆಗ್ರಹಿಸಿ ಘೋಷಣೆ ಕೂಗಿದರು. ಕೂಡಲೇ ರಾಜ್ಯ ಸರಕಾರ ಘಟನೆ ಬಗ್ಗೆ ಸಮಗ್ರ ತನಿಖೆ ಮಾಡಬೇಕು ಎಂದು ಆಗ್ರಹಿಸಿದರು. ಕೆಲ ಹೊತ್ತು ಪ್ರತಿಭಟನೆ ನಡೆಸಿ, ತಹಸೀಲ್ದಾರ್ ವಿಠಲ್ ಚೌಗಲ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾಧ್ಯಕ್ಷ ಗ್ಯಾನೇಶ ಕಡಗದ ಮಾತನಾಡಿ, ಬೆಂಗಳೂರು ಬಳಿಯ ಬಿಡದಿಯಲ್ಲಿ 14 ವರ್ಷದ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ, ಹತ್ಯೆ ಮಾಡಲಾಗಿದೆ. ರಾಮನಗರ ಜಿಲ್ಲೆ ಬಿಡದಿಯ ಭದ್ರಾಪುರದಲ್ಲಿ ಕಳೆದ ಮೇ.11 ರಂದು ವಿದ್ಯಾರ್ಥಿನಿ ಕಾಣೆಯಾಗಿದ್ದು, ಪೋಷಕರು ಬಿಡದಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದರೂ, ಪ್ರಕರಣ ದಾಖಲಿಸಿಲ್ಲ. ಬಾಲಕಿ ಹುಡುಕುವ ಪ್ರಯತ್ನ ಮಾಡಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಪೊಲೀಸರ ನಡೆ ಸಾಕಷ್ಟು ಹಲವಾರು ಪ್ರಶ್ನೆ ಹುಟ್ಟು ಹಾಕಿದೆ. ವಿಚಾರಣೆ ನೆಪದಲ್ಲಿ ವಿದ್ಯಾರ್ಥಿನಿಯರು ಕುಟುಂಬದವರನ್ನು ಗೂಡ್ಸ್ ವಾಹನದಲ್ಲಿ ಕರೆದುಕೊಂಡು ಹೋಗಿದ್ದಾರೆ. ಇದನ್ನು ಪ್ರಶ್ನೆ ಮಾಡಿದ ಸಾರ್ವಜನಿಕರ ಮೇಲೆ ಪೊಲೀಸರು ಹಲ್ಲೆ ಮಾಡಿದ್ದಾರೆ. ಪ್ರಕರಣವನ್ನು ವಿಶೇಷ ತಂಡ ರಚಿಸಿ ಸೂಕ್ತ ತನಿಖೆ ಮಾಡಬೇಕು. ನಿರ್ಲಕ್ಷ್ಯ ವಹಿಸಿರುವ ಪೊಲೀಸರ ಮೇಲೆ ಸೂಕ್ತ ಕ್ರಮ ಜರುಗಿಸಬೇಕು. ಸಾರ್ವಜನಿಕರ ಮೇಲೆ ಹಲ್ಲೆ ಮಾಡಿದ ಪೊಲೀಸರನ್ನು ವಜಾ ಮಾಡಬೇಕು ಅತ್ಯಾಚಾರಿಗಳನ್ನು ತಕ್ಷಣ ಪತ್ತೆ ಮಾಡಬೇಕು. ನಿರ್ಲಕ್ಷ್ಯ ವಹಿಸಿರುವ ಪೊಲೀಸರ ಮೇಲೆ ಸೂಕ್ತ ಕ್ರಮ ಜರುಗಿಸಬೇಕು ಮನವಿಯಲ್ಲಿ ಆಗ್ರಹಿಸಿದ್ದಾರೆ. ಮುಖಂಡರಾದ ಯಮನೂರ, ಅಮರೇಶ ಗುರಿಕಾರ, ಯಲ್ಲಾಲಿಂಗ, ವಿದ್ಯಾರ್ಥಿಗಳಾದ ಸವಿತಾ, ದುರ್ಗಾ, ಕರಿಯಮ್ಮ, ಸುಮಾ, ರಾಜೇಶ್ವರಿ, ಅನಿತಾ ಇದ್ದರು.

ಕೊಪ್ಪಳ ತಹಸೀಲ್ದಾರ್ ಕಚೇರಿ ಮುಂದೆ ಎಸ್ಎಫ್ಐ ಸಂಘಟನೆ ನೇತೃತ್ವದಲ್ಲಿ ವಿದ್ಯಾರ್ಥಿಗಳು ಸೋಮವಾರ ಪ್ರತಿಭಟಿಸಿದರು.

ಬಾಲಕಿ ಮೃತ ದೇಹ ಬಿಡದಿ ರೈಲ್ವೆ ಹಳಿ ಬಳಿ ಪತ್ತೆಯಾಗಿದ್ದು, ಬಾಲಕಿ ದೇಹದ ಮೇಲೆಲ್ಲ ಸಿಗರೇಟನಿಂದ ಸುಟ್ಟು ಗಾಯಗಳಿವೆ ಎಂದು ಹೇಳಲಾಗಿದೆ. ಹೊಡೆದ ಮತ್ತು ಕಚ್ಚಿದ ಗಾಯಗಳು ದೇಹದ ಮೇಲೆ ಕಂಡು ಬಂದಿವೆ. ತಲೆಗೆ ಬಲವಾದ ಪೆಟ್ಟು ಬಿದ್ದಿದೆ. ಕುತ್ತಿಗೆ ಮುರಿದು ಹಾಕಲಾಗಿದ್ದು, ಕಾಲು ತಿರುಚಲ್ಪಟ್ಟದ್ದವು ಎಂದು ಪೋಷರರು ಹೇಳುತ್ತಿದ್ದಾರೆ. ಆದರೆ, ಪೊಲಿಸರು ವಿಚಾರಣೆ ನೆಪದಲ್ಲಿ ಪೋಷಕರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು.
–ಗ್ಯಾನೇಶ ಕಡಗದ, ಜಿಲ್ಲಾಧ್ಯಕ್ಷ

ಸಿಡಿಲು ಬಡಿದು ಎತ್ತು ಸಾವು

ಮುದಗಲ್: ರವಿವಾರ ರಾತ್ರಿ ವೇಳೆ ಬಾರಿ ಮಳೆ ಸಮಯದಲ್ಲಿ ಸಿಡಿಲು ಬಡಿದು ಎತ್ತು ಸಾವನಪ್ಪಿದ ಘಟನೆ ಪಟ್ಟಣ ಸಮೀಪದ ಜಾನತಾಪೂರು ಗ್ರಾಮದಲ್ಲಿ ನಡೆದಿದೆ.

ಜನತಾಪೂರು ಗ್ರಾಮದ ಅಮರಗುಂಡಪ್ಪ ತಿಪ್ಪಣ್ಣ ಎನ್ನುವವರ ಸುಮಾರು 50 ಸಾವಿರ ರುಗಳ ಬೆಲೆ ಎತ್ತಿಗೆ ಸಿಡಿಲು ಬಡಿದು ಸಾವನಪ್ಪಿದೆ ಘಟನಾ ಸ್ಥಳಕ್ಕೆ ನಾಗಲಾಪೂರು ಗ್ರಾಮ ಆಡಳಿತಾಧಿಕಾರಿ ಮಾಬೂಬಸಾಬ ಹಲ್ಕಾವಟಗಿ, ಹಾಗೂ ಪಶು ವೈದ್ಯಾಧಿಕಾರಿ ಡಾ. ಖಾಸಿಂ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ ಸೂಕ್ತ ಪರಿಹಾರ ನೀಡಬೇಕು ಎಂದು ಜನತಾಪೂರು ಗ್ರಾಮಸ್ಥರು ಒತ್ತಾಯಿಸಿದರು.

ಸಮಾವೇಶಕ್ಕೆ ಸಾರಿಗೆ ಬಸ್ ಪರದಾಡಿದ ಪ್ರಯಾಣಿಕರು

ರಾಯಚೂರು: ಹೊಸಪೇಟೆಯಲ್ಲಿ ಮೇ 20 ರಂದು ರಾಜ್ಯ ಸರಕಾರದ ಸಾಧನೆ ಸಮಾವೇಶ ಹಾಗೂ ವಿವಿಧ ಸವಲತ್ತುಗಳ ವಿತರಣಾ ಸಮಾವೇಶ ನಿಮಿತ್ತ ಜಿಲ್ಲೆ ಯಾದ್ಯಂತ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್ಸುಗಳ ವ್ಯತ್ಯಯ ದಿಂದ ಸೋಮವಾರ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಬಸ್‌ಗಳಿಲ್ಲದೆ ಜನರು ಪರದಾಡುವಂತಾಯಿತು.

ನಿತ್ಯ ರಾಯಚೂರು ನಗರದಿಂದ ಸಿಂಧನೂರು, ಮಾನ್ವಿ, ಲಿಂಗಸೂಗೂರು, ದೇವದುರ್ಗ, ಮಂತ್ರಾಲಯ ನಿತ್ಯ ನೂರಾರು ಜನರು ಓಡಾಡುತ್ತಾರೆ. ಆದರೆ, ಬಸ್ ಸಂಖ್ಯೆ ಕಡಿಮೆಯಾಗಿದ್ದರಿಂದ ಇತರೆಡೆಗೆ ತೆರಳಲು ಹೆಚ್ಚು ಪ್ರಯಾಣಿಕರಿದ್ದರೂ, ಸಮರ್ಪಕ ಬಸ್‌ಗಳು ಇಲ್ಲದ ಕಾರಣ ಹಲವರು ಕೆಕೆರ್‌ಟಿಸಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿ ಸುತ್ತಲ್ಲೇ ವಾಪಸ್ ತೆರಳಿದರು. ಬೆರಳೆಣಿಕೆಯ ಷ್ಟು ಬಸ್‌ಗಳೂ ಬಂದರೂ

ನುಕ್ಕುನುಗ್ಗಲು ಉಂಟಾಗಿತ್ತು. ಖಾಸಗಿ ವಾಹನ ಟಾಪ್ ಮೇಲೆ ಕುಳಿತುಕೊಂಡು ಹೋಗುವ ದೃಶ್ಯವೂ ಕಂಡು ಬಂದವು. ಜೊತೆಗೆ ಯಾವ, ಯಾವ ಮಾರ್ಗ ಗಳಿಗೆ ಬಸ್‌ಗಳು ಎಷ್ಟು ಗಂಟೆಗೆ ಬರುತ್ತವೆ ಎಂಬುದರ ಬಗ್ಗೆ ನಿಲ್ದಾಣದ ಬಳಿ ಫಲಕ ಅಳವ ಡಿಸಿದ ಕಾರಣ ಪ್ರಯಾಣಿಕರು ಬಂದ ಬಸ್‌ಗಳತ್ತ ದೌಡಾಯಿಸಿ ವಿಚಾರಿಸುತ್ತಿದ್ದರು. ಬಸ್ ಮಾಹಿತಿ ಕೇಳಲು ನಿಲ್ದಾಣದಲ್ಲಿ ರುವ ಸಿಬ್ಬಂದಿಯನ್ನು ವಿಚಾರಿಸಿದರೆ ಸೌಜನ್ಯದಿಂದ ನಡೆದು ಕೊಳ್ಳುತ್ತಿಲ್ಲ ಕೆಲ ಪ್ರಯಾಣಿಕರು ದೂರಿದರು.

ಕಾಂಗ್ರೆಸ್‌ನಲ್ಲಿ ತಾತ, ಮೊಮ್ಮಗನ ಪೈಪೋಟಿ ತಾರಕಕ್ಕೆ

ಸಿಂಧನೂರು: ಸಿಂಧನೂರು ವಿಧಾನಸಭಾ ಕ್ಷೇತ್ರದ ರಾಜಕೀಯವೇ ವಿಚಿತ್ರ, ವೈಶಿಷ್ಟ್ಯ. ಕಾಂಗ್ರೆಸ್ ಹಿರಿಯ ನಾಯಕ ಹಂಪನಗೌಡ ಬಾದರ್ಲಿ ಸದ್ಯ ಅವರು ಹಾಲಿ ಶಾಸಕರು. ಮತ್ತೊಂದೆಡೆ ಇವರ ಮೊಮ್ಮಗ ಬಸನಗೌಡ ಬಾದರ್ಲಿ ಸಹ ವಿಧಾನಪರಿಷತ್ ಸದಸ್ಯರು. ಆದ್ರೆ, ರಾಜಕೀಯ ವಿಚಾರದಲ್ಲಿ ಇಬ್ಬರ ನಡುವೆ ಕಿತ್ತಾಟವಾಗುತಿದ್ದು, ಇದೀಗ ಆಡಳಿತ ವ್ಯವಸ್ಥೆಯಲ್ಲೂ ಸಹ ಅದರ ಪರಿಣಾಮ ಬೀರಿದೆ.

ಇವರಿಬ್ಬರ ರಾಜಕೀಯ ಗುದ್ದಾಟದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಯಾರ ಹಿಂದೆ ಹೋಗಬೇಕೆಂದು ಗೊಂದಲಕ್ಕೆ ಸಿಲುಕಿದ್ದಾರೆ. ಅಲ್ಲದೇ ಶಾಸಕರು ಒಂದು ಸೂಚನೆ ಕೊಟ್ಟರೆ, ವಿಧಾನಪರಿಷತ್ ಸದಸ್ಯರು ಇನ್ನೊಂದು ಹೇಳುತ್ತಾರೆ. ಹೀಗಾಗಿ ಯಾರ ಮಾತು ಕೇಳಬೇಕೆನ್ನುವುದು ಅಧಿಕಾರಿಗಳಿಗೆ ದೊಡ್ಡ ತಲೆನೋವಾಗಿದೆ. ಅದರಂತೆ ಇದೀಗ ನಗರಸಭೆ ಪೌರಾಯುಕ್ತ ಮಂಜುನಾಥ್ ಗುಂಡೂರು ಅವರನ್ನು ಹಣ ದುರುಪಯೋಗದ ಆರೋಪದ ಮೇಲೆ ಎಂಎಲ್‌ಸಿ ಬಸನಗೌಡ ಬಾದರ್ಲಿ ಅವರು ಅಮಾನತು ಮಾಡಿಸಿದ್ದರು. ಆದ್ರೆ, ಶಾಸಕ ಹಂಪನಗೌಡ ಬಾದರ್ಲಿ ಈ ಅಮಾನತು



ಇಬ್ಬರ ನಡುವೆ ಜಿದ್ದಾಜಿದ್ದಿ

ಹಂಪನಗೌಡ ಬಾದರ್ಲಿ ಹಾಗೂ ಬಸನಗೌಡ ಬಾದರ್ಲಿ ನಡುವೆ ಕೌಟುಂಬಿಕ ಕಲಹ ರಾಜಕೀಯಕ್ಕೂ ಮಾರ್ಪಟ್ಟಿದ್ದು, ಚುನಾವಣೆಗಳಲ್ಲು ಪ್ರತ್ಯೇಕ ಪ್ರಚಾರಗಳನ್ನು ಮಾಡಿಕೊಂಡು ಬಂದಿದ್ದಾರೆ. ಇನ್ನು ಕರ್ನಾಟಕ ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷರಾಗಿದ್ದ ಬಸನಗೌಡ ಬಾದರ್ಲಿ ಡಿಕೆ ಶಿವಕುಮಾರ್ ಬೆಂಬಲಗರಾಗಿದ್ದು, ವಿಧಾನಸಭೆ ಚುನಾವಣೆ ಟಿಕೆಟ್‌ಗೆ ಪ್ರಬಲ ಪೈಪೋಟಿ ನಡೆಸಿದ್ದರು. ಆದ್ರೆ, ಸಿದ್ದರಾಮಯ್ಯ ಬಣದ ಹಂಪನಗೌಡ ಬಾದರ್ಲಿಗೆ ಟಿಕೆಟ್ ಸಿಕಿತ್ತು. ಇದರಿಂದ ಅಸಮಾಧಾನಗೊಂಡ ಬಸನಗೌಡ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಬಸನಗೌಡ ಅವರಿಗೆ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಮೇಲೆ ಅಸಮಾಧಾನ ಇರಲಿಲ್ಲ. ಆದ್ರೆ, ಅವರಿಗೆ ತಮ್ಮ ತಾತನನ್ನು ಸೋಲಿಸಲೇಬೇಕೆಂಬ ಹಠದಿಂದ ಪಕ್ಷೇತರವಾಗಿ ನಾಮಪತ್ರ ಸಲ್ಲಿಸಿದ್ದರು.

ಆದೇಶವನ್ನು ಕೇವಲ 24 ಗಂಟೆಯೊಳಗೆ ರದ್ದು ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇದೇ ಮೇ 13ರಂದು ಸಿಂಧನೂರು ನಗರಸಭೆ ಪೌರಾಯುಕ್ತ ಮಂಜುನಾಥ್ ಗುಂಡೂರುರನ್ನ ಅಮಾನತ್ತು ಮಾಡಿ ಪೌರಾಡಳಿತ ಇಲಾಖೆ ಆದೇಶಿಸಿತ್ತು. ವಿವಿಧ ಯೋಜನೆಗಳಲ್ಲಿ ಅವ್ಯವಹಾರ, ಸರಕಾರದ ಹಣ ದುರುಪಯೋಗ ಆರೋಪ ಕೇಳಿ ಬಂದಿತ್ತು. ಅಷ್ಟೇ ಅಲ್ಲದೇ ನಗರಭೆಯಲ್ಲಿ ಅನಧಿಕೃತ ಕಟ್ಟಡ, ತೆರಿಗೆ ವಸೂಲಾತಿ ದುರುಪಯೋಗ ಆರೋಪವಿದ್ದ ಹಿನ್ನೆಲೆ ಅಮಾನತ್ತು ಮಾಡಲಾಗಿತ್ತು. ಈ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿ ಅಮಾನತ್ತು ಮಾಡಿಸಿದ್ದು, ಎಂಎಲ್‌ಸಿ ಬಸನಗೌಡ ಬಾದರ್ಲಿ. ಅಲ್ಲದೇ ಈ ವಿಚಾರವನ್ನು ಸರಕಾರದ ಗಮನಕ್ಕೆ ತಂದು ಪೌರಾಯುಕ್ತ ಮಂಜುನಾಥ್‌ರನ್ನ ಅಮಾನತ್ತು ಮಾಡಿಸಿದ್ದರು. ಇತ್ತ ಈ ಕೇಸ್‌ನಲ್ಲಿ ಅಜ್ಜ ಗೆದ್ದು ಬೀಗಿದ್ರೆ, ಮೊಮ್ಮಗ ಮತ್ತೇನು ದಾಳ ಉರುಳಿಸುತ್ತಾರೋ ಎನ್ನುವುದನ್ನು ಕಾದು ನೋಡಬೇಕಿದೆ. ಸದ್ಯ ಈ ಬಗ್ಗೆ ತುಮಕೂರು ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರ ನೇತೃತ್ವದಲ್ಲಿ ತನಿಖೆ ಮುಂದುವರೆದಿದ್ದು, ಮುಂದೆ ಏನಾಗಲಿದೆ ಎನ್ನುವುದು ಕೂತೂಹಲಕ್ಕೆ ಕಾರಣವಾಗಿದೆ. ಪಕ್ಷದಲ್ಲಿನ ಈ ಒಳಜಗಳವನ್ನು ಗಂಭೀರವಾಗಿ ಪರಿಗಣಿಸಿದ ಕಾಂಗ್ರೆಸ್, ಬಸನ ಗೌಡ ಬಾದರ್ಲಿ ಅವರನ್ನು ಸಮಾಧಾನಪ ಡಿಸಲು ಖುದ್ದು ರಣದೀಪ್ ಸಿಂಗ್ ಸುರ್ಜೆವಾಲ ಅವರೇ ಸಿಂಧನೂರಿಗೆ ಕಳುಹಿಸಿ, ಮುಂದಿನ ದಿನಗಳ ಒಳ್ಳೆಯ ಸ್ಥಾನಮಾನ ನೀಡಲಾಗುತ್ತೆ ತಮ್ಮ ನಾಮಪತ್ರ ವಾಪಸ್ ಹಿಂತೆಗೆದುಕೊಳ್ಳುವಂತೆ ನೋಡಿಕೊಂಡಿತ್ತು. ಇದಕ್ಕೆ ಬಸನಗೌಡ ಬಾದರ್ಲಿ ಅವರು ಒಪ್ಪಿ ತಮ್ಮ ನಾಮಪತ್ರ ವಾಪಸ್ ಪಡೆದುಕೊಂಡಿದ್ದರು. ಆದ್ರೆ, ಇದೀಗ ಶಾಸಕ ಹಂಪನಗೌಡ ಹಾಗೂ ಎಂಎಲ್‌ಸಿ ಬಸನಗೌಡ ಬಾದರ್ಲಿ ನಡುವೆ ಕ್ಷೇತ್ರದಲ್ಲಿ ಒಂದಲ್ಲ ಒಂದು ವಿಚಾರದಲ್ಲಿ ಜಿದ್ದು ಮುಂದುವರೆದಿದೆ.

ಸಮಾಚಾರ ಸಣ್ಣದಲ್ಲ

ಟಿಎಂಸಿ ಸರ್ವಪಕ್ಷ ನಿಯೋಗದಲ್ಲಿ ಇಲ್ಲ

ಕೋಲ್ಕತ್ತ: ಪಾಕಿಸ್ತಾನದಿಂದ ಗಡಿಯಾಚೆಗಿನ ಭಯೋತ್ಪಾದನೆ, ಅದಕ್ಕೆ ಪ್ರತಿಯಾಗಿ ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ ಬಗ್ಗೆ ಜಾಗತಿಕ ಸಮುದಾಯಕ್ಕೆ ಮನವರಿಕೆ ಮಾಡಿ ಕೊಡಲು ವಿವಿಧ ದೇಶಗಳಿಗೆ ಭಾರತ ಸರಕಾರ ಕಳುಹಿಸಿಕೊಡುತ್ತಿರುವ ಸರ್ವ ಪಕ್ಷ ನಿಯೋಗದಲ್ಲಿ ಭಾಗಿಯಾಗು ವುದಿಲ್ಲ ಎಂದು ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷ ಸೋಮವಾರ ಹೇಳಿದೆ. ಕೇಂದ್ರ ಸರಕಾರ 30ಕ್ಕೂ ಹೆಚ್ಚು ದೇಶಗಳಿಗೆ ಬಹು ಪಕ್ಷ ನಿಯೋಗಗಳನ್ನು ಕಳುಹಿಸುತ್ತಿದೆ. ಈ ಉಪಕ್ರಮದಲ್ಲಿ ಪಕ್ಷದ ಸಂಸದರು ಅಥವಾ ಪಕ್ಷದ ನಾಯಕರು ಸೇರುವುದಿಲ್ಲ ಎಂದು ಟಿಎಂಸಿ ಸ್ಪಷ್ಟಪಡಿಸಿದೆ. ಟಿಎಂಸಿ ಸಂಸದ ಯೂಸುಫ್ ಪಠಾಣ್ ಸರ್ವಪಕ್ಷ ನಿಯೋಗದ ಭಾಗವಾಗಬಹುದು ಎಂದು ವರದಿಯಾಗಿತ್ತು. ಪಠಾಣ್ ಅಥವಾ ಟಿಎಂಸಿಯ ಯಾವುದೇ ಸಂಸದ ಪಾಕ್ ಭಯೋತ್ಪಾದನೆ ವಿರುದ್ಧ ಪ್ರಚಾರ ಮಾಡಲು ವಿದೇಶಕ್ಕೆ ತೆರಳುವ ಬಹುಪಕ್ಷ ನಿಯೋಗದಲ್ಲಿ ಇರು ವುದಿಲ್ಲ ಎಂದು ಟಿಎಂಸಿ ನಾಯಕರು ಸೋಮವಾರ ಹೇಳಿದ್ದಾರೆ.

ಪಹಲ್ಗಾಮ್ ದಾಳಿ ಬಳಿಕ 71 ದೇಶದ್ರೋಹಿ ಸೆರೆ

ಗುವಾಹಟಿ: ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದ ಆರೋಪದಡಿ ಅಸ್ಸಾಂನಲ್ಲಿ ಸೋಮವಾರ ಮತ್ತೆ ಮೂವರನ್ನು ಬಂಧಿಸಲಾಗಿದೆ. ಕೊಕ್ರಜಾರ್, ಗೋಲ್ಪಾರಾ ಮತ್ತು ದಕ್ಷಿಣ ಸಲ್ಮಾರಾ-ಮಂಕಚಾರ್ ಜಿಲ್ಲೆಗಳಿಂದ ತಲಾ ಒಬ್ಬರನ್ನು ಬಂಧಿಸಲಾಗಿದೆ. ಪಹಲ್ಗಾಮ್ ಭಯೋತ್ಪಾದನಾ ದಾಳಿ ನಂತರದ ದಿನಗಳಲ್ಲಿ ದಾಳಿಯನ್ನು ಪ್ರಶಂಸಿಸುವುದು, ಪಾಕಿಸ್ತಾನಕ್ಕೆ ಜೈಕಾರ ಹಾಕುವುದೂ ಸೇರಿದಂತೆ ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದ ಆರೋಪದಡಿ ಅಸ್ಸಾಂನಲ್ಲಿ ಈವರೆಗೆ ಬಂಧನಕ್ಕೆ ಒಳಗಾದವರ ಒಟ್ಟು ಸಂಖ್ಯೆ 71ಕ್ಕೇರಿದೆ ಬಂಧಿಸಲಾಗಿದೆ. ಅಸ್ಸಾಂ ಪೊಲೀಸರು ಡಿಜಿಟಲ್ ವಲಯ, ಜಾಲತಾಣದ ಮೇಲೆ ನಿಗಾ ವಹಿಸಿದ್ದಾರೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಸೋಮವಾರ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಪಹಲ್ಗಾಮ್ ದಾಳಿ ವಿಚಾರದಲ್ಲಿ ಪಾಕಿಸ್ತಾನವನ್ನು ಸಮರ್ಥಿಸಿದ್ದ ಪ್ರತಿಪಕ್ಷ 'ಎಐಯುಡಿಎಫ್' ಶಾಸಕ ಅಮಿನುಲ್ ಇಸ್ಲಾಂರನ್ನು ದೇಶದ್ರೋಹ ಆರೋಪದಡಿ ಈ ಮೊದಲೇ ಬಂಧಿಸಲಾಗಿತ್ತು. ಜಾಮೀನು ಪಡೆದು ಹೊರಬಂದ ನಂತರ ರಾಷ್ಟ್ರೀಯ ಭದ್ರತಾ ಕಾಯಿದೆಯಡಿ ಮತ್ತೆ ಬಂಧಿಸಲಾಗಿದೆ.

ಹೈ ನ್ಯಾಯಮೂರ್ತಿಗಳಿಗೆ ಸಮಾನ ಪಿಂಚಣಿ: ಸುಪ್ರೀಂ

ದೆಹಲಿ: ದೇಶದಲ್ಲಿನ ಹೈಕೋರ್ಟ್ ನ್ಯಾಯಮೂರ್ತಿಗಳ ನಿವೃತ್ತಿ ನಂತರದ ಪಿಂಚಣಿ ವಿಚಾರದಲ್ಲಿ 'ಒಂದೇ ಶ್ರೇಣಿ-ಒಂದೇ ಪ್ರಮಾಣದ ಪಿಂಚಣಿ' ಆದೇಶವನ್ನು ಕೇಂದ್ರ ಸರಕಾರಕ್ಕೆ ಸುಪ್ರೀಂಕೋರ್ಟ್ ಸೋಮವಾರ ನೀಡಿದೆ. ಆ ಮೂಲಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನಿವೃತ್ತಿ ವೇತನದಲ್ಲಿನ ತಾರತಮ್ಯ ನಿವಾರಿಸುವಂತಹ ಮಹತ್ವದ ಕ್ರಮ ಕೈಗೊಂಡಿದೆ. ಹೈಕೋರ್ಟ್ ನ್ಯಾಯಮೂರ್ತಿಗಳು ನಿವೃತ್ತರಾದ ಬಳಿಕ ಅವರನ್ನು ನ್ಯಾಯಾಂಗದ ವಲಯದಿಂದ ಬಂದವರು, ಜಿಲ್ಲಾ ನ್ಯಾಯಲಯಗಳಿಂದ ಬಡ್ತಿ ಪಡೆದವರು, ವಕೀಲರ ವಿಭಾಗದಿಂದ ನೇಮಕವಾದವರು ಎಂದು ಪ್ರತ್ಯೇಕಿಸಿ ನೋಡುವುದು ಸಲ್ಲದು. ವಯೋಸಹಜ ನಿವೃತ್ತಿ ಬಳಿಕ ಎಲ್ಲರನ್ನೂ ಸಮಾನವಾಗಿ ಕಾಣುವಂತಾಗಬೇಕು. ಸಮಾನವಾಗಿಯೇ ಪಿಂಚಣಿ ಮೊತ್ತವನ್ನು ನಿಗದಿಪಡಿಸಬೇಕು. ಅಲ್ಲದೇ, ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು ನಿವೃತ್ತರಾದಾಗ ಅವರಿಗೆ ವಾರ್ಷಿಕವಾಗಿ 15 ಲಕ್ಷ ರು. ಹಾಗೂ ಹೈಕೋರ್ಟ್‌ಗಳ ಉಳಿದ ನಿವೃತ್ತ ನ್ಯಾಯಮೂರ್ತಿಗಳಿಗೆ ವಾರ್ಷಿಕವಾಗಿ ಕನಿಷ್ಠ 13.65 ಲಕ್ಷ ರು. ಪಿಂಚಣಿ ಸಲ್ಲಬೇಕು ಎಂದೂ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾ. ಎ.ಜಿ. ಮಾಸಿಹ್ ಮತ್ತು ನ್ಯಾ. ಕೆ.ವಿನೋದ್ ಚಂದ್ರನ್ ಅವರನ್ನೊಳಗೊಂಡ ತ್ರಿಸದಸ್ಯ ಪೀಠ ಆದೇಶದಲ್ಲಿ ಹೇಳಿದೆ.

ಪಹಲ್ಗಾಮ್ ದಾಳಿ ಮುನ್ನ ಪಾಕ್‌ಗೆ ಜ್ಯೋತಿ ಭೇಟಿ

ದೆಹಲಿ: ಬೇಹುಗಾರಿಕೆ ಆರೋಪದಲ್ಲಿ ಬಂಧನಕ್ಕೊಳಗಾಗಿರುವ ಹರಿಯಾಣದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ, ಪಾಕಿಸ್ತಾನದ ಪಾಲಿಗೆ ಗುಪ್ತಚರ ಚಟುವಟಿಕೆಗೆ ಭಾರತದಲ್ಲಿನ ಪ್ರಮುಖ ಸಂಪನ್ಮೂಲವ ನ್ನಾಗಿದ್ದಳು ಎಂಬುದು ತನಿಖೆಯಿಂದ ತಿಳಿದುಬಂದಿದೆ. ಭಾರತ-ಪಾಕ್ ಸೇನಾ ಸಂಘರ್ಷ ವೇಳೆ ಜ್ಯೋತಿ, ಪಾಕ್ ಐಎಸ್ಐ ಏಜೆಂಟ್‌ಗಳ ಸಂಪರ್ಕದಲ್ಲಿದ್ದಳು. ಆದರೆ ಸೇನಾ ಚಟುವಟಿಕೆಗೆ ಸಂಬಂಧಿಸಿದ ಯಾವುದೇ ಮಾಹಿತಿ ಆಕೆಗೆ ಸಿಕ್ಕಿರಲಿಲ್ಲ. ಜ್ಯೋತಿ ಮಲ್ಹೋತ್ರಾ, ಒಮ್ಮೆ ಚೀನಾಕ್ಕೆ ಭೇಟಿ ನೀಡಿದ್ದರು. ಆಧುನಿಕ ಯುದ್ಧ ಗಡಿಯಲ್ಲಿನ ಹೋರಾಟವಾಗಿಯಷ್ಟೇ ಉಳಿದಿಲ್ಲ, ಪಾಕ್ ಗುಪ್ತಚರ ಇಲಾಖೆ ಭಾರತದಲ್ಲಿ ಏಜೆಂಟ್‌ಗಳನ್ನು ನೇಮಿಸಿಕೊಂಡು ಬೇಹಗಾರಿಕೆ ನಡೆಸುತ್ತಿದೆ. ಸಾಮಾಜಿಕ ಮಾಧ್ಯಮದ ಪ್ರಭಾವಿಗಳನ್ನು ಬಳಸಿಕೊಂಡೇ ಭಾರತದ ವಿರುದ್ಧ ಅಪಪ್ರಚಾರವನ್ನೂ ನಡೆಸಲು ಯತ್ನಿಸುತ್ತಿದೆ. ಅವರ ಪ್ರಯಾಣದ ವೆಚ್ಚವು ಅವರ ಘೋಷಿತ ಆದಾಯಕ್ಕಿಂತ ಹೆಚ್ಚಾಗಿದೆ. ಆಕೆಯ ಹಣಕಾಸಿನ ವಿವರಗಳನ್ನು ವಿಶ್ಲೇಷಿಸುತ್ತಿದ್ದೇವೆ ಎಂದು ಪೊಲೀಸ್ ತನಿಖಾಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

{ **ರಾಹುಲ್ ಗಾಂಧಿ** } ಕಾಂಗ್ರೆಸ್ ನಾಯಕ

ಆಪರೇಷನ್ ಸಿಂದೂರ ಸೇನಾ ಕಾರ್ಯಾಚರಣೆ ಬಗ್ಗೆ ಪಾಕಿಸ್ತಾನಕ್ಕೆ ಮಾಹಿತಿ ನೀಡಿರುವ ವಿದೇಶಾಂಗ ಸಚಿವ ಎಸ್. ಜೈಶಂಕರ್ ದೇಶದ ಭದ್ರತೆ ವಿಚಾರದಲ್ಲಿ ರಾಜಿ ಮಾಡಿಕೊಂಡಿದ್ದಾರೆ. ಅವರು ಆಗ ಭಾರತ ಕಳೆದುಕೊಂಡ ವಿಮಾನಗಳ ಸಂಖ್ಯೆ ಬಗೆಗೆ ಮೌನ ತಾಳಿರುವುದು 'ಶಾಪ'ವಾಗಿದೆ. ಇದೇನೂ ಸಣ್ಣ ಲೋಪವಲ್ಲ. ಬದಲಿಗೆ ಇದು ಅಪರಾಧ. ದೇಶ ಸತ್ಯ ತಿಳಿಯಬೇಕಿದೆ.

ಆಶ್ರಯ ಕೋರಿ ಅರ್ಜಿ ಸಲ್ಲಿಸಿದ್ದ ಶ್ರೀಲಂಕಾ ಪ್ರಜೆ | ಎಲ್‌ಟಿಟಿಇ ಸಂಪರ್ಕ ಕಾರಣ 10 ವರ್ಷ ಸೆರೆವಾಸ
ಮದ್ರಾಸ್ ಹೈಕೋರ್ಟ್‌ನಿಂದ ಶಿಕ್ಷೆ 7 ವರ್ಷಕ್ಕೆ ಇಳಿಕೆ | ಸೆರೆವಾಸ ನಂತರ ತಕ್ಷಣ ದೇಶ ಬಿಡುವಂತೆ ಸೂಚನೆ

ಭಾರತವೇನೂ ಧರ್ಮಛತ್ರ ಅಲ್ಲ: ಸುಪ್ರೀಂ ಕಟುನುಡಿ

ದೆಹಲಿ: ಭಾರತ ದೇಶವೇನೂ ಧರ್ಮಛತ್ರ ಅಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಕಟುವಾಕ್ಯಗಳಲ್ಲಿ ಹೇಳಿದೆ.

ಭಾರತದಲ್ಲಿ ನೆಲೆಸಲು ಅವಕಾಶ ಕೋರಿ ಲಿಬರೇಷನ್ ಟೈಗರ್ಸ್ ಆಫ್ ತಮಿಳ್ ಈಳಂ (ಎಲ್‌ಟಿಟಿಇ) ಉಗ್ರ ಸಂಘಟನೆಯ ಸದಸ್ಯನಾಗಿದ್ದ ಶ್ರೀಲಂಕಾ ಪ್ರಜೆಯೊಬ್ಬ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸೋಮವಾರ ನಡೆಸಿದ ನ್ಯಾ.ದೀಪಂಕರ ದತ್ತ ಮತ್ತು ನ್ಯಾ.ಕೆ.ವಿನೋದ್ ಚಂದ್ರನ್ ಅವರ ದ್ವಿಸದಸ್ಯ ಪೀಠ, ವಿಶ್ವದೆಲ್ಲೆಡೆಯಿಂದ, ಯಾವ ಯಾವುದೋ ದೇಶದಿಂದ ನುಸುಳಿಕೊಂಡು ಗಡಿ ದಾಟಿ ಬರುವ ಅಕ್ರಮ ವಲಸಿಗರಿಗೆಲ್ಲಾ ಆವಾಸ ಸ್ಥಾನ ಕಲ್ಪಿಸಿಕೊಡಲು ಭಾರತವನ್ನು ಉಚಿತವಾಗಿ ಧರ್ಮಛತ್ರ ನಡೆಸುವ ದೇಶ ಎಂದುಕೊಂಡಿದ್ದೀರಾ? ಎಂದು ಕಟುವಾಕ್ಯಗಳಲ್ಲಿ ತರಾಟೆ ತೆಗೆದುಕೊಂಡಿತು.

'ಈಗಾಗಲೇ ಭಾರತ 140 ಕೋಟಿಗೂ ಅಧಿಕ ಜನಸಂಖ್ಯೆಯ ಭಾರದಿಂದ ಬಸವಳಿದಿದೆ. ದೇಶದ ಪ್ರಜೆಗಳೂ ಪರಿತಪಿಸುತ್ತಿದ್ದಾರೆ. ಹಾಗಾಗಿ, ಅಕ್ರಮ ವಲಸಿಗರ ಭಾರ ಹೊರುವುದಕ್ಕೆ ಭಾರತ ದೇಶಕ್ಕೆ ಸಾಧ್ಯವಿಲ್ಲ' ಎಂದು ಪೀಠ ಹೇಳಿದೆ.

ಶ್ರೀಲಂಕಾದಲ್ಲಿ ಪ್ರತ್ಯೇಕ ತಮಿಳು ರಾಷ್ಟ್ರಕ್ಕಾಗಿ ಹೋರಾಟ ನಡೆಸಿದ್ದ ಉಗ್ರ ಸಂಘಟನೆ ಎಲ್‌ಟಿಟಿಇ ಸಂಪರ್ಕ ಹೊಂದಿದ್ದ ಆರೋಪದಡಿ 2015ರಲ್ಲಿ ತಮಿಳುನಾಡಿನಲ್ಲಿ ಬಂಧನಕ್ಕೊಳಗಾಗಿದ್ದ ಅರ್ಜಿದಾರನ ವಿರುದ್ಧ 'ಕಾನೂನುಬಾಹಿರ ಚಟುವಟಿಕೆಗಳ ನಿರ್ಬಂಧ ಕಾಯಿದೆ'(ಯುಎಪಿಎ) ಅಡಿ

ಪ್ರಕರಣ ದಾಖಲಿಸಲಾಗಿತ್ತು. ಪರಿಣಾಮ 2018ರಲ್ಲಿ ತಮಿಳುನಾಡಿನ ಸೆಷನ್ಸ್ ಕೋರ್ಟ್ 10 ವರ್ಷಗಳ ಸೆರೆವಾಸದ ಶಿಕ್ಷೆ ವಿಧಿಸಿತ್ತು. 2022ರಲ್ಲಿ ಅರ್ಜಿದಾರ ಮದ್ರಾಸ್ ಹೈಕೋರ್ಟ್ ಮೊರೆ ಹೋಗಿದ್ದ. ಹೈಕೋರ್ಟ್ ಆತನ ಶಿಕ್ಷೆಯನ್ನು 7 ವರ್ಷಕ್ಕೆ ತಗ್ಗಿಸಿತ್ತು. ಅಲ್ಲದೇ, ಶಿಕ್ಷೆ ಅವಧಿ ಮುಗಿದು ಬಿಡುಗಡೆಗೊಂಡ ಬಳಿಕ ತಕ್ಷಣವೇ ಭಾರತವನ್ನು ತೊರೆದು ಶ್ರೀಲಂಕಾ ದೇಶಕ್ಕೆ ಹೊರಟು ಹೋಗಬೇಕು ಎಂದೂ ಆದೇಶಿಸಿತ್ತು. ಜೈಲಿನಿಂದ ಬಿಡುಗಡೆಗೊಂಡ ದೇಶ ತೊರೆಯುವವರೆಗೆ ಕೆಲ ಕಾಲ ಸರಕಾರದ ನಿರಾಶ್ರಿತರ ಶಿಬಿರದಲ್ಲಿ ತಾತ್ಕಾಲಿಕವಾಗಿ ಇರಬಹುದು ಎಂದೂ ಪೀಠ ಹೇಳಿತ್ತು.

ಆ ಬಳಿಕ ಸುಪ್ರೀಂ ಕೋರ್ಟ್ ಮೊರೆ ಹೋಗಿರುವ ಲಂಕಾ ತಮಿಳಿಗ ಅರ್ಜಿದಾರ, 'ನಾನು ಸಕ್ರಮ ವೀಸಾ ಮೂಲಕವೇ ಭಾರತ ಪ್ರವೇಶಿಸಿರುವೆ. ನನ್ನ ಜೀವಕ್ಕೆ ಲಂಕಾದಲ್ಲಿ ಅಪಾಯವಿದೆ. ಅಲ್ಲದೇ, ಪತ್ನಿಯು ಮಕ್ಕಳೊಂದಿಗೆ ಭಾರತದಲ್ಲಿ ನೆಲೆಸಿದ್ದಾಳೆ. ಕೆಲ ವರ್ಷಗಳಿಂದ ನಾನು ಬಂಧನದಲ್ಲಿದ್ದೇನೆ. ಅಲ್ಲದೇ, ನನ್ನನ್ನು ಗಡಿಪಾರು ಮಾಡುವ ಪ್ರಕ್ರಿಯೆ ಇನ್ನೂ ಆರಂಭಗೊಂಡಿಲ್ಲ. ಹಾಗಾಗಿ ಪತ್ನಿ-ಮಕ್ಕಳೊಂದಿಗೆ ಭಾರತದಲ್ಲೇ ಇರಲು ನನಗೂ ಅವಕಾಶ ಮಾಡಿಕೊಡಬೇಕು' ಎಂದು ಮನವಿ ಮಾಡಿದ್ದಾನೆ.

ಅರ್ಜಿದಾರರ ವಕೀಲರ ವಾದ

ಭಾರತದ ಸಂವಿಧಾನದ ವಿಧಿ 21 (ಜೀವದ ರಕ್ಷಣೆ ಮತ್ತು ಸ್ವಾತಂತ್ರ್ಯ) ಮತ್ತು ವಿಧಿ 19(ಮೂಲಭೂತ ಹಕ್ಕುಗಳು, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಚಲನೆ) ಉಲ್ಲೇಖಿಸಿ ವಾದ ಮಂಡಿಸಿರುವ ಅರ್ಜಿದಾರನ ಪರ ವಕೀಲರು, ಸಕ್ರಮವಾಗಿಯೇ ದೇಶ ಪ್ರವೇಶಿಸಿರುವ ಅರ್ಜಿದಾರನಿಗೆ ಭಾರತದಲ್ಲಿ ಆಶ್ರಯ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದ್ದಾರೆ. ಲಂಕಾ ಪ್ರಜೆಯನ್ನು ಭಾರತದಲ್ಲಿ ಬಂಧನಕ್ಕೊಳಪಡಿಸಿರುವುದರಿಂದ ವಿಧಿ 21ರ ಉಲ್ಲಂಘನೆಯಾಗಿಲ್ಲ. ಆದರೆ, ವಿಧಿ 19 ಭಾರತದ ಪ್ರಜೆಗಳಿಗಷ್ಟೇ ಅನ್ವಯವಾಗುತ್ತದೆ. ಹಾಗಾಗಿ ಅರ್ಜಿದಾರನಿಗೆ ಭಾರತದಲ್ಲಿ ಶಾಶ್ವತವಾಗಿ ನೆಲೆಸಲು ಅವಕಾಶವಿಲ್ಲ ಎಂದು ನ್ಯಾ.ದೀಪಂಕರ ದತ್ತ ಸ್ಪಷ್ಟವಾಗಿ ಹೇಳಿದ್ದಾರೆ.

ರಾಜ್ಯ ಸರಕಾರಗಳಿಗೆ ಕೇಂದ್ರ ಗೃಹ ಸಚಿವಾಲಯ ಸೂಚನೆ
ದಾಖಲೆ ಪರಿಶೀಲನೆ-ಗಡಿಪಾರಿಗೆ 30 ದಿನಗಳ ಗಡುವು

ಅಕ್ರಮ ಬಾಂಗ್ಲಾ ವಲಸಿಗರ ಗಡಿಪಾರಿಗೆ ವಿ.ಕಾರ್ಯಪಡೆ

ದೆಹಲಿ: ಬಾಂಗ್ಲಾದೇಶದ ಅಕ್ರಮ ವಲಸಿಗರು ಮತ್ತು ರೋಹಿಂಗ್ಯಾಗಳನ್ನು ಗುರುತಿಸಿ ಗಡೀಪಾರು ಮಾಡಲು ಪ್ರತಿ ಜಿಲ್ಲೆಯಲ್ಲಿ ವಿಶೇಷ ಕಾರ್ಯಪಡೆ ರಚಿಸುವಂತೆ ಎಲ್ಲಾ ರಾಜ್ಯ ಸರಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತಕ್ಕೆ ಕೇಂದ್ರ ಗೃಹ ಸಚಿವಾಲಯ ಸೋಮವಾರ ಸೂಚನೆ ನೀಡಿದೆ.

ಏ.22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ ನಡೆದು 26 ಜೀವಗಳು ಬಲಿಯಾದ ಬಳಿಕ ದೇಶದೆಲ್ಲೆಡೆ ನೆಲೆ ಕಂಡುಕೊಂಡಿರುವ ಬಾಂಗ್ಲಾದೇಶದ ಅಕ್ರಮ ವಲಸಿಗರನ್ನು ಹೊರದೂಡಲು ಸೂಚನೆ ನೀಡಲಾಗಿದೆ. ಕೇಂದ್ರದ ತನಿಖಾ ಸಂಸ್ಥೆಗಳ



ಜತೆಗೂಡಿ ಸಮನ್ವಯ ಹೊಂದಿ ಪರಿಣಾಮ ಕಾರಿಯಾಗಿ ಕಾರ್ಯಾಚರಣೆ ನಡೆಸುವಂತೆ ಸೂಚಿಸಲಾಗಿದೆ. ಅಲ್ಲದೇ ಈ ಗಡಿಪಾರು ಪ್ರಕ್ರಿಯೆ ಕೈಗೊಳ್ಳುವುದಕ್ಕೆ ರಾಜ್ಯ ಸರಕಾರಗಳಿಗೆ ಮುಕ್ತ ಅಧಿಕಾರವನ್ನೂ ನೀಡಲಾಗಿದೆ.

ರಾಷ್ಟ್ರೀಯ ಭದ್ರತೆ ಮತ್ತು ಇತ್ತೀಚಿನ ಭಯೋತ್ಪಾದಕ ಚಟುವಟಿಕೆಗಳಲ್ಲಿ ವಿದೇಶಿ ಪಾತ್ರಗಳ ಕಳವಳಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಕಠಿಣ ನಿಲುವುಗಳನ್ನು ತೆಗೆದುಕೊಂಡಿದೆ ಎಂದು ಮೂಲಗಳು ತಿಳಿಸಿವೆ.

30 ದಿನಗಳ ಗಡುವು

ರಾಜ್ಯ ಸರಕಾರಗಳು ರಚಿಸಿದ ಈ ವಿಶೇಷ ಕಾರ್ಯಪಡೆಗಳು ಅಕ್ರಮ ವಲಸಿಗರ ಸಮಗ್ರ ವಿವರ ಕಲೆ ಹಾಕಬೇಕು. ವಲಸಿಗರು ಮತ್ತು ಪೋಷಕರ ಹೆಸರು-ವಿಳಾಸ, ಸಂಬಂಧಿಕರ ವಿವರ ಸೇರಿದಂತೆ ಗಡಿಪಾರು ಪ್ರಕ್ರಿಯೆ ಕೈಗೊಳ್ಳುವುದಕ್ಕೆ ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸಬೇಕು. ಅಕ್ರಮ ವಲಸಿಗರು ಎಂಬುದು ದೃಢಪಟ್ಟ ನಂತರ, ಬಯೋಮೆಟ್ರಿಕ್ ಮತ್ತು ಜನ್ಮದಿನಾಂಕ ಮೊದಲಾದ ವಿವರಗಳನ್ನು ದಾಖಲಿಸಿ ವಿದೇಶಿಯರ ಗುರುತಿನ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಬೇಕು. 30 ದಿನಗಳಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಕೇಂದ್ರ ಗೃಹ ಸಚಿವಾಲಯ ಸೂಚಿಸಿದೆ. ನಂತರ, ಅಕ್ರಮ ವಲಸಿಗರನ್ನು ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಅಸ್ಸಾಂ ರೈಫಲ್ಸ್ ಅಥವಾ ಭಾರತೀಯ ಕರಾವಳಿ ಕಾವಲು ಪಡೆಗೆ ಹಸ್ತಾಂತರಿಸಲಾಗುವುದು. ಬಳಿಕ ಸೇನಾಪಡೆಗಳು ಅಕ್ರಮ ವಲಸಿಗರನ್ನು ಬಾಂಗ್ಲಾದೇಶದ ಅಧಿಕಾರಿಗಳಿಗೆ ಹಸ್ತಾಂತರಿಸುವರು. ಅದರೊಂದಿಗೆ ಗಡೀಪಾರು ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

ಶೋಪಿಯಾನ್ ಉಗ್ರರ ಸಹಚರರಿಬ್ಬರ ಬಂಧನ

ಶೋಪಿಯಾನ್: ಜಮ್ಮು-ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ಡಿಕೆ ಪೋರಾ ಪ್ರದೇಶದಲ್ಲಿ ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ ಭಯೋತ್ಪಾದಕರ ಇಬ್ಬರು ಸಹಚರರನ್ನು ಭಾರತೀಯ ಸೇನೆಯ '34 ರಾಷ್ಟ್ರೀಯ ರೈಫಲ್ಸ್' ವಿಶೇಷ ಕಾರ್ಯಾಚರಣೆ ಪಡೆ ಮತ್ತು ಸಿಆರ್‌ಪಿಎಫ್ 178 ಬೆಟಾಲಿಯನ್ ಜಂಟಿ ಕಾರ್ಯಾಚರಣೆಯಲ್ಲಿ ಸೋಮವಾರ ಬಂಧಿಸಿವೆ.

ಬಂಧಿತರ ಬಳಿ ಇದ್ದ 2 ಪಿಸ್ತೂಲ್, 4 ಹ್ಯಾಂಡ್ ಗ್ರನೇಡ್, 43 ಸುತ್ತು ಗುಂಡುಗಳು ಸೇರಿದಂತೆ ಹಲವು ಶಸ್ತ್ರಾಸ್ತ್ರಗಳು ಮತ್ತು ಮೊಬೈಲ್ ಫೋನ್‌ಗಳನ್ನು ಭದ್ರತಾ ಪಡೆಗಳು ವಶಪಡಿಸಿಕೊಂಡಿವೆ.

ಶೋಪಿಯಾನ್ ಪೊಲೀಸರು ಬಂಧಿತರ ವಿರುದ್ಧ ಅಪರಾಧ ಪ್ರಕರಣ ದಾಖಲಿಸಿದ್ದು, ಆರೋಪಿಗಳು ಹೊಂದಿರುವ ಸಂಪರ್ಕಗಳು ಮತ್ತು ಚಟುವಟಿಕೆಗಳ ಕುರಿತು ತನಿಖೆ

ನಡೆಸುತ್ತಿದ್ದಾರೆ. ಮೇ 13ರಂದು ದಕ್ಷಿಣ ಕಾಶ್ಮೀರದ ಶೋಪಿ ಯಾನ್ ಜಿಲ್ಲೆಯ ಕೆಲ್ಲರ್ ಶುಕ್ರೂ ಅರಣ್ಯ ಪ್ರದೇಶದಲ್ಲಿ ಲಷ್ಕರ್-ಎ- ತಯ್ಯಬಾದ ಮೂರು ಭಯೋತ್ಪಾದಕರನ್ನು ಹೊಡೆದುರುಳಿಸಲಾಗುದೆ. ಆದರೆ, ಹತ ಉಗ್ರರ ಗುರುತು ಈವರೆಗೂ ದೃಢಪಟ್ಟಿಲ್ಲ.

ಉ.ಪ್ರ.ದ ಸಂಭಾಲ್ ಜಾಮಾ ಮಸೀದಿ ಸಮೀಕ್ಷೆಗೆ ಅವಕಾಶ

ದೆಹಲಿ: ಉತ್ತರ ಪ್ರದೇಶದ ಸಂಭಾಲ್ ಜಾಮಾ ಮಸೀದಿ ಮತ್ತು ಹರಿಹರ ಮಂದಿರ ವಿವಾದ ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟ್ ಸೋಮವಾರ ತೀರ್ಪು ಪ್ರಕಟಿಸಿದ್ದು, ಮಸೀದಿ ಸಮಿತಿ ಸಲ್ಲಿಸಿದ್ದ ಪರಿಷ್ಕರಣಾ ಅರ್ಜಿಯನ್ನು ತಿರಸ್ಕರಿಸಿದೆ. ಆ ಮೂಲಕ ಸಂಭಾಲ್ ಮಸೀದಿ ಕಟ್ಟಡದ ಸಮೀಕ್ಷೆಯನ್ನು ಮುಂದುವರಿಸಲು ಪುರಾತತ್ವ ಸರ್ವೇಕ್ಷಣಾ ಇಲಾಖೆ(ಎಎಸ್‌ಐ)ಗೆ ಅವಕಾಶ ಮಾಡಿಕೊಟ್ಟಿದೆ.

ಅಲಹಾಬಾದ್ ಹೈಕೋರ್ಟ್ ಪೀಠದ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್ವಾಲ್ ಅವರು ಸೋಮವಾರ ನೀಡಿದ ಮಹತ್ವದ ಈ ತೀರ್ಪಿನಿಂದಾಗಿ ಸಂಭಾಲ್ ನಗರದಲ್ಲಿನ ಜಾಮಾ ಮಸೀದಿಯ ಸರ್ವೆ ಕಾರ್ಯ ಮರಳಿ ಆರಂಭಗೊಳ್ಳಲಿದೆ. ಅಲ್ಲದೇ, ಮಸೀದಿ ವ್ಯಾಜ್ಯಕ್ಕೆ ಸಂಬಂಧಿಸಿದ ಮುಂದಿನ ವಿಚಾರಣೆಯನ್ನು ಸಂಭಾಲ್ ಜಿಲ್ಲಾ ನ್ಯಾಯಾಲಯ ಮುಂದುವರಿಸಲಿದೆ. ಸಂಭಾಲ್‌ನಲ್ಲಿರುವುದು ಮಸೀದಿ ಅಲ್ಲ, ಹರಿಹರ ದೇವಸ್ಥಾನ ಎಂದು ಹಿಂದೂಗಳು ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಮಸೀದಿ ಸಮಿತಿ 2024ರ ನ.19ರಂದು ಸಿವಿಲ್ ನ್ಯಾಯಾಲಯ ನೀಡಿದ ಸರ್ವೆ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ ಮಸೀದಿ ಸರ್ವೆ ಆದೇಶಕ್ಕೆ ತಡೆ ನೀಡುವಂತೆ ಮನವಿ ಮಾಡಿತ್ತು. ಅಲಹಾಬಾದ್ ಹೈಕೋರ್ಟ್‌ನಲ್ಲಿ ವಿಚಾರಣೆ ಮೇ 13 ರಂದು ಪೂರ್ಣಗೊಂಡು ತೀರ್ಪು ಕಾಯ್ದಿರಿಸಲಾಗಿತ್ತು.

25ರಿಂದ ಹೇಮಕುಂಡ ಸಾಹಿಬ್ ಪವಿತ್ರಯಾತ್ರೆ

ಛಮೋಲಿ: 'ಹೇಮಕುಂಡ ಸಾಹಿಬ್ ಯಾತ್ರೆ-2025' ಇದೇ ಮೇ 25ರಿಂದ ಆರಂಭಗೊಳ್ಳಲಿದ್ದು, ಉತ್ತರಾಖಂಡ ಪೊಲೀಸರು ಯಾತ್ರೆಯ ಮಾರ್ಗ ಮತ್ತು ಕ್ಷೇತ್ರದಲ್ಲಿನ ಭದ್ರತಾ ವ್ಯವಸ್ಥೆಯನ್ನು ಸೋಮವಾರ ಪರಿಶೀಲಿಸಿದರು. ಹಿಮಪಾತದ ಕಾರಣದಿಂದಾಗಿ ಪ್ರತಿವರ್ಷದ ಅಕ್ಟೋಬರ್‌ನಿಂದ ಏಪ್ರಿಲ್ ಮಾಸದವರೆಗೂ ಹೇಮಕುಂಡ ಸಾಹಿಬ್ ಭಕ್ತರ ಪಾಲಿಗೆ ಬಂದ್ ಆಗಿರುತ್ತದೆ.

ಉತ್ತರಾಖಂಡ ರಾಜ್ಯದ ಛಮೋಲಿ ಜಿಲ್ಲೆಯಲ್ಲಿ ಸಮುದ್ರ ಮಟ್ಟದಿಂದ 15 ಸಾವಿರ ಅಡಿಗಳಷ್ಟು ಎತ್ತರದ ಪ್ರದೇಶದಲ್ಲಿ ಹೇಮಕುಂಡ ಸಾಹಿಬ್ ಕ್ಷೇತ್ರವಿದೆ. ಹೇಮಕುಂಡ ಸಾಹಿಬ್ ಯಾತ್ರೆಯೂ ಚಾರ್‌ಧಾಮ್ ಯಾತ್ರೆಯಂತೆಯೇ ಭಾರತೀಯರ ಪಾಲಿಗೆ ಬಹಳ ಪವಿತ್ರವಾಗಿದೆ. ಸಿಖ್ ಧರ್ಮೀಯರ ಪಾಲಿನ

ಪವಿತ್ರ ಕ್ಷೇತ್ರವಾದ ಹೇಮಕುಂಡ್ ಸಾಹಿಬ್‌ನ ದರ್ಶನ ಭಕ್ತರ ಪಾಲಿಗೆ ಮುಂಬರುವ ಭಾನುವಾರದಿಂದ ಮುಕ್ತವಾಗಲಿದೆ. ಯಾತ್ರಿಕರ ನೋಂದಣಿ ಪ್ರಕ್ರಿಯೆ ಆನ್‌ಲೈನ್‌ನಲ್ಲಿ ನಡೆಯುತ್ತಿದೆ. ಆಧಾರ್ ಸೇರಿದಂತೆ ವಿವಿಧ ಅಗತ್ಯ ದಾಖಲೆಗಳ ಪರಿಶೀಲನೆ ಬಳಿಕ ಉತ್ತರಾಖಂಡ ರಾಜ್ಯ ಪ್ರವಾಸೋದ್ಯಮ ಮಂಡಳಿ ಭಕ್ತರ ನೋಂದಣಿ ಪ್ರಕ್ರಿಯೆ ನಡೆಸುತ್ತಿದೆ.

ಮ.ಪ್ರ. ಸಚಿವ ವಿಜಯ್ ಶಾ ಕ್ಷಮೆ ಯಾಚನೆ ರೀತಿಗೆ ಸುಪ್ರೀಂ ಗರಂ

ದೆಹಲಿ: ಆಪರೇಷನ್ ಸಿಂದೂರ ಸೇನಾ ಕಾರ್ಯಾಚರಣೆ ಕುರಿತು ಸುದ್ದಿಗೋಷ್ಠಿ ನಡೆಸುತ್ತಿದ್ದ ಭಾರತೀಯ ಸೇನಾಪಡೆಯ ಕರ್ನಲ್ ಸೋಫಿಯಾ ಖುರೇಷಿ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಮಧ್ಯಪ್ರದೇಶ ಸಚಿವ ವಿಜಯ್ ಶಾ ಮೇಲೆ ಸುಪ್ರೀಂ ಕೋರ್ಟ್ ಮತ್ತೆ ಸಿಟ್ಟಾಗಿದೆ. ನ್ಯಾಯಾಲಯ ಹೇಳಿದ ಬಳಿಕ ಕರ್ನಲ್ ಸೋಫಿಯಾ ಅವರಲ್ಲಿ ಸಚಿವರು ಕ್ಷಮೆ ಕೋರಿರುವ ದಾಟಿಯನ್ನು ಒಪ್ಪದ ನ್ಯಾಯಾಲಯ, ಸಚಿವರ ಕ್ಷಮೆ ಯಾಚನೆಯನ್ನೇ ತಿರಸ್ಕರಿಸಿದೆ. ನಿಮ್ಮದು ಯಾವ ರೀತಿಯ ಕ್ಷಮೆಯಾಚನೆ? ನ್ಯಾಯಾಲ ಯವು ನಿಮ್ಮನ್ನು ಕ್ಷಮೆಯಾಚಿಸಲು ಕೇಳಿದೆ ಎಂಬ ಭಾವನೆಯನ್ನು ನೀವು ಇಲ್ಲಿ ಪ್ರದರ್ಶಿಸಲು ಬಯಸಿದ್ದೀರಾ? ಅಸಭ್ಯ ಹೇಳಿಕೆಗೆ ಪ್ರಾಮಾಣಿಕ ಕ್ಷಮೆ ಯಾಚಿಸಲು ಏನು ಅಡ್ಡಿ? ಎಂದು ಪ್ರಶ್ನಿಸಿರುವ ಪೀಠ, ನಿಮ್ಮ



ಕ್ಷಮೆಯನ್ನು ಒಪ್ಪಲಾಗದು ಎಂದು ಹೇಳಿದೆ.

ಅಲ್ಲದೇ, ಈ ಪ್ರಕರಣದಲ್ಲಿ ಈವರೆಗೆ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ರಾಜ್ಯ ಸರಕಾರವನ್ನು ಪ್ರಶ್ನೆ ಮಾಡಿದೆ. ಪ್ರಕರಣದ ಸದ್ಯದ ಸ್ಥಿತಿ ಬಗ್ಗೆ ವರದಿ ಸಲ್ಲಿಸಲು ರಾಜ್ಯ ಪೊಲೀಸರಿಗೆ ಸೂಚನೆ ನೀಡಿದೆ. ಕರ್ನಲ್ ಸೋಫಿಯಾ ಖುರೇಷಿ ಅವರನ್ನು ಭಯೋತ್ಪಾದಕರ ಸಹೋದರಿ ಎಂಬ ಅರ್ಥ ಬರುವಂತೆ ಭಾಷಣವೊಂದರಲ್ಲಿ ಸಚಿವ ವಿಜಯ್ ಶಾ ಉಲ್ಲೇಖಿಸಿದ್ದರು. ಮಧ್ಯಪ್ರದೇಶ ಹೈಕೋರ್ಟ್ ಸಚಿವರ ವಿರುದ್ಧ ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ಆದೇಶಿಸಿತ್ತು. ಎಫ್‌ಐಆರ್ ರದ್ದು ಕೋರಿ ಸಚಿವ ವಿಜಯ್ ಶಾ ಸುಪ್ರಿಂ ಗೆ ಅರ್ಜಿ ಸಲ್ಲಿಸಿದ್ದರು.

ಕಾರಿನೊಳಗೆ ಸಿಲುಕಿ 4ಮಕ್ಕಳ ಸಾವು

ವಿಶಾಖಪಟ್ಟಣಂ: ಸಣ್ಣ ನಿರ್ಲಕ್ಷ್ಯದಿಂದಾಗಿ ಆಂಧ್ರಪ್ರದೇಶದಲ್ಲಿ ನಾಲ್ವರು ಚಿಕ್ಕ ಮಕ್ಕಳು ಪ್ರಾಣ ಕಳೆದುಕೊಂಡಿದ್ದಾರೆ.

ಆಂಧ್ರಪ್ರದೇಶದ ವಿಜಯನಗರಂ ಗ್ರಾಮೀಣ ಮಂಡಲದ ದ್ವಾರಪುಡಿ ಗ್ರಾಮದಲ್ಲಿ ಒಂದೆಡೆ ನಿಲುಗಡೆಯಾಗಿದ್ದ ಕಾರಿನಲ್ಲಿ ಸಿಲುಕಿದ್ದ ನಾಲ್ವರು ಮಕ್ಕಳು ಉಸಿರುಗಟ್ಟಿ ಸಾವನ್ನಪ್ಪಿದ ಹೃದಯ ವಿದ್ರಾವಕ ಘಟನೆ ನಡೆದಿದೆ. ಮೃತರಲ್ಲಿ ಮೂವರು ಹೆಣ್ಣು ಮಕ್ಕಳಾಗಿದ್ದಾರೆ.

ಮಕ್ಕಳು ಎಷ್ಟು ಹೊತ್ತಾದರೂ ಮನೆಗೆ ಬಾರದಿರುವುದನ್ನು ಕಂಡು ಗಾಬರಿಗೊಂಡ ಪೋಷಕರು ಗ್ರಾಮ, ಸುತ್ತಲ ಪ್ರದೇಶಗಳಲ್ಲಿ ಹುಡುಕಾಡಿದ್ದಾರೆ. ಮೂರು ಗಂಟೆಗಳಿಗೂ ಹೆಚ್ಚು ಕಾಲ ಹುಡುಕಿದ ನಂತರ ಮಕ್ಕಳು ಕಾರಿನೊಳಗೆ ಸಿಲುಕಿಕೊಂಡು ಉಸಿರುಗಟ್ಟಿ ಸಾವಿಗೀಡಾಗಿರುವುದು ಪತ್ತೆಯಾಗಿದೆ.

ಬಳಿಕ ಕಾರಿನ ಕಿಟಕಿ ಗಾಜು ಒಡೆದು ಮಕ್ಕಳಾದ ಮಂಗಿ ಉದಯ್(8), ಬುರ್ಲೆ ಚಾರುಮತಿ(8), ಬುರ್ಲೆ ಚರಿಷ್ಮಾ(6) ಮತ್ತು ಕಂಡಿ ಮನಸ್ವಿನಿ (6)ಯನ್ನು ಹೊರಗೆ ಕರೆತರಲಾಗಿದೆ. ಕೂಡಲೇ ವಿಜಯನಗರದ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ, ಅಷ್ಟರಲ್ಲಾಗಲೇ ಕೊನೆಯುಸಿರೆಳೆದಿದ್ದಾರೆ ಎಂಬ ಸಂಗತಿಯನ್ನು ವೈದ್ಯರು ಹೇಳಿದ್ದಾರೆ. ನಾಲ್ವರೂ ಮಕ್ಕಳು ಒಂದೇ ಗ್ರಾಮದವರು ಎಂದು ತಿಳಿದುಬಂದಿದೆ.

ಅಪರಿಚಿತ ವ್ಯಕ್ತಿಯೊಬ್ಬ ತನ್ನ ಕಾರನ್ನು ದ್ವಾರಪುಡಿ ಗ್ರಾಮದ ಮಹಿಳಾ ಮಂಡಳಿ ಕಚೇರಿ

ಬಳಿ 2 ದಿನ ಹಿಂದೆ ಕಾರು ಲಾಕ್ ಮಾಡುವುದನ್ನು ಮರೆತಿದ್ದ ಎನ್ನಲಾಗಿದೆ. ಭಾನುವಾರ ಆಟವಾಡುತ್ತಿದ್ದ ನಾಲ್ವರು ಮಕ್ಕಳು ಕಾರಿನೊಳಗೆ ಹೋಗಿ ಬಾಗಿಲು ಲಾಕ್ ಮಾಡಿಕೊಂಡಿದ್ದಾರೆ. ವಿಜಯನಗರ ಗ್ರಾಮೀಣ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಕಾರಿನ ಮಾಲೀಕನಿಗಾಗಿ ಶೋಧ ಆರಂಭಿಸಿದ್ದಾರೆ.

ಪಂಜಾಬ್ ಗುರುದಾಸ್‌ಪುರ-ಇಬ್ಬರ ಬಂಧನ | ಐಎಸ್‌ಐ ಸಂಪರ್ಕದ ಉ.ಪ್ರ. ಉದ್ಯಮಿ ಸೆರೆ

ಪಾಕ್ ಪರ ಬೇಹು: ಮೂವರ ಬಂಧನ

ಚಂಡೀಗಢ: ಶತ್ರುದೇಶ ಪಾಕಿಸ್ತಾನದ ಪರವಾಗಿ ಗೂಢಚಾರಿಕೆ ಮಾಡುತ್ತಿರುವ ಆರೋಪದಡಿ ದೇಶದ ವಿವಿಧೆಡೆ ಸೋಮವಾರ ಮೂವರ ಬಂಧನವಾಗಿದೆ. ಪಂಜಾಬ್‌ನಲ್ಲಿ ಇಬ್ಬರು, ಉತ್ತರ ಪ್ರದೇಶದಲ್ಲಿ ಒಬ್ಬ ಉದ್ಯಮಿ ಬೇಹುಗಾರಿಕೆ ಆರೋಪದಡಿ ಬಂಧನಕ್ಕೊಳಗಾಗಿದ್ದಾರೆ.

ಪಂಜಾಬ್: ಭಾರತೀಯ ಸಶಸ್ತ್ರ ಪಡೆಗಳಿಗೆ ಸಂಬಂಧಿಸಿದ ವಿವರಗಳನ್ನು ಪಾಕಿಸ್ತಾನದ ಗುಪ್ತಚರ ಸಂಸ್ಥೆ 'ಐಎಸ್‌ಐ' ಜತೆ ಹಂಚಿಕೊಳ್ಳುತ್ತಾ ಪಾಕ್ ಪರ ಗೂಢಚಾರಿಕೆ ನಡೆಸುತ್ತಿದ್ದ ಇಬ್ಬರು ಸ್ಥಳೀಯರನ್ನು ಪಂಜಾಬ್ ಪೊಲೀಸರು ಸೋಮವಾರ ಗುರುದಾಸ್‌ಪುರದಲ್ಲಿ ಬಂಧಿಸಿದ್ದಾರೆ.

ಸುಖ್‌ಪ್ರೀತ್ ಸಿಂಗ್ ಮತ್ತು ಕರಣ್‌ಬೀರ್ ಸಿಂಗ್ ಪಾಕ್ ಪರ ಗೂಢಚಾರಿಕೆ ಆರೋಪದಡಿ ಬಂಧನಕ್ಕೊಳಗಾದವರು. ಇಬ್ಬರೂ ಆರೋಪಿಗಳು ಐಎಸ್‌ಐ ಜತೆ ನೇರ ಸಂಪರ್ಕದಲ್ಲಿದ್ದರು. ಪಂಜಾಬ್, ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರದಲ್ಲಿನ ಸೈನಿಕರ ಚಲನವಲನ ಮತ್ತು ಪ್ರಮುಖ ಕಾರ್ಯತಂತ್ರ ಸ್ಥಳಗಳು ಸೇರಿದಂತೆ ಆಪರೇಷನ್ ಸಿಂದೂರ್‌ಗೆ ಸಂಬಂಧಿಸಿದ ವರ್ಗೀಕೃತ ವಿವರಗಳನ್ನು 'ಐಎಸ್‌ಐ' ಜತೆ ಹಂಚಿಕೊಂಡಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ.

ಬಂಧಿತರ ಬಳಿಯಿಂದ 3 ಮೊಬೈಲ್ ಫೋನ್‌ಗಳು ಮತ್ತು ಪಾಯಿಂಟ್ 30 (.30) ಪಿಸ್ತೂಲ್‌ನ 8 ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ದೋರಂಗಲ ಪೊಲೀಸ್ ಠಾಣೆಯಲ್ಲಿ ಅಧಿಕೃತ ರಹಸ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರೆದಿದೆ.

ಡ್ಯಾನಿಶ್‌ನಿಂದ ಐಎಸ್‌ಐ ನಂಟು!

ಪಾಕ್ ಪರ ಬೇಹುಗಾರಿಕೆ ಆರೋಪದಡಿ ದೇಶದಲ್ಲಿ ಈವರೆಗೆ 11 ಮಂದಿಯ ಬಂಧನವಾಗಿದೆ. ಸಾಮಾಜಿಕ ಮಾಧ್ಯಮದ ಪ್ರಭಾವಿಗಳು ಮತ್ತು ಯೂಟ್ಯೂಬರ್‌ಗಳು ಸೇರಿದಂತೆ ಹಲವರು ಸೆರೆ ಸಿಕ್ಕಿದ್ದಾರೆ. ಬಂಧಿತರೆಲ್ಲರೂ 30-35ರ ವಯೋಮಾನದವರು. ಕೆಲವರು ಪರಸ್ಪರ ಸಂಪರ್ಕ ಹೊಂದಿದ್ದರು ಎನ್ನಲಾಗಿದೆ. ಎಲ್ಲರೂ ದೆಹಲಿಯಲ್ಲಿನ ಪಾಕ್ ದೂತಾವಾಸದಲ್ಲಿ ಈ ಮೊದಲು ಕಾರ್ಯನಿರ್ವಹಿಸುತ್ತಿದ್ದ ಅಸ್ಸಾನ್ ಉರ್ ರಹೀಮ್ ಅಲಿಯಾಸ್ ಡ್ಯಾನಿಶ್‌ನಿಂದ ಐಎಸ್‌ಐ ಸಂಪರ್ಕಕ್ಕೆ ಬಂದಿದ್ದಾರೆ ಎಂದು ತಿಳಿದುಬಂದಿದೆ. ದೆಹಲಿ ಪಾಕ್ ದೂತಾವಾಸದಲ್ಲಿನ ಅಧಿಕಾರಿ ಡ್ಯಾನಿಶ್ ಬೇಹುಗಾರಿಕೆ ನಡೆಸುತ್ತಿರುವ ಮಾಹಿತಿ ಸಿಕ್ಕ ಬಳಿಕ ಭಾರತದ ವಿದೇಶಾಂಗ ಸಚಿವಾಲಯ ಆತನನ್ನು ಭಾರತ ತೊರೆಯುವಂತೆ ಮೇ 13ರಂದೇ ಆದೇಶ ಹೊರಡಿಸಿತು.

ಉ.ಪ್ರ ಉದ್ಯಮಿ ಶೆಹಜಾದ್ ಬಂಧನ

ಲಖನೌ: ಪಾಕಿಸ್ತಾನದ ಇಂಟರ್ ಸರ್ವಿಸಸ್ ಇಂಟೆಲಿಜೆನ್ಸ್ (ಐಎಸ್‌ಐ) ಪರ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದಡಿ ಉತ್ತರ ಪ್ರದೇಶದ ಉದ್ಯಮಿಯೊಬ್ಬನನ್ನು ರಾಜ್ಯದ

ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಸೋಮವಾರ ಬಂಧಿಸಿದೆ. ರಾಂಪುರ ಜಿಲ್ಲೆಯ ನಿವಾಸಿ ಶೆಹಜಾದ್‌ನನ್ನು ಮೊರಾದಾಬಾದ್‌ನಲ್ಲಿ ಬಂಧಿಸಲಾಗಿದೆ. ವ್ಯಾಪಾರ ಉದ್ಯಮದ ನೆಪದಲ್ಲಿ ಶೆಹಜಾದ್ ಪಾಕ್‌ಗೆ ಹಲವು ಬಾರಿ ಪ್ರಯಾಣಿಸಿದ್ದ. ಸೌಂದರ್ಯವರ್ಧಕಗಳು, ಜವಳಿ, ಮಸಾಲೆ ಪದಾರ್ಥಗಳನ್ನು ಗಡಿಯಾಚೆಗೆ ಅಕ್ರಮವಾಗಿ ಸಾಗಿಸುತ್ತಿದ್ದ ಎಂದು ತನಿಖೆಯಿಂದ ತಿಳಿದುಬಂದಿದೆ.

ಕಳ್ಳಸಾಗಣೆ ದಂಧೆ ಜತೆಗೇ ಬೇಹುಗಾರಿಕೆ, ಮತ್ತು ಭಯೋತ್ಪಾದಕ ಚಟುವಟಿಕೆಗಳಿಗೆ ಯುವಕರ ನೇಮಕ ಆತನ ಕೆಲಸವಾಗಿತ್ತು. ದೇಶದ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮ ಮತ್ತು ಗೌಪ್ಯ ಮಾಹಿತಿಗಳನ್ನು ಐಎಸ್‌ಐಗೆ ಒದಗಿಸುತ್ತಿದ್ದ. ಐಎಸ್‌ಐ ಸೂಚನೆ ಮೇರೆಗೆ ಶೆಹಜಾದ್ ಅನೇಕ ಸ್ಥಳೀಯರನ್ನು ಭಯೋತ್ಪಾದಕ ಸಂಘಟನೆಗಳಿಗೆ ನೇಮಕ ಮಾಡುತ್ತಿದ್ದ. ಉಗ್ರ ಚಟುವಟಿಕೆಗಳಿಗೆ ಹಣಕಾಸಿನ ನೆರವನ್ನೂ ಒದಗಿಸುತ್ತಿದ್ದ ಎಂಬುದು ಈವರೆಗೆ 'ಎಟಿಎಸ್' ಕಲೆಹಾಕಿರುವ ಮಾಹಿತಿಯಿಂದ ತಿಳಿದುಬಂದಿದೆ. ಪಾಕ್ ಏಜೆಂಟ್‌ಗಳಿಗೆ ಹಣ ವರ್ಗಾವಣೆ ಮಾಡಿರುವುದೂ ದೃಢಪಟ್ಟಿದೆ. ವಿಧ್ವಂಸಕ ಕೃತ್ಯಗಳಲ್ಲಿ ತೊಡಗುವವರ ಸಂವಹನಕ್ಕಾಗಿ ಭಾರತದ ಟೆಲಿಕಾಂ ಕಂಪನಿಗಳ ಸಿಮ್ ಕಾರ್ಡ್‌ಗಳನ್ನು ಶೆಹಜಾದ್ ಖರೀದಿಸಿ ಐಎಸ್‌ಐ ಏಜೆಂಟ್‌ಗಳಿಗೆ ತಲುಪಿಸಿದ್ದಾನೆ ಎಂಬುದೂ ತನಿಖೆ ವೇಳೆ ತಿಳಿದುಬಂದಿದೆ.

ಲಖನೌ ಎಟಿಎಸ್ ಪೊಲೀಸ್ ಠಾಣೆಯಲ್ಲಿ ಶೆಹಜಾದ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ(ಬಿಎನ್‌ಎಸ್) ಸೆಕ್ಷನ್ 148 ಮತ್ತು 152ರಡಿ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ ಹೆಚ್ಚಿನ ತನಿಖೆಗಾಗಿ ಎಟಿಎಸ್ ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ಹೈದರಾಬಾದ್ ಸ್ಫೋಟ ಸಂಚು: ಇಬ್ಬರ ಸೆರೆ

ಹೈದರಾಬಾದ್: ಹೈದರಾಬಾದ್ ನಗರದಲ್ಲಿ ಬಾಂಬ್ ಸ್ಫೋಟಿಸಿ ಜನರನ್ನು ಕೊಂದು ಭಯ ಉಂಟು ಮಾಡಲು ಸಂಚು ರೂಪಿಸಿದ್ದ ಅಂತಾರಾಷ್ಟ್ರೀಯ ಉಗ್ರ ಸಂಘಟನೆ 'ಐಎಸ್‌ಐಎಸ್'ನ ಇಬ್ಬರು ಉಗ್ರರನ್ನು ತೆಲಂಗಾಣ ಮತ್ತು ಆಂಧ್ರಪ್ರದೇಶ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಸೋಮವಾರ ಬಂಧಿಸಿದ್ದಾರೆ.

ವಿಜಯನಗರದ ಸಿರಾಜ್ ಮತ್ತು ಹೈದರಾಬಾದ್‌ನ ಸಮೀರ್ ಬಂಧನಕ್ಕೊಳಗಾದ ಉಗ್ರರು. ಇಬ್ಬರೂ 'ಅಲ್ ಹಿಂದ್ ಇತ್ತೆಹಾದುಲ್ ಮುಸ್ಲಿಮೀನ್' ಸಂಘಟನೆ ನಡೆಸುತ್ತಿದ್ದರು. ಮೊದಲು ವಿಜಯನಗರದಲ್ಲಿ ಸಿರಾಜ್‌ನನ್ನು ಬಂಧಿಸಿದ ಆಂಧ್ರ ಪೊಲೀಸರ ವಿಶೇಷ ತಂಡ, ಆರೋಪಿಯನ್ನು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಹೈದರಾಬಾದ್‌ನ ಸಮೀರ್ ಬಗ್ಗೆ ಮಾಹಿತಿ ನೀಡಿದ. ಬಳಿಕ ತೆಲಂಗಾಣ ಪೊಲೀಸರ ನೆರವಿನಲ್ಲಿ ಸಮೀರ್‌ನನ್ನು ಬಂಧಿಸಲಾಗಿದೆ. ಬಂಧಿತ ಉಗ್ರರನ್ನು ಶೀಘ್ರವೇ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಸಮೀರ್ ಇಂಜಿನಿಯರಿಂಗ್ ವ್ಯಾಸಂಗ ಪೂರ್ಣಗೊಳಿಸಿ ಲಿಫ್ಟ್ ಆಪರೇಟಿಂಗ್ ಕಂಪನಿಯ ತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾನೆ. ಸಿರಾಜ್ ವಿಜಯನಗರದಲ್ಲಿನ ಮನೆಯಲ್ಲಿ ಹೈದರಾಬಾದ್ ಸ್ಫೋಟದ ಸಂಚಿಗಾಗಿ ಸ್ಫೋಟಕ ಸಾಮಗ್ರಿಗಳನ್ನು ಸಂಗ್ರಹಿಸಿಟ್ಟಿದ್ದ. ಸೌದಿ ಅರೇಬಿಯ ಮೂಲದ ಐಎಸ್‌ಐಎಸ್ ಮಾಡ್ಯೂಲ್ ಇವರಿಗೆ ಹೈದರಾಬಾದ್ ದಾಳಿ ಸಂಚಿಗೆ ಮಾರ್ಗದರ್ಶನ ನೀಡುತ್ತಿತ್ತು ಎಂದು ಪ್ರಾಥಮಿಕ ತನಿಖೆ ವೇಳೆ ತಿಳಿದುಬಂದಿದೆ.

21ರಂದು ಸ್ಫೋಟ ಪರೀಕ್ಷೆಗೆ ಸಿದ್ಧತೆ

ಹೈದರಾಬಾದ್ ಸ್ಫೋಟಕ್ಕಾಗಿ ಪೊಟ್ಯಾಸಿಯಮ್ ಕ್ಲೋರೇಡ್ ಹಾಗೂ ಸಲ್ಫರ್ ಮೊದಲಾದ ರಾಸಾಯನಿಕಗಳಿಗಾಗಿ ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದ್ದರು. ಮೇ 21-22ರಂದು ವಿಜಯನಗರದ ಹೊರವಲಯದಲ್ಲಿ ಸ್ಫೋಟ ನಡೆಸುವುದನ್ನು ಅಭ್ಯಾಸ ಮಾಡಲು ತಯಾರಿ ಮಾಡಿಕೊಂಡಿದ್ದರು. ಉಗ್ರರಿಬ್ಬರ ಮನೆಗಳಿಂದ ಅಮೋನಿಯಾ, ಸಲ್ಫರ್ ಮತ್ತು ಅಲ್ಯೂಮಿನಿಯಂ ಪುಡಿ ಸೇರಿದಂತೆ ವಿವಿಧ ಸ್ಫೋಟಕ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಮೆರಿಕ ಮಾಜಿ ಅಧ್ಯಕ್ಷ ಜೋ ಬೈಡನ್‌ಗೆ ಕ್ಯಾನ್ಸರ್

ವಾಷಿಂಗ್ಟನ್: ಅಮೆರಿಕದ ಮಾಜಿ ಅಧ್ಯಕ್ಷ, 82 ವರ್ಷದ ಜೋ ಬೈಡನ್ ಪ್ರಾಸ್ಟೇಟ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಕ್ಯಾನ್ಸರ್ 4ನೇ ಹಂತದಲ್ಲಿದ್ದು, ಕ್ಯಾನ್ಸರ್ ಕೋಶಗಳು ಮೂಳೆಗಳಿಗೂ



ಹರಡಿವೆ. ಜೋ ಬೈಡನ್ ಅವರ ಕಚೇರಿ ಭಾನುವಾರ ಈ ಮಾಹಿತಿ ನೀಡಿದೆ.

ಬೈಡನ್ ಅವರ ಆರೋಗ್ಯ ಸ್ಥಿತಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದುಃಖ ವ್ಯಕ್ತಪಡಿಸಿದ್ದಾರೆ. ಬೈಡನ್ ಅವರಿಗೆ ಪ್ರಾಸ್ಟೇಟ್ ಕ್ಯಾನ್ಸರ್ ಇರುವುದನ್ನು ಕೇಳಿ ಮೆಲಾನಿಯಾ(ಪತ್ನಿ) ಮತ್ತು ನನಗೆ ಬಹಳ ದುಃಖವಾಗಿದೆ. ಮಾಜಿ ಅಧ್ಯಕ್ಷರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ.

ಬೈಡನ್ ಅವರಿಗೆ ಮೂತ್ರ ವಿಸರ್ಜನೆಯಲ್ಲಿ ಸಮಸ್ಯೆ ಎದುರಾಗಿದ್ದರಿಂದ ಶುಕ್ರವಾರ ವೈದ್ಯರನ್ನು ಭೇಟಿಯಾದರು. ಹಲವು ವೈದ್ಯಕೀಯ ತಪಾಸಣೆಗಳ ಬಳಿಕ ಪ್ರಯೋಗಾಲಯದ ವರದಿಗಳನ್ನು ನೋಡಿದ ವೈದ್ಯರು, ಮಾಜಿ ಅಧ್ಯಕ್ಷರ ದೇಹದಲ್ಲಿ ಕ್ಯಾನ್ಸರ್ ಹರಡಿದೆ. ಅದಾಗಲೇ 4ನೇ ಹಂತಕ್ಕೆ ಹೋಗಿದೆ ಎಂದು ಹೇಳಿದರು. ಸುದ್ದಿ ಕೇಳಿ ಬೈಡನ್ ಕುಟುಂಬ ಆಘಾತಕ್ಕೊಳಗಾಗಿದೆ.

ಪ್ರಾಸ್ಟೇಟ್ ಕ್ಯಾನ್ಸರ್: ಪುರುಷರಲ್ಲಿ ಕಾಣಿಸಿಕೊಳ್ಳುವ ಮಾರಣಾಂತಿಕ ರೋಗಗಳಲ್ಲಿ ಪ್ರಾಸ್ಟೇಟ್ ಕ್ಯಾನ್ಸರ್ 2ನೇ ಸ್ಥಾನದಲ್ಲಿದೆ. ಯುಎಸ್ ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್(ಸಿಡಿಸಿ) ಪ್ರಕಾರ 100 ಪುರುಷರಲ್ಲಿ ಕನಿಷ್ಠ 13 ಮಂದಿಗೆ ಪ್ರಾಸ್ಟೇಟ್ ಕ್ಯಾನ್ಸರ್ ಬರುವ ಸಾಧ್ಯತೆ ಇರುತ್ತದೆ.

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್	12	09	03	18
ಬೆಂಗಳೂರು	12	08	03	17
ಪಂಜಾಬ್	12	08	03	17
ಮುಂಬೈ	12	07	05	14
ಡೆಲ್ಲಿ	12	06	05	13
ಕೋಲ್ಕತ್ತಾ	13	05	06	12
ಲಖನೌ	11	05	06	10
ಹೈದರಾಬಾದ್	11	03	07	07
ರಾಜಸ್ಥಾನ್	13	03	10	06
ಚೆನ್ನೈ	12	03	09	06

ಇಂದಿನ ಪಂದ್ಯ

7.30 PM

ಚೆನ್ನೈ ಸೂಪರ್ ಕಿಂಗ್ಸ್ VS ರಾಜಸ್ಥಾನ್ ರಾಯಲ್ಸ್

ಅರುಣ್ ಜೇಟ್ಲಿ ಕ್ರೀಡಾಂಗಣ, ದೆಹಲಿ

ಆರ್‌ಸಿಬಿಗೆ ಹೋಗಬಾರದು ಅಂದುಕೊಂಡಿದ್ದೆ..

'2022ರ ಐಪಿಎಲ್ ಮೆಗಾ ಹರಾಜಿಗೂ ಮುನ್ನ ಆರ್‌ಸಿಬಿ ಕಡೆಯಿಂದ ನನಗೆ ಒಂದು ಸಂದೇಶ ಬಂದಿತ್ತು. ನೀವು ಸಿದ್ಧರಾಗಿರಿ, ನಾವು ನಿಮ್ಮನ್ನು ಆಯ್ಕೆ ಮಾಡುತ್ತೇವೆ ಎಂಬುದಾಗಿತ್ತು. ಹಾಗಾಗಿ ಆ ಸಲ ನಾನು ಆರ್‌ಸಿಬಿಗೆ ಆಯ್ಕೆಯಾಗುತ್ತೇನೆ ಎಂಬ ನಂಬಿಕೆ ನನ್ನ ಮನಸ್ಸಿನಲ್ಲಿ ಗಾಢವಾದ ಮೂಡಿತ್ತು. ಆದರೆ ತಂಡಕ್ಕೆ ಆಯ್ಕೆ ಆಗದೆ ಇದ್ದಾಗ ನನಗೆ ಕೋಪದ ಜೊತೆ ಭಾರೀ ನಿರಾಶೆ ಆಯಿತು. ಆ ವೇಳೆ ಮುಂದೆಂದೂ ಆರ್‌ಸಿಬಿ ತಂಡಕ್ಕೆ ಹೋಗಲೇಬಾರದೆಂದು ಆಗ ಯೋಚಿಸಿಕೊಂಡಿದ್ದೆ. ಆದರೆ ಮತ್ತೆ ಆರ್‌ಸಿಬಿ ಕಡೆಯಿಂದ ಕರೆ ಬಂದಾಗ ನನ್ನ ಮನಸ್ಸಿನ ಯೋಚನೆ ಬದಲಾಯಿತು, ಈಗ ನಾನು ಆರ್‌ಸಿಬಿ ನಾಯಕನಾಗಿರುವ ಬಗ್ಗೆ ಹೆಮ್ಮೆ ಇದೆ.'

-ರಜತ್ ಪಾಟಿದಾರ್ ಆರ್‌ಸಿಬಿ ನಾಯಕ

ಕೊಹ್ಲಿಗೆ ಕೌಂಟಿ ಆಫರ್



ದೆಹಲಿ: ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಬೆನ್ನಲ್ಲೇ ದೊಡ್ಡದೊಂದು ಅವಕಾಶ ಅವರನ್ನು ಅರಸಿ ಬಂದಿದ್ದು, ಅವರನ್ನು ಕೌಂಟಿ ಕ್ರಿಕೆಟ್‌ನಲ್ಲಿ ಕಣಕ್ಕಿಳಿಸಲು ಮಿಡ್ಲ್‌ಸೆಕ್ಸ್ ಕ್ಲಬ್ ಮುಂದಾಗಿದೆ. 'ಕೊಹ್ಲಿ ಈ ಪೀಳಿಗೆಯ ಅತ್ಯಂತ ಸಾಮರ್ಥ್ಯದ ಆಟಗಾರ. ಆದ್ದರಿಂದ ಅವರನ್ನು ನಮ್ಮ ಕ್ಲಬ್ ಪರವಾಗಿ ಕಣಕ್ಕಿಳಿಸಲು ನಾವು ಉತ್ಸುಕರಾಗಿದ್ದೇವೆ, ಹಾಗಾಗಿ ಮಾತುಕತೆ ನಡೆಸಲು ಆಸಕ್ತರಾಗಿದ್ದೇವೆ' ಎಂದು ಮಿಡ್ಲ್‌ಸೆಕ್ಸ್ ಕ್ರಿಕೆಟ್ ನಿರ್ದೇಶಕ ಅಲನ್ ಕೋಲ್ಮನ್ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಕೌಂಟಿ ಕ್ರಿಕೆಟ್‌ನಲ್ಲಿ ಕೊಹ್ಲಿಯನ್ನು ಪರಿಚಯಿಸಲು ಮಿಡ್ಲ್‌ಸೆಕ್ಸ್ ಕ್ಲಬ್ ಮುಂದಾಗಿದೆ, ಆ ಮೂಲಕ ಕೌಂಟಿ ಚಾಂಪಿಯನ್‌ಶಿಪ್ ಅನ್ನು ವಿಶ್ವಕ್ರಿಕೆಟ್‌ನ ಕೇಂದ್ರ ಬಿಂದುವಾಗಿಸಲು ಎಂಸಿಸಿ ಯೋಜನೆ ರೂಪಿಸಿದೆ.

ಫೈನಲ್ ಕೋಲ್ಕತ್ತಾದಲ್ಲೇ ನಡೆಯಲಿ

ಕೋಲ್ಕತಾ: ಜೂನ್ 3ರಂದು ನಿಗದಿಯಾಗಿರುವ ಐಪಿಎಲ್ ಫೈನಲ್ ಪಂದ್ಯದ ತಾಣ ಯಾವುದೆಂದು ಬಿಸಿಸಿಐ ಇನ್ನೂ ಪ್ರಕಟಿಸಿಲ್ಲ. ಈ ಹಿಂದಿನ ಪ್ರಕಟಣೆಯ ಪ್ರಕಾರ ಹೈದರಾಬಾದ್‌ನಲ್ಲಿ ಪ್ಲೇ ಆಫ್, ಕೋಲ್ಕತಾದಲ್ಲಿ ಫೈನಲ್ ಪಂದ್ಯ ನಡೆಯಬೇಕು. ಆದರೆ ಮಳೆ ತೀವ್ರಗೊಳ್ಳುವ ಸಾಧ್ಯತೆ ಇರುವುದರಿಂದ ಐಪಿಎಲ್ ಫೈನಲ್ ಪಂದ್ಯ ಅಹಮದಾಬಾದ್‌ನಲ್ಲಿ ನಡೆಯಲಿದೆ ಎಂದು ಹೇಳಲಾಗುತ್ತಿದೆ. ಇದರ ಮಧ್ಯೆ ಫೈನಲ್ ಪಂದ್ಯವು ಹಿಂದೆ ನಿಗದಿ ಮಾಡಿದಂತೆ ಕೋಲ್ಕತಾದ ಈಡನ್ ಗಾರ್ಡನ್ಸ್‌ನಲ್ಲೇ ನಡೆಯಬೇಕೆಂಬ ಆಗ್ರಹಗಳು ಜೋರಾಗಿವೆ. ಮಾಜಿ ಆಟಗಾರ ಸೌರವ್ ಗಂಗೂಲಿ ಕೂಡ ಇದಕ್ಕೆ ಪೂರಕವಾಗಿ ಪ್ರತಿಕ್ರಿಯಿಸಿದ್ದು ಕೊಲ್ಕತಾದಿಂದ ಪಂದ್ಯ ಸ್ಥಳಾಂತರಿಸುವುದು ಅಷ್ಟು ಸಮಂಜಸವಲ್ಲ ಎಂದು ಬಿಸಿಸಿಐಗೆ ಸಲಹೆ ನೀಡಿದ್ದಾರೆ. 'ಕೋಲ್ಕತ್ತಾದಲ್ಲಿ ಫೈನಲ್ ಪಂದ್ಯ ನಡೆಸಲು ನಾವು ಪ್ರಯತ್ನ ಮಾಡುತ್ತಲೇ ಇದ್ದೇವೆ, ಎಲ್ಲವೂ ಸರಿಯಾಗುತ್ತದೆ ಎಂಬ ಭರವಸೆ ಇದೆ' ಎಂದು ಸೌರವ್ ಗಂಗೂಲಿ ಹೇಳಿದ್ದಾರೆ. ಐಪಿಎಲ್‌ನ ಲೀಗ್ ಹಂತದ ಪಂದ್ಯಗಳು ಮೇ 27ರಂದು ಕೊನೆಗೊಳ್ಳಲಿದ್ದು, ಮೇ 29ರಿಂದ ನಾಕೌಟ್ ಹಂತ ಶುರುವಾಗಲ್ರಿ. ಜೂ.3ರಂದು ಐಪಿಎಲ್ ಫೈನಲ್ ಪಂದ್ಯ ನಿಗದಿಯಾಗಿದೆ.

ಕೊಹ್ಲಿಗೆ ಭಾರತರತ್ನ ನೀಡಿ: ರೈನಾ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಚಾಂಪಿಯನ್ ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ಭಾರತರತ್ನ ಪ್ರಶಸ್ತಿ ನೀಡಬೇಕು ಎಂದು ಮಾಜಿ ಕ್ರಿಕೆಟಿಗ ಸುರೇಶ್ ರೈನಾ ಅಭಿಪ್ರಾಯಪಟ್ಟಿದ್ದಾರೆ. 'ವಿರಾಟ್ ಕೊಹ್ಲಿ ಅವರು ನಮ್ಮ ದೇಶದ ಕ್ರಿಕೆಟ್‌ನಲ್ಲಿ ಹಲವಾರು ಅಮೋಘ ಸಾಧನೆಗಳನ್ನು ಮಾಡಿದ್ದಾರೆ, ಅವರು ನೀಡಿರುವ ಆ ಕೊಡುಗೆಗಳನ್ನು ಸರಕಾರವು ಗಂಭೀರವಾಗಿ ಪರಿಗಣಿಸಬೇಕು. ಭಾರತ ಸರಕಾರವು ದೇಶದ ಅತ್ಯುನ್ನತ ಗೌರವವಾದ ಭಾರತರತ್ನವನ್ನು ಕೊಹ್ಲಿಗೆ ನೀಡಬೇಕು' ಎಂದು ರೈನಾ, ಟಿ.ವಿ. ವಾಹಿನಿಯೊಂದರ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಉತ್ತಮ ಮೊತ್ತ ದಾಖಲಿಸಿದ ಲಖನೌ ತಂಡ। ಮಾರ್ಷ್, ಮರ್ಕ್ರಮ್ ಅರ್ಧಶತಕ

ಹೈದರಾಬಾದ್‌ಗೆ 206 ರನ್ ಗುರಿ

ಲಖನೌ: ಇಲ್ಲಿನ ಏಕನಾ ಸ್ಟೇಡಿಯಂನಲ್ಲಿ ಸೋಮವಾರ ನಡೆದ ಐಪಿಎಲ್ ಲೀಗ್ ಪಂದ್ಯದಲ್ಲಿ ಅತಿಥೇಯ ಲಖನೌ ಸೂಪರ್ ಜೈಂಟ್ಸ್ ತಂಡವು ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿ, ಪ್ಯಾಟ್ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ 206 ರನ್‌ಗಳ ಗೆಲುವಿನ ಗುರಿ ನೀಡಿದೆ.

ಟಾಸ್ ಗೆದ್ದ ಹೈದರಾಬಾದ್ ತಂಡವು ಮೊದಲು ಫೀಲ್ಡಿಂಗ್ ಆರಿಸಿಕೊಂಡು, ಲಖನೌ ತಂಡವನ್ನು ಬ್ಯಾಟಿಂಗ್‌ಗೆ ಇಳಿಸಿತು. ಲಖನೌ ಸೂಪರ್ ಜೈಂಟ್ಸ್ ತಂಡವು ಉತ್ತಮ ಆರಂಭವನ್ನು ಪಡೆಯಿತು. ಆರಂಭಿಕ ಆಟಗಾರರಾದ ಮಿಚೆಲ್ ಮಾರ್ಷ್ ಮತ್ತು ಏಡೆನ್ ಮರ್ಕ್ರಮ್ ತಂಡಕ್ಕೆ ಭದ್ರ ಬುನಾದಿ ಹಾಕಿ ಹೈದರಾಬಾದ್ ಬೌಲರ್‌ಗಳನ್ನು ಹಿಗ್ಗಾ ಮುಗ್ಗಾ ದಂಡಿಸಿದರು.

ಮಾರ್ಷ್ 39 ಬಾಲ್‌ಗಳನ್ನು ಎದುರಿಸಿ 65 ರನ್‌ಗಳನ್ನು ಸಿಡಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 4 ಸಿಕ್ಸರ್ ಮತ್ತು 6 ಬೌಂಡರಿಗಳಿದ್ದವು. ಹರ್ಷ್ ದುಬೆ ಅವರ ಬೌಲಿಂಗ್‌ನಲ್ಲಿ ಮಾರ್ಷ್ ಅವರು ಈಶಾನ್ ಮಾಲಿಂಗ ಅವರಿಗೆ ಕ್ಯಾಚ್ ನೀಡಿ ತಮ್ಮ ವಿಕೆಟ್ ಕಳೆದುಕೊಂಡರು. ಮಿಚೆಲ್ ಮಾರ್ಷ್-ಏಡೆನ್ ಮರ್ಕ್ರಮ್ ಜೋಡಿಯು ಮೊದಲ ವಿಕೆಟ್ ಜತೆಯಾಟದಲ್ಲಿ ಲಖನೌ ತಂಡಕ್ಕೆ 114 ರನ್‌ಗಳ ಅತ್ಯುಪಯುಕ್ತ ಕೊಡುಗೆ ನೀಡಿದರು.

ಮಾರ್ಷ್ ಔಟ್ ಆದ ಬಳಿಕ ಬ್ಯಾಟಿಂಗ್‌ಗೆ ಬಂದ ಲಖನೌ ತಂಡದ ನಾಯಕ ರಿಷಬ್ ಪಂತ್ ಸೋಮವಾರದ ಪಂದ್ಯದಲ್ಲೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಾರದೆ, ಮತ್ತೊಮ್ಮೆ ತಮ್ಮ ವೈಫಲ್ಯವನ್ನು ಕಂಡುಕೊಂಡರು. ಕೇವಲ 6 ಬಾಲ್‌ಗಳನ್ನು ಎದುರಿಸಿದ ಪಂತ್, 7 ರನ್‌ಗಳನ್ನಷ್ಟೇ ಕಲೆ ಹಾಕಿ, ಈಶಾನ್

ಮಾಲಿಂಗ ಅವರ ಬೌಲಿಂಗ್‌ನಲ್ಲಿ ಅವರಿಗೆ ಕ್ಯಾಚ್ ನೀಡಿ ಪೆವಿಲಿಯನ್ ಕಡೆ ತೆರಳಿದರು. ಆಗ ಲಖನೌ ತಂಡದ ಮೊತ್ತ 123 ರನ್‌ಗಳಾಗಿತ್ತು. ಬಳಿಕ ಸ್ವಲ್ಪ ಹೊತ್ತು ನಿಕೊಲಸ್ ಪೂರನ್ ಮತ್ತು ಏಡೆನ್ ಮರ್ಕ್ರಮ್ ಮಧ್ಯೆ ಜತೆಯಾಟ ಸಾಗಿತು. ಆದರೆ ತಂಡದ ಮೊತ್ತ 158 ಆಗಿದ್ದಾಗ 39 ಬಾಲ್‌ಗಳಲ್ಲಿ 61 ರನ್ ಗಳಿಸಿದ್ದ ಮರ್ಕ್ರಮ್‌ರವರು ಹರ್ಷಲ್ ಪಟೇಲ್ ಬೌಲಿಂಗ್‌ನಲ್ಲಿ ಬೌಲ್ಡ್ ಔಟ್ ಆದರು. ಮರ್ಕ್ರಮ್ ಅವರ ಇನ್ನಿಂಗ್ಸ್‌ನಲ್ಲಿ 4 ಸಿಕ್ಸರ್ ಮತ್ತು 4 ಬೌಂಡರಿಗಳಿದ್ದವು.

ಆಯುಷ್ ಬಧೋನಿ ಕೂಡಾ ಸೋಮವಾರ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲುವಲ್ಲಿ ವಿಫಲರಾದರು. ಕೇವಲ 5 ಬಾಲ್‌ಗಳನ್ನು ಎದುರಿಸಿದ ಬಧೋನಿ, 3 ರನ್‌ಗಳನ್ನಷ್ಟೇ ಗಳಿಸಿದ್ದ ವೇಳೆ ಮಾಲಿಂಗರವರ ಬೌಲಿಂಗ್‌ನಲ್ಲಿ ನಿತೇಶ್ ರೆಡ್ಡಿಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು, ಆಗ ಲಖನೌ ತಂಡದ ಮೊತ್ತ 168 ರನ್‌ಗಳಾಗಿತ್ತು. ಲಖನೌ ತಂಡದ ಪರವಾಗಿ ಆ ಬಳಿಕ ಅಬ್ದುಲ್ ಸಮದ್ ಕ್ರೀಸ್‌ಗೆ ಬಂದು ಪೂರನ್ ಜತೆ ಬ್ಯಾಟಿಂಗ್ ನಡೆಸಿದರು. 26 ಬಾಲ್‌ಗಳಲ್ಲಿ 45 ರನ್ ಗಳಿಸಿದ್ದ ನಿಕೊಲಸ್ ಪೂರನ್ ರನೌಟ್ ಆಗಿ ಪೆವಿಲಿಯನ್ ಸೇರಿದರು. ಸಮದ್ 6 ಬಾಲ್‌ಗಳನ್ನು ಎದುರಿಸಿ ಕೇವಲ 3 ರನ್ ಗಳಿಸಿ ಔಟ್ ಆದರು. ಶಾರ್ದೂಲ್ ಠಾಕೂರ್ ಒಂದು ಬಾಲ್ ಎದುರಿಸಿ 4 ರನ್ ಗಳಿಸಿ ರನ್ ಔಟ್ ಆದರು. ಆಕಾಶ್ ದೀಪ್ 6 ರನ್ ಗಳಿಸಿ ಮತ್ತು ರವಿ ಬಿಷ್ಣೋಯ್ ಯಾವುದೇ ರನ್ ಗಳಿಸದೆ ಅಜೇಯರಾಗಿ ಉಳಿದರು. ನಿಗದಿತ 20 ಓವರ್‌ಗಳಲ್ಲಿ ಲಖನೌ ತಂಡವು 7 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿತು.

ವದಂತಿ ಅಲ್ಲಗೆಳೆದು ಸ್ಪಷ್ಟನೆ ನೀಡಿದ ಬಿಸಿಸಿಐ ಕಾರ್ಯದರ್ಶಿ

ಏಷ್ಯಾ ಕಪ್‌ನಿಂದ ಭಾರತ ಹಿಂದೆ ಸರಿದಿಲ್ಲ

ಮುಂಬಯಿ: ಮುಂಬರುವ ಮಹಿಳಾ ಉದಯೋನ್ಮುಖ ತಂಡಗಳ ಏಷ್ಯಾ ಕಪ್ ಕ್ರಿಕೆಟ್ ಮತ್ತು 2025ರ ಪುರುಷರ ಏಷ್ಯಾ ಕಪ್ ಟೂರ್ನಿಯಿಂದ ಭಾರತ ಹಿಂದೆ ಸರಿದಿದೆ ಎಂಬ ವರದಿಗಳನ್ನು ಬಿಸಿಸಿಐ (ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ) ಕಾರ್ಯದರ್ಶಿ ದೇವಜಿತ್ ಸೈಕಿಯಾ ತಳ್ಳಿಹಾಕಿದ್ದಾರೆ, ಅಂತಹ ಯಾವುದೇ ವದಂತಿ ನಂಬಬೇಡಿ ಎಂದಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಭಾರತ ಏಷ್ಯಾಕಪ್‌ನಿಂದ ಹಿಂದೆ ಸರಿದಿದೆ ಎನ್ನುವ ಸುದ್ದಿಗಳು ಸತ್ಯಕ್ಕೆ ದೂರವಾಗಿದೆ. ಮುಂಬರುವ ಕಾರ್ಯಕ್ರಮಗಳ ಕುರಿತು ಬಿಸಿಸಿಐ ಇನ್ನೂ ಎಸಿಸಿ (ಏಷ್ಯನ್ ಕ್ರಿಕೆಟ್ ಕೌನ್ಸಿಲ್) ಜತೆ ಯಾವುದೇ ಚರ್ಚೆ ನಡೆಸಿಲ್ಲ ಎಂದು ಹೇಳಿದ್ದಾರೆ.

ಏಷ್ಯಾ ಕಪ್ ಮತ್ತು ಮಹಿಳಾ ಉದಯೋನ್ಮುಖ ತಂಡಗಳ ಏಷ್ಯಾ ಕಪ್ ಎರಡೂ ಟೂರ್ನಿಗಳಲ್ಲಿ ಭಾಗವಹಿಸದಿರಲು ಬಿಸಿಸಿಐ ನಿರ್ಧಾರ ತೆಗೆದುಕೊಂಡಿದೆ ಎಂಬ ಕೆಲವು ಸುದ್ದಿಗಳು ಗಮನಕ್ಕೆ ಬಂದಿವೆ. ಅಂತಹ ಸುದ್ದಿಗಳನ್ನು ನಂಬಬೇಡಿ, ಏಕೆಂದರೆ ಇಲ್ಲಿಯವರೆಗೆ, ಬಿಸಿಸಿಐ ಮುಂದಿನ ಆ ಪಂದ್ಯಗಳ ಬಗ್ಗೆ ಚರ್ಚಿಸಿಲ್ಲ ಮತ್ತು ಅಂತಹ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ಸೈಕಿಯಾ ತಿಳಿಸಿದ್ದಾರೆ.

ಪಾಕಿಸ್ಥಾನವು ಉಗ್ರ ಚಟುವಟಿಕೆಗಳನ್ನು ಬೆಂಬಲಿಸುತ್ತಿರುವ ಕಾರಣ ಭಾರತ ತಂಡವು ಬಿಸಿಸಿಐ ನಿರ್ದೇಶನದಂತೆ ಪುರುಷರ ಏಷ್ಯಾ ಕಪ್ ಕ್ರಿಕೆಟ್ ಮತ್ತು ಮಹಿಳಾ ಉದಯೋನ್ಮುಖ ತಂಡಗಳ ಏಷ್ಯಾ ಕಪ್‌ನಿಂದ ಹಿಂದೆ ಸರಿಯಲು ನಿರ್ಧರಿಸಿದೆ ಎಂದು ಹಲವು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ಕೊನೆಯ ಸ್ಥಾನಗಳಲ್ಲಿರುವ ತಂಡಗಳ ನಡುವಿನ ಔಪಚಾರಿಕ ಪಂದ್ಯ

ಇಂದು ಚೆನ್ನೈ-ರಾಜಸ್ಥಾನ್ ಹಣಾಹಣಿ

ರಾಜಸ್ಥಾನ ತಂಡ
ಸಂಜು ಸ್ಯಾಮ್ಸನ್ (ನಾಯಕ)
ಯಶಸ್ವಿ ಜೈಸ್ವಾಲ್
ರಿಯಾನ್ ಪರಾಗ್
ನಿತೀಶ್ ರಾಣಾ
ಧ್ರುವ್ ಜುರೆಲ್
ಶಿಮ್ರಾನ್ ಹೆಟ್ಮೆಯರ್
ಸಂದೀಪ್ ಶರ್ಮಾ
ಜೋಫ್ರಾ ಆರ್ಚರ್
ಮಹೇಶ್ ತೀಕ್ಷಣ
ವನಿಂದು ಹಸರಂಗ
ಶುಭಂ ದುಬೆ
ವೈಭವ್ ಸೂರ್ಯವಂಶಿ
ತುಷಾರ್ ದೇಶಪಾಂಡೆ
ಅಶೋಕ್ ಶರ್ಮಾ

ಚೆನ್ನೈ ತಂಡ
ಎಂಎಸ್ ಧೋನಿ (ನಾಯಕ)
ಮಥೀಶ ಪತಿರಾನ
ಶಿವಂ ದುಬೆ
ರವೀಂದ್ರ ಜಡೇಜಾ
ಡೆವೊನ್ ಕಾನ್ವೆ
ರಾಹುಲ್ ತ್ರಿಪಾಠಿ
ರಚಿನ್ ರವೀಂದ್ರ
ರವಿಚಂದ್ರನ್ ಅಶ್ವಿನ್
ನೂರ್ ಅಹ್ಮದ್
ಶೇಕ್ ರಶೀದ್
ನಾಥನ್ ಎಲ್ಲಿಸ್
ಕಮಲೇಶ್ ನಾಗರಕೋಟಿ
ಶ್ರೇಯಸ್ ಗೋಪಾಲ್
ಡೆವಾಲ್ಡ್ ಬ್ರೆವಿಸ್

ದೆಹಲಿ: ಈ ಸಲದ ಐಪಿಎಲ್ ಅಂಕಪಟ್ಟಿಯ ಕೊನೆಯ ಎರಡು ಸ್ಥಾನಗಳಲ್ಲಿರುವ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ್ ರಾಯಲ್ಸ್ ಮತ್ತು ಎಂ.ಎಸ್.ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರದಂದು ನಡೆಯಲಿರುವ ಪಂದ್ಯದಲ್ಲಿ ಪರಸ್ಪರ ಸೆಣಸಾಡಲಿವೆ. ಪಂದ್ಯದ ಪಲಿತಾಂಶವು ಈ ಸಲದ ಐಪಿಎಲ್ ಟೂರ್ನಿಯ ಪ್ಲೇ ಆಫ್‌ನ ಮೇಲೆ ಪರಿಣಾಮ ಬೀರದ ಕಾರಣಕ್ಕಾಗಿ, ಇದೊಂದು ಔಪಚಾರಿಕ ಪಂದ್ಯವಾಗಲಿದೆ.

ಈಗಾಗಲೇ ಈ ಆವೃತ್ತಿಯಲ್ಲಿ 12 ಪಂದ್ಯಗಳನ್ನು ಆಡಿರುವ ಚೆನ್ನೈ ತಂಡವು ಕೇವಲ 3 ಪಂದ್ಯಗಳಲ್ಲಿ ಗೆದ್ದು, 6 ಅಂಕವನ್ನು ಮಾತ್ರ ಸಂಪಾದಿಸಿ ಕೊನೆಯ ಸ್ಥಾನದಲ್ಲಿದ್ದರೆ, 13 ಪಂದ್ಯಗಳನ್ನು ಆಡಿ ಕೇವಲ 6 ಅಂಕ ಗಳಿಸಿರುವ ರಾಜಸ್ಥಾನ ರಾಯಲ್ಸ್ ತಂಡವು 6 ಅಂಕವನ್ನಷ್ಟೇ ಸಂಪಾದಿಸಿ ಒಂಬತ್ತನೇ ಸ್ಥಾನದಲ್ಲಿದೆ.

ಈ ಆವೃತ್ತಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ತನ್ನ ಆರಂಭಿಕ ಪಂದ್ಯದಲ್ಲಿ ಮುಂಬೈ ವಿರುದ್ಧ 4 ವಿಕೆಟ್ ಅಂತರದಲ್ಲಿ ಗೆದ್ದು ಶುಭಾರಂಭ ಮಾಡಿತ್ತು, ಆದರೆ ಆ ಬಳಿಕ ಅದು ಆರ್‌ಸಿಬಿ, ರಾಜಸ್ಥಾನ್ ರಾಯಲ್ಸ್, ಡೆಲ್ಲಿ ಕ್ಯಾಪಿಟಲ್ಸ್, ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ್ತಾ ವಿರುದ್ಧವೂ ಪರಾಭವಗೊಂಡಿತ್ತು. ಏಪ್ರಿಲ್-14ರಂದು ನಡೆದ ಪಂದ್ಯದಲ್ಲಿ ಲಖನೌ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿದ ಚೆನ್ನೈ ತಂಡವು ಈ ಆವೃತ್ತಿಯಲ್ಲಿ ಎರಡನೇ ಗೆಲುವನ್ನು ದಾಖಲಿಸಿತ್ತು.

ಆದರೆ ಆ ಬಳಿಕ ಮುಂಬೈ, ಹೈದರಾಬಾದ್, ಪಂಜಾಬ್, ಆರ್‌ಸಿಬಿ ತಂಡಗಳ ವಿರುದ್ಧ ಸೋತ ಚೆನ್ನೈ ತೀವ್ರ ಮುಖಭಂಗಕ್ಕೊಳಗಾಯಿತು. ಮೇ-7ರಂದು ನಡೆದ ಪಂದ್ಯದಲ್ಲಿ ಕೋಲ್ಕತ್ತಾವನ್ನು 2 ವಿಕೆಟ್‌ಗಳಿಂದ ಮಣಿಸಿದ ಚೆನ್ನೈ ಇದೀಗ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಷ್ಟೇ ಉಳಿದುಕೊಂಡಿದೆ.

ಈಗಾಗಲೇ 13 ಪಂದ್ಯಗಳನ್ನು ಆಡಿರುವ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ತಂಡವು ಈ ಬಾರಿಯ ಐಪಿಎಲ್ ಆವೃತ್ತಿಯ ಮೊದಲ 2 ಪಂದ್ಯಗಳಲ್ಲಿ ಕ್ರಮವಾಗಿ ಹೈದರಾಬಾದ್ ಮತ್ತು ಕೋಲ್ಕತ್ತಾ ವಿರುದ್ಧ ಸೋಲನ್ನನುಭವಿಸಿತ್ತು. ಆ ಬಳಿಕ ಮಾರ್ಚ್-30ರಂದು ಚೆನ್ನೈ ವಿರುದ್ಧದ ಪಂದ್ಯದಲ್ಲಿ ಮತ್ತು ಏಪ್ರಿಲ್-5ರಂದು ಪಂಜಾಬ್ ವಿರುದ್ಧದ ಪಂದ್ಯವನ್ನು ಗೆದ್ದು ಮತ್ತೆ ಪುಟಿದೆದ್ದಿತು. ನಂತರ ರಾಜಸ್ಥಾನ ತಂಡವು ಸತತವಾಗಿ 5 ಪಂದ್ಯಗಳಲ್ಲಿ ಸೋತು ತೀವ್ರ ಟೀಕೆಗೊಳಗಾಯಿತು.

ಏಪ್ರಿಲ್-28ರಂದು ನಡೆದಿದ್ದ ಪಂದ್ಯದಲ್ಲಿ ಗುಜರಾತ್ ವಿರುದ್ಧ 8 ವಿಕೆಟ್‌ಗಳ ಗೆಲುವನ್ನು ಪಡೆಯುವಲ್ಲಿ ರಾಜಸ್ಥಾನ ತಂಡವು ಯಶಸ್ವಿಯಾಯಿತು. ಆದರೆ ಆ ಬಳಿಕ ಮೇ-1ರಂದು ಮುಂಬೈ ವಿರುದ್ಧ, ಮೇ-4ರಂದು ಕೋಲ್ಕತ್ತಾ ವಿರುದ್ಧ ಹಾಗೂ ಮೇ-18ರಂದು ಪಂಜಾಬ್ ವಿರುದ್ಧವೂ ಸೋತಿರುವ ರಾಜಸ್ಥಾನ ತಂಡವು ತೀವ್ರ ಮುಖಭಂಗಕ್ಕೊಳಗಾಗಿ ಅಂಕಪಟ್ಟಿಯಲ್ಲಿ 9ನೇ ಸ್ಥಾನದಲ್ಲಷ್ಟೇ ತೃಪ್ತಿಪಟ್ಟಿದೆ.

ಆರ್‌ಸಿಬಿಗೆ ಮುಜರಬಾನಿ ಸೇರ್ಪಡೆ



ಬೆಂಗಳೂರು: ಆರ್‌ಸಿಬಿ ತಂಡದ ವೇಗಿ ಲುಂಗಿ ಎನ್‌ಗಿಡಿ, ಐಪಿಎಲ್ ಲೀಗ್ ಪಂದ್ಯಗಳ ಬಳಿಕ ದಕ್ಷಿಣ ಆಫ್ರಿಕಾ ರಾಷ್ಟ್ರೀಯ ತಂಡದ ಕರ್ತವ್ಯ ನಿಮಿತ್ತ ಪ್ಲೇ ಆಫ್ ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ. ಇದೀಗ ಅವರ ಸ್ಥಾನಕ್ಕೆ ಬದಲಿ ಆಟಗಾರನಾಗಿ ಜಿಂಬಾಬ್ವೆ ತಂಡದ ವೇಗಿ ಬ್ಲೆಸ್ಸಿಂಗ್ ಮುಜರಬಾನಿ ಆರ್‌ಸಿಬಿ ತಂಡ ಸೇರಲಿದ್ದಾರೆ. ಆದರೆ ಅವರು ಮೇ 25ರ ನಂತರವಷ್ಟೇ ಆರ್‌ಸಿಬಿ ತಂಡಕ್ಕೆ ಅಭ್ಯವಾಗಲಿದ್ದಾರೆ ಎಂದು ಐಪಿಎಲ್ ಆಡಳಿತ ಮಂಡಳಿ ತಿಳಿಸಿದೆ.

ಜೂನ್ 11ರಿಂದ ಆರಂಭವಾಗುವ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದ ತಯಾರಿಗಾಗಿ ಲುಂಗಿ ಎನ್‌ಗಿಡಿ ಪ್ಲೇಆಫ್ ಪಂದ್ಯಗಳಿಗೂ ಮುನ್ನವೇ ದಕ್ಷಿಣ ಆಫ್ರಿಕಾಗೆ ತೆರಳಲಿದ್ದಾರೆ. ಹಾಲಿ ಆವೃತ್ತಿಯ ಐಪಿಎಲ್‌ನಲ್ಲಿ ಲುಂಗಿ ಎನ್‌ಗಿಡಿ ಆರ್‌ಸಿಬಿ ಪರ ಒಂದು ಪಂದ್ಯವನ್ನು ಆಡಿದ್ದರು. ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯ ಅದಾಗಿತ್ತು.

ಕರಿಮಣಿ ಮಾಲೀಕ ಸದ್ಯದಲ್ಲೇ ತೆರೆಗೆ

ಯು ಟರ್ನ್ 2 ಖ್ಯಾತಿಯ ಚಂದ್ರು ಓಬಯ್ಯ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಸದ್ಯ ಚಂದ್ರು, ಕರಿಮಣಿ ಮಾಲೀಕ ನೀನಲ್ಲ ಎಂಬ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಈ ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಈಗ ಈ ಸಿನಿಮಾದ ಟೀಸರ್ ರಿಲೀಸ್ ಆಗಿದೆ. ನಿರ್ದೇಶಕ ಪಲ್ಲಕ್ಕಿ ರಾಧಾಕೃಷ್ಣ ಹಾಗೂ ಅಂಜಿನಪ್ಪ ಟೀಸರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ತನ್ನ ಪ್ರೀತಿಯನ್ನು ಪಡೆಯಲು ಹೋರಾಡುವ ಯುವಕನ ಕಥನ ಚಿತ್ರದಲ್ಲಿದ್ದು, ಬೆಂಗಳೂರಿನಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ಚಿತ್ರದ ಕಥೆ ಹಣೆಯಲಾಗಿದೆ. ಈ ಸಿನಿಮಾದಲ್ಲಿ ಮಾರುತಿ ನಾಯಕನಾಗಿ ನಟಿಸಿದ್ದು, ರಮಿಕಾ ಸುತಾರಾ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಉಳಿದಂತೆ ಕಾಕ್ರೋಚ್ ಸುಧಿ, ಮೂಗು ಸುರೇಶ್, ಮೀನಾ ಕುಮಾರಿ, ರೇಖಾದಾಸ್ ಮುಂತಾದವರು ತಾರಾಗಣದಲ್ಲಿದ್ದಾರೆ.

ನನಗೆ ಬಾಲ್ಯದಿಂದಲೂ ಸಿನಿಮಾದಲ್ಲಿ ನಟಿಸಬೇಕು ಎಂಬ ಆಸೆಯಿತ್ತು. ಅದಕ್ಕಾಗಿ ಅಭಿನಯ ಕಲಿತೆ. ಈ ಚಿತ್ರದ ಮೂಲಕ ನನ್ನ ನಟನಾ ಕನಸು ನನಸಾಗಿದೆ. ಈ ಚಿತ್ರದಲ್ಲಿ ಎಳನೀರು ಮಾರುವ ಹುಡುಗನ ಪಾತ್ರದಲ್ಲಿ ನಟಿಸಿದ್ದೇನೆ ಎಂದು ನಟ ಮಾರುತಿ ಹೇಳಿದರು. ಸಿನಿಮಾದ ಬಗ್ಗೆ ಮೊದಲಿಂದಲೂ ಆಸಕ್ತಿಯಿತ್ತು. ಆಕ್ಟಿಂಗ್ ಬಗ್ಗೆ ತರಬೇತಿ ಪಡೆದಿದ್ದೇನೆ. ಈ ಚಿತ್ರದಲ್ಲಿ ಒಬ್ಬ ಹೂಮಾರುವ ಹುಡುಗಿಯಾಗಿ ನಟಿಸಿದ್ದೇನೆ. ಇಲ್ಲಿ ನನ್ನದು ಸ್ವಲ್ಪ ಬಜಾರಿ ಥರದ ಪಾತ್ರವಾಗಿದೆ ಎಂದು ರಮಿಕಾ ತಿಳಿಸಿದರು.

ಕರಿಮಣಿ ಮಾಲೀಕ ನೀನಲ್ಲ ಟೈಟಲ್ ವಿಶೇಷವಾಗಿದೆ. ಇದು ಬೆಂಗಳೂರಿನಲ್ಲೇ ನಡೆದಂಥ ನೈಜಘಟನೆ ಆಧಾರಿತ ಚಿತ್ರ. ಎಳನೀರು ಮಾರುವ ಹುಡುಗ, ಹೂ ಮಾರುವ ಹುಡುಗಿಯ ನಡುವೆ ನಡೆಯುವ ವಿಭಿನ್ನ ಪ್ರೇಮಕಥೆ ಇದಾಗಿದ್ದು, ಇವರಿಬ್ಬರ ನಡುವೆ ಮತ್ತೊಬ್ಬನ ಎಂಟ್ರಿ ಆಗುತ್ತಾನೆ. ಇಲ್ಲಿ ನಾಯಕಿಯ ಕರಿಮಣಿ ಮಾಲೀಕ ಯಾರಾಗುತ್ತಾರೆ ಎನ್ನುವುದೇ ಚಿತ್ರದ ಕುತೂಹಲ. ನಾನು ರೆಡಿ ಮಾಡಿಕೊಂಡಿದ್ದ ಕಥೆಗೆ ಇದೇ ಟೈಟಲ್ ಸೂಕ್ತ ಎನಿಸಿ ಈ ಶೀರ್ಷಿಕೆ ಇಟ್ಟಿದ್ದೇನೆ.

-ಚಂದ್ರು ಓಬಯ್ಯ ನಿರ್ದೇಶಕ

ಬೆಂಗಳೂರು ಸುತ್ತಮುತ್ತ ಮೂವತ್ತೈದಕ್ಕೂ ಹೆಚ್ಚು ದಿನಗಳ ಕಾಲ ಶೂಟಿಂಗ್ ನಡೆಸಲಾಗಿದೆ. ಕರಿಮಣಿ ಮಾಲಿಕ ನೀನಲ್ಲ ಚಿತ್ರದಲ್ಲಿ ಮೂರು ಹಾಡುಗಳಿದ್ದು, ನಿರ್ದೇಶಕ ಚಂದ್ರು ಓಬಯ್ಯ ಅವರೆ ಸಂಗೀತ ಸಂಯೋಜಿಸಿದ್ದಾರೆ, ಜತೆಗೆ ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ.

ಸೀಟ್ ಎಡ್ಜ್‌ನಿಂದ ಬಂದ ಹೊಸ ಹಾಡು

ಕಿರುತೆರೆಯಲ್ಲಿ ಪ್ರಸಿದ್ಧಿ ಪಡೆದು ಕೆಲವು ಸಿನಿಮಾಗಳಲ್ಲಿಯೂ ನಟಿಸಿ ಸಿನಿಪ್ರಿಯರ ಮನಗೆದ್ದಿರುವ ನಟ ಸಿದ್ದು ಮೂಲಿಮನಿ ಈಗ ಸೀಟ್ ಎಡ್ಜ್‌ನಲ್ಲಿ ಪ್ರತ್ಯಕ್ಷವಾಗಿದ್ದಾರೆ. ಹೌದು ಸೀಟ್ ಎಡ್ಜ್ ಚಿತ್ರದಲ್ಲಿ ಸಿದ್ದು ನಾಯಕನಾಗಿ ನಟಿಸಿದ್ದಾರೆ, ಈ ಚಿತ್ರ ಸದ್ದಿಲ್ಲದೆ ಚಿತ್ರೀಕರಣ ಮುಗಿಸಿದ್ದು ಬಿಡುಗಡೆಗೂ ಸಿದ್ದವಾಗಿದೆ. ಕೆಲವು ದಿನಗಳ ಹಿಂದಷ್ಟೇ ಈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿತ್ತು. ಸಿದ್ದು ಕೊಡಿಪುರ ಸಾಹಿತ್ಯದ ರೋಮ್ಯಾಂಟಿಕ್ ಗೀತೆಗೆ ಅರ್ಮನ್ ಮಲ್ಲಿಕ್ ದನಿಯಾಗಿದ್ದರು. ಸಾರಿ ಹೇಳುವೆ ಜಗಕ್ಕೆ... ಎಂಬ ಗೀತೆ ಸಂಗೀತ ಪ್ರಿಯರ ಮನಸೂರೆಗೊಂಡಿತ್ತು. ಈ ಹಾಡಿನಲ್ಲಿ ಸಿದ್ದು ಮೂಲಿಮನಿ ಹಾಗೂ ರವೀಕ್ಷಾ ಜೋಡಿಯಾಗಿ ಹೆಜ್ಜೆ ಹಾಕಿದ್ದರು. ಈಗ ಅಂಗೋ ಇಂಗೋ.. ಎಂಬ ಮತ್ತೊಂದು ವಿಡಿಯೊ ಸಾಂಗ್ ಬಿಡುಗಡೆ ಆಗಿದೆ. ಲಕ್ಷ್ಮಿ ರಮೇಶ್ ಸಾಹಿತ್ಯವಿರುವ ಈ ಹಾಡಿಗೆ ಗಾಯಕ ಟಿಪ್ಪು ದನಿಯಾಗಿದ್ದಾರೆ. ಪಕ್ಕಾ ಮಾಸ್ ಆಗಿ, ಅಷ್ಟೇ ಕಲರ್ ಫುಲ್ ಆಗಿ ಈ ಹಾಡು ಮೂಡಿ ಬಂದಿದೆ. ಆಕಾಶ್ ಪರ್ವ ಸಂಗೀತ ಸಂಯೋಜಿಸಿದ್ದಾರೆ.

ಕೆಮಿಸ್ಟ್ರಿ ಆಫ್ ಕರಿಯಪ್ಪ ಹಾಗೂ ಕ್ರಿಟಿಕಲ್ ಕೀರ್ತನೆಗಳು ಚಿತ್ರಗಳಲ್ಲಿ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಚೇತನ್ ಶೆಟ್ಟಿ ಸೀಟ್ ಎಡ್ಜ್ ಸಿನಿಮಾವನ್ನು ನಿರ್ದೇಶಿಸಿದ್ದು, ಆ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಈ ಸಿನಿಮಾದಲ್ಲಿ ಸಿದ್ದು ಮೂಲಿಮನಿಗೆ ಜತೆಯಾಗಿ ನಟಿ ರವೀಕ್ಷಾ ಶೆಟ್ಟಿ ಬಣ್ಣಹಚ್ಚಿದ್ದಾರೆ. ಉಳಿದಂತೆ ರಾಘು ರಾಮನಕೊಪ್ಪ, ಗಿರೀಶ್ ಶಿವಣ್ಣ, ಮಿಮಿಕ್ರಿ ಗೋಪಿ, ಲಕ್ಷ್ಮಿ ಸಿದ್ದಯ್ಯ, ಕಿರಣ್, ಪುನೀತ್ ಬಾಬು, ತೇಜು ಪೊನ್ನಪ್ಪ, ಮನಮೋಹನ್ ರೈ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಯೂಟ್ಯೂಬ್ ಬ್ಲಾಗರ್ ಹುಡುಗನೊಬ್ಬನ ಸುತ್ತ ಸಾಗುವ ಸಾಹಸಮಯ ಸ್ಟೋರಿ ಸಿನಿಮಾದಲ್ಲಿದೆ. ಅದನ್ನು ಡಾರ್ಕ್ ಕಾಮಿಡಿ, ಹಾರರ್ ಥ್ರಿಲ್ಲರ್ ಜಾನರ್‌ನಲ್ಲಿ ಕಟ್ಟಿಕೊಡಲಾಗಿದೆ. ದೀಪಕ್ ಕುಮಾರ್ ಛಾಯಾಗ್ರಹಣ, ನಾಗೇಂದ್ರ ಉಜ್ಜನಿ ಸಂಕಲನ ನಿರ್ವಹಿಸಿದ್ದಾರೆ. ಮೈಸೂರು, ಶಿವಮೊಗ್ಗ ಸುತ್ತಮುತ್ತ ನಲವತ್ತೈದು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ.

ಈ ವಾರ ತೆರೆಗೆ ಮಂಕುತಿಮ್ಮನ ಕಗ್ಗ

ಖ್ಯಾತ ಸಾಹಿತಿ ಡಾ.ಡಿ.ವಿ.ಗುಂಡಪ್ಪ ಅವರ ಜನಪ್ರಿಯ ಪದ್ಯ ಪುಸ್ತಕ ಮಂಕುತಿಮ್ಮನ ಕಗ್ಗ ಸಿನಿಮಾ ರೂಪದಲ್ಲಿ ತೆರೆಗೆ ಬರುತ್ತಿದೆ. ಕನ್ನಡದಲ್ಲಿ ಈಗಾಗಲೇ ಕೆಲವು ಜನಪ್ರಿಯ ಚಿತ್ರಗಳನ್ನು ನಿರ್ದೇಶಿಸಿರುವ ರಾಜ ರವಿಶಂಕರ್ ಡಿ.ವಿ.ಜಿ ಅವರ ಮಂಕುತಿಮ್ಮನ ಕಗ್ಗವನ್ನು ಚಿತ್ರದ ಮೂಲಕ ತೆರೆಗೆ ತಂದಿದ್ದಾರೆ. ಎನ್ .ಎ.ಶಿವಕುಮಾರ್ ನಿರ್ಮಿಸಿರುವ ಈ ಚಿತ್ರ ಇದೇ ವಾರ ಬಿಡುಗಡೆಯಾಗುತ್ತಿದೆ.

ಈ ಚಿತ್ರದಲ್ಲಿ ಡಿ.ವಿ.ಜಿ ಅವರ ಬಾಲ್ಯದ ದಿನಗಳ ಬಗ್ಗೆ ಹೇಳಲಾಗಿದೆ. ತಿಮ್ಮಣ್ಣ ಮೇಷ್ಟ್ರು ಪಾತ್ರದಲ್ಲಿ ಹಿರಿಯ ನಟ ರಾಮಕೃಷ್ಣ, ಡಿ.ವಿ.ಜಿ ಅವರ ಪಾತ್ರದಲ್ಲಿ ಮಾಸ್ಟರ್ ರಣವೀರ್, ಅಲಮೇಲು ಪಾತ್ರದಲ್ಲಿ ಭವ್ಯಶ್ರೀ ರೈ, ವೆಂಕರಮಣಯ್ಯ ಪಾತ್ರದಲ್ಲಿ ರವಿನಾರಾಯಣ್ ಹಾಗೂ ಅಜ್ಜಿಯ ಪಾತ್ರದಲ್ಲಿ ಲಕ್ಷ್ಮಿ ನಾಡಗೌಡ ಅಭಿನಯಿಸಿದ್ದಾರೆ. ಸಾಯಿ ಪ್ರಕಾಶ್, ನರಸೇಗೌಡ, ಶ್ರೀನಿವಾಸ್ ಕೆಮ್ಮೂರ್ ಮುಂತಾದವರು ತಾರಾಬಳಗ ದಲ್ಲಿದ್ದಾರೆ. ನಿರ್ದೇಶಕರೇ ಚಿತ್ರಕಥೆ ಹೆಣೆದು ಸಂಭಾಷಣೆ ಬರೆದಿದ್ದಾರೆ. ಎಟಿರವೀಶ್ ಸಂಗೀತ ನಿರ್ದೇಶನ, ಸಿ.ನಾರಾಯಣ್ ಛಾಯಾಗ್ರಹಣ ಹಾಗೂ ಆರ್ .ಡಿ.ರವಿ ಸಂಕಲನ ಈ ಚಿತ್ರಕ್ಕಿದೆ.



ಕನ್ನಡದಲ್ಲಿಯೂ ಬರಲಿದೆ ತುಡರುಮ್

ಕರ್ನಾಟಕದಲ್ಲಿಯೇ ಕನ್ನಡ ಸಿನಿಮಾಗಳು ಸೋಲುತ್ತಿವೆ. ಇದರಿಂದ ನಿರ್ಮಾಪಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ ಪರಭಾಷಾ ಚಿತ್ರಗಳು ಕನ್ನಡ ನೆಲದಲ್ಲಿಯೇ ಹೆಚ್ಚು ಕಲೆಕ್ಷನ್ ಮಾಡುವ ಮೂಲಕ ದಾಖಲೆ ಬರೆಯುತ್ತಿವೆ. ಇತ್ತೀಚೆಗೆ ತೆರೆಗೆ ಬಂದ ಮಲೆಯಾಳಂನ ತುಡರಮ್ ಸಿನಿಮಾ ಕರ್ನಾಟಕದಲ್ಲಿಯೂ ರಿಲೀಸ್ ಆಗಿತ್ತು. ಬಹುತೇಕ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳನ್ನು ಆವರಿಸಿಕೊಂಡಿದ್ದ ಈ ಸಿನಿಮಾ ಕೆಲವೆಡೆ ಹೌಸ್‌ಫುಲ್ ಪ್ರದರ್ಶನ ಕಂಡಿದೆ. ಹೀಗೆ ಪ್ರದರ್ಶನಕಂಡ ಎಲ್ಲೆಡೆಯೂ ಉತ್ತಮ ಗಳಿಕೆಯನ್ನು ಕಂಡಿದೆ. ತರುಣ್ ಮೂರ್ತಿ ನಿರ್ದೇಶನದ ಈ ಚಿತ್ರ ಮಲೆಯಾಳಂ ಚಿತ್ರರಂಗದಲ್ಲಿ ಹೊಸತನ ತಂದಿದೆ. ಆ ಮೂಲಕ ತರುಣ್ ಗೆದ್ದು ಬೀಗಿದ್ದಾರೆ. ಮಾತ್ರವಲ್ಲ ತುಡುರುಮ್, ಮೋಹನ್ ಲಾಲ್ ಅವರಿಗೆ ಮತ್ತೊಂದು ಭರ್ಜರಿ ಬ್ರೇಕ್ ನೀಡಿದೆ.

ಈ ಹಿಂದೆ ಮೋಹಲ್‌ಲಾಲ್ ಅಭಿನಯದ ದೃಶ್ಯಂ ಭರ್ಜರಿ ಯಶಸ್ಸು ಕಂಡಿತ್ತು. ಎರಡು ಭಾಗದಲ್ಲಿ ನಿರ್ಮಾಣವಾದ ದೃಶ್ಯಂ ಕನ್ನಡ, ಹಿಂದಿ ತೆಲುಗು ಭಾಷೆಗಳಿಗೂ ರಿಮೇಕ್ ಆಗಿತ್ತು. ಹೆಚ್ಚು ಕಮ್ಮಿ ತುಡರಮ್ ಕೂಡ ದೃಶ್ಯಂ ರೀತಿಯ ಕಥೆಯನ್ನೇ ಒಳಗೊಂಡಿದೆ. ಕೌಟುಂಬಿಕ ಕಥೆಯ ಜತೆಗೆ ಕ್ರೈಂ ಥ್ರಿಲ್ಲರ್, ಸಸ್ಪೆನ್ಸ್ ಸ್ಟೋರಿಯೂ ಸಿನಿಮಾದಲ್ಲಿದೆ. ಕನ್ನಡದಲ್ಲಿಯೂ ರಿಮೇಕ್ ಆದ ದೃಶ್ಯಂ ಪ್ರೇಕ್ಷಕರ ಮನಗೆದ್ದಿದ್ದು. ಜತೆಗೆ ಬಾಕ್ಸ್ ಆಫೀಸ್‌ನಲ್ಲಿಯೂ ಉತ್ತಮ ಗಳಿಕೆ ಕಂಡಿತು. ಈಗ ತುಡರುಮ್ ಚಿತ್ರವನ್ನು ಮೆಚ್ಚಿರುವ ಕನ್ನಡ ನಿರ್ದೇಶಕರು ಈ ಚಿತ್ರವನ್ನು ಕನ್ನಡಕ್ಕೂ ರಿಮೇಕ್ ಮಾಡಲು ಆಸಕ್ತರಾಗಿದ್ದಾರೆ. ಈಗಾಗಲೇ ಹಲವು ನಿರ್ದೇಶಕರು ಚಿತ್ರಕಥೆ ಹೆಣೆದಿದ್ದು, ನಿರ್ಮಾಪಕರೂ ಕೂಡ ಸಿನಿಮಾ ನಿರ್ಮಿಸಲು ಉತ್ಸುಕರಾಗಿದ್ದಾರೆ. ಹೀಗೆ ತುಡುರುಮ್ ಸಿನಿಮಾ ಮಾಡಲು ಮುಂದೆ ಬಂದಿರುವ ನಿರ್ದೇಶಕ, ನಿರ್ಮಾಪಕರ ಮೊದಲ ಆಯ್ಕೆ ಕ್ರೇಜಿಸ್ಟಾರ್ ರವಿಚಂದ್ರನ್ ಅವರು. ಯಾಕೆಂದರೆ ಕನ್ನಡದ ದೃಶ್ಯಂ ಚಿತ್ರದಲ್ಲಿಯೂ ರವಿಮಾಮ ಅಮೋಘ ಅಭಿನಯದ ಮೂಲಕ ಸಿನಿಪ್ರಿಯರ ಮನಗೆದ್ದಿದ್ದರು. ಹಾಗಾಗಿ ತುಡರುಮ್ ಸಿನಿಮಾದಲ್ಲಿಯೂ ಅವರೇ ನಟಿಸಬೇಕು ಎಂಬುದು ಎಲ್ಲರ ಆಸೆಯಾಗಿದೆ. ಈಗಾಗಲೇ ಕೆಲವರು ರವಿಮಾಮ ಅವರನ್ನು ಭೇಟಿ ಮಾಡಿ ಚಿತ್ರಕಥೆ ಹೇಳಿದ್ದಾರೆ. ಸಿನಿಮಾದಲ್ಲಿ ನಟಿಸಲು ರವಿಚಂದ್ರನ್ ಅವರು ಕೂಡ ಒಪ್ಪಿದ್ದಾರೆ ಎನ್ನಲಾಗುತ್ತಿದೆ.

ಎಲ್ಲವೂ ಅಂದುಕೊಂಡಂತೆ ಆದರೆ ಶೀಘ್ರದಲ್ಲಿಯೇ ಸಿನಿಮಾ ಸೆಟ್ಟೇರಲಿದೆ. ಮತ್ತೊಂದು ಒಳ್ಳೆಯ ಕ್ರೈಂ, ಥ್ರಿಲ್ಲರ್, ಸಸ್ಪೆನ್ಸ್ ಒಳಗೊಂಡ ಸಿನಿಮಾ ಮೂಡಿಬರಲಿದೆ. ದೃಶ್ಯಂನಲ್ಲಿ ನೋಡಿ ಆನಂದಿಸಿ ರಾಜೇಂದ್ರ ಪೊನ್ನಪ್ಪನಂತಹ ಪಾತ್ರವನ್ನು ಮತ್ತೊಮ್ಮೆ ತೆರೆಯಲ್ಲಿ ನೋಡಿ ಆನಂದಿಸಬಹುದಾಗಿದೆ.

ದುಬಾರಿ ಜೀವನ - ಅಭಿವೃದ್ಧಿ ಶೂನ್ಯ
ಇದುವೇ ಕಾಂಗ್ರೆಸ್ ಸರ್ಕಾರದ
ಬೆಲೆ ಏರಿಕೆಯ
ಸಾಧನೆ
ಡೀಸೆಲ್
ಕಾಂಗ್ರೆಸ್ ಸರ್ಕಾರ
₹5.5 (ಪ್ರತೀ ಲೀ) ಹೆಚ್ಚಳ
ಬಿಜೆಪಿ ಸರ್ಕಾರ
3% ಕಡಿಮೆ
ವಾಹನ ನೋಂದಣಿ
ಕಾಂಗ್ರೆಸ್ ಸರ್ಕಾರ
3% ಹೆಚ್ಚಳ
ಬಿಜೆಪಿ ಸರ್ಕಾರ
₹25 ಸಾವಿರ
ಟ್ರಾನ್ಸ್ ಫಾರ್ಮರ್
ಕಾಂಗ್ರೆಸ್ ಸರ್ಕಾರ
₹3 ಲಕ್ಷ
ಬಿಜೆಪಿ ಸರ್ಕಾರ
₹10
ರೈತರ ಪಹಣಿ
ಕಾಂಗ್ರೆಸ್ ಸರ್ಕಾರ
₹100
ಬಿಜೆಪಿ ಸರ್ಕಾರ
₹100
ಬಿಯರ್
ಕಾಂಗ್ರೆಸ್ ಸರ್ಕಾರ
₹170
ಪೆಟ್ರೋಲ್
ಕಾಂಗ್ರೆಸ್ ಸರ್ಕಾರ
₹3 (ಪ್ರತೀ ಲೀ) ಹೆಚ್ಚಳ
ಬಿಜೆಪಿ ಸರ್ಕಾರ
15% ಕಡಿಮೆ
ಬಸ್ ಟಿಕೆಟ್ ದರ
ಕಾಂಗ್ರೆಸ್ ಸರ್ಕಾರ
15% ಹೆಚ್ಚಳ
ಬಿಜೆಪಿ ಸರ್ಕಾರ
₹39
ಹಾಲು
ಕಾಂಗ್ರೆಸ್ ಸರ್ಕಾರ
₹48
ಬಿಜೆಪಿ ಸರ್ಕಾರ
₹20
ಮುದ್ರಾಂಕ ಶುಲ್ಕ
ಕಾಂಗ್ರೆಸ್ ಸರ್ಕಾರ
₹100
ಬಿಜೆಪಿ ಸರ್ಕಾರ
₹900
ಸ್ಮಾರ್ಟ್ ಮೀಟರ್
ಕಾಂಗ್ರೆಸ್ ಸರ್ಕಾರ
₹8,510
50ಕ್ಕೂ ಹೆಚ್ಚು ವಲಯಗಳ
ಬೆಲೆ ಏರಿಕೆ
ಕರ್ನಾಟಕ ಲೂಟಿ
ಕಾಂಗ್ರೆಸ್ ಡ್ಯೂಟಿ
ಸ್ಥಗಿತಗೊಂಡ ಬಿಜೆಪಿ ಆಡಳಿತದ
ಜನಪರ ಯೋಜನೆಗಳು
ರೈತ ವಿದ್ಯಾನಿಧಿ
ಪಿಎಂ ಕಿಸಾನ್ ಸಮ್ಮಾನ್
ಭಾಗ್ಯಲಕ್ಷ್ಮಿ
ಉಚಿತ ಬೈಸಿಕಲ್
ಹಾಲು ಉತ್ಪಾದಕರ ಸಬ್ಸಿಡಿ ಕಡಿತ
ಹೆಜ್ಜೆ ಇಡದ ಎರಡು ವರುಷ
ಬೆಲೆ ಏರಿಕೆ, ಭ್ರಷ್ಟತೆಯ ಕರಾಳ ಸ್ಪರ್ಶ
ಪ್ರಕಟಣೆ - ಬಿಜೆಪಿ ಕರ್ನಾಟಕ